# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಆಗಸ್ಟ್ ೨೦೧೩ (ವಾರ್ಷಿಕಸಂಚಿಕೆ)

## ನನ್ನ ಮಲೆನಾಡಿನಲ್ಲಿ...
## ಕುವೆಂಪು ಹೆಸರಿನಲ್ಲಿ...

ಧರ್ಮವೀರ ಭಾರತಿ
ಯು.ಆರ್. ಅನಂತಮೂರ್ತಿ
ರಾಜೇಶ್ವರಿ ತೇಜಸ್ವಿ
ರಾಜೇಂದ್ರ ಚೆನ್ನಿ
ಎಚ್.ಎಸ್. ರಾಘವೇಂದ್ರ ರಾವ್
ಎಚ್. ನಾಗವೇಣಿ
ಪ. ಮಲ್ಲೇಶ್
ಕೆ.ಎಸ್. ಪುಟ್ಟಣ್ಣಯ್ಯ
ಜಿ.ಎನ್. ಶ್ರೀರಾಮ್
ಎಸ್.ಎಚ್. ಪಟೇಲ್
ಎಂ.ಜಿ. ನಟರಾಜ್
ಇಂದಿರಾ ಜಿ. ಕೃಷ್ಣಪ್ಪ
ಸವಿತಾ ನಾಗಭೂಷಣ
ಜಿ.ಎಸ್. ಜಯದೇವ
ಕೆ.ಪಿ. ನಟರಾಜ
ತಾರಿಣಿ ಶುಭದಾಯಿನಿ
ಎಂ. ಚಂದ್ರಶೇಖರಯ್ಯ
ಕೆ.ಪಿ. ಮೃತ್ಯುಂಜಯ
ರೂಪ ಹಾಸನ
ಎನ್.ಆರ್. ಸ್ನೇಹಾ




ಎಲ್.ಕೆ. ಪೂರ್ಣಿಮಾ
ಸಿ. ರವೀಂದ್ರನಾಥ್
ಶಿವರಾಜ ಬೆಟ್ಟದೂರು
ಜಿ.ಎನ್. ಮಲ್ಲಿಕಾರ್ಜುನಪ್ಪ
ಡಾ. ಬಸವರಾಜು
ಕೆ.ಎಂ. ರಾಜೇಗೌಡ
ಎನ್.ಎಂ. ಕುಲಕರ್ಣಿ
ಎಂ. ಜಡೆಯಗೌಡ







ಬೆಲೆ: ರೂ.೫೦











# ಪುಸ್ತಕ ಪ್ರಕಾಶನ

91, 9ನೇ ಮುಖ್ಯ ರಸ್ತೆ
ಸರಸ್ವತಿಪುರಂ,
ಮೈಸೂರು – 570 009
ಫೋನ್: 0821–2545 774

ಅಂಚೆ ಮೂಲಕ ತರಿಸಿಕೊಳ್ಳುವವರಿಗೆ:
**ಪುಸ್ತಕ ಪ್ರಕಾಶನ**
ಬುಕ್‌ಪೋಸ್ಟ್ ಸರ್ವಿಸ್, ಪಿ.ಬಿ.ನಂ.58
ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ–577 132
ಫೋನ್: 08263–228353,240202,
ಮೊಬೈಲ್: 94482 03730
e-mail: raghu202@bsnl.in


## ಪುಸ್ತಕ ಬೆಲೆ ಪಟ್ಟಿ – *2013**

**ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ:**

| | |
|---|---|
| ಕಿರಗೂರಿನ ಗಯ್ಯಾಳಿಗಳು | ....90.00 |
| ಕರ್ವಾಲೊ | ....105.00 |
| ಚಿದಂಬರ ರಹಸ್ಯ | ....165.00 |
| ಸಹಜ ಕೃಷಿ | ....60.00 |
| ಪರಿಸರದ ಕತೆ | ....105.00 |
| ಮಿಸ್ಸಿಂಗ್ ಲಿಂಕ್ | ....87.00 |
| ಅಲೆಮಾರಿಯ ಅಂಡಮಾನ್ ಹಾಗೂ ಮಹಾನದಿ ನೈಲ್ | ....114.00 |
| ಜುಗಾರಿ ಕ್ರಾಸ್ | ....165.00 |
| ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕತೆಗಳು | ....63.00 |
| ಫ್ಲೈಯಿಂಗ್ ಸಾಸರ್ಸ್ (1) | ....75.00 |
| ಫ್ಲೈಯಿಂಗ್ ಸಾಸರ್ಸ್ (2) | ....81.00 |
| ಕಾಡಿನ ಕತೆಗಳು (1) | ....72.00 |
| ಕಾಡಿನ ಕತೆಗಳು (2) | ....72.00 |
| ಕಾಡಿನ ಕತೆಗಳು (3) | ....75.00 |
| ಕಾಡಿನ ಕತೆಗಳು (4) | ....75.00 |
| ರುದ್ರಪ್ರಯಾಗದ ಭಯಾನಕ ನರಭಕ್ಷಕ | ....105.00 |
| ಕನ್ನಡನಾಡಿನ ಹಕ್ಕಿಗಳು(1)–ಮಿಂಚುಳ್ಳಿ | ....81.00 |
| ಕನ್ನಡನಾಡಿನ ಹಕ್ಕಿಗಳು(2)– | ....81.00 |
| ಹೆಜ್ಜೆ ಮೂಡದ ಹಾದಿ | ....90.00 |
| ಪಕ್ಕಿ – ಪುಕ್ಕ | ....369.00 |
| ಅಣ್ಣನ ನೆನಪುಗಳು | ....180.00 |
| ಹುಲಿಯೂರಿನ ಸರಹದ್ದು | ....105.00 |
| ಅಬಚೂರಿನ ಪೋಸ್ಟಾಫೀಸು | ....90.00 |
| ಮಿಲನಿಯಮ್(1) – ಹುಡುಕಾಟ | ....81.00 |
| ಮಿಲನಿಯಮ್(2) – ಜೀವನ ಸಂಗ್ರಾಮ | ....72.00 |
| ಮಿಲನಿಯಮ್(3) – ಪೆಸಿಫಿಕ್ ದ್ವೀಪಗಳು | ....78.00 |
| ಮಿಲನಿಯಮ್(4) – ಚಂದ್ರನ ಚೂರು | ....81.00 |
| ಮಿಲನಿಯಮ್(5) – ನೆರೆಹೊರೆಯ ಗೆಳೆಯರು | ....81.00 |
| ಮಿಲನಿಯಮ್(6) – ಮಹಾಯುದ್ಧ(1) | ....87.00 |
| ಮಿಲನಿಯಮ್(7) – ಮಹಾಯುದ್ಧ(2) | ....87.00 |
| ಮಿಲನಿಯಮ್(8) – ಮಹಾಯುದ್ಧ(3) | ....81.00 |
| ಮಿಲನಿಯಮ್(9) – ದೇಶ ವಿದೇಶ(1) | ....81.00 |
| ಮಿಲನಿಯಮ್(10) – ದೇಶ ವಿದೇಶ(2) | ....81.00 |
| ಮಿಲನಿಯಮ್(11) – ದೇಶ ವಿದೇಶ(3) | ....81.00 |
| ಮಿಲನಿಯಮ್(12) – ದೇಶ ವಿದೇಶ(4) | ....81.00 |
| ಮಿಲನಿಯಮ್(13) – ವಿಸ್ಮಯ ವಿಶ್ವ(1) | ....72.00 |
| ಮಿಲನಿಯಮ್(14) – ಮಹಾ ಪಲಾಯನ | ....87.00 |
| ಮಿಲನಿಯಮ್(15) – ವಿಸ್ಮಯ ವಿಶ್ವ(2) | ....72.00 |
| ಮಿಲನಿಯಮ್(16) – ಅಡ್ವೆಂಚರ್ | ....72.00 |
| ಮಾಯಾಲೋಕ–1 | ...216.00 |
| The Stories of my environment | ...144.00 |
| ಪಾಕ ಕ್ರಾಂತಿ ಮತ್ತು ಇತರ ಕತೆಗಳು | ....72.00 |
| ವ್ಯಕ್ತಿ ವಿಶಿಷ್ಟ ಸಿದ್ಧಾಂತ ಮತ್ತು ಯಮಳ ಪ್ರಶ್ನೆ | ....60.00 |
| ಬೃಹನ್ನಳೆ ಸೋಮುವಿನ ಸ್ವಗತ ಲಹರಿ ಮತ್ತು ಇತರ ಕವನಗಳು | ....60.00 |
| ವಿಮರ್ಶೆಯ ವಿಮರ್ಶೆ | ....162.00 |
| ಮಾಯೆಯ ಮುಖಗಳು(ಚಿತ್ರ ಲೇಖನ) | ....600.00 |
| ಹೊಸ ವಿಚಾರಗಳು | ....450.00 |
| ಕಾಡು ಮತ್ತು ಕ್ರೌರ್ಯ | ಬರಲಿದೆ |
| ಹಕ್ಕಿಗಳ ಗ್ರೀಟಿಂಗ್ ಕಾರ್ಡ್ (6 ಬಗೆಯವು) ಒಂದು ಕಾರ್ಡಿನ ಬೆಲೆ | ....15.00 |

**ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ–ಶ್ರೀ ಪ್ರದೀಪ ಕೆಂಜಿಗೆ:**

| | |
|---|---|
| ವಿಸ್ಮಯ(1), (2), (3) ಪ್ರತಿಯೊಂದು | 78.00 |
| ಪ್ಯಾಪಿಲಾನ್(1),(2) ಪ್ರತಿಯೊಂದು | ....147.00 |

**ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ–ಡಾ. ವಿ.ವಿ. ಬೆಳವಾಡಿ**

| | |
|---|---|
| ನಡೆಯುವ ಕಡ್ಡಿ! ಹಾರುವ ಎಲೆ! | ....63.00 |
| **ಶ್ರೀ ಪ್ರದೀಪ ಕೆಂಜಿಗೆ** :ಬರ್ಮುಡಾ ಟ್ರ್ಯಾಂಗಲ್ | ....72.00 |
| ಅದ್ಭುತ ಯಾನ | ....108.00 |
| ಹೆಬ್ಬಾವಿನೊಡನೆ ಹೋರಾಟ | ....120.00 |
| **ಶ್ರೀ ಎಂ. ಶಿವಕುಮಾರ್:** ಸೈಕಲ್‌ವಾಲ | ....40.00 |
| ಕಂಪ್ಯೂಟರ್ ಕಲಿಯಿರಿ | ....147.00 |
| ಗಡಿಯಾರ ವಿಕಾಸದ ಹಾದಿಯಲ್ಲಿ | ...66.00 |

**ವಿದ್ವಾನ್ ಶ್ರೀ ಕೋಳಂಬೆ ಪುಟ್ಟಣ್ಣ ಗೌಡರು**

| | |
|---|---|
| ಅಚ್ಚಗನ್ನಡ ನುಡಿಕೋಶ | ...360.00 |
| **ಶ್ರೀ ನರೇಂದ್ರ ರೈ ದೇರ್ಲ**:ಸಾವಯವ ಕೃಷಿ | ....51.00 |

**ಶ್ರೀ ಕೃಪಾಕರ – ಸೇನಾನಿ**

| | |
|---|---|
| ಸೆರೆಯಲ್ಲಿ ಕಳೆದ ಹದಿನಾಲ್ಕು ದಿನಗಳು | ....93.00 |
| **ಶ್ರೀ ಕೃಷ್ಣ ಆಲನಹಳ್ಳಿ:** ಗೋಡೆ | ....66.00 |

**ಡಾ. ಎಸ್.ಎಂ.ವೃಷಭೇಂದ್ರ ಸ್ವಾಮಿ:**

| | |
|---|---|
| ತರಗತಿಗಳಲ್ಲಿ ಕುವೆಂಪು | ....198.00 |

**ಶ್ರೀ ದೇವನೂರು ಮಹಾದೇವ:**

| | |
|---|---|
| ಕುಸುಮಬಾಲೆ | ....60.00 |
| ದ್ಯಾವನೂರು ಹಾಗೂ ಒಡಲಾಳ | ....96.00 |

**ಶ್ರೀಮತಿ ತಾರಿಣಿ ಚಿದಾನಂದ:**

| | |
|---|---|
| ಮಗಳು ಕಂಡ ಕುವೆಂಪು | ...330.00 |

**ಶ್ರೀಮತಿ ಪದ್ಮಾ ಶ್ರೀರಾಮ:**

| | |
|---|---|
| ಗಿಡಗಂಟೆಯ ಕೊರಳು | ....78.00 |

**ಡಾ. ಕೆ.ಚಿದಾನಂದ ಗೌಡ:**

| | |
|---|---|
| ಬದುಕು.. ಬೆಳಕು... ಚುಟುಕು....! ಭಾಗ1 | ....89.00 |
| ಬದುಕು.. ಬೆಳಕು... ಚುಟುಕು....! ಭಾಗ2 | ....90.00 |

**ಶ್ರೀಮತಿ ರಾಜೇಶ್ವರಿ ತೇಜಸ್ವಿ:**

| | |
|---|---|
| ನನ್ನ ತೇಜಸ್ವಿ | ...369.00 |

*ಹೊಸ ಆವೃತ್ತಿ(Edition) ಬಿಡುಗಡೆಗೊಂಡಾಗ್ಯೂ ಮುಖಪುಟ ಬೆಲೆಯಲ್ಲಿ ವ್ಯತ್ಯಾಸವಿರುವುದು.

# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

**ಆಗಸ್ಟ್, ೨೦೧೩(ವಾರ್ಷಿಕ ವಿಶೇಷಾಂಕ)** **ಸಂಪುಟ: ೩ ಸಂಚಿಕೆ: ೧**

**ಸಂಪಾದಕ : ಡಿ.ಎಸ್.ನಾಗಭೂಷಣ**

**ಚಂದಾ** ವಾರ್ಷಿಕ: ರೂ. ೧೫೦/-(ವ್ಯಕ್ತಿಗಳಿಗೆ) ರೂ. ೨೫೦/-(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ. ೧೫/-

**ವಿಳಾಸ:** ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

**ಪ್ರಿ**ಯ ಓದುಗರೇ,

ನಿಮ್ಮ ಪ್ರೀತಿಯ 'ಹೊಸ ಮನುಷ್ಯ' ದ ಮೂರನೇ ವರ್ಷದ ಈ ಮೊದಲ ಸಂಚಿಕೆಯನ್ನು ವಿಶೇಷ ಸಂಚಿಕೆಯಾಗಿ ನಿಮ್ಮ ಕೈಗಿಡುತ್ತಿದ್ದೇವೆ. ಹಳೇ ತಲೆಮಾರುಗಳು ಮರೆತೇ ಹೋಗುತ್ತಿರುವ ಮತ್ತು ಹೊಸ ತಲೆಮಾರುಗಳು ಕೇಳದೇ ಹೋಗಿರುವ 'ಸಮಾಜವಾದ' ಎಂಬ ವಿಚಾರಧಾರೆಗೆ ಬದ್ಧವಾದ,ಆದರೆ ಅದನ್ನು ಒಂದು ಸಿದ್ಧವಾದ ವಸ್ತುವಿನಂತೆ ನೋಡದೆ, ಅದರ ಸಾಧ್ಯತೆಗಳನ್ನೆಲ್ಲ ಸೃಜನಾತ್ಮಕವಾಗಿ ಪರಿಶೀಲಿಸಲು ಪ್ರಯತ್ನಿಸುತ್ತಿರುವ ವೈಯುಕ್ತಿಕ ಸಾಹಸದ ಪತ್ರಿಕೆಯೊಂದು ಎರಡು ವರ್ಷಗಳನ್ನು ಪೂರೈಸಿ ಆಯಾಸಗೊಳ್ಳದೆ ಮುಂದುವರೆದಿರುವುದು ಸಾಮಾನ್ಯ ಸಂಗತಿಯೇನೂ ಅಲ್ಲ ಎಂದು ನಾನು ಭಾವಿಸಿರುವೆ. ಇದಕ್ಕೆ ಮುಖ್ಯ ಕಾರಣ, ಪತ್ರಿಕೆ ಒಂದು ವೈಯುಕ್ತಿಕ ಸಾಹಸವಾಗಿ ಆರಂಭವಾದರೂ, ಅದು ಕ್ರಮೇಣ ಒಂದು ಚಿಕ್ಕದಾದರೂ ಸಾಮೂಹಿಕ ನೆಲೆಯನ್ನು ಕಂಡುಕೊಂಡು ಬೆಳೆಯುತ್ತಿರುವುದು. ಬೆಳೆಯುವುದು ಎಂದರೆ, ಪ್ರಮಾಣದಲ್ಲಿ ಮಾತ್ರವಲ್ಲ;ಗುಣಾತ್ಮಕವಾಗಿ ಕೂಡ. ಇದಕ್ಕೆ ಈ ವಿಶೇಷಾಂಕಕ್ಕಾಗಿ ಬರೆದಿರುವ ಲೇಖಕ ಸಮೂಹದ ಹರಹು ಮತ್ತು ವೈವಿಧ್ಯವೇ ಸಾಕ್ಷಿ. ಹಾಗೇ ಜಾಹೀರಾತುಗಳನ್ನು ನೀಡಿದ ಮತ್ತು ಅದರ ವ್ಯವಸ್ಥೆ ಮಾಡಿ ಬೆಂಬಲಿಸಿದ ಸಮೂಹ ಕೂಡ.

ಈ ಸಂಬಂಧ ಪತ್ರಿಕೆಯ ಈ ಮೂರನೇ ವರ್ಷದ ಹೊಸ್ತಿಲಲ್ಲಿ ನಿಂತು ನೆನೆಯಬೇಕಾದ ಒಂದು ಸಮೂಹವೇ ಇದೆ. ಬಹು ಮುಖ್ಯವಾಗಿ ಹೆಸರಿಸಬೇಕೆಂದರೆ, ಚಾಮರಾಜನಗರದ ಅಪೂರ್ವ ಡಿ'ಸಿಲ್ವ, ಮೈಸೂರಿನ ಬಿ. ರಾಜೇಶ್, ತುಮಕೂರಿನ ಕೆ.ಪಿ. ನಟರಾಜ, ದಾವಣಗೆರೆಯ ಡಿ.ಜಿ. ಪುಟ್ಟರಾಜು, ಧಾರವಾಡದ ಬಿ.ವಿ. ಸುರೇಂದ್ರ, ಹಾಸನದ ಆರ್. ಪಿ. ವೆಂಕಟೇಶಮೂರ್ತಿ ಮತ್ತು ಬಿ.ಶಿವಕುಮಾರ್, ಮಡಿಕೇರಿಯ ರೋಹಿತ್, ರಾಮದುರ್ಗದ ಹಸನ್ ನಯೀಂ ಸುರಕೋಡ, ಗೋಕಾಕದ ಅಜ್ಜಪ್ಪ ಬಿರಡಿ, ಹೆಗ್ಗೋಡಿನ ಎಂ.ಎಸ್ ಕುಲಕರ್ಣಿ, ಸಾಗರದ ಎಂ. ರಾಘವೇಂದ್ರ ಹಾಗೂ ಚಿತ್ರದುರ್ಗದ ಪ್ರೊ. ಬಿ.ಪಿ. ವೀರೇಂದ್ರಕುಮಾರ್ ಇವರನ್ನು ನೆನೆಯಲೇಬೇಕು. ಈ ನನ್ನ ಗೆಳೆಯರು ಸಮಾಜವಾದದ ಹೊಸ ಅನ್ವೇಷಣೆಯ ಈ ಸಾಹಸದಲ್ಲಿ ನನ್ನೊಂದಿಗೆ ಸಹಕರಿಸಿ ತಂತಮ್ಮ ಊರುಗಳಲ್ಲಿ ಈ ಪತ್ರಿಕೆಯನ್ನು ನೆಲೆಯೂರಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ ಇಲ್ಲವೇ ಪತ್ರಿಕೆಗೆ ಪರೋಕ್ಷ ಸಹಾಯ ಒದಗಿಸಿದ್ದಾರೆ. ಇವರಿಗೆಲ್ಲ ನನ್ನ ವೈಯುಕ್ತಿಕ ಕೃತಜ್ಞತೆಗಳು.

ಸಮಾಜವಾದಕ್ಕೆ ಅಷ್ಟೇನೂ ಪೂರಕವಲ್ಲದ ಇಂದಿನ ಜಾಗತಿಕ ರಾಜಕೀಯ ಸಂದರ್ಭದಲ್ಲಿ ಪತ್ರಿಕೆಯು ಸಮಾಜವಾದದ ಬಗ್ಗೆ ಮಾತನಾಡುತ್ತಿರುವುದೇ ಹಲವರಿಗೆ ಅಸಂಬದ್ಧವಾಗಿ; ಇನ್ನೂ ಕೆಲವರಿಗೆ ಹಾಸ್ಯಾಸ್ಪವಾಗಿಯೂ ಕಾಣುತ್ತಿದೆ. ಅದಕ್ಕಾಗಿ ಅವರನ್ನು ದೂಷಿಸುವುದೂ ಉಚಿತವಲ್ಲ ಎಂಬುದು ಪತ್ರಿಕೆಗೆ ಗೊತ್ತಿದೆ. ಏಕೆಂದರೆ, ಹಾಗೆ ಕಾಣಿಸುತ್ತಿರುವವರಿಗೆ ಈ ಕಾಲದ ಅನಾಹುತಗಳು, ಅದರ ಹಿಂದಿರುವ ವೈರುಧ್ಯಗಳು ಕಾಣಿಸುತ್ತಿಲ್ಲವೆಂದಲ್ಲ. ಆದರೆ ಅವರ ಪ್ರಕಾರ ಇವೆಲ್ಲವೂ ಎಲ್ಲ ಕಾಲದಲ್ಲೂ ಇದ್ದದ್ದೇ. ಹಾಗಾಗಿ ಅದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳದೆ, ನಮ್ಮ ಪಾಡಿಗೆ ನಾವು ನಾವು ನಂಬಿದಂತೆ ಬದುಕುವುದು ಒಳ್ಳೆಯದು. ಆದರೆ ಇಲ್ಲಿ ಮುಖ್ಯ ಪ್ರಶ್ನೆ: ಇದು ನಿಜವಾಗಿ ಸಾಧ್ಯವಾಗುವಂತಹುದೆ? ಈ ನಾವು ಎಂದರೆ ಯಾರು, ಏನು? ಬದುಕು ಇವರು ಹೇಳುವಷ್ಟು ವೈಯುಕ್ತಿಕವಾಗಿ ಇರಲು ಸಾಧ್ಯವೇ? ಮನುಷ್ಯನ ಸಂಘಜೀವಿತ್ವಕ್ಕೆ ಹೊರತಾಗಿ ಬೇರೆ ಜೀವಿತ್ವ ಇರಬಲ್ಲುದೇ? ಇದೆಯೆಂದು ನಂಬುವವರು ಇಂದಿನ ನಿಜ ವಾಸ್ತವದಲ್ಲಿ ಅದು ಇದೆಯೇ ಎಂಬುದನ್ನೊಮ್ಮೆ ಪ್ರಮಾಣಿಕವಾಗಿ ಪರಿಶೀಲಿಸಿಕೊಳ್ಳಬೇಕು. ಅಥವಾ ಜಾಗತೀಕರಣ ಸೃಷ್ಟಿಸುತ್ತಿರುವ ಅನಾಹುತ ಮತ್ತು ದುರಂತಗಳ ವಿರುದ್ಧ ಬೇರೆ ಏನಾದರೂ ಪರಿಹಾರ ಮಾರ್ಗಗಳಿವೆಯೇ ಎಂಬುದನ್ನಾದರೂ ಅವರು ಹೇಳಬೇಕು. ಮೊದಲೇ ಹೇಳಿದಂತೆ ನಾವು ಸಮಾಜವಾದವನ್ನು ಒಂದು ಸಿದ್ಧ ವಸ್ತುವಿನಂತೆ ಭಾವಿಸಿ ಅದನ್ನು ಚರ್ಚಿಸುತ್ತಿಲ್ಲ. 'ಹಿಂದ್ ಸ್ವರಾಜ್' ಮೂಲಕ ಗಾಂಧಿ ಹೇಳಿದ ಸತ್ಯ, ಅದನ್ನು ಕುರಿತಂತೆ ಲೋಹಿಯಾ ಮಾಡಿದ ವಿಮರ್ಶೆ; ಹಾಗೇ ಅಂಬೇಡ್ಕರ್ ಎಚ್ಚರಗೊಳಿಸಿದ ಆತ್ಮಸಾಕ್ಷಿ –ಇವುಗಳ ಸೂಲು ಹಿಡಿದು ನಾವು ಮುಂದೆ ಹೆಜ್ಜೆ ಹಾಕಿದ್ದೇವೆ. ಅದು ನಮ್ಮ, ನಮ್ಮದೇ ದಾರಿ. ನಮ್ಮ ಈ ವಾರ್ಷಿಕ ವಿಶೇಷ ಸಂಚಿಕೆ ಈ ಪ್ರಕ್ರಿಯೆಯ ಒಂದು ದಾಖಲೆ ಕೂಡ ಎಂಬುದನ್ನು ಓದುಗರು ಗಮನಿಸಬಹುದು. ಈ ದಾರಿಯಲ್ಲಿ ನಮ್ಮ ಜೊತೆ ಬಂದು ಮುಂದಿನ ಹೆಜ್ಜೆ ಗುರುತಿಸಬಯಸುವ ಎಲ್ಲರನ್ನೂ 'ಹೊಸ ಮನಷ್ಯ' ಸ್ವಾಗತಿಸುತ್ತದೆ.

ಹಾಗೆ ನೋಡಿದರೆ ಈಗಾಗಲೇ ಕೆಲವರು ಈ ಸಂಬಂಧ ಕೆಲ ಸಲಹೆಗಳನ್ನು ನೀಡಿದ್ದಾರೆ. ಪತ್ರಿಕೆಯನ್ನು ಯುವಜನ ಓದುವಂತೆ ಮಾಡಬೇಕೆಂದು ಒಬ್ಬರು ಸೂಚಿಸಿದರೆ, ಇನ್ನೊಬ್ಬರು ಇದನ್ನು 'ಕ್ಯಾಂಪಸ್ ಪತ್ರಿಕೆ' ಮಾಡುವುದೊಳಿತು ಎಂದಿದ್ದಾರೆ. ಆದರೆ ಇದನ್ನೆಲ್ಲ ಮಾಡಬೇಕಾದವರು ಯಾರು? ಪತ್ರಿಕೆ ಶುರು ಮಾಡಿದ ನಾನೊಬ್ಬನೇ? ಪ್ರತಿ ತಿಂಗಳೂ ಕೈಸೇರುವ ಈ ಪತ್ರಿಕೆಯ ಹಿಂದೆ ಕೆಲಸ ಮಾಡುತ್ತಿರುವ ಕೈಗಳು ಎಷ್ಟು ಎಂದು ನಿಮಗೆ ಗೊತ್ತಾದರೆ ನೀವು ಗಾಬರಿಯಾಗಬಹುದು. ನಮ್ಮ ಸಮಾಜವಾದಿ ಗೆಳೆಯರು ತಮ್ಮ ಮತ್ತು ತಮ್ಮ ಆಪ್ತರ ಮಕ್ಕಳಿಂದ ಈ ಪತ್ರಿಕೆಯನ್ನು ಓದಿಸಲು ಆರಂಭಿಸಿದರೆ ಅದೇ ಈ ದಿಸೆಯಲ್ಲಿ ಮೊದಲ ಹೆಜ್ಜೆಯಾದೀತು. ಪತ್ರಿಕೆಯ ಸೋದರ ಸಂಸ್ಥೆಯಾದ 'ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನವು ಪ್ರತಿ ಅಕ್ಟೋಬರ್‌ನಲ್ಲಿ ಕುಪ್ಪಳಿಯಲ್ಲಿ ನಡೆಸುತ್ತಿರುವ ಎರಡು ದಿನಗಳ ಸಮಾಜವಾದಿ ಅಧ್ಯಯನ ಶಿಬಿರಕ್ಕೆ ಇವರು ತಮ್ಮ ಮಕ್ಕಳೊಂದಿಗೆ ಬರಲು ಬಿಡುವು ಮಾಡಿಕೊಂಡರೆ ಅದು ಎರಡನೆಯ ಹೆಜ್ಜೆಯಾದೀತು. ನಮ್ಮ ಬಹುತೇಕ ಸಮಾಜವಾದಿಗಳ ಬಳಿ ಇಂದು ಹಣವಿದೆ. ಅದನ್ನು ಅಲ್ಪಸ್ವಲ್ಪವಾದರೂ ಕೊಟ್ಟಾರು. ಆದರೆ ಅವರ ಬಳಿ ಇಂತಹ ಕೆಲಸಗಳಿಗೆ ಬಿಲ್‌ಕುಲ್ ಸಮಯವಿಲ್ಲ!

# ‘ಅನ್ನ ಭಾಗ್ಯ’ದ ಹೆಸರಿನಲ್ಲಿ...



ಸಮಾಜವಾದದ ಹೊಸ ಅನ್ವೇಷಣೆ ಎಂದೆ. ಅದೇನೂ ಒಂದು ದೊಡ್ಡ ಬೌದ್ಧಿಕ ಸಾಹಸವೇ ಆಗಬೇಕಿಲ್ಲ. ಕಲಿತ ಸಿದ್ಧಾಂತದ ಭಾರಗಳಿಂದೀಚೆಗೆ ಬಂದು, ನಮ್ಮ ಆ ಕಲಿಕೆಯ ಕಾಲದಿಂದೀಚೆಗೆ ಬದಲಾದ ಜನ ಮತ್ತು ಸಂದರ್ಭವನ್ನು ಒಮ್ಮೆ ಕಣ್ಣರಳಿಸಿ ನೋಡತೊಡಗಿದರೆ ಎಲ್ಲವೂ ಹೊಳೆಯತೊಡಗುತ್ತದೆ. ಉದಾಹರಣೆಗೆ ಸಿದ್ಧರಾಮಯ್ಯನವರ ಸರ್ಕಾರ ಆರಂಭಿಸಿರುವ ‘ಅನ್ನ ಭಾಗ್ಯ’ ಯೋಜನೆ ಕುರಿತು ನಡೆದಿರುವ ಬಿಸಿ ಬಿಸಿ ಚರ್ಚೆಯನ್ನೇ ಗಮನಿಸಿ. ಎರಡೂ ಬದಿಯ ವಾದಗಳು ತಮ್ಮದೇ ನೆಲೆಗಳಲ್ಲಿ ಭಾವನಾತ್ಮಕ ಅತಿಗಳಿಗೆ ಹೋಗಿ, ಅದರ ವಸ್ತುನಿಷ್ಠ ನೋಟ ಮತ್ತು ಅದರಿಂದ ಹೊಮ್ಮಬಹುದಾದ ಹೊಸ ಸತ್ಯಗಳಿಗೆ ಎರವಾಗಿ ಹೋಗಿವೆ. ಈ ದೇಶ ಸ್ವಾತಂತ್ರ್ಯ ಗಳಿಸಿದ ಈ ೬೫ ವರ್ಷಗಳಲ್ಲಿ ಮತ್ತು ನಿರ್ದಿಷ್ಟವಾಗಿ ಈ ದೇಶಕ್ಕೆ ಹೊಸ ‘ಸಮೃದ್ಧಿ’ ತಂದಿದೆ ಎಂದು ಹೇಳಲಾಗುವ ಕಳೆದ ೨೦ ವರ್ಷಗಳ ಜಾಗತೀಕರಣ ಮತ್ತು ಅದು ಎತ್ತಿ ಹಿಡಿಯುವ ಮುಕ್ತ ಮಾರುಕಟ್ಟೆ ನೀತಿಯಿಂದಾಗಿ ನಮ್ಮ ಜನರ ಹಸಿವನ್ನು ನೀಗಿಸಲು ಸಾಧ್ಯವೇ ಆಗಿಲ್ಲ. ದೇಶದ ಹೆಚ್ಚೂ ಕಡಿಮೆ ಅರ್ಧದಷ್ಟು ಜನ ಈಗಲೂ ಹೊಟ್ಟೆ ತುಂಬ ಉಣ್ಣುತ್ತಿಲ್ಲ. ಉಂಡವರಲ್ಲಿಯೂ ಅರ್ಧದಷ್ಟು ಜನಕ್ಕೆ ಅಗತ್ಯ ಪೌಷ್ಠಿಕ ಆಹಾರಕ್ಕೆ ಬಾಧ್ಯರಾಗದೆ ಮಾರಕ ರೋಗಗಳಿಗೆ ತುತ್ತಾಗುತ್ತಿದ್ದಾರೆ. ಜಗತ್ತಿನ ಪ್ರತಿ ಮೂರು ಅಪೌಷ್ಠಿಕ ಮಕ್ಕಳಲ್ಲಿ ಒಂದು ಭಾರತೀಯ ಮಗುವಂತೆ! ಆದರೂ ನಾವು ‘ಜಾಗತಿಕ ಶಕ್ತಿ’ಯಾಗಿ ಹೊರಹೊಮ್ಮುತ್ತಿದ್ದೇವೆ ಎಂದು ಘೋಷಿಸಿಕೊಳ್ಳುತ್ತಿದ್ದೇವೆ. ಏಕೆಂದರೆ ಕಳೆದ ೨೦ ವರ್ಷಗಳಲ್ಲಿ ನಮ್ಮ ರಾಷ್ಟ್ರದಲ್ಲಿ ಜಾಗತಿಕ ಮಟ್ಟದ ಶ್ರೀಮಂತರ ಸಂಖ್ಯೆ ಹೆಚ್ಚಾಗಿದ್ದು, ‘ಹೊಸ ಸಮೃದ್ಧಿ’ ನಮ್ಮ ನಗರಗಳ ಬೀದಿ ಬೀದಿಗಳಲ್ಲಿ ಕಣ್ಣಿಗೆ ರಾಚುತ್ತಿದೆ. ಆದರೆ ಅದೇ ಸಮಯದಲ್ಲಿ ನಮ್ಮಲ್ಲಿ ಬಡವರ ಸಂಖ್ಯೆಯೂ (ನಮ್ಮ ಯೋಜನಾ ಆಯೋಗದ ಹಾಸ್ಯಾಸ್ಪದ ಬಡತನ ರೇಖೆಯ ಕೆಳಗಿನ ಜನರಲ್ಲ!) ಹೆಚ್ಚುತ್ತಿದೆ ಎಂದು ಸರ್ಕಾರಿ ಅಂಕಿ ಅಂಶಗಳೇ ಹೇಳುತ್ತಿವೆ.

ಇದು ವಿರೋಧಾಭಾಸದಂತೆ ಕಾಣುತ್ತದೆ. ಆದರೆ ಹೀಗೆ ವಿರೋಧಾಭಾಸದಂತೆ ಕಾಣಲು, ಕಾಣುವ ಕಣ್ಣುಗಳಿಗೆ ಬಡಿದಿರುವ ಹೊಸ ರಾವೇ ಮೂಲ ಕಾರಣವಾಗಿದೆ. ಹೊಸ ಸಮೃದ್ಧಿಯ ಲಾಭ ಪಡೆದಿರುವ ಅಲ್ಪ ಸಂಖ್ಯಾತ ಜನರು ಈ ಲಾಭದಿಂದ ವಂಚಿತರಾದ ಜನಸಮುದಾಯಗಳೊಂದಿಗೆ ಭಾವನಾತ್ಮಕ ಸಂಬಂಧವನ್ನೇ ಕಡಿದುಕೊಂಡಿದ್ದಾರೆ. ಅವರೆಲ್ಲ ಕೆಲಸಗಳ್ಳರು, ಸೋಮಾರಿಗಳು, ದಡ್ಡರು, ಕಾಲದೊಂದಿಗೆ ಬದಲಾಗದ ಕರ್ಮಠರು, ಎಂದೂ ಉದ್ಧಾರವಾಗದ ‘ನಿತ್ಯ ನಾರಕಿ’ಗಳು ಎಂದು ವರ್ಗೀಕರಿಸಿ ತಮ್ಮ ಕಣ್ಣಳತೆಯಿಂದ ದೂರೀಕರಿಸಿಬಿಟ್ಟಿದ್ದಾರೆ. ಆದರೆ ೨೦ ವರ್ಷಗಳ ಹಿಂದೆ ತಾವು ಕೂಡ ಆ ಹಿಂದಿನ ಕಾಲದ ಶ್ರೀಮಂತರಿಂದ ಹಾಗೇ ವರ್ಗೀಕರಿಸಲ್ಪಟ್ಟು ದೂರೀಕರಿಸಲ್ಪಟ್ಟಿದ್ದೆವು ಎಂಬುದನ್ನು ಇವರು ಮರೆತಿದ್ದಾರೆ. ಇಲ್ಲಿ ಮುಖ್ಯ ಸಂಗತಿ ಎಂದರೆ ಇಂದಿನ ಈ ಮರೆವಿಗೆ ಕಾರಣ, ತಾವೀಗ ಯಾವ ಮತ್ತು ಎಂತಹ ಆರ್ಥಿಕ ನೀತಿಯಿಂದ ಲಾಭ ಪಡೆಯುತ್ತಿದ್ದೇವೆಯೋ ಆ ಆರ್ಥಿಕ ನೀತಿಯಡಿಯಲ್ಲಿ ನಾವು ಸಾಧಿಸುತ್ತಿರುವ ‘ಅಭಿವೃದ್ಧಿ’ ತನ್ನ ಗುಣದಲ್ಲೇ ಅಮಾನವೀಯವಾಗಿದೆ ಎಂಬುದು ಅವರ ಅರಿವಿಗೇ ಬಂದಿಲ್ಲ ಎನ್ನುವುದು. ನಮ್ಮನ್ನು ಅದು ನಮ್ಮಾಚೆಯ ಇತರರನ್ನು ವ್ಯವಧಾನದಲ್ಲಿ ಸಹಾನುಭೂತಿಯೊಂದಿಗೆ ಗಮನಿಸಲಾಗದಷ್ಟು ಸ್ವ–ವ್ಯಸನಿಗಳನ್ನಾಗಿ ಮಾಡಿ, ಅವರನ್ನು ನಮ್ಮ ಮಾನವ ಲೋಕದಿಂದ ಸಂಪೂರ್ಣ ಹೊರಗಿಟ್ಟು ಬಿಡುವಂತಹ ಪೊರೆಯೊಂದನ್ನು ನಮ್ಮ ಕಣ್ಣಿನಲ್ಲಿ ಬೆಳೆಸಿಬಿಟ್ಟಿದೆ. ಅವರ ಕಷ್ಟ–ನಷ್ಟ–ಕೂಗು–ನೋಟಗಳು ನಮ್ಮ ಲೋಕ ಸ್ಪಂದನೆಯ ವ್ಯಾಪ್ತಿಗೆ ಬರದಂತೆ ಮಾಡಿಬಿಟ್ಟಿದೆ. ನಮ್ಮ ಮಾನವ ಸಂವೇದನೆಯ ಕೋಶದಲ್ಲೇ ಒಂದು ತೂತು ಕೊರೆದುಬಿಟ್ಟಿದೆ. ಬಡವರಿಗೆ ತುತ್ತು ನೀಡುವ ಕಾರ್ಯಕ್ರಮದ ಬಗ್ಗೆ ಬರುತ್ತಿರುವ ಸಾರಾಸಗಟಾದ, ಏಕಮುಖವಾದ ಆ ರಭಸದ ಮಾತುಗಾರಿಕೆಯನ್ನು ಗಮನಿಸಿದವರಿಗೆ ಹೀಗೆ ಅನ್ನಿಸುವುದಿಲ್ಲವೇ?

ಆದರೆ ಇಂತಹ ಅ–ಮಾನವ ಮರೆವು ‘ಅನ್ನ ಭಾಗ್ಯ’ ಯೋಜನೆಯ ವಿರೋಧಕ್ಕೆ ಕಾರಣವಾಗಿದ್ದಂತೆ, ಅದನ್ನು ಸಾರಾಸಗಟಾಗಿ ಸಮರ್ಥಿಸುವವರ ವಾದವೂ ಅಷ್ಟೇ–ಆದರೆ ಇನ್ನೊಂದು ಅರ್ಥದಲ್ಲಿ–ಅಮಾನವೀಯವಾಗಿದೆ. ಅದು ಒಂದು ದೊಡ್ಡ ಜನವರ್ಗವನ್ನು ಶಾಶ್ವತ ಅರೆ ಭಿಕ್ಷುಕ ವರ್ಗವನ್ನಾಗಿ ಮಾಡುವ ನಿರ್ಧಾರ ಕೈಗೊಂಡಂತಿದೆ. ಅಂದರೆ ಸರ್ಕಾರ ಇಂದು ತಾನು ಅನುಸರಿಸುತ್ತಿರುವ ಅಭಿವೃದ್ಧಿ ನೀತಿ ವ್ಯಾಪ್ತಿಗೆ ಇವರು ಬರುವುದಿಲ್ಲ ಎಂದು ನಿರ್ಧರಿಸಿ ಇವರಿಗಾಗಿ ತನ್ನ ಅಭಿವೃದ್ಧಿ ನೀತಿಯ ಅನುಬಂಧವೆಂಬಂತೆ ಈ ‘ಕರುಣೆ’ಯ ಕಾರ್ಯಕ್ರಮವನ್ನು ಹಾಕಿಕೊಂಡಂತಿದೆ. ‘ಅನ್ನ ಭಾಗ್ಯ’ ಯೋಜನೆಯ ಬಗ್ಗೆ ಟೀಕೆ ಮಾಡುವವರೆಲ್ಲ ಇದರಿಂದ ಬಡವರು ಸೋಮಾರಿಗಳಾಗುತ್ತಾರೆ ಎಂದು ವಾದಿಸುವವರಲ್ಲ. ಏಕೆಂದರೆ ಇವರಲ್ಲಿ ಹಲವರು ಈ ಸ್ಥಿತಿಯಿಂದಲೇ ಮೇಲ್ಮುಖವಾಗಿ ಚಲಿಸಿದವರು. ಆದರೆ, ನಮಗೆ ಸಾಧ್ಯವಾದದ್ದು ಬೇರೆ ಬೇರೆ ಮಟ್ಟಗಳಲ್ಲಾದರೂ ಇತರ ಕುಟುಂಬಗಳಿಗೇಕೆ ಸಾಧ್ಯವಾಗುತ್ತಿಲ್ಲ ಎಂದು ಚಿಂತಿಸುತ್ತಿರುವವರು.

ಹಾಗೇ, ಉಚಿತವಾಗಿ ಅಥವಾ ಸುಲಭವಾಗಿ ಹೊಟ್ಟೆ ತುಂಬುವುದಾದದರೆ ಜನ ಸೋಮಾರಿಗಳಾಗುವ ಸಾಧ್ಯತೆಯೇ ಇಲ್ಲ ಎಂದು ನಂಬುವವರು ಇವರಲ್ಲ. ಏಕೆಂದರೆ ಕಣ್ಮುಂದೆಯೇ ಇಂತಹ ಹಲವು ಉದಾಹರಣೆಗಳಿರುವಾಗ ಅವರು ತರ್ಕ, ಸಿದ್ಧಾಂತಗಳ ಮಾತುಗಳನ್ನೇಕೆ ನಂಬಿಯಾರು? ಹಸಿರು ಚೀಟಿ ಮತ್ತು ಭ್ರಷ್ಟಾಚಾರಕ್ಕೆ ಇನ್ನೊಂದು ಹೆಸರಿನಂತಾಗಿರುವ ಉದ್ಯೋಗ ಖಾತರಿ ಯೋಜನೆ ಜಾರಿಗೆ ಬಂದ ಮೇಲೆ ಶ್ರಮಜೀವಿ ವರ್ಗದ ಗಮನಾರ್ಹ ಭಾಗ ಏನಾಗಿದೆ, ಯಾವ ಮಾನಸಿಕತೆಗೆ ಸಿಕ್ಕಿದೆ ಎಂಬುದನ್ನು ಕಣ್ಣಾರೆ ಕಂಡಿರುವವರಿಗೆ ಎಡಪಂಥೀಯ ಘೋಷಣೆಗಳೆಲ್ಲ ಬರೀ ಭೋಳೆ ಮಾತಾಗಿ ಮಾತ್ರ ಕಾಣುತ್ತದೆ. ಶೋಷಣೆಯ ಘೋಷಣೆಯನ್ನಾಧರಿಸಿದ ಇಂತಹ ‘ಪ್ರಗತಿಪರ’ ರಾಜಕಾರಣ ಇಂದು ಜನಪ್ರಿಯ ಕರುಣೆಯ ರಾಜಕಾರಣವಾಗಿ ಅಶ್ಲೀಲಗೊಂಡು ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿದೆ. ಅದು ವೋಟ್ ಬ್ಯಾಂಕ್ ರಾಜಕಾರಣಕ್ಕೆ ಬಳಕೆಯಾಗುತ್ತಾ ನಮ್ಮ ರಾಜಕಾರಣದ ತಾತ್ವಿಕ ಮತ್ತು ನೈತಿಕ ಅಡಿಪಾಯವನ್ನೇ ನಾಶ ಮಾಡಿದೆ. ಈ ವೋಟ್ ಬ್ಯಾಂಕ್ ರಾಜಕಾರಣ ಶಾಶ್ವತ ಬಡವರ ಒಂದು ಕಳ್ಳ ಪಡೆಯನ್ನೇ ಸೃಷ್ಟಿಸಿದೆ. ಇವೆರಡೂ ಪರಸ್ಪರ ಪೂರಕವಾಗಿರುವುದರಿಂದಲೇ ನಮ್ಮ ಪಡಿತರ ವ್ಯವಸ್ಥೆ ಭ್ರಷ್ಟಗೊಂಡು ಕುಸಿದುಬೀಳುವ ಹಂತ ತಲುಪಿದೆ. ನಿಜವಾದ ಬಡವರಿಗೆ, ದರಿದ್ರರಿಗೆ ಹೋಗಬೇಕಾದ ಆಹಾರ ಧಾನ್ಯ ಇತ್ಯಾದಿ ಸೌಲಭ್ಯಗಳ ಬಹುಭಾಗ ಇತರರ ಪಾಲಾಗುತ್ತಿದೆ. ಈ ವ್ಯವಸ್ಥೆಯನ್ನು ಸರಿಪಡಿಸಲಾಗದ ಸರ್ಕಾರಗಳು ಇಂತಹ ಹೊಸ ಹೊಸ ಯೋಜನೆಗಳ ಮರೆಯಲ್ಲಿ ತನ್ನ ಭ್ರಷ್ಟತೆ, ಅದಕ್ಷತೆಯನ್ನು ಮುಚ್ಚಿಕೊಳ್ಳಲು ಯತ್ನಿಸುತ್ತದೆ.

ಹಾಗಾಗಿ, ನಮ್ಮ ಸಮಾಜವನ್ನು ಲೌಕಿಕವಾಗಿ ಮತ್ತು ಭಾವನಾತ್ಮಕವಾಗಿ ಒಡೆದಿಡುತ್ತಿರುವ ಮತ್ತು ಬಡವರ, ದರಿದ್ರರ ಸಮೂಹವನ್ನು ನಿರಂತರವಾಗಿ ಸೃಷ್ಟಿಸುತ್ತಾ ಹೋಗುತ್ತಿರುವ

ಅನಾಹುತಕಾರಿಯಾದ ತನ್ನ ಮೂಲ ಆರ್ಥಿಕ ನೀತಿಯನ್ನು ಬದಲಿಸುವ ಯೋಚನೆ ಮಾಡದೆ, ಬಡವರ ಕಣ್ಣೀರನ್ನು ಒರೆಸ ಹೋಗುವ ನಾಟಕೀಯ ರಾಜಕಾರಣಕ್ಕೆ ಕೈಹಾಕುವುದು ಮೂಲತಃ ಆತ್ಮದ್ರೋಹದ ಕೆಲಸವೇ ಆಗುತ್ತದೆ. ನಿಜ 'ಅನ್ನ ಭಾಗ್ಯ'ದಂತಹ ಕಾರ್ಯಕ್ರಮಗಳು ಚಾರಿತ್ರಿಕ ಅನ್ಯಾಯಗಳಿಂದ ಸಂತ್ರಸ್ತರಾದವರಿಗೆ ತುರ್ತು ಅಗತ್ಯವಾಗಿ ಬೇಕೇ ಬೇಕು. ಆದರೆ ಅಂತಹವರು ಒಂದು ಕಾಲಮಿತಿಯಲ್ಲಿ ತಮ್ಮ ಕಾಲ ಮೇಲೆ ತಾವು ನಿಲ್ಲಬಲ್ಲವರಾಗುವಂತಹ ಸಾರ್ವಜನಿಕ ಆಸ್ತಿ ನಿರ್ಮಾಣದ ಕಾರ್ಯಕ್ರಮಗಳ ಜೊತೆಗೇ ಜಾರಿಯಾಗಿ, ಆ ಕಾಲಮಿತಿಯೊಳಗೆ ಅವು ರದ್ದಾಗುವಂತಿರಬೇಕು. ಬಡವರನ್ನು, ನಿರ್ಗತಿಕರನ್ನು ನಿರಂತರವಾಗಿ ಸೃಷ್ಟಿಸುತ್ತಾ ಹೋಗುತ್ತಾ, ಅವರಿಗೆ ನಿರಂತರವಾಗಿ ಅರೆ ಭಿಕ್ಷೆ ನೀಡುತ್ತಾ ತನ್ನ ಬೇಳೆ ಬೇಯಿಸಿಕೊಳ್ಳುವ ರಾಜಕಾರಣದಿಂದ ಪ್ರಜ್ಞಾವಂತ ಜನ ಬೇಸತ್ತು ಹೋಗಿದೆ. ಚಾರಿತ್ರಿಕ ಅನ್ಯಾಯ, ಶೋಷಣೆ ಇತ್ಯಾದಿ ಶಬ್ದಗಳು ಇಂತಹ ಬೇಜವಾಬ್ದಾರಿ ಮತ್ತು ಲೂಟಿ ರಾಜಕಾರಣಕ್ಕೆ ಭಾವನಾತ್ಮಕ ನೆಪಗಳಾಗಿ ಮಾತ್ರ ಬಳಕೆಯಾಗುತ್ತಿದ್ದು ತಮ್ಮೆಲ್ಲ ಅರ್ಥ, ಘನತೆಗಳನ್ನು ಕಳೆದುಕೊಂಡಿವೆ. ಹಾಗಾಗಿ ಇಂದಿನ ನಿಜವಾದ, ಘನವಾದ ಸಮಾಜವಾದಿ ರಾಜಕಾರಣವೆಂದರೆ, ಅದು ತನ್ನ ಅಭಿವೃದ್ಧಿ ನೀತಿಯನ್ನು ಹೆಚ್ಚೆಚ್ಚು ಆವೃತಗೊಳಿಸಿಕೊಳ್ಳುವ ಮೂಲಕ ಈ ಚಾರಿತ್ರಿಕ ಅನ್ಯಾಯಗಳ ವಿಷವೃತ್ತ ಮತ್ತಷ್ಟು ವಿಸ್ತರಿಸುತ್ತಾ ಹೋಗದಂತೆ ತಡೆದು, 'ಅನ್ನ ಭಾಗ್ಯ'ದಂತಹ ಪರಿಹಾರ ಕಾರ್ಯಕ್ರಮಗಳನ್ನು ಒಂದು ಮಧ್ಯಂತರ ಕಾರ್ಯಕ್ರಮವಾಗಿ ಮಾತ್ರ ರೂಪಿಸಿ ನಿರ್ವಹಿಸುವುದೇ ಆಗಿರುತ್ತದೆ. ಸಮಾಜವಾದಿ ಆಳ್ವಿಕೆಯಲ್ಲಿ ದುಡಿಯದೇ ತಿನ್ನುವುದು ಪಾಪವೆನ್ನಿಸಿಕೊಳ್ಳಬೇಕು. ಅದಕ್ಕೆ ಮೊದಲು ದುಡಿಯುವ ಕೈಗಳಿಗೆ ಕೆಲಸ ಒದಗಿಸುವುದು ಸಮಾಜವಾದಿ ಸರ್ಕಾರದ ಧರ್ಮವೆನಿಸಿಕೊಳ್ಳಬೇಕು. ಇದು 'ಅನ್ನ ಭಾಗ್ಯ'ದಂತಹ ಯೋಜನೆಯನ್ನು ಮಾತ್ರ ಕುರಿತ ಮಾತಾಗಿರದೆ, ಶಾಶ್ವತವಾಗಿರುವಂತೆ ತೋರುವ ಇಂತಹ ಎಲ್ಲ ಚಾರಿತ್ರಿಕ ಅನ್ಯಾಯ ಪರಿಹಾರ ಕಾರ್ಯಕ್ರಮಗಳಿಗೂ ಅನ್ವಯವಾಗಬಲ್ಲುದಾಗಿದೆ. 'ಅಹಿಂದ' ನಾಯಕರೆನಿಸಿರುವ ಸಿದ್ಧರಾಮಯ್ಯನವರಿಗೆ ಇದು ಅರ್ಥವಾಗದ ಮಾತೇನಲ್ಲ.

## ಕನ್ನಡಕ್ಕಾಗಿ ಕೈ ಎತ್ತಿರಿ!




ಇಂತಹ ಸಮಯಸಾಧಕ ಚಾರಿತ್ರಿಕ ಅನ್ಯಾಯ ರಾಜಕಾರಣದ ಇತ್ತೀಚಿನ ಇನ್ನೊಂದು ಬಲಿ ಎಂದರೆ ನಮ್ಮ ಶಿಕ್ಷಣ ಮಾಧ್ಯಮ ನೀತಿ. ಮೊನ್ನೆ ಮೊನ್ನೆಯವರೆಗೆ ಒಂದು 'ಪ್ರತಿಷ್ಠಿತ' ವರ್ಗದ ಹೊರತಾಗಿ, ಕನಿಷ್ಠ ಶಾಲಾ ಶಿಕ್ಷಣ ಮಾಧ್ಯಮ ಮಾತೃಭಾಷೆ ಆಗಿರುವುದು ಸಹಜ ಎಂದು ಭಾವಿಸಲಾಗಿತ್ತು. ಈಗ ಜಾಗತೀಕರಣ ನೀತಿಯ ಫಲವಾಗಿ ಶಿಕ್ಷಣ ಮಾಧ್ಯಮ ಮತ್ತು ಭಾಷೆಯ ಪ್ರಶ್ನೆಯನ್ನು ಚಾರಿತ್ರಿಕ ಅನ್ಯಾಯದ ವ್ಯಾಪ್ತಿಗೆ ಎಳೆ ತಂದು ಮಾತೃ ಭಾಷೆಯನ್ನು ಸಾರ್ವತ್ರಿಕ ಜೀವನದಲ್ಲಿ ಹಿನ್ನೆಲೆಗೆ ಸರಿಸಿ ಅಪ್ರಸ್ತುತಗೊಳಿಸುವ ಪ್ರಯತ್ನ ಮಾಡಲಾಗುತ್ತಿದೆ. ಇದರ ಫಲವಾಗಿ ನ್ಯಾಯಾಂಗದ ಆವರಣ ಸೇರಿದ ಶಿಕ್ಷಣ ಮಾಧ್ಯಮದ ಪ್ರಶ್ನೆ ಎರಡು ದಶಕಗಳ ನಂತರವೂ ಇತ್ಯರ್ಥವಾಗದಾಗಿದೆ. ಇಪ್ಪತ್ತು ವರ್ಷಗಳ ಹಿಂದೆಯೇ ಸರ್ವೋಚ್ಚ ನ್ಯಾಯಾಲಯ ಶಿಕ್ಷಣ ಮಾಧ್ಯಮದ ಭಾಷೆಯಾಗಿ ಮಾತೃಭಾಷೆಯ ಪ್ರಾಥಮಿಕತೆಯನ್ನು ಎತ್ತಿ ಹಿಡಿದಿದ್ದರೂ, ಶಿಕ್ಷಣವನ್ನು ಒಂದು ಉದ್ಯಮವನ್ನಾಗಿ ಬೆಳೆಸಹೊರಟ ಅಲ್ಪಸಂಖ್ಯಾತ 'ಪ್ರತಿಷ್ಠಿತ' ವರ್ಗವು ಚಾರಿತ್ರಿಕ ಅನ್ಯಾಯವಾದಿಗಳ ಬೆಂಬಲದೊಂದಿಗೆ ಅದನ್ನು ವಿವಾದದ ಪ್ರಶ್ನೆಯನ್ನಾಗಿಸಿ ನಮ್ಮ ಮಕ್ಕಳ ಶಿಕ್ಷಣದ ಗುಣಮಟ್ಟಕ್ಕೇ ಭಂಗ ತಂದಿದೆ.

ಇದರಲ್ಲಿ ನ್ಯಾಯಾಂಗದ ಪಾಲೂ ಇದೆ ಎಂಬುದೇ ಇಲ್ಲಿನ ವಿಷಾದದ ಸಂಗತಿ. ಶಿಕ್ಷಣ ಮಾಧ್ಯಮದ ಪ್ರಶ್ನೆ ಪ್ರಜೆಗಳ ಮೂಲಭೂತ ಹಕ್ಕುಗಳ ಪ್ರಶ್ನೆಯೂ ಆಗಿದೆ ಎಂದು ಘೋಷಿಸಲು ರಾಜ್ಯದ ಶ್ರೇಷ್ಠ ನ್ಯಾಯಾಲಯ ಸುಮಾರು ಒಂದೂವರೆ ದಶಕವನ್ನೇ ತೆಗೆದುಕೊಂಡಿತು. ಇನ್ನು ಆ ಕುರಿತು ರಾಜ್ಯ ಸರ್ಕಾರ ಸಲ್ಲಿಸಿದ ಮೇಲ್ಮನವಿ ಬಗ್ಗೆ ತನ್ನ ಮಧ್ಯಂತರ ನಿಲುವು ಪ್ರಕಟಿಸಲು ನಮ್ಮ ಸರ್ವೋಚ್ಚ ನ್ಯಾಯಾಲಯಕ್ಕೆ ಹೆಚ್ಚೂ ಕಡಿಮೆ ಅರ್ಧ ದಶಕವೇ ಬೇಕಾಯಿತು! ನಮ್ಮ ಮಕ್ಕಳ ಶಿಕ್ಷಣದ ಗುಣಮಟ್ಟ ಮತ್ತು ಸಮತೋಲನದ ಪ್ರಶ್ನೆ ನಮ್ಮ ರಾಷ್ಟ್ರ ಜೀವನದಲ್ಲಿ ಕೊನೆಯ ಆದ್ಯತೆಯ ಪ್ರಶ್ನೆಯಾಗಿದೆ ಎನ್ನುವುದು ನಮ್ಮ ಇಂದಿನ ರಾಷ್ಟ್ರ ಜೀವನದ ಒಟ್ಟಾರೆ ಗುಣಮಟ್ಟವನ್ನು ಸೂಚಿಸುತ್ತದಷ್ಟೆ. ಇದಕ್ಕೆ ನಮ್ಮ ನ್ಯಾಯಾಂಗವೂ ಹೊರತಾಗಿಲ್ಲ.

ಅಂತೂ ಕೆಲ ದಿನಗಳ ಹಿಂದೆ ಸರ್ವೋಚ್ಚ ನ್ಯಾಯಾಲಯ ಈ ಸಂಬಂಧದ ತೀರ್ಪಿನ ಆಸೆ ಹುಟ್ಟಿಸಿ, ಕೊನೆಗೊಂದು ತನ್ನ ಮಧ್ಯಂತರ ನಿಲುವನ್ನು ಪ್ರಕಟಿಸಿದೆ. ಶಿಕ್ಷಣ ಮಾಧ್ಯಮದ ಪ್ರಶ್ನೆ ನಮ್ಮ ರಾಜ್ಯದ ಶ್ರೇಷ್ಠ ನ್ಯಾಯಾಲಯ ತರ್ಕಿಸಿದಂತೆ ಪೋಷಕರ ಮೂಲಭೂತ ಹಕ್ಕಿನ ಪ್ರಶ್ನೆ ಮಾತ್ರವಾಗಿರುವಷ್ಟು ಸರಳವಾದದ್ದಲ್ಲ ಎಂದು ಅದು ಅಭಿಪ್ರಾಯಪಟ್ಟು ವಿವಾದವನ್ನು ಇನ್ನಷ್ಟು ಆಳವಾದ ವಿಚಾರಣೆಗಾಗಿ ಸಂವಿಧಾನ ಪೀಠಕ್ಕೆ ಒಪ್ಪಿಸಿದೆ. ಹಾಗೆ ನೋಡಿದರೆ ಮಾತೃಭಾಷಾ ವಾದಿಗಳಿಗೆ ಇದೊಂದು ಆಶಾದಾಯಕ ಬೆಳವಣಿಗೆಯೇ ಆಗಿದೆ. ಏಕೆಂದರೆ ಸಂವಿಧಾನ ಪೀಠ ವಿಚಾರ ಮಾಡಬೇಕಾದ ಮುಖ್ಯ ಸಂಗತಿಗಳಲ್ಲಿ ಮಾತೃಭಾಷೆ ಎಂದರೇನು, ಶಿಕ್ಷಣ ನೀತಿಗೂ ಮೂಲಭೂತ ಹಕ್ಕಿಗೂ ಎಂತಹ ಸಂಬಂಧವಿದೆ ಮತ್ತು ಭಾಷಾವಾರು ಪ್ರಾಂತ್ಯಗಳ ರಚನೆಯ ಸಾಂವಿಧಾನಿಕ ಉದ್ದೇಶವಾದರೂ ಏನು ಎಂಬ ಮುಖ್ಯ ಪ್ರಶ್ನೆಗಳೂ ಸೇರಿವೆ. ತಮ್ಮ ವಾದ ಅಜೇಯ ಎಂದು ಬೀಗುತ್ತಿದ್ದ ಇಂಗ್ಲಿಷ್ ಶಾಲೆಗಳ ಮಾಲೀಕರು ಮತ್ತು ಹುಸಿ ಚಾರಿತ್ರಿಕ ನ್ಯಾಯವಾದಿಗಳಿಗೆ ಇದೊಂದು ಆಘಾತಕಾರಿ ತೀರ್ಮಾನವೇ ಆಗಿದೆ. ಆದರೆ ಈ ಸಂದರ್ಭದಲ್ಲಿ ಮೂಲ ಮನವಿದಾರನಾದ ರಾಜ್ಯ ಸರ್ಕಾರ ಸರ್ವೋನ್ನತ ನ್ಯಾಯಾಲಯದ ಈ ಮಧ್ಯಂತರ ತೀರ್ಮಾನದ ಬಗ್ಗೆ ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸದೆ ಬಿಮ್ಮನೆ ಕೂತು ಮಾತೃಭಾಷಾವಾದಿಗಳಿಗೂ ಆಘಾತ ಉಂಟುಮಾಡಿದೆ.

ನಮ್ಮ ರಾಜ್ಯ ಸರ್ಕಾರಕ್ಕೆ ಕನ್ನಡದ ಬಗ್ಗೆ ಅದನ್ನು ನಂಬಿರುವ ಕನ್ನಡ ಜನತೆಯ ಬಗ್ಗೆ ಪ್ರಾಮಾಣಿಕ ಕಳಕಳಿ ಇರುವುದಾದರೆ, ಅದು ಸರ್ವೋನ್ನತ ನ್ಯಾಯಾಲಯ ತನ್ನ ನೀತಿಯನ್ನು ಸಮರ್ಥಿಸಲು ಕಲ್ಪಿಸಿಕೊಟ್ಟಿರುವ ಈ ಮಧ್ಯಂತರ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಲು ಸರ್ವ ಸಿದ್ಧತೆಗಳನ್ನೂ ಮಾಡಿಕೊಳ್ಳಬೇಕಿದೆ. ಮಧ್ಯಂತರ ತೀರ್ಮಾನ ಪ್ರಸ್ತಾಪಿಸಿರುವ ಮೂರು ಪ್ರಶ್ನೆಗಳಿಗೆ ಮಾತೃಭಾಷಾ ಪರವಾದ ಉತ್ತರಗಳನ್ನು ರೂಪಿಸುವಂತಹ ಸಮರ್ಥ ಶಿಕ್ಷಣ ತಜ್ಞರ, ಕಾನೂನು ಪಂಡಿತರ ತಂಡವನ್ನು ರಚಿಸಿ ತನ್ನ ವಕೀಲರನ್ನು ಕರ್ನಾಟಕದಲ್ಲಿ ಕನ್ನಡವನ್ನು ಉಳಿಸುವ ಈ ಅಂತಿಮ ಹೋರಾಟಕ್ಕೆ ಸಜ್ಜುಗೊಳಿಸಬೇಕಿದೆ. ಹಾಗೇ ಈ ಸಂಬಂಧ ಆದಷ್ಟು ಬೇಗ ಸಂವಿಧಾನ ಪೀಠ ರಚನೆಯಾಗಿ, ಅದು ವಿಚಾರಣೆಯನ್ನು ತ್ವರಿತವಾಗಿ ನಡೆಸುವಂತೆ ಕ್ರಮವನ್ನು ಕೈಗೊಳ್ಳಬೇಕಿದೆ. ಮಾತೃಭಾಷಾ ಶಿಕ್ಷಣ ಮಾಧ್ಯಮದ ಪರವಾಗಿರುವ ಲೋಹಿಯಾವಾದಿ ಪ್ರೊ. ರವಿವರ್ಮ ಕುಮಾರ್ ಈ ದಿಸೆಯಲ್ಲಿ ಕ್ರಿಯಾಶೀಲರಾಗಬೇಕಿದೆ. ಹಾಗೇ ತಾವೂ ಗೋಪಾಲಗೌಡರ ಪ್ರಭಾವದಲ್ಲಿ ಬೆಳೆದ ಸಮಾಜವಾದಿಯೇ ಎಂದು ಗುರುತಿಸಿಕೊಳ್ಳುವ ನಮ್ಮ ಶಾಲಾ ಶಿಕ್ಷಣ ಮಂತ್ರಿ ಕಿಮ್ಮನೆ ರತ್ನಾಕರ ಅವರು ಈ ದಿಸೆಯಲ್ಲಿ ಸಕ್ರಿಯ ಆಸಕ್ತಿ ವಹಿಸಬೇಕಾಗಿದೆ.

**–ಸಂಪಾದಕ**


## ಈ ಸಂಚಿಕೆ:

ರಕ್ಷಾಪುಟ: **ರವಿ ಪ್ರಸಾದ್**

ರೇಖಾ ಚಿತ್ರಗಳು: **ಸಿ. ರವೀಂದ್ರನಾಥ್**

ಸಹಕಾರ: **ಸವಿತಾ ನಾಗಭೂಷಣ** ಮತ್ತು **ಟಿ.ಎಲ್. ರೇಖಾಂಬ**

ಪುಟ ವಿನ್ಯಾಸ ಮತ್ತು ಸಂಪಾದನೆ: **ಡಿ.ಎಸ್. ನಾಗಭೂಷಣ**

ಮುದ್ರಣ: **ಇಳಾ ಪ್ರಿಂಟರ್ಸ್, ಬೆಂಗಳೂರು**

# ನಿಮ್ಮ ಮಾತು

## ಸಮಾಜವಾದ ಯುವಜನತೆಗೆ ತಲುಪಬೇಕು

ಪ್ರಿಯ ಸಂಪಾದಕರೆ,

"ಹೊಸ ಮನುಷ್ಯ" ಮಾಸಿಕವು ಎರಡು ವರ್ಷ ಪೂರೈಸಿ ಮೂರನೇ ವರ್ಷಕ್ಕೆ ಕಾಲಿಡುತ್ತಿರುವ ಈ ಶುಭ ಸಂದರ್ಭದಲ್ಲಿ ನಮ್ಮೆಲ್ಲರ ಶುಭಾಶಯಗಳು. ಪ್ರತಿ ಸಂಚಿಕೆಯನ್ನು ರೂಪಿಸಿ, ಓದುಗರಿಗೆ ತಲುಪಿಸುವವರೆಗೂ ನೀವು ಮತ್ತು ಸವಿತಾ ತೆಗೆದುಕೊಳ್ಳುತ್ತಿರುವ ಶ್ರಮಕ್ಕೆ ನಮನಗಳು.

ಪತ್ರಿಕೆ ಬಂದ ತಕ್ಷಣ ನಾನು ಮೊದಲು ಓದುವುದು "ನಮ್ಮ ಸಮಾಜವಾದಿಗಳು" ಅಂಕಣವನ್ನು. ಹಿರಿಯರನ್ನು ಕಿರಿಯರಿಗೆ ಪರಿಚಯಿಸುವ ಈ ಪ್ರಯತ್ನ ಶ್ಲಾಘನೀಯ. ಸಂಪಾದಕರ ಟಿಪ್ಪಣಿ, ಬಿ.ಕೃಷ್ಣಪ್ಪ ನೆನಪಿನ ಮಾಲೆ ಚೆನ್ನಾಗಿ ಬರುತ್ತಿದ್ದು, ಲೇಖನಗಳು ಸಂಗ್ರಹ ಯೋಗ್ಯವಾಗಿವೆ.

ಆದಾಗ್ಯೂ, ಪತ್ರಿಕೆಯನ್ನು ಹೊಸ ಓದುಗರು (ಸಮಾಜವಾದದ ಬಗ್ಗೆ ಅರಿವಿರದವರು), ವಿದ್ಯಾರ್ಥಿಗಳು ಓದುವುದು ಕಡಿಮೆ. ನಮ್ಮ ಮನೆಯ ಹಾಲ್‌ನಲ್ಲಿ ಟೀಪಾಯಿ ಮೇಲೆ ದಿನ ಪತ್ರಿಕೆಗಳು, ವಾರ ಪತ್ರಿಕೆಗಳ ಜೊತೆ 'ಹೊಸ ಮನುಷ್ಯ' ಮಾಸಿಕವನ್ನು ಜೋಡಿಸಿಟ್ಟಿರುತ್ತೇನೆ. ಬರುವ ಅತಿಥಿಗಳು 'ಹೊಸ ಮನುಷ್ಯ' ಓದುವುದಿಲ್ಲ. ವರ್ಣರಂಜಿತ ದಿನಪತ್ರಿಕೆಗಳ/ವಾರ ಪತ್ರಿಕೆಗಳ ನಡುವೆ ಕೂತ 'ಹೊಸ ಮನುಷ್ಯ' ಅವರಿಗೆ ಜಂಕ್ ಫುಡ್‌ಗಳ ನಡುವಿನ ರಾಗಿರೊಟ್ಟಿಯಂತೆ ಕಾಣಿಸಬಹುದೇನೊ ?

ಸಮಾಜವಾದಿ ಚಿಂತನೆಗಳನ್ನು ಈಗಿನ ತಲೆಮಾರಿಗೆ, ಅದರಲ್ಲೂ ವಿದ್ಯಾರ್ಥಿಗಳಿಗೆ ತಲುಪಿಸುವ ಬಗೆ ಹೇಗೆ? ಎಂಬ ಪ್ರಶ್ನೆ ಸದಾ ನನ್ನ ಕಾಡುತ್ತಿರುತ್ತದೆ. ಆಗೆಲ್ಲಾ ನನ್ನ ಕಣ್ಣ ಮುಂದೆ ಸರಳವಾಗಿರುವ ಸಾದಾ ಖಾದಿ ಸೀರೆಗೆ ಚೆಂದದ ಕಸೂತಿ ಮಾಡಿ ಟ್ರೆಂಡಿಯಾಗಿಸುವುದು ನೆನಪಾಗುತ್ತೆ.

ಸಮಾಜವಾದದ ಚಿಂತನೆಗಳನ್ನು ಹೊಸಬರಿಗೆ, ಯುವ ಸಮುದಾಯಕ್ಕೆ ತಲುಪಿಸಲು, ಅಂಕಣವೊಂದನ್ನು ಪ್ರಾರಂಭಿಸಿ. ಲೋಹಿಯಾರವರು, ಅವರ ಗೆಳತಿಗೆ ಬರೆದ ಪತ್ರಗಳನ್ನು, ಲೋಹಿಯಾರವರ ಮೂಲ ಲೇಖನಗಳನ್ನು ಪ್ರಕಟಿಸಬಹುದೇನೊ!

**–ಜಿ. ಮಲ್ಲಿಕಾ ಬಸವರಾಜು,** ತುಮಕೂರು

## ನಾವು ನಿಮಗೆ ಒತ್ತಾಸೆಯಾಗಿ ನಿಂತಿದ್ದೇವೆ

ಎರಡು ವರ್ಷ ಪೂರೈಸುತ್ತಿರುವ ಸಮಾಜವಾದಿ ಮಾಸಿಕ 'ಹೊಸ ಮನುಷ್ಯ'ನ ಆಯುರಾರೋಗ್ಯ ವರ್ಧಿಸಲಿ! ಇದೇ ಸಂದರ್ಭದಲ್ಲಿ ಈ ಮನುಷ್ಯನನ್ನು ರೂಪಿಸುತ್ತಿರುವ ಉಕ್ಕಿನ ಮನುಷ್ಯ ಡಿ. ಎಸ್. ನಾಗಭೂಷಣ ಅವರ ನಿರ್ಮಲ ಹಾಗೂ ಮುಕ್ತ ಮನಸ್ಸು ಆಗಾಗ ಹತಾಶವಾಗುತ್ತಿರುವುದು ಸಹಜವೇ ಆದರೂ ಬೇಸರದ ಸಂಗತಿ.

ವರ್ತಮಾನದ ತವಕ ತಲ್ಲಣಗಳಿಗೆ ಸಮಯೋಚಿತವಾಗಿ ಸ್ಪಂದಿಸುತ್ತ ಸಮಾಜವಾದಿ ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡ ನಮ್ಮ ಸಮಾಜವಾದಿಗಳ ಬದುಕನ್ನು ಮೆಲುಕು ಹಾಕುತ್ತ ಬಂದಿರುವ ಪತ್ರಿಕೆ ಸಾಗಿ ಬಂದ ದಾರಿಯ ಹಿನ್ನೋಟ ಇಂಥ ಪತ್ರಿಕೆಯ ಅನಿವಾರ್ಯತೆಯನ್ನೂ ಸ್ಪಷ್ಟಪಡಿಸುತ್ತಿದೆ. ಸಮಾಜವಾದಿ ಚಿಂತನೆಯತ್ತ ಒಲವುಳ್ಳ ಯುವಕರಿಗೆ ತಮ್ಮ ಅನಿಸಿಕೆ, ಅನುಭವ ಹಾಗೂ ಸಂದೇಹಗಳನ್ನು ಹೊರಹಾಕಲು ಪತ್ರಿಕೆ ಒಂದು ಸೂಕ್ತ ವೇದಿಕೆಯಾಗಿದೆ. ಸಮಾಜವಾದಿ ಚಿಂತಕರು ಎಂದರೆ ಏರು ಹುಬ್ಬಿನ ವಿದ್ವಾಂಸರು ಎಂದು ಭಾವಿಸಬೇಕಿಲ್ಲ ಎನ್ನುವುದನ್ನೂ ಪತ್ರಿಕೆ ಸೂಚಿಸುತ್ತಿದೆ.

ಬಂಡವಾಳಶಾಹಿಗಳ ಆಡುಂಬೊಲವಾಗಿ ಬಿಟ್ಟಿರುವ ಪತ್ರಿಕೋದ್ಯಮ ಕಟುಕ ಪ್ರವೃತ್ತಿಯ ಪೈಪೋಟಿಯ ಇಂದಿನ ದಿನಗಳಲ್ಲಂತೂ ಬಲಿಷ್ಠರಿಗೇ ಉಳಿಗಾಲ ಎನ್ನುವುದನ್ನೇ ಜಪಿಸುತ್ತಿದೆ. ಈ ಕಾಲದಲ್ಲೂ 'ಹೊಸ ಮನುಷ್ಯ'ನಂಥ ಕಿರು ಪತ್ರಿಕೆಗೆ ಪೈಪೋಟಿಯ ಸಮಸ್ಯೆ ಇಲ್ಲವಾದರೂ, ಬದುಕಿ ಉಳಿಯುವುದೇ ಕಷ್ಟ ಸಾಧ್ಯವಾಗಿದೆ. ಕನಿಷ್ಠ ಸರ್ಕಾರಿ ಮಹಾವಿದ್ಯಾಲಯಗಳಿಗೆ 'ಹೊಸ ಮನುಷ್ಯ' ಲಭ್ಯವಾಗುವಂತೆ ಮಾಡಬೇಕು. ಪತ್ರಿಕೆ ರಾಜ್ಯದ ಗ್ರಂಥಾಲಯಕ್ಕೂ ತಲುಪುವಂತಾಗಬೇಕು. ಜಿಲ್ಲಾ ಗ್ರಂಥಾಲಯಗಳ ಮೇಲೆ ಓದುಗರು ಒತ್ತಡ ಹೇರಬೇಕಿದೆ.

'ಹೊಸ ಮನುಷ್ಯ' ಅರಿವಿನ ಹೊಸ ದಿಗಂತದತ್ತ ದೃಷ್ಟಿ ನೆಟ್ಟಿರಲಿ. ಸಮಾಜವಾವಾದಕ್ಕೆ ಭವಿಷ್ಯವಿದೆ ಎನ್ನುವುದನ್ನು ಬಲವಾಗಿ ನಂಬಿರುವ ಮನಸ್ಸುಗಳು ಪತ್ರಿಕೆಗೆ ಒತ್ತಾಸೆಯಾಗಿ ನಿಂತಿವೆ ಎನ್ನುವುದನ್ನು ಮರೆಯದಿರಲಿ.

**ಹಸನ್ ನಯೀಂ ಸುರಕೋಡ,** ರಾಮದುರ್ಗ

## ಸಂತ್ರಸ್ತ ಜನವರ್ಗಗಳ ಒಡನಾಡಿಯಾಗಲಿ

ಬಂಡವಾಳಶಾಹಿ ಹಂದಿಗಳು ನಡೆಸುವ ಪತ್ರಿಕೆಗಳು ಸಮಾಜವಾದ ಸತ್ತಿದೆ ಎಂದು ಡಂಗುರ ಬಾರಿಸುತ್ತಿರುವಾಗ ಅಸಮಾನತೆ ಇರುವಷ್ಟು ಕಾಲ ಸಮಾಜವಾದವೂ ಜೀವಂತವಾಗಿರುತ್ತದೆ ಎಂದು ಸಾರಿ ಹೇಳಲೆಂದೇ ಹೊಸ ಮನುಷ್ಯ ಹೊರಬರುತ್ತಿದೆ ಎಂದು ನನಗೆ ಅನ್ನಿಸುತ್ತಿದೆ. ಹಂದಿಗಳ ಸೋಕಾಲ್ಡ್ ಪ್ರಧಾನ ಧಾರೆಯ ಪತ್ರಿಕೆಗಳಿಗೆ ಹೊಸ ಮನುಷ್ಯ ಒಂದು ಪರ್ಯಾಯ ಎಂಬ ಬೆನ್ನು ತಟ್ಟುವ ಮಾತು ನಾನು ಹೇಳಲಾರೆ. ನಿಮ್ಮ ಪತ್ರಿಕೆಯೂ ಸೇರಿದಂತೆ ನಾನು ಓದುವ ಅಷ್ಟೂ ಸಮಾಜವಾದಿ ಬರವಣಿಗೆ ನನ್ನ ಮಟ್ಟಿಗೆ ಪ್ರಧಾನ ಧಾರೆಯೇ ಸರಿ. ಹಂದಿಗಳ ಮುಖವಾಣಿಗಳಲ್ಲಿ ನಾನು ಓದುವುದು ಸಾಲುಗಳ ನಡುವೆ ಮಾತ್ರ. ಅವು ಹಗಲು ಎಂದು ಕರೆಯುವುದನ್ನು ನಾನು ರಾತ್ರಿ ಅಥವಾ ಕಡೆಯ ಪಕ್ಷ ಮುಸ್ಸಂಜೆ ಎಂದೇ ಭಾವಿಸುತ್ತೇನೆ. ಲೋಕ ಗ್ರಹಿಕೆಗೆ ನಾನು ಓದುವುದು ಹೊಸ ಮನುಷ್ಯದಂತಹ ಪ್ರಕಟಣೆಗಳನ್ನೇ.

ಹೊಸ ಮನುಷ್ಯದಂತಹ ಪತ್ರಿಕೆಗಳು ಸಮಾಜವಾದದ ಜೊತೆ ಪ್ರಜಾಪ್ರಭುತ್ವವನ್ನು ಸಹ ಕಾಪಾಡುತ್ತವೆ. ಅವು ಒಂದನ್ನು ಬಿಟ್ಟು ಇನ್ನೊಂದು ಇರಲಾರವು. ಎಲ್ಲ ರಾಜಕೀಯ ಪಕ್ಷಗಳೂ ಈಗ ಚುನಾವಣೆಗಳ ಮಟ್ಟಿಗೆ ಮಾತ್ರ ಅಸ್ತಿತ್ವದಲ್ಲಿವೆ. ಎಡ ರಾಜಕೀಯವೂ ಕ್ರಮೇಣ ವೋಟು ಕೇಂದ್ರಿತ ರಾಜಕೀಯವಾಗುತ್ತಿದೆ. ಆದರೆ ಇದೇ ವೇಳೆ, ದೇಶಾದ್ಯಂತ ದುಡಿಯುವ ಜನ, ಮಹಿಳೆಯರು, ಆದಿವಾಸಿಗಳು, ಅಭಿವೃದ್ಧಿ ನಿರಾಶ್ರಿತರು, ರೈತರು, ಕುಶಲ ಕರ್ಮಿಗಳು ಮತ್ತಿತರ ಸಂತ್ರಸ್ತ ಜನವರ್ಗಗಳವರು ಬಗೆ ಬಗೆಯ ಹೋರಾಟಗಳಲ್ಲಿ ತೊಡಗಿಕೊಂಡಿದ್ದಾರೆ. ಇವರು ಯಾರೂ ಚುನಾವಣೆಗಳಲ್ಲಿ ಸ್ಪರ್ಧಿಸುವವರಲ್ಲ. ಆದರೆ ಇವರೇ ಇವತ್ತು ದೇಶದಲ್ಲಿ ಪ್ರಜಾಪ್ರಭುತ್ವವನ್ನು ಜೀವಂತವಾಗಿ ಇಟ್ಟವರು. ಹೊಸ ಮನುಷ್ಯ ಇಂತಹವರ ಒಡನಾಡಿಯಾಗಬೇಕು ಎಂದು ನಾನು ಆಶಿಸುತ್ತೇನೆ.

**–ಜಿ.ರಾಜಶೇಖರ್,** ಉಡುಪಿ

## ಸಂಪಾದಕರಿಂದ ಪಾಠ

ಎರಡು ವರ್ಷಗಳ ಹಿಂದೆ 'ನವ ಮಾನವ' ಪತ್ರಿಕೆ ಆರಂಭವಾದ ದಿನಗಳಲ್ಲಿ ಸಂಪಾದಕರನ್ನೂ ಪತ್ರಿಕೆಯನ್ನೂ ಬಹಳ ವಿಸ್ಮಯದಿಂದ ನೋಡುತ್ತಿದ್ದೆ. ಪತ್ರಿಕೆಯೊಂದು ಸಮಾಜವಾದೀ ಪತ್ರಿಕೆ ಮಾತ್ರ ಹೇಗಾಗುತ್ತದೆ ಎಂದೆನಿಸುತ್ತಿತ್ತು. ನಿಧಾನವಾಗಿ ಲೋಹಿಯಾರ ಬಗೆಗಿನ ಲೇಖನಗಳನ್ನೂ ಮತ್ತಿತರ ಲೇಖನಗಳನ್ನೂ ಓದುತ್ತಾ ಬಂದಂತೆ ಸಮಾಜವಾದವೆಂಬುದು ಬದುಕಿನ ಎಲ್ಲ ಮಗ್ಗುಲುಗಳನ್ನೂ ಸಮಷ್ಟಿಯ ನೆಲೆಯಲ್ಲಿ ವಿಶ್ಲೇಷಿಸುವ ವಿಸ್ತಾರವಾದ ವಸ್ತು ವಿಷಯವೆಂದು ತಿಳಿಯಹತ್ತಿತು. ಇದೊಂದು ರೀತಿ ನನಗೆ ಸಂಪಾದಕರು ಪತ್ರಿಕೆಯ ಮೂಲಕ ಮಾಡಿದ ಪಾಠ!

ಸಂಪಾದಕೀಯ, ಸಮಕಾಲೀನ, ದಾಖಲೆ, ತಿಂಗಳ ವಿಶೇಷ, ಇದು ಭಾರತ ಇದು ಭಾರತ ಇತ್ಯಾದಿ ಅಂಕಣಗಳು ಮನಸ್ಸನ್ನು

ಕಲಕಿಬಿಟ್ಟಿವೆ. ನಾನು ಬದುಕುತ್ತಿರುವ ಸಮಾಜದ ಬಗ್ಗೆ ತೀವ್ರವಾಗಿ ಚಿಂತಿಸುವಂತೆ ಮಾಡಿದೆ. ಬುದ್ಧ, ಗಾಂಧಿ, ಅಂಬೇಡ್ಕರ್, ಲೋಹಿಯಾರ ಬಗೆಗಿನ ಲೇಖನಗಳು ನನ್ನ ಅರಿವಿನ ವ್ಯಾಪ್ತಿಯನ್ನು ಹಿಗ್ಗಿಸುವುದರ ಜೊತೆಗೆ ಆಲೋಚನಾ ಕ್ರಮವನ್ನೇ ಬದಲಿಸಿವೆ. ವಿಜ್ಞಾನದ ವಿದ್ಯಾರ್ಥಿಯಾಗಿದ್ದ ನನಗೆ ಇಂಥಾ ವಿಷಯಗಳ ತಿಳುವಳಿಕೆ ಇರಲೇಇಲ್ಲ. ಹೊಸತನ್ನು ಕಂಡ ಬೆರಗಿನೊಂದಿಗೆ ಪತ್ರಿಕೆಯನ್ನು ಓದುತ್ತಾ ಬಂದಿದ್ದೇನೆ, ಅದರೊಂದಿಗೆ ಬೆಳೆಯುತ್ತಿದ್ದೇನೆ. 'ಹೊಸ ಮನುಷ್ಯ'ನಿಗೊಂದು ದೊಡ್ಡ ಥ್ಯಾಂಕ್ಸ್.

ಗಂಭೀರ ವಿಷಯಗಳು ಎಲ್ಲರನ್ನೂ ಆಕರ್ಷಿಸುವುದು ಕಷ್ಟ. ಹಾಗಾಗಿ ಇಂಥಾ ಪತ್ರಿಕೆ ಮಾಡುವುದು ಸಾಹಸದ ವಿಷಯವೇ! ಈ ಸಂದರ್ಭದಲ್ಲಿ ಎರಡು ವಸಂತಗಳನ್ನು ಕಂಡ 'ಹೊಸ ಮನುಷ್ಯ'ನಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು. ಬಣ್ಣಗಳ ಹಂಗಿಲ್ಲದ ಸರಳವಾದ ಗಂಭೀರವಾದ ಪತ್ರಿಕೆ ನಿಧಾನವಾಗಿಯಾದರೂ ಸಾಮಾನ್ಯರೆಲ್ಲರನ್ನು ಮುಟ್ಟಲಿ ಎಂದೇ ಎರಡು ವರ್ಷ ಪೂರೈಸುತ್ತಿರುವ ಪತ್ರಿಕೆಗೆ ನನ್ನ ಹಾರೈಕೆ.

**–ಟಿ.ಎಲ್.ರೇಖಾಂಬ,** ಶಂಕರಘಟ್ಟ

## ಎದುರಾಳಿಗೆ ನೋವಾಗದಿರಲಿ

ಭ್ರಷ್ಟಾಚಾರ ವಿರೋಧಿ ಆಂದೋಲನ, ಸರಕಾರದ ಹಗರಣಗಳು, ಕೇಂದ್ರ ಸರಕಾರದ ಉದಾರೀಕರಣ ನೀತಿ, ಅಫ್ಜಲ್‌ಗೆ ಮರಣ ದಂಡನೆ, ಮಹಿಳೆಯರ ಮೇಲಿನ ಅತ್ಯಾಚಾರಗಳು, ಹೀಗೆ ಹಲವಾರು ವಿಷಯಗಳ, ಸಮಸ್ಯೆಗಳ ಆಳಕ್ಕಿಳಿದು ವಿಶ್ಲೇಷಿಸುವುದನ್ನು ಗಮನಿಸಿದಾಗ, ಸಂಪಾದಕರ ಬರವಣಿಗೆಯು ನಾಡಿನ ಸಾಂಸ್ಕೃತಿಕ ಲೋಕದಲ್ಲಿ ಪತ್ರಿಕೆಯನ್ನು ಆಚಾರ್ಯ ಸ್ಥಾನದಲ್ಲಿರಿಸಿದೆ ಎಂದರೆ ತಪ್ಪಾಗಲಾರದು. ಸಂದರ್ಭಾನುಸಾರವಾಗಿ, ಬುದ್ಧ, ಬಸವ, ಗಾಂಧಿ, ಲೋಹಿಯಾ, ಅಂಬೇಡ್ಕರರ ಚಿಂತನೆಗಳನ್ನು ಇಂದಿನ ಸಂದರ್ಭದಲ್ಲಿ ಗ್ರಹಿಸುವ ವಿಧಾನವನ್ನು ಪತ್ರಿಕೆ ವಿವರಿಸುವ ಕ್ರಮ ಪತ್ರಿಕೆಗೆ ಮೆರಗು ನೀಡಿದೆ.

ಹಣದ ಮರದ ಕೆಳಗೆ ಒಂದುಗೂಡುತ್ತಿರುವ ಜಗತ್ತಿಗೆ ಇಂದು ಮಾನವನ ಬದುಕು ನಗಣ್ಯ. ಬಹುಪಾಲು ಮಾಧ್ಯಮ ಕ್ಷೇತ್ರ ಕೂಡ ಲಾಭ–ನಷ್ಟದ ವ್ಯಾಪಾರಿ ನೀತಿ ಅಳವಡಿಸಿಕೊಂಡು ಸಾಗುತ್ತಿದೆ. ಹಾಗಾಗಿ, ನಡೆ–ನುಡಿಯಲ್ಲಿ ಸಾಮ್ಯತೆಯನ್ನು ಆಶಿಸಿದ ಗಾಂಧಿ ಲೋಹಿಯಾರನ್ನು ಅರಗಿಸಿಕೊಳ್ಳಲು ಅಸಮರ್ಥವಾದ ಸಮಾಜದ ಮುಖ್ಯವಾಹಿನಿ, ಅವರ ಹೆಸರುಗಳನ್ನು ಸಭೆ ಸಮಾರಂಭಗಳಲ್ಲಿ ಅಲಂಕಾರಿಕವಾಗಿ ಬಳಸುತ್ತಿರುವುದನ್ನು ಕಾಣಬಹುದು. ಹಾಗಾಗಿ ಇಂತಹ ಸಂದರ್ಭದಲ್ಲಿ ನಮಗೆ ದಕ್ಕಿದ ಅರಿವು ಕೂಡಾ ಮಿತಿಯುಳ್ಳದ್ದು ಹಾಗೂ ಪ್ರಶ್ನಾರ್ಹವಾದದೂ ಇರಬಹುದು ಎಂಬ ಸಂಶಯದ ಎಳೆಯಲ್ಲಿ ಚರ್ಚೆಗಿಳಿದರೆ ಎದುರಾಳಿಗೆ ನೋವಾಗದೆ, ನೋವು ನಿವಾರಕ ಮದ್ದಾಗಿ ಪರಿಣಮಿಸಬಹುದು. ಇದು ಪತ್ರಿಕೆಯ ವಿಸ್ತರಣೆಗೂ ನೆರವಾಗಬಹುದು.

ಅದರಂತೆ ನಾಡಿನ ಚಿಂತಕರು, ಬರಹಗಾರರು ಪತ್ರಿಕೆ ಬಿಂಬಿಸುವ ನಿಲುವುಗಳಿಗೆ ಪ್ರತಿಕ್ರಿಯಿಸಿ, ಸಂವಾದಿಸುವ ಮೂಲಕ ಸಂಪಾದಕರ ಜನಪರ ಕಾರ್ಯಕ್ಕೆ ಒತ್ತಾಸೆಯಾಗಬೇಕಾಗಿದೆ. ಸಂಪಾದಕರು ತಮ್ಮೆಲ್ಲ ಶಕ್ತಿ, ಸಮಯ ವ್ಯಯಿಸಿ ಪ್ರತಿ ತಿಂಗಳು ತಪ್ಪದೆ ಪತ್ರಿಕೆಯನ್ನು ನಮಗೆಲ್ಲಾ ಪೂರೈಸುತ್ತಿದ್ದು, ಅವರ ಶ್ರಮ ಬೆಲೆಕಟ್ಟಲಾರದ್ದು. ಇದಕ್ಕಾಗಿ ತಮಗೆ ಅಭಿನಂದನೆಗಳು.

**–ಅಜ್ಜಪ್ಪ ಬಿರಡಿ,** ಗೋಕಾಕ

## ಇಂದಲ್ಲ ನಾಳೆ ಫಲ ಕೊಡಲಿದೆ

ಸಮಾಜಮುಖಿ ಚಿಂತನೆಗಳೇ ಮೂಲೆ ಗುಂಪಾಗುತ್ತಿರುವ ಈ ಸಮಯದಲ್ಲಿ ಸಮಾಜವಾದಿ ಆಶಯಗಳ ಬಗ್ಗೆ ಇನ್ನೂ ಭರವಸೆ ಇಟ್ಟುಕೊಂಡಿರುವ ಸೀಮಿತ ಜನಸಮುದಾಯದ ಮಟ್ಟಿಗಾದರೂ "ಹೊಸ ಮನುಷ್ಯ" ಪತ್ರಿಕೆ ಅವಶ್ಯಕವಾಗಿ ಬೇಕಾದ ಪತ್ರಿಕೆಯಾಗಿದೆ. ಕರ್ನಾಟಕದ ಸಮಾಜವಾದಿ ಚಿಂತಕರು, ಅನುಯಾಯಿಗಳು ಮತ್ತು ಹಿತೈಷಿಗಳ ನಡುವಣ ಸಂವಹನಕ್ಕೆ "ಹೊಸ ಮನುಷ್ಯ" ಸೇತುವೆಯಾಗಿದೆ. ಪತ್ರಿಕೆಯನ್ನು ಹೊರತರುವುದೇ ಒಂದು ಸಾಹಸವಾಗಿರುವ ಈ ಸಮಯದಲ್ಲಿ ಸಮಾಜವಾದಿ ಸಮಾಜ ಕಟ್ಟುವ ನಿಟ್ಟಿನಲ್ಲಿ ಪತ್ರಿಕೆಯು ನಡೆಸುತ್ತಿರುವ ಪ್ರಾಮಾಣಿಕ ಪ್ರಯತ್ನಗಳಿಗೆ ಬೆಲೆ ಕಟ್ಟಲಾಗುವುದಿಲ್ಲ.

ತಂತ್ರಜ್ಞಾನದಲ್ಲಿ ಮಹತ್ತರ ಬದಲಾವಣೆಗಳಾಗಿರುವ ಈ ಕಾಲದಲ್ಲಿ "ಹೊಸ ಮನುಷ್ಯ" ಪತ್ರಿಕೆ ಅಂತರ್‌ಜಾಲದಲ್ಲಿ ಲಭ್ಯವಾಗುತ್ತಿದೆಯಾದರೂ, ಅಲ್ಲಿ ಸಕ್ರಿಯವಾಗಿರುವ ಯುವ ಸಮುದಾಯ ಸಮಾಜವಾದಿ ಚಿಂತನೆಗಳ ಬಗ್ಗೆ ವಿಮುಖವಾಗಿದೆ. ಇಂತಹ ವೈರುಧ್ಯದ ನಡುವೆ ಸಮಾಜವಾದಿ ಸಮಾಜದ ಆಶಯದ ಬೀಜಗಳನ್ನು ಬಿತ್ತಿ ಬೆಳೆಯಬೇಕು. ಹೇಳಿ ಕೇಳಿ ಸಮಾಜವಾದಿಗಳು ಆಶಾವಾದಿಗಳು. ಹೀಗಾಗಿ ಇಂದಲ್ಲ ನಾಳೆ ನಮ್ಮ ಕನಸುಗಳು ನನಸಾಗುತ್ತವೆ ಎನ್ನುವ ಆಶಾವಾದದ ಬೆನ್ನು ಹಿಡಿದು "ಹೊಸ ಮನುಷ್ಯ" ಮುನ್ನಡೆಯುತ್ತಿದೆ. ದೇವನೂರು ಮಹಾದೇವ ಹೇಳುವಂತೆ ಎದೆಗೆ ಬಿದ್ದ ಅಕ್ಷರ, ನೆಲಕ್ಕೆ ಬಿದ್ದ ಬೀಜ ಇಂದಲ್ಲ ನಾಳೆ ಫಲ ಕೊಡುತ್ತದೆ.

**–ವಿಶು,** ಬೆಂಗಳೂರು

## ಹನುಮ ನಿಷ್ಠೆಯ ನಿಕಷ

ನೀವು ಕಳಿಸಿದ ಸಂಚಿಕೆಗಳನ್ನೆಲ್ಲಾ ಒಂದೇ ಬೈಠಕ್ಕಿನಲ್ಲಿ ಓದಿ ಮುಗಿಸಿದೆ. ನಿಮ್ಮ ಎರಡು ಅಧ್ಯಯನ ಶಿಬಿರಗಳಿಗೆ ಬಂದೂ ಈ ಪತ್ರಿಕೆಗೆ ಈವರೆಗೆ ಚಂದಾದಾರನಾಗದಿರುವ ಬಗ್ಗೆ ವ್ಯಥೆಯಾಯಿತು. ಲೇಖನಗಳೆಲ್ಲವೂ ನನ್ನ ಮನ ಮಸ್ತಿಷ್ಕಗಳನ್ನು ತುಂಬಿ ಅಲ್ಲಾಡಿಸಿವೆ. ತೆಕ್ಕೆಗೆ ಸಿಗದಂತಹ ಸಂಗತಿಗಳನ್ನೂ ತನ್ನ ಅರಿವಿಗೆ ಒಳ ಮಾಡಿಕೊಳ್ಳುತ್ತಾ ಅವುಗಳನ್ನು ತನ್ನ ಹನುಮ ನಿಷ್ಠೆಯ ನಿಕಷಕ್ಕೆ ತಾಗಿಸುತ್ತಾ ಸಾಗುವ ಪರಮೋತ್ಸಾಹ ಕಾಣಿಸುತ್ತದೆ. ತನ್ನ ಕಾಣ್ಕೆಯನ್ನು ನಿರ್ಭಿಡೆಯಿಂದ ವ್ಯಕ್ತಪಡಿಸುತ್ತಲೇ ಓದುಗರನ್ನು ಚಿಂತನೆಗೆ ಹಚ್ಚುವ, ಕ್ರಮೇಣ ನಶಿಸುತ್ತಿರುವ ಜೀವನ ಮೌಲ್ಯಗಳನ್ನು ಮತ್ತೆ ಬಿತ್ತಿ ಬೆಳೆಯುವ ರೈತನೊಬ್ಬನ ಪ್ರಯತ್ನಗಳು 'ಹೊಸ ಮನುಷ್ಯ'ನಲ್ಲಿ ಕಾಣಿಸುತ್ತದೆ.

ಇನ್ನು ನೀವು ಉತ್ತರಾಖಂಡದ ಬಗ್ಗೆ ಬರೆದದ್ದು ನಿಮಗೆ ಮಾತ್ರ ಸಾಧ್ಯವಿರುವ ಬರಹ. ಸೂರ್ಯನಿಗೆದುರಾಗಿ ಮಸೂರದ ಮೂಲಕ ಕೈ ಮೇಲೆ ಬಿಸಿಲನ್ನು focus ಮಾಡಿಕೊಂಡಂತಹ ಅನುಭವ. ನಿಮ್ಮ ಈ ತೀಕ್ಷ್ಣ ದೃಷ್ಟಿ ನಿಮ್ಮ ಶೀಘ್ರ ಕೋಪದ ಗುಣವನ್ನು ಅರ್ಥ ಮಾಡಿಕೊಳ್ಳುವಲ್ಲಿ ನನಗೆ ನೆರವಾಯಿತು. ನೀವು ಹೇಳಿದ ೨೫ ಪರಿಮಳಗಳ ನಾಶದ ಸಂಬಂಧವಾಗಿಯೇ ನಾನು ಮತ್ತು ನನ್ನ ಮಗಳು, ಈ ದುರಂತದ ಸ್ವಲ್ಪ ಮುನ್ನ ಕೇದಾರನಾಥ ಡೋಂನಲ್ಲಿ ಪ್ರಯೋಗ ಕೈಗೊಂಡು ಬಂದೆವು. ಹೌದು ನೀವು ಹೇಳಿದಂತೆ ಆ ಪ್ರದೇಶಕ್ಕೆ ಹೊರ ನಾಡಿಗರ ಭರದ ಪ್ರವಾಸ ಭಾರವಾಗಿದೆ.

**–ದೇ. ನಾ. ಶ್ರೀನಿವಾಸ ಮೂರ್ತಿ,** ದೊಡ್ಡಬಳ್ಳಾಪುರ

ನೀವು ಉತ್ತರಾಖಂಡದ ದುರಂತದ ಬಗ್ಗೆ ಬರೆದ ಟಿಪ್ಪಣಿಗಳು ವಿಚಾರಪೂರಿತವಾಗಿದ್ದು, ಮನಮುಟ್ಟಿತು. 'ಹೊಸ ಮನುಷ್ಯ' ತುಂಬಾ ಚೆನ್ನಾಗಿ ಬರುತ್ತಿದೆ. ಶುಭಾಶಯಗಳು!

**–ಕೆ. ಪುಟ್ಟಸ್ವಾಮಿ,** ಬೆಂಗಳೂರು

ಪ್ರವಾಸ ಮುಗಿಸಿ ಬಂದ ಕೂಡಲೇ ಹಿಮಾಲಯದ ದುರಂತದ ಬಗ್ಗೆ ತುಡಿದುಕೊಂಡು ನಿಮ್ಮ ಕರುಳು ಬರೆಸಿದ ಲೇಖನ ತುಂಬಾ ಚೆನ್ನಾಗಿತ್ತು. ಯೂರೋಪ್ ಪ್ರವಾಸದಲ್ಲೂ ಜಗಳವಾಡಲು ನಿಮಗೆ ಜನ ಸಿಕ್ಕಿದರಲ್ಲಾ!

**–ಟಿ.ಎಸ್. ರಾಮಸ್ವಾಮಿ,** ಮೈಸೂರು

ಉತ್ತರಾಖಂಡ ದುರಂತ ಕುರಿತ ಸಂಪಾದಕರ ಟಿಪ್ಪಣಿಗಳು ಸಮಯೋಚಿತ, ಅರ್ಥಪೂರ್ಣ ಮತ್ತು ಮನ ಮುಟ್ಟುವಂತಿವೆ. ನಾವು ಈಗಲೂ ಎಚ್ಚೆತ್ತುಕೊಳ್ಳದಿದ್ದರೆ ನಮ್ಮನ್ನು ಯಾರೂ ರಕ್ಷಿಸಲಾರರು.

**–ರೂಪ,** ಹಾಸನ

ನಿಮ್ಮ ಯೂರೋಪ್ ಪ್ರವಾಸದ ಬಗ್ಗೆ ವಿವರವಾದ ಬರಹಗಳನ್ನು ಮುಂದಿನ ಸಂಚಿಕೆಗಳಲ್ಲಿ ನಿರೀಕ್ಷಿಸುತ್ತೇನೆ.

**–ಜಯವಂತ ಕಾಮತ್,** ಬೆಂಗಳೂರು

# ‘ಹೊಸ ಮನುಷ್ಯ’ನ ಒಂದು ವರ್ಷದ ಹೆಜ್ಜೆ ಗುರುತುಗಳು

**–ಕೆ. ಪಿ. ನಟರಾಜ**


‘ನವ ಮಾನವ’ ‘ಹೊಸಮನುಷ್ಯ’ನಾಗಿ ನಾಮಾಂತರಗೊಂಡ ವರ್ಷ ೨೦೧೩. ಆರಂಭದಲ್ಲಿ ಒಣಕಲು ಗದ್ಯದಂತೆ , ಅಕಾವ್ಯವಾಗಿ ಕಂಡು ಮುಜುಗರ ಹುಟ್ಟಿಸಿದ ಈ ಶಬ್ದ ಕ್ರಮೇಣ ಒಗ್ಗಿಕೊಳ್ಳಲು ಹೆಣಗುತ್ತಿದೆ. ‘ಮಾನವ’ ‘ನವಮಾನವ’ನಾದಾಗಲೂ ಇದೇ ಕಥೆ. ಪದದ ಜೊತೆ ಪದಾರ್ಥಲೋಕವೂ ಜೊತೆಗಟ್ಟಿ ಬಾಳುವುದರಿಂದ ವಿದಾಯವೊಂದು ಸುದೀರ್ಘವೆನಿಸುವ ವ್ಯಥೆ. ಕಳೆದೊಂದು ವರ್ಷದ ‘ಪತ್ರಿಕೆ’ಯ ಪ್ರತಿ ಸಂಚಿಕೆಯೂ ತೆರೆದುಕೊಳ್ಳುವ ಹೊಸ ದಿನದಂತೆ ಹೊಸದಾಗಿದೆ. ‘ಪತ್ರಿಕೆ’ ಕಾಲದ ಜೊತೆ ಹೆಜ್ಜೆ ಹಾಕಿದೆ, ಸರಿವ ಕಾಲದ ನೆರೆಗೂದಲನ್ನು ಎಣಿಸುತ್ತ ಕೂರದೆ ಮಗುವಿನ ತಾದಾತ್ಮ್ಯದಲ್ಲಿ ಸಂತನಂತೆ ಅಸಂಗ್ರಹ ವ್ರತಿಯಾಗಿ ಕ್ರಾಂತಿಕಾರಿಯಂತೆ ವಿಮರ್ಶಿಸುತ್ತ ವಿಘಟಿಸುತ್ತ ಕಾಲವಶವಾಗದೆ ಬದುಕುವ ಆಟ ಆಡುತ್ತಿದೆ.

ಬೇಂದ್ರೆಯವರ ‘ಅರ್ಥವಿಲ್ಲ ಸ್ವಾರ್ಥವಿಲ್ಲ, ಬರಿಯ ಭಾವಗೀತ’ದಂತಹ ಆಟ ಇದು. ಇಲ್ಲಿ ವಿಮರ್ಶೆ, ಪ್ರತಿಭಟನೆ, ಮುಕ್ತಶೋಧ ಅಥವಾ ಆ ದಿಕ್ಕಿನಲ್ಲಿ ಪ್ರಯತ್ನ ಎಲ್ಲವೂ ಇದೆ. ಇದು ಸಮಾಜವಾದವೆಂಬ ಬಹು ಹಳೆಯ ಆಟ. ಆದರೆ ಪ್ರತಿ ಹೊಸ ಕ್ಷಣವು ಅಪರಿಚಿತ, ನೂತನ. ಉದಾಹರಣೆಗೆ, ತೀರಾ ಈಚಿನ ಜುಲೈ ೨೦೧೩ರ ಸಂಚಿಕೆ ತೆರೆದು ನೋಡಿದರೂ ಸಾಕು ‘ಪತ್ರಿಕೆ’ಯ ಹೊಸದಾಗಿ ಬದುಕುವ ಪರಿಯೊಂದರ ಅನಾವರಣವಾಗುತ್ತದೆ.

‘ಸಿದ್ದರಾಮಯ್ಯನವರ ಸರ್ಕಾರ ಎತ್ತ ಸಾಗಿದೆ?’ ಎಂಬ ಪ್ರಶ್ನೆಮಾಲೆ, ಈಚೆಗೆ ತೀರಿಕೊಂಡ ಅಸ್ಗರ್ ಅಲಿ ಇಂಜಿನಿಯರ್ ಅವರ ನೆನಪಿನಲ್ಲಿ ತುಫೈಲ್ ಅಹಮದ್ ಬರೆದ ಭಾರತದ ಮುಸ್ಲಿಮರ ಕುರಿತ ಲೇಖನ; ಪರಿಸರ ಸಚಿವರಿಗೆ ಅಣುಶಕ್ತಿ ಆಯೋಗದ ಮಾಜೀ ಅಧ್ಯಕ್ಷರಾದ ಗೋಪಾಲಕೃಷ್ಣನ್ ಅವರು ಬರೆದ ಬಹಿರಂಗ ಪತ್ರ; ಕೇದಾರ ಮಹಾ ಕುಸಿತದ ಸುತ್ತ ಸಂಪಾದಕರು ಹಾಗು ಸವಿತಾ ನಾಗಭೂಷಣ ಅವರು ಬರೆದ ಟಿಪ್ಪಣಿಗಳು ,..ಎಲ್ಲವೂ ಕಾಲದ ಜೊತೆ ಧಾವಂತದಿಂದ ಆದರೆ ಸವಿಮರ್ಶಕವಾಗಿ ಎಲ್ಲವನ್ನೂ ಒಡಲುಗೊಂಡು ನಡೆವ ಪರಿಯಲಿ ಹೀಗೆ ಒಳಗೊಳ್ಳದೆ ಮುಂದೆ ಸಾಗಲಾಗದೆಂಬ ‘ತಾಯ್ತನ’ದ ವಿಧಾನ ಈ ಧಾವಂತದಲ್ಲಿದೆ.

‘ಪತ್ರಿಕೆ’ಯ ಸಂಘಟಿತ ಕಾಣ್ಕೆಯ ಒಟ್ಟಂದಕ್ಕೆ ಸಂಪಾದಕರಾದ ಡಿ.ಎಸ್. ನಾಗಭೂಷಣ ಅವರ ಕೊಡುಗೆ ದೊಡ್ಡದೇ. ಅಂಥ ಕೆಲವನ್ನಿಲ್ಲಿ ನಮೂದಿಸಬಹುದು.

೧. ಬಾಲಗಂಗಾಧರ ಗ್ಯಾಂಗಿನ ವಚನ ಸಂಶೋಧನೆಯನ್ನು ‘ದೊಂಬರಾಟ’ ಎಂದು ಕರೆದು ‘ ವಚನ’ ಎನ್ನುವುದು ಕೇವಲ ಪದ್ಯ ರಚನೆಯಲ್ಲ , ಬದಲಾಗಿ ವಿಸ್ತೃತ ಆಯಾಮಗಳ ಚಳುವಳಿಯೊಂದರ ಸೃಜನಶೀಲ ಅಭಿವ್ಯಕ್ತಿ ಹಾಗು ನಂತರದ ಶತಮಾನಗಳ ಅವಧಿಯಲ್ಲಿ ಹಲವು ಪ್ರತಿಭಟನೆಯ ಆವೃತ್ತಿಗಳಾಗಿ, ಅಭಿವ್ಯಕ್ತಿ ಪ್ರಕಾರಗಳಾಗಿ ಪ್ರತಿಧ್ವನಿತ ಸಾಹಿತ್ಯ ನಿಕ್ಷೇಪವೆಂಬ ಮಾತು .



೨. ಕೆ.ವಿ.ಅಕ್ಷರ ಅವರ ‘ಭಾರತ ಯಾತ್ರೆ’ ನಾಟಕ ಕುರಿತು ಮತೀಯವಾದಿ, ಪಟ್ಟಭದ್ರ ಹಿತಾಸಕ್ತಿಗೆ ತಾತ್ವಿಕ ಅಗತ್ಯಗಳನ್ನು ಪೂರೈಸುವ ಕೈಂಕರ್ಯವೆಂದು ಬರೆದ ವಿಮರ್ಶೆ.

೩. ‘ನಮ್ಮ ಸಮಾಜವಾದಿಗಳು’ ಮಾಲಿಕೆಗೆ ಬರೆದ ರೈತ ನಾಯಕ ನಂಜುಂಡ ಸ್ವಾಮಿಯವರ ಒಡನಾಟದಲ್ಲಿ ಅವರ ವ್ಯಕ್ತಿತ್ವದ ಚಹರೆಯ ಬಿಂದು ಬಿಂದುಗಳನ್ನು ಸೇರಿಸಿ ರಚಿಸಿದ ಅನನ್ಯ ವ್ಯಕ್ತಿ ಚಿತ್ರ.

೪. ಸುರೇಂದ್ರ ಕೌಲಗಿ ಅವರ ಪುಸ್ತಕವೊಂದಕ್ಕೆ ಬರೆದ ಮುನ್ನುಡಿಯಲ್ಲಿ 'ಗಾಂಧೀವಾದ'ದ ಆಧುನಿಕ ಅನ್ವಯ ಮಾರ್ಗಗಳ ಅನ್ವೇಷಣೆಯಂತೆ ಕಾಣುವ ಲೇಖನದ ಉತ್ತರಾರ್ಧ

೫. ರುಚಿಕಾ ಆತ್ಮಹತ್ಯೆಯ ಹಿನ್ನೆಲೆಯಲ್ಲಿ ಭಾರತದ ನ್ಯಾಯಾಂಗದ ನಿಧಾನಗತಿ ಹಾಗು ಆಂತರಿಕ ಭ್ರಷ್ಟಾಚಾರಗಳ ಕುರಿತ ಕ್ರೌರ್ಯದ ಕಥನ ಮತ್ತು

೬. ಸಹ ಅನುವಾದಕರಾಗಿ ಪು.ಲ.ದೇಶಪಾಂಡೆಯವರ ‘ಲೋಹಿಯಾ; ಒಬ್ಬ ರಸಿಕ ರುದ್ರ ತಪಸ್ವಿ’ ಹಾಗೂ ಮಾಧವ ಗಾಡ್ಗೀಳರು ಕಸ್ತೂರಿರಂಗನ್‌ರಿಗೆ ಬರೆದ ಬಹಿರಂಗ ಪತ್ರ ಎಂಬ ಅನುವಾದಗಳು.

ಇವೆಲ್ಲವೂ ಪತ್ರಿಕೆಯ ವ್ಯಕ್ತಿತ್ವವನ್ನು ಕಡೆದಿವೆ.

**ಕಾಡುವ ಬರಹಗಳು :**


೧. **‘ಅಭಿವೃದ್ಧಿ ಮೀಮಾಂಸೆ ಮತ್ತು ನಮ್ಮ ಶಿಕ್ಷಣ ಕ್ರಮ’** ವಿಮರ್ಶಕ ರಾಜೇಂದ್ರ ಚೆನ್ನಿಯವರ ಈ ಬರಹ ಆಧುನಿಕ ಶಿಕ್ಷಣ ಕ್ರಮದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವು ತನ್ನನ್ನು ತಾನು value neutral ಅಂದರೆ ಸಾಮಾಜಿಕ ಮೌಲ್ಯಗಳಿಂದ ಸ್ವತಂತ್ರ ಎಂದು ಭಾವಿಸಿರುವುದನ್ನು ಹಾಗೂ ಈ ಕ್ಷೇತ್ರಗಳಲ್ಲಿ ಶಿಕ್ಷಣ ಪಡೆಯುವವರಿಗೆ ಸಾಹಿತ್ಯ ಮತ್ತು ಸಮಾಜ ವಿಜ್ಞಾನಗಳ ಪರಿಚಯವೇ ಇಲ್ಲಿದೆ. critical enquiryಯ ಕೊರತೆಯಾಗಿ ಬಾಧಿಸುವುದನ್ನು ಚರ್ಚೆಗೆ ಎತ್ತಿಕೊಳ್ಳುತ್ತದೆ.

**೨.** ಭಾರತದ ಪ್ರಜಾಸತ್ತೆ ನಿರ್ಮಿಸಿರುವ ಸ್ವಾತಂತ್ರ್ಯದ ಮುಕ್ತ ವಾತಾವರಣದಿಂದಾಗಿ ಇಸ್ಲಾಂ ಕೂಡಾ ತನ್ನ ಜಡತೆಯನ್ನು, ಸ್ಥಾವರ ಸ್ಥಿತಿಯನ್ನು ಭಂಗಿಸುತ್ತ ವ್ಯಕ್ತಿಸ್ವಾತಂತ್ರ್ಯಕ್ಕೆ ಅನುವು ಮಾಡುತ್ತಿರುವ ಹಾಗೂ “ಇಸ್ಲಾಮಿನ ಚೌಕಟ್ಟಿನೊಳಗೇ ಸ್ವಾತಂತ್ರ್ಯದ ಮಿತಿಗಳನ್ನು ಹಿಗ್ಗಿಸುವ ಪ್ರಯತ್ನಗಳಿಂದ ಭೂಷಿತವಾದ ಒಂದು ಅನನ್ಯತೆಯ ಮುದ್ರೆಯುಳ್ಳ ಇಸ್ಲಾಮಿ ಸ್ತ್ರೀವಾದದ ಒಡಮೂಡುವಿಕೆಗೆ ಭಾರತ ಸಾಕ್ಷಿಯಾಗಿದೆ. ಅಸ್ಗರ್ ಅಲಿ ಇಂಜಿನಿಯರ್ ತಮ್ಮ ಬದುಕಿನುದ್ದಕ್ಕೂ











ತುಡಿದದ್ದು ಇದಕ್ಕಾಗಿಯೇ" ಎಂದು ತನ್ನ ಸಂಶೋಧನಾತ್ಮಕ ಒಳನೋಟಗಳಿಂದ ಪ್ರತಿಪಾದಿಸುವ ತುಫೈಲ್ ಅಹಮದ್ ಅವರ 'ಭಾರತವೇ ಮುಸ್ಲಿಮರಿಗೆ ಅತ್ಯುತ್ತಮ ದೇಶ' ಎಂಬ ಲೇಖನ

೩. **ಗಡಸು ದೇಶವು,ಗಟ್ಟಿಗ ದೇಶವು**
**ಕಲ್ಲಿನದೇ ಈ ದೇಶ!**
**ನಯನಾಜೂಕಿನ, ಕೋಮಲ ದೇಶವು**
**ಹೂವುಗಳದೂ ಈ ದೇಶ!!**


ಎಂಬ ಮಹಾರಾಷ್ಟ್ರದ ಕವಿ ಗಡಕೆಯವರ ನಾಡಗೀತೆ ಲೋಹಿಯಾ ವ್ಯಕ್ತಿತ್ವಕ್ಕೂ ಸರಿಹೊಂದಬಹುದೆಂದು ಹೇಳುವ ಪು.ಲ.ದೇಶಪಾಂಡೆಯವರ **'ಲೋಹಿಯಾ; ಒಬ್ಬ ರಸಿಕ ರುದ್ರ ತಪಸ್ವಿ'** ಒಂದು ಅನನ್ಯ ಅನುವಾದ. ರೂಕ್ಷ ಸೌಂದರ್ಯದ ಲೋಹಿಯಾ ಅವರ ಆಳ್ತನವನ್ನು ಹೇಗೆ ಹಿಡಿಯುತ್ತದೆಂದರೆ ಅನುವಾದದಲ್ಲಿಯೂ ಅದು ಸೂಜಿಗಲ್ಲಿನಂತೆ ಸೆಳೆಯುತ್ತದೆ. ಕನ್ನಡದಲ್ಲಿ ದೊರೆಯಲಿರುವ ಲೋಹಿಯಾ ವ್ಯಕ್ತಿ ಚಿತ್ರಗಳಲ್ಲಿ ಇದೂ ಕೂಡ ಮೊದಲ ಸಾಲಿಗೆ ಸೇರಿಕೊಳ್ಳುತ್ತದೆ.



೪. ಜಿ.ರಾಜಶೇಖರ ಅವರ **'ಅಮೆರಿಕಾದ ಸಾಮ್ರಾಜ್ಯಶಾಹಿಯೂ, ಇಸ್ಲಾಮಿಕ್ ಭಯೋತ್ಪಾದನೆಯೂ** ..'ಬರಹ ಅಮೆರಿಕಾದ ಜಾಗತಿಕ [illegible] ಭಯೋತ್ಪಾದನೆಯ ಭಯಾನಕತೆಯನ್ನು ಜಿದ್ದಿಗೆ ಬಿದ್ದಂತೆ ವಿವರಿಸಿ, ವಿಶ್ಲೇಷಿಸುತ್ತದೆ. ಇಸ್ಲಾಮಿಕ್ ರಾಷ್ಟ್ರಗಳ ಅರಾಜಕತೆ, ಮತೀಯವಾದಗಳ ನಡುವಿನಿಂದ ಭುಗಿಲೆದ್ದಿರುವ ಭಯೋತ್ಪಾದನೆಯನ್ನೇ ದೊಡ್ಡ ನೆಪ ಮಾಡಿಕೊಂಡು ತನ್ನ ಆಕ್ರಮಣಕಾರಿ ಕಾರ್ಯಾಚರಣೆಗಳ ಸಮರ್ಥನೆ ಮಾಡಿಕೊಳ್ಳುವ ಅಮೆರಿಕಾ ಸಾಮ್ರಾಜ್ಯಶಾಹಿಯ ವಿರಾಟ್ ಹಿಂಸೆಯನ್ನು ಈ ಲೇಖನ ಬಿಚ್ಚಿಡುತ್ತಾ ಬೆಚ್ಚಿಸುತ್ತದೆ.

೫. **ಫುಕುಷಿಮಾ ! ಅಂತ್ಯ ಕಾಣದ ಅಣುದುರಂತ:** ರಾಬರ್ಟ್ [illegible]ಸ್ ಬರೆದ ಈ ಲೇಖನ (ಅನುವಾದ:ಎಂ.ರಾಜು) "ಚೆರ್ನೋಬಿಲ್‌ನಲ್ಲಿ ಬಿಡುಗಡೆಯಾದ ವಿಕಿರಣಕ್ಕಿಂತ ೭೫ ಪಟ್ಟು ಹೆಚ್ಚು ಕಾಲ ಜೀವಂತವಿರಬಲ್ಲ ೧೦೮೯೩ ಜೋಡಣೆಗಳು ಮುಂದೆ ಸಂಭವಿಸಬಲ್ಲ ಭೂಕಂಪಗಳನ್ನು ತಡೆಯುವ ಶಕ್ತಿಯಿಲ್ಲದ ತೊಟ್ಟಿಗಳಲ್ಲಿ ಕುಳಿತಿವೆ" ಎಂದು ಎಚ್ಚರಿಕೆಯ ಗಂಟೆ ಬಾರಿಸುತ್ತ ಮೊದಲಾಗುತ್ತದೆ.

ಜಪಾನ್‌ನಂತಹ ಆಧುನಿಕ ತಂತ್ರಜ್ಞಾನದಲ್ಲಿ ಪರಿಣತಿ ಪಡೆದ ರಾಷ್ಟ್ರವೇ ಪರಮಾಣು ತಾಂತ್ರಿಕತೆಯಲ್ಲಿ ನಿರಕ್ಷರ ಕುಕ್ಷಿಯಂತೆ ಕಣ್ಣು ಬಾಯಿ ಬಿಡುತ್ತಿರುವಾಗ ಭಾರತ ಹೊಸ ಅಣುಸ್ಥಾವರಗಳ ನಿರ್ಮಾಣಕ್ಕೆ ಮುಂದಾಗಿರುವ ಈ ಹೊತ್ತು ಈ ಲೇಖನ ಜನಸಾಮಾನ್ಯರಲ್ಲಿ ಆಲೋಚನೆಯ ಬೀಜ ಬಿತ್ತಬಲ್ಲದು.



೬. **'ಮುಖೇಶ್ ಅಂಬಾನಿ ಮತ್ತು ಮಾಧ್ಯಮಗಳು!'** ಇದು ಅರವಿಂದ ಕೇಜ್ರಿವಾಲ್ ಸ್ವಿಸ್ ಬ್ಯಾಂಕಿನಲ್ಲಿ ಕಳ್ಳ ದುಡ್ಡು ಇಟ್ಟು ಸಿಕ್ಕಿಬಿದ್ದ ಮುಖೇಶ್ ಅಂಬಾನಿಗೆ ಬರೆದ ಬಹಿರಂಗ ಪತ್ರ. ಹಿಂದೂ ಪತ್ರಿಕೆಯಲ್ಲಷ್ಟೇ ಕಾಣಿಸಿಕೊಂಡು ಇನ್ನೆಲ್ಲೂ ಬೆಳಕುಕಾಣದ ಈ ಪತ್ರ ಮುಖೇಶ್ ಅಂಬಾನಿಯ ವಾಮನಾವತಾರವನ್ನು ಬಿಚ್ಚಿಡುತ್ತದೆ.

ಬಿಜೆಪಿ, ಕಾಂಗ್ರೆಸ್ ಎರಡನ್ನೂ ತನ್ನ ಬೆರಳ ತುದಿಯಲ್ಲಿ ಕುಣಿಸಬಲ್ಲ ಈತ ಪೆಟ್ರೋಲಿಯಂ ಮಂತ್ರಿ ಜಯಪಾಲರೆಡ್ಡಿಯವರನ್ನು ಬದಲಿಸಬಲ್ಲಷ್ಟು ಬಲಿಷ್ಠ. ಈ ಅಂಬಾನಿಗೆ ಅತ್ಯಂತ ನಮ್ರತೆಯಿಂದ ಆದರೆ ಕಡುನಿಷ್ಠುರತೆಯಿಂದ ಸಮರ್ಥ ಆಧಾರಗಳನ್ನ ಉಲ್ಲೇಖಿಸುತ್ತ ಬರೆಯುವ ಅರವಿಂದ ಕೇಜ್ರಿವಾಲ್ ಪ್ರಜಾಪ್ರಭುತ್ವದ ಗಟ್ಟಿನೆಲದ ಮೇಲೆ ನಿಂತು ಪ್ರಶ್ನಿಸುತ್ತಾರೆ.

೭. **"ಹೇಳಿ, ಇದು ನಿಜವಾಗ್ಲೂ ತೆಂಗಾ?"** ರಾಧಾಕೃಷ್ಣ ಬಿ.ಎಸ್. ಅವರು ತೆಂಗನ್ನು ಕುರಿತು ಬರೆದ ಈ ಲೇಖನ ತೇಗಕ್ಕಿಂತ ಭದ್ರವಾದ ಪೀಠೋಪಕರಣವಾಗಬಲ್ಲ ಗುಣ ಅಗ್ಗದ ತೆಂಗಿಗಿದೆ ಎಂದು ಬಲವಾಗಿ ವಾದ ಮಾಡುತ್ತ ಅಚ್ಚರಿ ಹುಟ್ಟಿಸುತ್ತದೆ.

ದುಬಾರಿ ತೇಗದ ಹಿಂದೆ ಇದ್ದಿರುವ ಮರುಳು 'ಜನ'ಕ್ಕೆ ಇದು ಕಿವಿ ಹಿಂಡಬಲ್ಲ ಲೇಖನ.

## ಅಲ್ಲಲ್ಲಿ ತಲೆ ಎತ್ತುವ ದೋಷಗಳು:

೧. ಹಳೆಯ ಕನ್ನಡ ಶಾಲೆಗಳನ್ನು ಉಳಿಸುವ ಬಗ್ಗೆ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಒತ್ತಾಯಿಸಿರುವ ಜಿ. ಎಸ್. ಶಿವರುದ್ರಪ್ಪ ನವರು ಈ ವಿಷಯದಲ್ಲಿ ಮುಗ್ಧರಿದ್ದಾರೆನಿಸುತ್ತದೆ. ಯಾಕೆಂದರೆ ಇಂಗ್ಲಿಷ್ ಮಾಧ್ಯಮದ ಸರ್ವವ್ಯಾಪಕೀಕರಣದ ಈ ಕಾಲ ಘಟ್ಟದಲ್ಲಿ ಹಳೆಯ ಸರ್ಕಾರೀ ಶಾಲೆಗಳನ್ನು ಉಳಿಸಲಾಗುವುದಿಲ್ಲ. ಉಳಿಸಿದರೂ ಈ ಶಾಲೆಗೆ ಬರುವ ಹುಡುಗರೆಲ್ಲಿದ್ದಾರೆ?

೨. 'ಸಾಹಿತ್ಯಿಕ ಪರಿದೃಶ್ಯ'ವೆಂಬ ತಮ್ಮ ಲೇಖನದಲ್ಲಿ ಡಿ.ಎಸ್.ನಾಗಭೂಷಣ ಅವರು ಲೇಖನದ ಶೇ.೪೦ ರಷ್ಟನ್ನು 'ಬಂಡಾಯ'ದ ಕಟುವಿಮರ್ಶೆಗೆ ಮೀಸಲಿಟ್ಟಿದಾರೆ. ಬದಲಾಗಿ 'ಸಮಕಾಲೀನ' ಬರಹಗಾರಿಕೆಯನ್ನು ನಮ್ಮ ಸಂಸ್ಕೃತಿಯ ಅವಧೂತ ಪರಂಪರೆಯ ಮುಂದುವರಿಕೆಯೆಂದು ಕೊಂಡಾಡಿದ್ದಾರೆ. 'ನವ್ಯ'ದಿಂದ ಅಥವಾ 'ಪ್ರಗತಿಶೀಲ' ಆವೃತ್ತಿಯಿಂದ ಆರಂಭಿಸಿ ಬಂಡಾಯದವರೆಗೂ ಕಟುಟೀಕೆಯ ಮಳೆಗರೆವ ಲೇಖಕರು ಇನ್ನು ಖಚಿತಾಕಾರ ತಾಳದ ಸಮಕಾಲೀನ ಸಾಹಿತ್ಯ ವಿದ್ಯಮಾನದ ಬಗ್ಗೆ ಇಷ್ಟೊಂದು ಮಮಕಾರದಿಂದ ಬರೆಯಲು ಹೇಗೆ ಸಾಧ್ಯ?

೩. **'ಬುದ್ಧನ ನೆನಪಲ್ಲಿ ಕೆಲವು ಸತ್ಯಗಳನ್ನು ಧ್ಯಾನಿಸುತ್ತಾ'** ಎಂಬ ಡಿ.ಎಸ್.ನಾಗಭೂಷಣ ಅವರ ಲೇಖನ 'ವೈದಿಕ ಹಾವಳಿ'ಯಿಂದ ಬೌದ್ಧ ಧರ್ಮ ಭಾರತದಿಂದ ಕಾಲ್ಕಿತ್ತಿತ್ತು ಎಂಬ ವಾದವನ್ನು ತಿರಸ್ಕರಿಸಲು ಯತ್ನಿಸುತ್ತದೆ, ಬೌದ್ಧ ಪುರೋಹಿತಶಾಹಿಯನ್ನು ಇದಕ್ಕಾಗಿ ದೂರುತ್ತದೆಯಷ್ಟೆ. ಅಲ್ಲಿ ಬೌದ್ಧ ತತ್ವದ ತಿರುಳು ಕಾಲಾಂತರಗಳನ್ನು ದಾಟಿ ವಿವಿಧ ಅವಸ್ಥಾಂತರಗಳನ್ನು ತಾಳಿರುವ ಬಗ್ಗೆ ವಿವರಿಸುತ್ತದೆ. ಜೆ.ಪಿ. ಚಳುವಳಿಯನ್ನು ವಿಫಲಗೊಳಿಸಿದ್ದರಿಂದ ಆರಂಭಿಸಿ ಬಾಲಗಂಗಾಧರರ ಇತ್ತೀಚಿನ ವಿದ್ಯಮಾನಗಳವರೆಗೆ ನಾಲ್ಕು ದಶಕಗಳ ಕಾಲ 'ವೈದಿಕ ಅಧಿಕಾರ ಕೇಂದ್ರ'ಗಳ ವಿಧ್ವಂಸಕ ಕಾರ್ಯಾಚರಣೆಯನ್ನು ಗಮನಿಸಿಯೂ ತಪ್ಪೊಪ್ಪಿಗೆಯಂತಿರುವ ಲೇಖನ ಇದರಿಂದ ಏನು ಸಾಧಿಸುತ್ತದೆ?

*

# ನಮ್ಮ ಸಮಾಜವಾದಿಗಳು | ಧೀಮಂತ ಚಿಂತಕ ಎಸ್. ವೆಂಕಟರಾಮ್

–ಡಾ. ಯು. ಆರ್. ಅನಂತಮೂರ್ತಿ

**ಕರ್ನಾಟಕದ ಸಮಾಜವಾದಿ ಪಕ್ಷದ ಗೌಡ–ಪಟೇಲ–ಶಾನುಭೋಗ ಎಂದೇ ಪ್ರಸಿದ್ಧವಾಗಿದ್ದ ತ್ರಿವಳಿಯಲ್ಲಿ ಕೊನೆಯವರು ಎಸ್ ವೆಂಕಟರಾಮ್. ಕಾರಣ, ಪಕ್ಷದ ಲೆಕ್ಕ ಪತ್ರಗಳ ಉಸ್ತುವಾರಿ ಅವರದು. ಸಮಾಜವಾದಿ ಚಳುವಳಿಯ ಬೌದ್ಧಿಕ ನಾಯಕರೂ ಆಗಿದ್ದ ವೆಂಕಟರಾಂ ಇಂದು ಬದುಕಿದ್ದರೆ ಈ ತಿಂಗಳು ತಮ್ಮ ೮೯ನೇ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳಬೇಕಿತ್ತು. ಆದರೆ ಹುಟ್ಟು ಹಬ್ಬಗಳ ಆಚರಣೆಯ ಸಂಸ್ಕೃತಿಗೆ ಸೇರದ ವೆಂಕಟರಾಮ್ ರಾಜ್ಯದಲ್ಲಿ ಕಾರ್ಮಿಕ ಹೋರಾಟಗಳಿಗೆ ಒಂದು ಬೌದ್ಧಿಕ ಘನತೆ, ಸಾಂಸ್ಕೃತಿಕ ಬೆಡಗನ್ನು ಒದಗಿಸಿದ ಓರ್ವ ಅಪೂರ್ವ ಕಾರ್ಮಿಕ ನಾಯಕ. ಗೋಪಾಲಗೌಡರ ನಂತರ ಪಕ್ಷದ ತಾತ್ವಿಕ ಅಡಿಪಾಯವನ್ನು ತಮ್ಮ ಚರ್ಚೆ ಮತ್ತು ಬರಹಗಳ ಮೂಲಕ ಸಂರಕ್ಷಿಸಿಕೊಂಡು ಬರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಇವರು ಕರ್ನಾಟಕದ ಹಲವು ಲೇಖಕ, ಚಿಂತಕ–ಬುದ್ಧಿಜೀವಿಗಳ ಒಡನಾಡಿಯೂ ಆಗಿದ್ದರು. ಯು. ಆರ್ ಅನಂತಮೂರ್ತಿಯವರು ವೆಂಕಟರಾಂ ಅವರ ಬರಹಗಳ ಸಂಗ್ರಹ 'ಪರಿಶ್ರಮ'ಕ್ಕೆ ಬರೆದ ಮುನ್ನುಡಿಯಲ್ಲಿ ತಮ್ಮ ಈ ಆಪ್ತ ಗೆಳೆಯನ ಚಿತ್ರವನ್ನು ಕಟ್ಟಿಕೊಟ್ಟಿರುವುದು ಹೀಗೆ: –ಸಂ.**



**ನ**ಮ್ಮ ವೆಂಕಟರಾಮ್ ರಾಜಕಾರಣಿಗಳಿಗಿಂತ ಹೆಚ್ಚು ಕನ್ನಡ ಲೇಖಕರ ಲೋಕಕ್ಕೆ ಹತ್ತಿರದ ಪ್ರಜ್ಞಾವಂತ. ನನ್ನ ಪಾಲಿಗೆ ನನ್ನನ್ನು ಬೆಳೆಸಿದ ಏಕವಚನದ ಸ್ನೇಹಿತ ಮತ್ತು ಗುರು. ಮರೆಯಲಾರದ ಕೆಲವು ಘಟನೆಗಳನ್ನು ಮೊದಲು ನೆನೆದುಕೊಳ್ಳುವೆ: ೬೦ನೆಯ ಇಸವಿಯ ಕೊನೆ. ಕನ್ನಡದ ಪ್ರೀತಿ ಕ್ರಿಯಾಶೀಲವಾಗಿದ್ದ ಕಾಲ ಅದು. ಲೋಹಿಯಾರ ಚಿಂತನೆಗೆ ಬದ್ಧರಾದ ನಾವು ಮೈಸೂರಿನಲ್ಲಿ ಒಂದು ಚಳವಳಿ ಮಾಡಿದೆವು. ಅದರ ಘೋಷಣೆ 'ಇಂಗ್ಲಿಷ್ ಇಳಿಸಿ; ಕನ್ನಡ ಬೆಳೆಸಿ'. ನನಗೆ ಸಂಜೆ ಪುರಭವನದಲ್ಲಿ ನಡೆದೊಂದು ಘಟನೆ ನಿಚ್ಚಳವಾಗಿ ನೆನಪಿದೆ. ವೇದಿಕೆಯ ಮೇಲೆ ಹಿರಿಯರಾದ ಪು.ತಿ.ನ. ಮತ್ತು ತಿ.ತಾ.ಶರ್ಮರು ಕೂತಿದ್ದರು. ಪುಂಡರ ಗುಂಪೊಂದು ಸಭೆಯನ್ನು ಒಡೆಯಲು ಸಿದ್ಧವಾಗಿ ಬಂದಿತ್ತು. ಪು.ತಿ.ನ ಮಾತನಾಡಲು ಎದ್ದರು. ಅವರ ಧ್ವನಿ ಕ್ಷೀಣ, ಮೃದು. ತಮಗೇ ಮಾತನಾಡಿಕೊಳ್ಳುವಂತೆ ಸಭೆಗೆ ಅವರು ಮಾತನಾಡುವುದು. ಪುಂಡರು ಬಂದು ಅವರೆದುರಿಗೆ ನಿಂತು ಕೂಗಾಡಿ ಕಂಗಾಲಾಗುವಂತೆ ಮಾಡಿದರು. ಆ ಸಭೆಯ ಮೂಲೆಯಲ್ಲಿದ್ದ ನನಗೆ ತಡೆದುಕೊಳ್ಳಲು ಆಗಲಿಲ್ಲ. ಪುಂಡನೊಬ್ಬ ಪು.ತಿ.ನ.ರಿಂದ ಮೈಕನ್ನು ಕಿತ್ತುಕೊಂಡು ಯದ್ವಾ ತದ್ವಾ ತಾನೇ ಮಾತಾಡಲು ಪ್ರಾರಂಭಿಸಿದ್ದ. ನಾನು ಅವನ ಕೈಯಿಂದ ಮೈಕನ್ನು ಕಿತ್ತುಕೊಂಡು ನನಗೆ ಸಾಧ್ಯವಿದ್ದ ರೋಷದಲ್ಲಿ ಮಾತನಾಡಿ ಇಡೀ ಪುಂಡರ ಗುಂಪು ಗಪ್ ಚಿಪ್ ಎಂದು ಕೂರುವಂತೆ ಮಾಡಿದೆ. ಪು.ತಿ.ನ.ರಿಗೆ ನನ್ನ ಮೇಲಿನ ಅಭಿಮಾನ ಬೆಳೆದದ್ದು ಈ ಘಳಿಗೆಯಿಂದ.

ಆದರೆ ಎಲ್ಲ ಕಾಲದಲ್ಲೂ ಸದುದ್ದೇಶದ ಚಳವಳಿಗಳನ್ನೂ ಬಳಸುವ ಪರವಿರೋಧ ಬಣಗಳು ಇರುತ್ತವೆ. ವೆಂಕಟರಾಮ್ ಪ್ರಕಾರ ನಾವು ಸದ್ಯದ ಹಿತಕ್ಕೆ ಬದ್ಧವಾದ ಶಕ್ತಿಗಳನ್ನೂ ಬಳಸಬಲ್ಲವರು ಆಗಿರಬೇಕು. ಕಾರ್ಮಿಕ ಚಳವಳಿಗಳ ನೇತಾರರಾದ ವೆಂಕಟರಾಮ್‌ರಂಥವರು ಈ ವಿಷಯದಲ್ಲಿ ನೈತಿಕವಾಗಿ ಯೋಚಿಸುತ್ತಿರಲಿಲ್ಲ. ಅದೊಂದು ಜಗಳ ನಮ್ಮ ನಡುವೆ ಇತ್ತು. ಕಾರ್ಮಿಕ ಚಳವಳಿ ತನ್ನ ತಾತ್ವಿಕ ನೆಲಗಟ್ಟನ್ನು ಕಳೆದುಕೊಂಡು ಕೇವಲ ಸಂಬಳ ಸಾರಿಗೆಯ ಎಕನಾಮಿಸಂ ಆಗಿದೆ ಎಂಬ ಅರಿವೂ ವೆಂಕಟರಾಮ್‌ಗೆ ಇತ್ತು ಎಂದು ಹೇಳದಿದ್ದರೆ ತಪ್ಪಾಗುತ್ತದೆ.)

ಈ ಪುಂಡರ ಗುಂಪು ಸುಮ್ಮನಿರಲಿಲ್ಲ. ನನ್ನನ್ನು ಮಾನಸಗಂಗೋತ್ರಿಯ ಒಳಗೆ ನಿಲ್ಲಿಸಿ ಹೊಡೆಯುತ್ತೇವೆಂದು ಬೆದರಿಕೆ ಹಾಕಿದರು.

ಇದು ನನ್ನ ಗೆಳೆಯ ಬೆಂಗಳೂರಿನಲ್ಲಿದ್ದ ವೆಂಕಟರಾಮ್‌ಗೆ ಗೊತ್ತಾಯಿತು. ಸೀದಾ ಮೈಸೂರಿನ ಸರಸ್ವತಿಪುರಂನಲ್ಲಿದ್ದ ನಮ್ಮ ಮನೆಗೆ ಬಂದ. ಅವನು ಯಾವಾಗಲೂ ಕೈಯಲ್ಲೊಂದು ಪುಸ್ತಕವನ್ನು ಇಟ್ಟುಕೊಂಡು, ದಪ್ಪ ಕನ್ನಡಕ ತೊಟ್ಟು, ಕೆದರಿದ ಕೂದಲಕೆಳಗೆ ಹಸನ್ಮುಖಿಯಾಗಿ ಏಕಾಗ್ರನಾಗಿ ನಡೆದಾಡುವುದು. ಟ್ಯಾಕ್ಸಿ ಹತ್ತಿದರೆ ಡ್ರೈವರ್ ಪಕ್ಕದಲ್ಲೇ ಕೂರುವುದು. ನನಗಿನ್ನೂ ನೆನಪಿದೆ. ಅದು ಟ್ರಾಟ್ಸ್ಕಿ ಬಗ್ಗೆ ಆ ಕಾಲದಲ್ಲಿ ಪ್ರಕಟವಾಗಿದ್ದ ಹೊಸ ಪುಸ್ತಕ. ನನಗೆ ವೆಂಕಟರಾಮ್ ಒಂದು ಕಿವಿ ಮಾತು ಹೇಳಿದರು. ಅವರ ಸ್ವಧರ್ಮಕ್ಕೆ ಹತ್ತಿರವಾದ ಮಾತದು. 'ಈ ಬಗೆಯ ಪುಂಡರು ಸಾಮಾನ್ಯವಾಗಿ ನಿರುದ್ಯೋಗಿಗಳು. lumpenಜನ. ಇವರ ಸದ್ದಡಗಿಸಲು ನಮಗಿರುವ ಮಾರ್ಗ ಒಂದೇ. ಈ ಅಸಂಘಟಿತರಾದ ಪುಂಡರ ಕೈ ಮೇಲಾಗದಿರಲು ನಾವು ಸಂಘಟಿತರಾದ ಕಾರ್ಮಿಕರ ಜೊತೆ ಕೈ ಜೋಡಿಸಿ ಕೆಲಸ ಮಾಡಬೇಕು. ಮೈಸೂರಲ್ಲಿರುವ ಜಾವಾ ಮೋಟರ್ ಸೈಕಲ್ ಕಾರ್ಮಿಕರ ಸಂಘ ನನ್ನ ಜೊತೆಗಿದೆ. ಅವರ ಒಂದು ಸಭೆಯನ್ನು ಈ ಸಂಜೆ ಕರೆಯುತ್ತೇನೆ. ಅವರಿಗೆ ನೀನು ನಮ್ಮ ದೇಶಕ್ಕೆ ಅಗತ್ಯವಾದ ಭಾಷಾ ನೀತಿಯ ಬಗೆಗೆ ಮಾತನಾಡಬೇಕು. ನಿನ್ನ ಜೊತೆಯವರು ಅವರು ಎಂದು ತಿಳಿದು ಮಾತನಾಡಬೇಕು'.

ಸಂಜೆ ನಾನು ಜಾವಾ ಕಾರ್ಮಿಕರನ್ನು ಉದ್ದೇಶಿಸಿ ನಮ್ಮ ಭಾಷಾ ನೀತಿ ಯಾವುದಿರಬೇಕೆಂಬುದನ್ನು ಕುರಿತು ಮಾತನಾಡಿದೆ–ಅವರನ್ನು ಒಳಪಡಿಸಬಲ್ಲ ರೀತಿಯಲ್ಲಿ. ವೆಂಕಟರಾಮ್ ಮತ್ತು ಗೋಪಾಲಗೌಡರಿಂದ ನಾನು ಕಲಿತದ್ದು ಅದು. ಆ ಸಂಘದ ಕಾರ್ಯದರ್ಶಿಯೋ ಅಧ್ಯಕ್ಷನೋ ಆಗಿದ್ದ ಒಬ್ಬನು ಮೊದಲೇ ವೆಂಕಟರಾಮ್ ಅವರಿಗೆ ಹೇಳಿದಂತೆ ಒಂದು ನಿರ್ಣಯವನ್ನು ಸಭೆಯಲ್ಲಿ ಮಂಡಿಸಿದ. ಅದರ ಪ್ರಕಾರ ಮಾರನೆಯ ದಿನ ಜಾವಾ ಕಾರ್ಮಿಕರು ಸಾಲಾಗಿ ನಮ್ಮ ಜೊತೆ ಮಾನಸ ಗಂಗೋತ್ರಿಯ ವಿದ್ವದ್ ಜನರ ಲೋಕದೊಳಗೆ ಎಲ್ಲರಿಗೂ ಆಶ್ಚರ್ಯವಾಗುವಂತೆ ಸ್ಲೋಗನ್‌ಗಳನ್ನು ಕೂಗಿಕೊಂಡು ಮಾರ್ಚ್ ಮಾಡಬೇಕು. ಕಾರ್ಮಿಕರು ಎಲ್ಲರಿಗೂ ಮನದಟ್ಟಾಗುವಂತೆ ಹೇಳಿದ ಮಾತು ಹೀಗಿತ್ತು: 'ಕನ್ನಡ ಲೇಖಕರು ಮತ್ತು ನಾವು ಬಾಂಧವರು. ನಾವಿಬ್ಬರೂ ಕಾರ್ಮಿಕರೇ. ಲೇಖಕರನ್ನು ನೀವೇನಾದರೂ ಹಿಂಸೆಗೆ ಒಳಮಾಡಿದರೆ ನಿಮ್ಮನ್ನು ನಾವು ಸುಮ್ಮನೆ ಬಿಡುವುದಿಲ್ಲ'. ಇದು ಅದ್ಭುತವಾಗಿ ನಮ್ಮ ಚಳವಳಿಗೆ ಸಹಾಯಕವಾಯಿತು. ಇದಾದ ನಂತರ ನನ್ನನ್ನು ಸಾಹಿತ್ಯದ ವಿದ್ಯಾರ್ಥಿಯಾಗಿ ಬೆಳೆಸಿದ, ನಾನು ಗೌರವಿಸುತ್ತಿದ್ದ ಪ್ರೊ. ಸಿ.ಡಿ. ನರಸಿಂಹಯ್ಯನವರೇ ನನ್ನನ್ನು ಇಂಗ್ಲಿಷ್ ಅಧ್ಯಯನಕ್ಕೆ ವಿರೋಧಿಯೆಂದು ಗಣಿಸಿ ಸುಮಾರು ನಾಲ್ಕು ವರ್ಷಗಳ ಕಾಲ ಮಾನಸ ಗಂಗೋತ್ರಿಯ ಇಲಾಖೆಗೆ ಬರದಂತೆ ನೋಡಿಕೊಂಡರು.

ವೆಂಕಟರಾಮ್ ನನಗೆ ಇಂಥಾ ಸಂದರ್ಭಗಳನ್ನು ಎದುರಿಸಲು ಗುರುವಿನ ಹಾಗಿದ್ದರು. ಟ್ರಾಟ್ಸ್ಕಿ ಸಿದ್ಧಾಂತದಿಂದಲೂ, ಲೋಹಿಯಾ ಸಿದ್ಧಾಂತದಿಂದಲೂ ಪ್ರೇರಿತರಾದ ಅವರು ನಮ್ಮ ನಾಡಿನ ಧೀಮಂತರು. ಲೇಖಕರು ತಮ್ಮ ಪಾಡಿಗೆ ತಾವಿರದೆ ರೈತರ ಜೊತೆಯೂ ಕಾರ್ಮಿಕರ ಜೊತೆಯೂ ಬೆರೆಯಬೇಕೆಂದು ತಿಳಿದವರಾಗಿದ್ದರು. ಹೀಗೆ ಮಾಡುವುದರಲ್ಲಿ ಇಬ್ಬರಿಗೂ ಲಾಭವಿದೆ ಮಾತ್ರವಲ್ಲ; ಧೀಮಂತನಾದವನು ಸಮುದಾಯದ ಧೀಮಂತನಾಗುತ್ತಾನೆ, ಪುಸ್ತಕದ ವಾಸನೆಯಿಂದ ಮುಕ್ತನಾಗುತ್ತಾನೆ ಎಂಬುದು ಅವರ ದೋರಣೆಯಾಗಿತ್ತು.

ನನಗಿನ್ನೂ ಒಂದು ಚರ್ಚೆ ನೆನಪಿದೆ. (ಲೋಹಿಯಾ ಮುಖೇನ ನಾವು ಇದನ್ನು ಚರ್ಚಿಸಿದ್ದು, ಕಾಫಿ ಹೋಟೆಲ್ ಒಂದರಲ್ಲಿ ಕೂತು. ಕೈಯಲ್ಲಿ ಯಾರ ಬಳಿಯಾದರೂ ಸ್ವಂತದ ರೊಕ್ಕವಿದ್ದರೆ ಯಾವುದೋ ಮಹಡಿ ಮೇಲಿನ ಬಾರ್‌ನಲ್ಲಿ ಕೂತು, ಕೋಸಂಬರಿ, ಚಕ್ಕುಲಿ, ಪುಳಿಯೊಗರೆ, ಚಿತ್ರಾನ್ನ ಇತ್ಯಾದಿ ಮನೆ ತಿಂಡಿಯ ಜೊತೆ ಜೊತೆ ನಾವು ಬಿಯರ್ ಕುಡಿದು ಮಾತಾಡುವುದಿತ್ತು. ರಾಗಿ ದೋಸೆಯೆಂದರೆ ಅವನಿಗೆ ತುಂಬಾ ಇಷ್ಟ. ಅವನ ನಿಜ ಸಹಧರ್ಮಿಣಿಯಾದ ಸರೋಜಮ್ಮ ಬಿಸಿಬಿಸಿ ದೋಸೆಯನ್ನು ಬಡಿಸಿ ನಮ್ಮ ಹೊಟ್ಟೆ ತುಂಬಿಸುತ್ತ ಇದ್ದರು. ಬಿಯರ್ ಅಪರೂಪ. ಯಾಕಂದರೆ ಸಿಕ್ಕ ರೊಕ್ಕ ಪಕ್ಷದ ಕಛೇರಿ ಸಾಲ ತೀರಿಸಲು ಸಾಕಾಗುತ್ತಿರಲಿಲ್ಲ. ಆದರೆ ವೆಂಕಟರಾಮ್‌ಗೆ ನನ್ನ ತರಹ ಸಂಬಳ ಬರುವ ಗೆಳೆಯರೂ ಇದ್ದರಲ್ಲವೆ?)

ಅವನು ಟ್ರಾಟ್ಸ್ಕಿಯನ್ನು ಮೆಚ್ಚಿದಂತೆಯೇ ಲೆನಿನ್‌ನನ್ನೂ ಮೆಚ್ಚುತ್ತಿದ್ದ. ಆದ್ದರಿಂದ ಲೆನಿನ್ನನ ವ್ಯಾಖ್ಯಾನವನ್ನೂ ಈ ರಷ್ಯನ್ ಕ್ರಾಂತಿಗೆ ಅವನು ಬೆಸೆಯುತ್ತಿದ್ದ. ಮಾರ್ಕ್ಸ್ ಪ್ರಕಾರ ಬಂಡವಾಳಶಾಹಿ ವ್ಯವಸ್ಥೆ ಅದು ಗರಿಷ್ಠ ಬೆಳೆದಲ್ಲಿ ಮುರಿದುಕೊಳ್ಳುತ್ತದೆಯಾದರೆ, ಟ್ರಾಟ್ಸ್ಕಿ ಪ್ರಕಾರ ಅದು ಕ್ಷೀಣವಾದ ಕೊಂಡಿಯಲ್ಲಿ ಕಳಚಿಕೊಳ್ಳುತ್ತದೆಯಾದರೆ, ಲೆನಿನ್ ಪ್ರಕಾರ ಎಲ್ಲಿ ಕ್ರಾಂತಿಯನ್ನು ಮಾಡಬಲ್ಲ ಕ್ರಾಂತಿಕಾರಕ ಪಕ್ಷದ ನೆಲೆ, ಸಿದ್ಧಾಂತ, ಕಾರ್ಯವಿಧಾನ ಮತ್ತು ವರ್ಚಸ್ಸು ಬಲವಾಗಿರುತ್ತದೋ ಅಲ್ಲಿ ಕ್ರಾಂತಿಯಾಗುತ್ತದೆ. (ಅಂದರೆ ಲೆನಿನ್ ತನ್ನ ಬೆನ್ನನ್ನು ತಾನೇ ತಟ್ಟಿಕೊಂಡಿದ್ದ.) ಇಂಗ್ಲೆಂಡ್‌ನಲ್ಲಾಗಲೀ, ಜರ್ಮನಿಯಲ್ಲಾಗಲೀ ಅದು ಆಗದಿದ್ದರೆ ಕಾರಣ ಆ ದೇಶಗಳಲ್ಲಿ ಕಮ್ಯೂನಿಸ್ಟ್ ಪಕ್ಷ ಸರಿಯಾದ ನಿಟ್ಟಿನಲ್ಲಿ ಬೆಳೆದಿರಲಿಲ್ಲ. ಅಂದರೆ ಎರಡು ಸೂತ್ರಗಳ ಮೇಲೆ ಈ ದೇಶಗಳು ತಮ್ಮ ಪಕ್ಷಗಳನ್ನು ಕಟ್ಟಿರಲಿಲ್ಲ. ಈ ಸೂತ್ರಗಳು ಇವು:

1.The Party should act as the Vanguard of the proletariat

2. The Party should follow the principles of Democratic centralism

ಮೇಲಿನ ಎರಡು ಸೂತ್ರಗಳು ಮಹಾ ಮೋಸದವು ಆಗಬಹುದು ಎಂಬುದು ವೆಂಕಟರಾಮ್ ಜೊತೆಗೆ ನನ್ನ ವಾದವಾಗಿತ್ತು. ಕಾರ್ಮಿಕರೇ ಅಧಿಕಾರಕ್ಕೆ ಬರುವುದಿಲ್ಲ. ಆದರೆ ಅವರ ಮುಂಚೂಣಿಯಲ್ಲಿರುವವರು ಅಧಿಕಾರಕ್ಕೆ ಬರುತ್ತಾರೆ ಎನ್ನುವುದಾದರೆ ರಷ್ಯಾದಲ್ಲಿ ಮುಂಚೂಣಿಯಲ್ಲಿ ಇರಲು ಅಗತ್ಯವಾದ ಎಲ್ಲ ಕೃತ್ರಿಮಗಳನ್ನು ತಿಳಿದಿದ್ದ ಸ್ಟಾಲಿನ್ ತಾನೇ ಮುಂಚೂಣಿ ಎಂದುಕೊಂಡ; ತತ್ಪರಿಣಾಮವಾಗಿ ತನ್ನ ಅಧಿಕಾರವನ್ನು ಪ್ರಶ್ನಿಸುವ ಎಲ್ಲ ಜೊತೆಗಾರರನ್ನೂ ಕೊಂದ. ಚೀನಾದಲ್ಲಿ ಆದದ್ದೂ ಇದೇ. ಮುಂಚೂಣಿಯವರು ಈಗ ಅಮೆರಿಕಕ್ಕೆ ಸದೃಶ್ಯವಾದ ಬಂಡವಾಳಶಾಹಿ ವ್ಯವಸ್ಥೆಯನ್ನೇ ಕಟ್ಟುತ್ತಿದ್ದಾರೆ. ಡೆಮೊಕ್ರಟಿಕ್ ಸೆಂಟ್ರಲಿಸಂ ಅಂತೂ ಅದನ್ನು ನಂಬಿದವರು ಬಾಯಿಬಿಟ್ಟು ಮಾತಾಡುವಂತೆ ಮಾಡಿ, ಆಮೇಲೆ ಅವರನ್ನು ಕೊಲ್ಲುವ ಅಥವಾ ಲೇಬರ್ ಕ್ಯಾಂಪುಗಳಲ್ಲಿ ಗುಲಾಮರಂತೆ ದುಡಿಸುವ ಉಪಾಯವಾಗಿತ್ತು. ಅರಳಿದ ಹೂವುಗಳನ್ನೆಲ್ಲ ಕೊಯ್ಯಲೆಂದೇ ಮಾವೋ Let hundred flowers bloom ಎಂದದ್ದು.

ಲೋಹಿಯಾ ಅವರು ಇದಕ್ಕೆ ವಿರುದ್ಧವಾದ ಪ್ರಜಾತಾಂತ್ರಿಕ ದಿಕ್ಕಿನಲ್ಲಿ ರಾಜಕೀಯ ವ್ಯವಸ್ಥೆಯನ್ನು ಕಟ್ಟಲು ಹೋರಾಡಿದರು. ಈಗ ವೆಂಕಟರಾಮ್ ಬದುಕಿದ್ದರೆ ನಾನು ಹೇಳುತ್ತಿದ್ದೆ: 'ಲೋಹಿಯಾ ಮುಂಚೂಣಿಗೆ ತಂದವರು ವೆಂಕಟರಾಮ್ ತರಹದವರಲ್ಲ. ಭ್ರಷ್ಟರಾದ ಲಾಲೂ ಪ್ರಸಾದ್ ಯಾದವ್ ಮತ್ತು ಮುಲಾಯಂ ಸಿಂಗ್ ಯಾದವ್ ತರಹದವರು' ಎಂದು. ಆದರೆ ಇವರು ಪ್ರಾಯಶಃ ಸ್ಟಾಲಿನ್ ಬಗೆಯ ರಾಕ್ಷಸರು ಖಂಡಿತ ಅಲ್ಲ. ಅವರನ್ನ ಟೀಕಿಸುತ್ತಲೇ, ನಮ್ಮ ದುರ್ವ್ಯವಸ್ಥೆಯ ಅನಿವಾರ್ಯ ನಾಯಕರು ಇವರು ಎಂದು ನಾನು ತಿಳಿಯುತ್ತೇನೆ. ಇಲ್ಲೂ ಕೂಡ ಬಿಜೆಪಿಯ ನಮ್ಮ ಕರ್ನಾಟಕದ ಬಳ್ಳಾರಿಯ ರೆಡ್ಡಿ ನಾಯಕರಿಗಿಂತ ನಮ್ಮ ಲಾಲೂ ಪ್ರಸಾದ್ ಯಾದವ್ ದೊಡ್ಡವನು. ಕೊನೆಯ ಪಕ್ಷ ಅಲ್ಲಿನ ಬಡವರಿಗೆ ಸ್ವಮರ್ಯಾದೆಯನ್ನು ತಂದವನು ಬಾಯಿಬಡುಕನಾದರೂ ಕಾರ್ಯಶೀಲನಾದ ಈ ಲಾಲೂ ಪ್ರಸಾದ್ ಯಾದವ್ ಎಂದು ತಿಳಿಯುತ್ತೇನೆ. ಇವೆಲ್ಲಾ ಗತಿಸಿದ ವೆಂಕಟರಾಮ್ ಜೊತೆಗೆ ಮಾತ್ರ ನಾನು ಮಾಡಬಲ್ಲ ಸಂವಾದಗಳು. ನಾನು ಕೇಳಬಹುದಿತ್ತು 'ವೆಂಕಟರಾಮ್, ಹೀಗೆ ಮಾತನಾಡುವುದು ಸೋಲಿನ ಸಮಾಧಾನವಲ್ಲವೇ? ನಾವು ತಪ್ಪಿಲ್ಲವೇ?'.

ವೆಂಕಟರಾಮ್ ಕರ್ನಾಟಕದ ಸಮಾಜವಾದಿ ಪಕ್ಷದ ಆಧಾರಸ್ತಂಭಗಳಲ್ಲಿ ಒಬ್ಬ. ಬೆಂಗಳೂರಿನ ಅಫೀಸಿನ ಟೆಲಿಫೋನ್ ಖರ್ಚನ್ನು ಕೊಡಲು, ಬಾಡಿಗೆ ಕಟ್ಟಲು ಅವನು ಎಲ್ಲೆಲ್ಲೋ ಓಡಾಡಿ ಹಣವನ್ನು ತಂದು ನಿರ್ವಹಿಸುತ್ತಿದ್ದ. ಆದರೆ ನಮ್ಮ ಸಮಾಜವಾದಿಗಳು ಅನಾರ್ಕಿಸ್ಟರು. ಆಮೇಲಿನ ದಿನಗಳಲ್ಲಿ ತುಂಬಾ ಮುಖ್ಯವಾದ ಚಳವಳಿಯನ್ನು ಸಂಘಟಿಸಿದ ರೈತ ಜನಾಂಗಕ್ಕೆ ಒಂದು ದೊಡ್ಡ ದನಿಯಾದ ನಂಜುಂಡಸ್ವಾಮಿಯಂಥವರೇ ವೆಂಕಟರಾಮ್‌ನನ್ನ ಒಬ್ಬ ಶಾನುಭೋಗ ಎಂದು ನಿಂದಿಸಿದ್ದನ್ನು ಕೇಳಿ ನಾನು ನೊಂದಿದ್ದೇನೆ. (ಇದರಲ್ಲಿ ಜಾತಿ/ವರ್ಗದ ವಾಸನೆಯೂ ಇತ್ತು.) ಇಲ್ಲೇ ಇನ್ನೊಂದು ಮಾತು ಹೇಳಿಬಿಡಬೇಕು. ಲಂಕೇಶರು ವೆಂಕಟರಾಮ್‌ರ ವಿದ್ವತ್ತನ್ನೂ ಮಾರ್ಮಿಕವಾದ ದೃಷ್ಟಿಕೋನವನ್ನೂ ತುಂಬ ಮೆಚ್ಚಿದವರಾಗಿದ್ದರು. ಅಲ್ಲದೆ ಆ ದಿನಗಳಲ್ಲಿ ಪಕ್ಷವನ್ನು ಕಟ್ಟುತ್ತಿದ್ದ ಶಾಂತವೇರಿ ಗೋಪಾಲಗೌಡರಾಗಲೀ ಜೆ.ಎಚ್.ಪಟೇಲರಾಗಲೀ ವೆಂಕಟರಾಮ್‌ನನ್ನು ಎಂದೂ ಕೈ ಬಿಟ್ಟವರಲ್ಲ.

ವೆಂಕಟರಾಮ್ ಈ ನಿಂದನೆಯನ್ನೂ ವೈಯಕ್ತಿಕವಾಗಿ ಬೆಳೆಸಿದವರಲ್ಲ. ಅವರು ಅರ್ಧ ತಮಾಷೆಯಲ್ಲಿ ಹೇಳಿದ ಒಂದು ಘನವಾದ ಮಾತು ನೆನಪಾಗುತ್ತದೆ. 'ನಮ್ಮ ದುರದೃಷ್ಟವೆಂದರೆ ಇಂಡಿಯಾದಲ್ಲಿ ಒಂದು ದೊಡ್ಡ ಅನಾರ್ಕಿಸ್ಟ್ ಚಳವಳಿಯಾಗಬಹುದಿತ್ತು. ಆದರೆ ನಮ್ಮ ಅನಾರ್ಕಿಸ್ಟರು ತಮ್ಮನ್ನು ಸೋಷಲಿಸ್ಟ್ ಎಂದು ಕರೆದುಕೊಂಡರು. ಹಾಗೆಯೇ ನಮ್ಮಲ್ಲಿ ಒಂದು ಸೋಷಿಯಲ್ ಡೆಮೋಕ್ರಾಟ್ ಪಕ್ಷ ಬೆಳೆಯಬಹುದಿತ್ತು. ಆದರೆ ಅವರು ತಮ್ಮನ್ನು ಕಮ್ಯುನಿಸ್ಟರೆಂದು ಭ್ರಮಿಸಿಕೊಂಡರು.'

ಈಗಿನ ರಾಜಕೀಯದಲ್ಲಿ ಇನ್ನೊಬ್ಬ ವೆಂಕಟರಾಮ್ ಅವರನ್ನು ನಾನು ಕಾಣುತ್ತಿಲ್ಲ. ಈಗ ರಾಜಕೀಯ ಮಾತನಾಡುವ ಈ ಮನುಷ್ಯ ಇನ್ನೊಂದು ಕ್ಷಣದಲ್ಲಿ ದಾಸ್ತೋವ್ಸ್ಕಿ ಮತ್ತು ಭಗವದ್ಗೀತೆಗಳ ನಡುವಿನ ಸಂಬಂಧದ ಬಗ್ಗೆಯೂ ಮಾತನಾಡಬಲ್ಲವನಾಗಿದ್ದ. ವೆಂಕಟರಾಮ್ ಜಾರ್ಜ್ ಫರ್ನಾಂಡಿಸರಿಗೂ ಹತ್ತಿರದವನಾಗಿದ್ದ. ಈಗ ಜಾರ್ಜ್‌ರಲ್ಲೂ ಆಗಿರುವ ಬದಲಾವಣೆಗೆ ವೆಂಕಟರಾಮ್ ಇಷ್ಟಪಡುತ್ತಿದ್ದ ಲೋಹಿಯಾರ ರಾಜಕಾರಣವೂ–ತತ್ವವಲ್ಲ ರಾಜಕಾರಣವೂ–ಹೇಗೆ, ಯಾಕೆ, ಎಷ್ಟು ಕಾರಣವಾಗಿರಬಹುದೆಂದು ವೆಂಕಟರಾಮ್‌ನನ್ನು ನೆನೆಯುತ್ತಾ ನಾನು ಧ್ಯಾನಿಸುತ್ತಿದ್ದೇನೆ.

ವೆಂಕಟರಾಮ್ ಕನ್ನಡದ ಧೀಮಂತ ಚಿಂತಕರಲ್ಲಿ ಒಬ್ಬ ಎಂಬುದನ್ನು ಅವರು ಎಲ್ಲೋ ಬಿಡುವಿನಲ್ಲಿ ಬರೆದ ಈ ಸಂಗ್ರಹದ ಲೇಖನಗಳು ನಮಗೆ ಮನದಟ್ಟು ಮಾಡುತ್ತವೆ. ಈ ಪುಸ್ತಕ ಬರುವುದು ಸಾಧ್ಯವಾದದ್ದು ಶ್ರೀಮತಿ ಸರೋಜಮ್ಮ ವೆಂಕಟರಾಮ್ ನೆನಪಿನಲ್ಲಿ ಅವರ ಮಗ ಮತ್ತು ಸೊಸೆ ತೋರಿಸಿದ ಆಸಕ್ತಿಯಲ್ಲಿ. ಇದನ್ನು ಪ್ರಕಟಿಸುತ್ತ ಇರುವ ಗೆಳೆಯ ರವಿಕುಮಾರರ ಪರಿಶುದ್ಧವಾದ ಪುಸ್ತಕ ಪ್ರೀತಿಯಲ್ಲಿ.

*

# ಪ್ರೊ. ಬಿ.ಕೃಷ್ಣಪ್ಪ ನೆನಪಿನ ಮಾಲೆ – ೬

–ಇಂದಿರಾ ಬಿ.ಕೃಷ್ಣಪ್ಪ

## ಸಂಸಾರವೆಂಬ ಸಾಗರದಲ್ಲಿ ಈಜುತ್ತಾ...

ಆಗ ಸಂಜೆಯಾಗಿತ್ತು. ಮನೆಯೊಳಗೆ ಹೆಜ್ಜೆಯಿಟ್ಟಾಗ, ಎಷ್ಟೋ ವರುಷಗಳ ನಂತರ ಮರಳಿ ಮನೆಗೆ ಬಂದಂಥ ಸುಖಾನುಭವ. ಆಸ್ಪತ್ರೆಗಳು ಜನರಿಗೆ ಮನೆಯಂಥ ಹಿತಾನುಭವದ ಸ್ಥಳಗಳಾಗಿಲ್ಲದ್ದರಿಂದಲೇ, ಆಸ್ಪತ್ರೆ ಸೇರಿದವರಿಗೆಲ್ಲಾ, ಯಾವಾಗ ಮನೆಗೆ ಹೋಗುತ್ತೇವೆ ಎಂಬ ಕಾತುರ, ಅಯ್ಯೋ, ಈ ಆಸ್ಪತ್ರೆ ಸಹವಾಸ ಸಾಕಪ್ಪ ಎಂಬ ಪರಿತಾಪ. ನಿರ್ಮಲಾ ಆಸ್ಪತ್ರೆಯಂಥ ಶುಭ್ರ ಹಾಗೂ ಉನ್ನತ ಆಸ್ಪತ್ರೆಗಳ ಸಹವಾಸವೇ ಇಂತಹದ್ದಾದರೆ, ಸಾರ್ವಜನಿಕ ಆಸ್ಪತ್ರೆ ಹಾಗೂ ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಸೇರಿದವರ ಮಗ್ಗುಲು ಮುರಿಯುತ್ತವೆ. ಒಂದೆಡೆ ಕಾಯಿಲೆಯ ತಾಪ, ಮತ್ತೊಂದೆಡೆ ಶುಲ್ಕದ ಹೊರೆ, ಓಡಾಟದ ಶ್ರಮದಿಂದ ಜನ ಆಸ್ಪತ್ರೆ ಎಂದರೆ ಭಯಬೀಳುವಂತಾಗಿದೆ. ಇದರಿಂದಲೇ ಬಡವರಿಗೆ, ಮಧ್ಯಮ ವರ್ಗದವರಿಗೆ ಸಾಮಾನ್ಯ ಆರೋಗ್ಯವೆನ್ನುವುದು ಸಹ ನಿಲುಕದ ನಕ್ಷತ್ರ. ಇನ್ನು ಬದುಕಿಗಂಟಿದ ಕಾಯಿಲೆಯಾದರೆ, ಹೊಲಮನೆ–ಗದ್ದೆ ಒತ್ತೆಯಿಟ್ಟು ಪಡೆಯುವ ದುಬಾರಿ ಆರೋಗ್ಯವಾಗಿದೆ.

ನಾನು ವರಾಂಡದಲ್ಲಿದ್ದ ಒಂದು ಕುರ್ಚಿಯಲ್ಲಿ ಕುಳಿತುಕೊಂಡೆ. ಬಹಳ ಹಿತವೆನಿಸಿತು. ಮಗು ಅಳಲಾರಂಭಿಸಿದ್ದರಿಂದ, ನಮ್ಮತ್ತೆ ಮಗುವನ್ನು ನನ್ನ ಬಳಿಗೆ ತಂದುಕೊಟ್ಟರು. ಮಗು ಹಾಲು ಕುಡಿದು ಮಡಿಲಲ್ಲೇ ಮಲಗಿತು. ಆಗಲೇ ಅರ್ಧಗಂಟೆ ಕಳೆಯಿತು. ಇನ್ನೂ ಯಾಕೆ ಒಳಗೆ ಕರೀತಾ ಇಲ್ಲ ಎಂದು ನೋಡಿದರೆ, ಕೃಷ್ಣಪ್ಪ, ಹೊಸ ತೊಟ್ಟಿಲನ್ನು ಜೋಡಿಸುತ್ತಿದ್ದರು. ಮಗುವನ್ನು ಅತ್ತೆಯವರ ಕೈಲಿ ಕೊಟ್ಟು, ನಾನು ಸ್ನಾನ ಮಾಡಿ ಬಂದರೂ, ತೊಟ್ಟಿಲು ಜೋಡಿಸುವ ಕೆಲಸ ಮುಗಿಯಲೇ ಇಲ್ಲ. ಪುನಃ ಕೂತೆ. ಮಗು ಕೈಯಲ್ಲೇ ಮಲಗಿತು ಮತ್ತೂ ಒಂದು ಗಂಟೆ ಆಯ್ತು. ಗಡಿಯಾರದ ಮುಳ್ಳು ಮುಂದಕ್ಕೋಡುತ್ತಲೇ ಇತ್ತು. ನನಗೋ ಮಗು ಎತ್ತಿಕೊಂಡು ಕೈನೋವು ಶುರುವಾಗಿತ್ತು. ಹೊಟ್ಟೆ ಹಸಿವು, ಛೇರಿನಲ್ಲಿ ಕುಳಿತು ಬೆನ್ನು ನೋವು, ಮಗುವನ್ನು ಕೆಳಗೆ ಮಲಗಿಸಿ, ಕಾಲುಚಾಚಿ ದೊಪ್ಪೆಂದು ಮಲಗಿ ಬಿಡಬೇಕೆನ್ನುವಷ್ಟು ಸುಸ್ತು. ಎಷ್ಟಾದರೂ ಅವರು ತೊಟ್ಟಿಲು ಜೋಡಿಸಿದ್ದು ಮುಗಿಯಲಿಲ್ಲ. ಅದು ಸ್ಟಾಂಡ್ ತೊಟ್ಟಿಲು. ಸ್ಟಾಂಡು ಅಡ್ಡಪಟ್ಟಿ ತೊಟ್ಟಿಲು ಸಿಕ್ಕಿಸುವ ಕೊಂಡಿ, ಮೇಲೆ ಗಿಲಕಿ ಕಟ್ಟುವ ರಾಡು – ಹುಕ್ಕು, ಸೊಳ್ಳೆಪರದೆ ಹಾಕುವ ಮೇಲ್ ಮುಚ್ಚಿಕೆ. ಇವಿಷ್ಟನ್ನೂ ಆ ಗಳಿಗೆಯಲ್ಲೇ ಜೋಡಿಸಿ, ಮಗುವನ್ನು ಅದರಲ್ಲಿ ಅಂದೇ ಮಲಗಿಸಿ ಬಿಡಬೇಕೆಂದು ಪಣತೊಟ್ಟಂತೆ ಕಾಣುತ್ತಿದ್ದರು. ಸುಮಾರು ಎರಡು ಗಂಟೆಯಾಯಿತು ಆ ತೊಟ್ಟಿಲು ಜೋಡಿಸಲು. ಮತ್ತೆ ಮಲಗುವ ಕೊಠಡಿ ಗುಡಿಸಿ, ಹಾಸಿಗೆ ಹಾಸಿದ್ದೇ ತಡ, ನಾನು ಮಗುವನ್ನು ಪಕ್ಕದಲ್ಲಿ ಮಲಗಿಸಿ, ಕಾಲು ಚಾಚಿ ಮಲಗಿಬಿಟ್ಟೆ. ನಾನು ಕಣ್ಣು ಮುಚ್ಚಿದ್ದರೂ – "ಇವರಿಗೇಕೆ, ಬಾಣಂತಿಯ ನೋವು ಹಸಿವುಗಳು ಅರ್ಥ ಆಗ್ತಾ ಇಲ್ಲ. ಒಂದು ಲೋಟ, ನೀರು ಹಾಲು ಕೊಡದೆ ಹಾಗೇನೇ ಎರಡೂವರೆ ಗಂಟೆ ನನ್ನನ್ನು ಕುರ್ಚಿಯಲ್ಲಿ ಕೂರಿಸಿಬಿಟ್ಟರಲ್ಲಾ" ಎಂದು ನನಗೆ ಅನ್ನಿಸಿತ್ತು. ಸುಮಾರು ಒಂಭತ್ತು ಗಂಟೆಗೆ ಊಟಕ್ಕೆ ಕರೆದರು ನೋಡಿ, ಗಬಗಬ ನುಂಗುವಷ್ಟು ಹಸಿವು. ಸಾವರಿಸಿಕೊಂಡು ಊಟ ಮಾಡಿದೆ. ಇವರಿಗೆ ಬಾಣಂತಿ ಕೋಣೆ, ಮಗುವಿಗೆ ತೊಟ್ಟಿಲು ಸಜ್ಜುಗೊಳಿಸುವುದರಲ್ಲಿ ನನ್ನ ಬಳಲಿಕೆ–ಹಸಿವುಗಳು ಕಾಣಿಸಲೇ ಇಲ್ಲ.

ಕೃಷ್ಣಪ್ಪನಿಗೆ, ಜೋಡಿಸಲು ಶ್ರಮಕೊಟ್ಟ ಆ ತೊಟ್ಟಿಲು, ಬಹು ಸುಂದರ ತೊಟ್ಟಿಲು, ನನಗೂ ಇಷ್ಟವಾದ ತೊಟ್ಟಿಲದು, ಅದು ಈಗಲೂ ಇದೆ. ಕನಿಷ್ಠ ೨೫ ರಿಂದ ೩೦ ಜಾತ್ಯಾತೀತ ಮಕ್ಕಳು ಆ



ಮಗುವಿನ ತೊಟ್ಟಿಲಿಗೆ ಗಿಲಿಕೆ ಕಟ್ಟುವ ಸಂಭ್ರಮದಲ್ಲಿ ಕೃಷ್ಣಪ್ಪ

ತೊಟ್ಟಿಲಲ್ಲಿ ಮಲಗಿ ಸುಖನಿದ್ರೆ ಕಂಡಿವೆ. ಲಾಲಿ ಹಾಡಿಸಿಕೊಂಡಿವೆ. ಮುಗುಳ್ನಗುತ್ತಾ, ಕೈಕಾಲು ಬಡಿಯುತ್ತಾ, ಅಳುತ್ತಾ, ಆಡುತ್ತಾ ತಂದೆ ತಾಯಿಯರನ್ನು ರಂಜಿಸಿವೆ. ಈಗಲೂ ಆ ತೊಟ್ಟಿಲು ಸುನೀತಾ–ರಾಮಚಂದ್ರ ಪ್ರಸಾದ್ ಇವರ ಮಗು ಶುಚೀಂದ್ರನ ತೂಗುಯ್ಯಾಲೆಯಾಗಿದೆ.

ಕೃಷ್ಣಪ್ಪನಿಗೆ ದಿನಬೆಳಗಾದರೆ ಕಾಲೇಜಿಗೆ ಹೋಗುವ ಗಡಿಬಿಡಿ. ಅವರ ತಾಯಿಯವರಿಗೆ ತುರ್ತಾಗಿ ಅಡಿಗೆ–ತಿಂಡಿ ಮಾಡಲು ಆಗುತ್ತಿರಲಿಲ್ಲ. ಅದಾಗ್ಯೂ ಬೆಳಿಗ್ಗೆ ಎದ್ದಾಕ್ಷಣ ಮನೆ ಮುಂದೆ ಗುಡಿಸಿ ನೀರಾಕಬೇಕು, ಮನೆಗುಡಿಸಿ, ಒರೆಸಿಡಬೇಕು ಎಂಬ ಕ್ರಮ ಕೃಷ್ಣಪ್ಪ ರೂಢಿಸಿಕೊಂಡು ಬಿಟ್ಟಿದ್ದರು. ತಾನು ಕಾಲೇಜಿಗೆ ಹೋಗುವುದರೊಳಗೆ ಮನೆ ಲಕಲಕ ಮಾಡಿ ನಂತರ ಸ್ನಾನ ಮಾಡಿ, ಸೂಟುಬೂಟು ಧರಿಸಿ, ಹೊರಟೇಬಿಡುತ್ತಿದ್ದರು. ರಜೆ ವೇಳೆಯಲ್ಲಿ ತನ್ನ ಬಟ್ಟೆಗಳನ್ನು ಒಗೆದು, ಇಸ್ತ್ರಿ ಮಾಡುತ್ತಿದ್ದರು. ಅವರ ಶಿಷ್ಯ ಗೆಳೆಯ ಮಹಾರುದ್ರ ಆಗಾಗ್ಗೆ ಹೇಳುತ್ತಿದ್ದ ಮಾತು ಈಗ ಜ್ಞಾಪಕಕ್ಕೆ ಬರುತ್ತೆ: "ಮೇಷ್ಟ್ರು, ಮನೆ ಕಸಗುಡಿಸೋ ಹೊತ್ನಲ್ಲಿ ನಾವೇನಾದ್ರೂ ಮನೆಗೆ ಬಂದ್ರೆ, ನಮಗೆ ರಸ್ತೆನೇ ಗತಿ. ಎಲ್ರೂ ಮನೆಗುಡಿಸಿ, ಒರಸಿದ್ರೆ, ಇವ್ರು ಮನೆ ಗುಡಿಸಿ ತೊಳೀತಾ ಇದ್ರು. ನೀರು ಜಲಪಾತದಂತೆ ಮೆಟ್ಟಿಲಿಂದ ಹರಿತಾ ಇತ್ತು. ತೇವ ಆರೋತಂಕ ನಾವು ಮನೆ ಒಳಗೆ ಬರೋಂಗಿಲ್ಲ ನೋಡಿ"

. ಅವರು ಸಂಜೆ ಬಂದಾಗಲೂ ಮನೆಯಲ್ಲಿ ಧೂಳು ಕಸ ಕಂಡಿತ್ತೋ, ಕೃಷ್ಣಪ್ಪನ ಕೈಲಿ ಪೊರಕೆ ಬಂತು ಅಂತಾನೇ ತಿಳ್ಕೊಳ್ಳಿ. ಅದೊಂದು ದಿನ ಕಾಲೇಜಿಂದಲೂ ಸ್ವಲ್ಪ ವಿಳಂಬವಾಗೇ ಬಂದಿದ್ದರು. ಬಂದವರೇ, ಸೂಟು–ಬೂಟು ಬಿಚ್ಚಾಕಿ, ಪಂಚೆ ಸುತ್ತಿಕೊಂಡು ಪೊರಕೆ ತಕ್ಕೊಂಡು ಬರಬರ ಗುಡಿಸಲು ಶುರು ಮಾಡೇ ಬಿಟ್ಟರು. ಆಗ ಕೋಪದಿಂದ "ಮನೇಲಿ ಕಸ ಬಿದ್ರೆ ಕಾಣಿಸಲ್ವೇ? ಗುಡಿಸೋಕೆ ಆಗಲ್ವೇ? ಸುಮ್ನೆ ಇರ್ತೀರಾ?" ಅಂತ ಬೈಯುತ್ತಲೇ ಕೆಲಸ ಮಾಡುತ್ತಿದ್ದರು. ಅವರ ತಾಯಿಗೆ ನೇರವಾಗಿ ಹೇಳಲಿಕ್ಕಾಗದೆ, ಒಂದು ತಿಂಗಳು ಆಗದ ಬಾಣಂತಿಯಾದ ನನ್ನನ್ನೂ ಸೇರಿಸಿಕೊಂಡು ಬೈಯ್ತಾ ಇದ್ದರಲ್ಲಾ ಅಂತ ಬೇಸರವೂ ಆಗ್ತಾ ಇತ್ತು. ಅದರೊಂದಿಗೆ ಕೆಲಸ ಮಾಡಲಾಗದ ಅಸಹಾಯಕತೆ ಬಗ್ಗೆ ಬೇಸರವೂ ಆಗ್ತಾ ಇತ್ತು. ನಂತರದ ದಿನಗಳಲ್ಲಿ ನಾನು ಅವರಿಗೆ ಈ ವಿಷಯದಲ್ಲಿ ಛೇಡಿಸುತ್ತಾ "ನಿಮಗೆ ಮನೆಗೆ ಬಂದಾಕ್ಷಣ, ಮನುಷ್ಯರು ಕಾಣಿಸಲ್ಲ, ಮೂಲೆಯಲ್ಲಿರುವ ಕಸಕಡ್ಡಿ ಕಾಣಿಸುತ್ತೆ ನೋಡಿ," ಎನ್ನುತ್ತಿದ್ದೆ.

ಬೆಳಗಿನ ಹೊತ್ತು ಹಾಗೇನೇ ಅವರವರ ಕೆಲಸದಲ್ಲಿ ಮಗ್ನರಾಗಿ ಬಿಡುತ್ತಿದ್ದರು. ನನಗೋ ಹಸಿವು. ಹೊಟ್ಟೆಯಲ್ಲಿ ಕಿಚ್ಚು ಹತ್ತಿಸಿಬಿಡುತ್ತಿತ್ತು. ಒಂಭತ್ತು ಹತ್ತು ಗಂಟೆಯಾದರೂ ಯಾರೂ ನನ್ನ



ಮನೆಯ ಹಿತ್ತಲಲ್ಲಿ ಮೈದುನ ಶಿವುನೊಂದಿಗೆ ಇಂದಿರಾ



ಕೃಷ್ಣಪ್ಪ ತಮ್ಮ ಸೋದರ–ಸೋದರಿಯರೊಂದಿಗೆ

ಬಗ್ಗೆ ತಿರುಗಿ ನೋಡುತ್ತಿರಲಿಲ್ಲ. ತಾಳಲಾರದೆ ನಾನು, ಎದ್ದು ಹೋಗಿ ಹಾಲು, ಬೇಯಿಸಿದ ಮೊಟ್ಟೆ ತಿಂದು ಬಿಡುತ್ತಿದ್ದೆ. ನನ್ನ ಅತ್ತೆ, ಮಗನಿಗೆ ಊಟ ಹಾಕಿ ಕಳುಹಿಸಿದ ನಂತರವೇ ನನ್ನ ಕಡೆ ಗಮನ. ಮಗುವಿಗೆ ಸ್ನಾನ, ನನ್ನ ಸ್ನಾನ ನಂತರವೇ ಊಟ. ೧೨ ಅಥವ ಒಂದು ಗಂಟೆಯಾದರೂ ಹೊಟ್ಟೆಗೇನೂ ಬೀಳದೆ ಚಡಪಡಿಸುತ್ತಿದ್ದೆ. ಅತ್ತೆಯೊಂದಿಗೆ ಬಹಳ ಸಲುಗೆ ಆಗ ಇಲ್ಲದ್ದರಿಂದ, ಅವರಿಗೆ ಏನೂ ಹೇಳಲಾಗದೆ ಒದ್ದಾಡುತ್ತಿದ್ದೆ. ಆಗ ನನ್ನ ಹಸಿವನ್ನು ತಣಿಸುತ್ತಿದ್ದುದು ನಮ್ಮ ನಾದಿನಿ ಹಾಲಮ್ಮ ಕಳುಹಿಸಿದ ಬಾಣಂತಿ ಖಾರ ಮತ್ತು ತುಪ್ಪ. ಅದನ್ನು ಎಷ್ಟು ಪ್ರಮಾಣದಲ್ಲಿ, ಯಾವಾಗ ತಿನ್ನಬೇಕೆಂಬ ಪರಿವೇ ಇಲ್ಲದೆ, ತಟ್ಟೆಗೊಂದಿಷ್ಟು ಸುರುವಿಕೊಂಡು ತಿಂದು ಬಿಡುತ್ತಿದ್ದೆ.

ಹಾಗೆಯೇ ಇನ್ನೊಂದು ಘಟನೆಯೂ ಜ್ಞಾಪಕಕ್ಕೆ ಬರುತ್ತೆ. ರಾತ್ರಿ ಊಟದ ಸಮಯ ಜೋಳದ ಮುದ್ದೆ ಸೊಪ್ಪಿನ ಸಾರು ಮಾಡಿದ್ರು, ನಾನೇ ಅಂದು ಊಟ ಬಡಿಸುತ್ತಿದ್ದೆ. ನಮ್ಮ ಅತ್ತೆ, ಶಿವು, ಕೃಷ್ಣಪ್ಪ ಊಟಕ್ಕೆ ಕುಳಿತಿದ್ರು. ನಾನು ತುಪ್ಪ ಬಡಿಸಲು ಕೈಗೆತ್ತಿಕೊಂಡಿದ್ದೆ ಅಷ್ಟೇ ಕೃಷ್ಣಪ್ಪ, "ಮೊದ್ಲು ಅಲ್ಲಿ ಹಾಕು ತುಪ್ಪ" ಎಂದು ಅವರ ತಾಯಿಯ ಕಡೆ ತೋರಿಸಿದರು. ನನಗೆ ಗಾಬರಿಯಾಯ್ತು, ದುಃಖವೂ ಆಯ್ತು, "ನಾನೇನು ಅವರಿಗೆ ತುಪ್ಪ ಹಾಕದೆ ಇರುತ್ತಿದ್ದೆನೇ? ಸಾಲಾಗಿ ಎಲ್ಲರಿಗೂ ಹಾಕುವವಳಿದ್ದೆನಲ್ಲ" ಎಂದು ಮನ ಮರುಗಿತು.

ಮತ್ತೊಮ್ಮೆ ಅದೇ ರೀತಿ ಊಟದ ಸಮಯ ವಿದ್ಯುತ್ ಸ್ಥಗಿತಗೊಂಡಿತ್ತು. ಮೇಣದ ಬತ್ತಿ ಹಚ್ಚಿಕೊಂಡು ಊಟ ಮಾಡುತ್ತಿದ್ದವು. ನಾನೇ ಬಡಿಸುತ್ತಿದ್ದೆ. ಹಾಗೇ ಇವರುಗಳ ತಟ್ಟೆಗೆ ಬಡಿಸುತ್ತಿದ್ದಾಗ, ಹಿಂದಿನಿಂದ ಸೀರೆಗೆ ಬೆಂಕಿ ಹತ್ತಿಕೊಂಡಿತ್ತು. ಟೆರಿಕಾಟ್ ಸೀರೆ, ಬೇಗ ಉರಿ ಮೇಲಕ್ಕೆ ಹತ್ತಿಯೇ ಬಿಟ್ಟಿತು. ನನಗೂ ಅದರ ತಾಪ ಮೈಗೆ ತಾಗತೊಡಗಿತು. ನಾನೂ ಏನಾಯಿತು ಎಂದು ತಿಳಿಯದೆ, ಅನ್ನದ ಪಾತ್ರೆ ಕೆಳಗೆ ಬಿಟ್ಟೆ, ನಮ್ಮ ಅತ್ತೆ "ಅಯ್ಯೋ ಬೆಂಕಿ ಬೆಂಕಿ, ಸೀರೆ" ಎಂದು ಕೂಗಲಾರಂಭಿಸಿದ್ರು. ನಾನು ಬಚ್ಚಲಿಗೆ ಹೋಗಿ ನೀರು ಸುರಿದುಕೊಂಡೆ ಕಣ್ಣಲ್ಲಿ ನೀರು ಧಾರಾಕಾರ ಸುರಿಯುತ್ತಿತ್ತು. ಭಯದಿಂದ ಕೈಕಾಲು ನಡುಗುತ್ತಿತ್ತು. ಎಲ್ಲರೂ ಗಾಬರಿಯಿಂದ ಎದ್ದು ನನ್ನನ್ನು ಸಾವರಿಸುತ್ತಾ, ಹರಡಿದ್ದನ್ನೆಲ್ಲಾ ಸ್ವಚ್ಛಗೊಳಿಸುತ್ತಿದ್ದರು. ಕೃಷ್ಣಪ್ಪ, "ಅಷ್ಟು ಗೊತ್ತಾಗಲಿಲ್ಲವೆ? ಏನಾದ್ರೂ ಆಗಿದ್ರೆ ಏನು ಮಾಡೋದಿತ್ತು" ಅಂತ ನನ್ನನ್ನೇ ಬೈಯಲಿಕ್ಕೆ ಶುರು ಇಟ್ಟುಕೊಂಡ್ರು. ಭಯ, ದುಃಖ ಹಾಗೂ ಅಸಹಾಯಕತೆಯಿಂದ ನಾನು ಮಲಗಿಬಿಟ್ಟೆ. ಅವರೆಲ್ಲಾ ಬಂದು ಎಷ್ಟು ಕರೆದರೂ ನಾನು ಊಟ ಮಾಡಲಿಲ್ಲ. ಭಯಗ್ರಸ್ತಳಾದ ನನ್ನನ್ನು ಸಮಾಧಾನಪಡಿಸದೆ ಇವರು ನನ್ನನ್ನು ಬೈಯುತ್ತಿದ್ದಾರಲ್ಲಾ ಎಂದು ಮನ ನೊಂದಿತ್ತು. ಈ ಮಧ್ಯೆ ನಮ್ಮ ಅತ್ತೆಯವರಿಗೆ ಆಗಾಗ್ಗೆ ಹೊಟ್ಟೆಯಲ್ಲಿ ಭಟ್ಟಿ ಜಾರುತ್ತಿತ್ತು. ನೋವಿನಿಂದ ಹೊಟ್ಟೆ ಹಿಡಿದುಕೊಂಡು ಬಿಡುತ್ತಿದ್ದರು. ಇದಕ್ಕೆ ಅವರದೇ ಆದ ಚಿಕಿತ್ಸಾ ಕ್ರಮವೊಂದಿತ್ತು. ಅದನ್ನು ಮಾಡಿದ್ರೇ ಆದರೆ ಮಾತ್ರ ಅದು ವಾಸಿಯಾಗುತ್ತಿತ್ತು. ಅವರು ಅಂಗಾತ ಮಲಗಿ ಬಿಡುತ್ತಿದ್ದರು. ಅವರ ಹೊಕ್ಕುಳ ಮೇಲೆ ಮಣ್ಣಿನ ಹಣತೆ, ಹಣತೆಯಲ್ಲಿ ಹರಳೆಣ್ಣೆ ದೀಪ ಹಚ್ಚಿಡಬೇಕಿತ್ತು. ಅದನ್ನು ಹೊಕ್ಕಳ ಸುತ್ತಾ ಆಗಾಗ್ಗೆ ಸುತ್ತಿಸಬೇಕಾಗುತ್ತಿತ್ತು. ಆ ದೀಪ ಆರುವವರೆಗೆ ಕೃಷ್ಣಪ್ಪ ಅಲ್ಲೇ ಪಕ್ಕದಲ್ಲಿ ಓದುತ್ತಾ, ನೋಡುತ್ತಾ ಕುಳಿತಿರುತ್ತಿದ್ದರು. ಇದರ ಬಗ್ಗೆ ಆಸ್ಪತ್ರೆಗೆ ತೋರಿಸಿ ಎಂದರೆ, "ಇದು ಹಾಗೆಲ್ಲ ಹೋಗಲ್ಲ, ಅವರಿಗೆ ಅದರಲ್ಲಿ ನಂಬಿಕೆ ಇದೆ. ಬಹಳಷ್ಟು ವರ್ಷದಿಂದ ಅದನ್ನು ಮಾಡ್ತಾ ಇದ್ದಾರೆ" ಅಂತ ಹೇಳಿದರು. ಅವರಿಗೆ ಇದೊಂದು ವಿಶಿಷ್ಟ ಚಿಕಿತ್ಸಾ ಕ್ರಮವಾಗಿತ್ತು.

ಒಂದು ದಿನ, ಕೃಷ್ಣಪ್ಪನ ಕಿರಿ ತಮ್ಮ ಮಾರುತಿಗೆ 'ಅನಾರೋಗ್ಯವೆಂದೂ, ಬೇಗ ಬನ್ನಿ' ಎಂದು ಟೆಲಿಗ್ರಾಂ ಬಂದಿತ್ತು. ಕೃಷ್ಣಪ್ಪ ಕಾಲೇಜಿನಿಂದ ಬಂದವರೇ ಊರಿಗೆ ಹೊರಟೇ ಬಿಟ್ಟರು. ತಾಯಿಯವರಿಗೆ ಈ ವಿಷಯ ಹೇಳಲೇ ಇಲ್ಲ ಮರುದಿನ, ಶಿವು ಮುಖಾಂತರ ವಿಷಯ ತಿಳಿದುಕೊಂಡ ನಮ್ಮ ಅತ್ತೆ, ಮನೆಹೊರಗಿನ ಕಟ್ಟೆಮೇಲೆ ಕುಳಿತು, 'ನನ್ನ ಮಗಂಗೆ ಏನಾಯ್ತೋ, ಇವನು ನಂಗೆ ಹೇಳ್ದೆ ಹೋದ, ನಾನು ಹೋಗ್ತಿದ್ದೆ', ಅಂತ ಗೋಳೋ ಎಂದು ಅಳುತ್ತಿದ್ದರು. ಇದನ್ನು ಕಂಡು ನಾನು ಅಕ್ಕ–ಪಕ್ಕದ ಮನೆಯವರು ತಪ್ಪು ತಿಳಿಯಬಾರದೆಂದು ಅವರನ್ನು ಸಮಾಧಾನಪಡಿಸಿ, ಒಳಗೆ ಕರೆದರೂ ಬರಲೇ ಇಲ್ಲ. ನಂತರ ಶಿವು ಅವರನ್ನು ಒಪ್ಪಿಸಿ ಒಳಗೆ ಕರೆತಂದ. ಕೃಷ್ಣಪ್ಪ ಹಿಂತಿರುಗುವವರೆಗೂ ಅವರು ತೀವ್ರ ದುಃಖದಲ್ಲೇ ದಿನಕಳೆದರು. ಅವರು ಬಂದು ಮಾರುತಿ ಈಗ ಹುಶಾರಾಗಿದ್ದಾನೆ, ನಾಳೆಯಿಂದ ಕೆಲಸಕ್ಕೆ ಹೋಗ್ತಾನೆ ಅಂದ ಮೇಲೆ, ಅವರ ದುಃಖ ಶಮನವಾಗಿತ್ತು.

ಹರಿಹರದಲ್ಲಿ ಇವರ ತಂದೆ ಹಾಗೂ ಇವರ ಸಣ್ಣ ಚಿಕ್ಕಪ್ಪನ ಮನೆ ಒಂದೇ ರಸ್ತೆಯಲ್ಲಿತ್ತು ಅದ್ಯಾವುದೋ ಕಾರಣಕ್ಕೆ ಎರಡೂ ಮನೆಯವರ ನಡುವೆ ಜಗಳ–ಹೊಡೆದಾಟ ಆಗಿ ಪೋಲಿಸ್ ಸ್ಟೇಷನ್ ಮೆಟ್ಟಿಲನ್ನು ಹತ್ತಿತ್ತು. ಹಾಗೊಂದು ಗಲಾಟೆಯಾದಾಗ, ಬೇಗ ಬನ್ನಿ ಎಂದು ಟೆಲಿಗ್ರಾಂ ಬಂದು ಬಿಟ್ಟಿತು. ಯಥಾರೀತಿ ಕೃಷ್ಣಪ್ಪ ತುರಾತುರಿಯಲ್ಲಿ ಹೊರಟೇ ಬಿಟ್ರು.


ಅವರು ಅಲ್ಲಿನ ವ್ಯಾಜ್ಯ ಇತ್ಯರ್ಥಮಾಡಿ ಬರುವುದರೊಳಗೆ, ನಮ್ಮ ಅತ್ತೆಯ ಗೋಳು ಹೇಳತೀರದು. ಮನೆ ಕಟ್ಟೆಮೇಲೆ ಕುಳಿತು ಮನೆ ಮಂದಿಯನ್ನೆಲ್ಲಾ ಜ್ಞಾಪಿಸಿಕೊಂಡು ಅಳುವುದು, ತೊಂದರೆ ಮಾಡಿದವರನ್ನು ಹಳಿಯುವುದು ಮಾಡುತ್ತಲೇ ಇದ್ದರು. ನನಗೆ ಇವರು ಯಾವಾಗ ಹಿಂತಿರುಗುತ್ತಾರೊ ಎನ್ನಿಸಿ ಬಿಡುತ್ತಿತ್ತು. ಶಿವು ಆದಷ್ಟು ಅವರನ್ನು ಸಮಾಧಾನ ಪಡಿಸುತಿದ್ದ. ಇವರ ದೊಡ್ಡಪ್ಪ–ಚಿಕ್ಕಪ್ಪನ ಮನೆ ಜಗಳ ಬಹಳ ವರ್ಷ ನಡೆಯುತ್ತಲೇ ಇತ್ತು. ಸುಮಾರು ಹತ್ತು ವರ್ಷಗಳ ನಂತರ ಒಂದೆರೆಡು ಹಿರಿತಲೆಗಳು ಅಳಿದ ಮೇಲೆ, ಉಳಿದವರೆಲ್ಲ ವಿಶ್ವಾಸಪೂರ್ವಕವಾಗಿ ಬದುಕು ನಡೆಸುತ್ತಿದ್ದಾರೆ.

(ಮುಂದುವರೆಯುವುದು)

# ಕೆಲವು ಸಮಾಜವಾದಿ ನೆನಪುಗಳು...

**ಕರ್ನಾಟಕದ ಮೂರು ತಲೆಮಾರುಗಳು ಸಮಾಜವಾದಿ ಚಳುವಳಿಯಲ್ಲಿ ಒಂದಲ್ಲ ಒಂದು ಸ್ತರದಲ್ಲಿ–ಭಾವದಲ್ಲಿ ಭಾಗವಹಿಸಿದ್ದುವೆಂದು ಹೇಳಬಹುದು. ಕೆಲವರು ನೇರವಾಗಿ ಪಕ್ಷದ ಸಕ್ರಿಯ ಸದಸ್ಯರಾಗಿ, ಇನ್ನು ಕೆಲವರು ಅದರ ಯುವಜನ ಶಾಖೆಯ ಸದಸ್ಯರಾಗಿ, ಇನ್ನು ಕೆಲವರು ಅದರ ಟಿಸಿಲುಗಳಂತಿದ್ದ ದಲಿತ ಮತ್ತು ರೈತ ಚಳುವಳಿಯ ಕಾರ್ಯಕರ್ತರಾಗಿ; ಮತ್ತೆ ಇನ್ನೂ ಕೆಲವರು ಈ ಚಳುವಳಿಯ ಸಹಾನುಭೂತಿ ಪರ ವೀಕ್ಷಕರಾಗಿ. ಈ ಎಲ್ಲ ಸ್ತರಗಳ ನೆನಪುಗಳೂ ಸಮಾಜವಾದಿ ಚಳುವಳಿ ತನ್ನ ವಿವಿಧ ಆವೃತ್ತಿಗಳಲ್ಲಿ ಕಟ್ಟಿಕೊಟ್ಟ ಸಮಾಜವಾದದ ಪರಿಕಲ್ಪನೆ ಮತ್ತು ಆಶಯಗಳ ಮೇಲೆ ಹೊಸ ಬೆಳಕು ಚೆಲ್ಲಬಹುದು. ಸಮಾಜವಾದ ತನ್ನ ಸಮಕಾಲೀನತೆಯ ಸೃಜನಶೀಲ ರೂಪದಲ್ಲಿ ಇಂದಿನ ಜಾಗತೀಕರಣವೆಂಬ ಮೋಹಿನಿಯ ಕುಲುಕು ನೃತ್ಯ ನಮ್ಮ ಮನಗಳಲ್ಲಿ ಸೃಷ್ಟಿಸಿರುವ 'ಅತ್ತಲೋ ಇತ್ತಲೋ' ಎಂಬ ದ್ವಂದ್ವಕ್ಕೆ ಒಂದು ಉತ್ತರವಾಗಬಹುದೆಂಬ ಭರವಸೆ ಇರುವವರು ಈ ನೆನಪುಗಳಲ್ಲಿ ಹೊಸ ಹೊಳಹುಗಳನ್ನು ಕಂಡುಕೊಳ್ಳಬಹುದು. ಹಾಗೇ ಕೆಲವು ಪಾಠಗಳನ್ನೂ ಕಲಿತುಕೊಳ್ಳಬಹುದು–ಸಂ.**

## ಪ. ಮಲ್ಲೇಶರೊಂದಿಗೆ ಮಾತುಕತೆ



**ತಾವು ಸಮಾಜವಾದಿ ಪಕ್ಷದಲ್ಲಿದ್ದವರು. ಕೇಂದ್ರದಲ್ಲಿ ಜನತಾ ಸರಕಾರ ರಾಜ್ಯದಲ್ಲಿ ಜೆ.ಹೆಚ್ ಪಟೇಲ್ ಸರ್ಕಾರವನ್ನು ನೋಡಿದ್ದೀರಿ. ಪ್ರಸ್ತುತ ಸಿದ್ದರಾಮಯ್ಯನವರ ಸರ್ಕಾರ ಸಮಾಜವಾದಿ ಆಶಯಗಳನ್ನು ಅನುಷ್ಠಾನಗೊಳಿಸುತ್ತದೆ ಎಂದು ನಿಮಗೆ ಅನಿಸುತ್ತಿದೆಯಾ?**

ವಿಕೇಂದ್ರಿಕರಣ ದೃಷ್ಟಿಯಿಂದ ಹೆಗಡೆ ಕಾಲದಲ್ಲಿ ಸ್ವಲ್ಪ ಪ್ರಾರಂಭ ಆಯ್ತು ಅನ್ನೋದು ಬಿಟ್ರೆ ಸಮಾಜವಾದಿ ಸಿದ್ಧಾಂತದ ಯಾವುದೇ ಕೆಲಸ ಇಲ್ಲ. ಇಲ್ಲಿ ಜೆ. ಹೆಚ್. ಪಟೇಲ್ ಒಬ್ಬರೇ ಸಮಾಜವಾದಿ. ಆದ್ರೂ ಅಧಿಕಾರ ಸಿಕ್ಕಿದ ಕೂಡಲೇ ಬಾರ್ ಓಪನ್ ಮಾಡಕ್ಕೆ ಶುರು ಮಾಡಿದ್ರು. ನಾನಾಗ ಗಲಾಟೆ ಮಾಡ್ದೆ. ಆದ್ರೆ ಏನೂ ಆಗ್ಲಿಲ್ಲ. ಸಿದ್ದರಾಮಯ್ಯ ಉಪಮುಖ್ಯಮಂತ್ರಿಯಾಗಿದ್ರು. ನಜೀರ್ ಸಾಬ್ ನೀರ್ ಸಾಬ್ ಅಂದ್ರು. ಈಗ ಅಂತರ್ಜಲವೇ ಇಲ್ವಲ್ಲ.

ಜೆ.ಪಿ ಚಳುವಳಿ ಆಗ್ತಾ ಇದ್ದ ಹಾಗೆ ನಾವು ಬಿ.ಜೆ.ಪಿ ಸೇರಿ ಜನತಾಪಕ್ಷ ಮಾಡಿದ್ವಲ್ಲ, ಆಗಲೇ ಸಮಾಜವಾದಿ ಸಿದ್ಧಾಂತ ಸತ್ತೋಯ್ತು. ಜಾರ್ಜ್ ಸೈನಿಕರಿಗೆ ಖಾದಿ ಬಟ್ಟೆ ಕೊಡೋಣ ಅಂದ್ರು. ಅದು ಆಗ್ಲಿಲ್ಲ. ಲಲ್ಲೂ ಮಣ್ಣಿನ ಕುಡಿಕೆ ಕೊಡೋಕ್ಕೆ ಹೋದ್ರು. ಅದು ನಡೀಲಿಲ್ಲ. ಜೆಪಿ ಚಳುವಳಿ ಮೂಲಕ ಏನು ಸಮಾಜವಾದಿ ಆಶಯದ ಸರ್ಕಾರ ರೂಪುಗೊಳ್ತು, ಅದು ಅನುಷ್ಠಾನಗೊಳಿಸದೆ ಇರೋಂತಹ ಸಮಾಜವಾದಿ ಕಾರ್ಯಕ್ರಮಗಳನ್ನು ಸಿದ್ದರಾಮಯ್ಯನವರು ಅನುಷ್ಠಾನಗೊಳಿಸಬೇಕು. ಸಿದ್ದರಾಮಯ್ಯನವರು ಎಲ್ಲವನ್ನು ಸಮಾಜವಾದಿ ಸಿದ್ಧಾಂತದಲ್ಲಿ ಕೆಲಸಮಾಡೋಕೆ ಆಗಲ್ಲ. ಏಕೆಂದರೆ ಇದು ಕಾಂಗ್ರೆಸ್ ಸರ್ಕಾರ. ನಾವು ಅವರ ಮೇಲೆ ನೈತಿಕ ಒತ್ತಡ ತರಬೇಕಾಗುತ್ತೆ. ಸಿದ್ದರಾಮಯ್ಯನವರು ಬಡವರ ಅರೆ ಹೊಟ್ಟೆ ತುಂಬಿಸೋ ಕೆಲಸ ಶ್ಲಾಘನೀಯವಾದ್ರೂ ಈ ಬಡವರಿಗೆ ಸ್ವಾವಲಂಬನೆಯ ಜೀವನ ಕಟ್ಟಿ ಕೊಡೋದು ಅವರ ಜವಾಬ್ದಾರಿ. ಹಿಂದೆ ಸಿದ್ದರಾಮಯ್ಯನವರು ಸಮಾಜವಾದಿ ಯುವಜನ ಸಭಾದಲ್ಲಿ ಇದ್ರು. ಅದರೆ ಯಾವುದೇ ಹೋರಾಟದಲ್ಲಿ ಇರಲಿಲ್ಲ. ಅವರ ಬದುಕೇ ಅವರಿಗೆ ಸಮಾಜವಾದಿ ಪಾಠಗಳನ್ನ ಹೇಳಿಕೊಟ್ಟಿದೆ. ಅವರು ಭಿನ್ನವಾಗಿ ಯೋಚನೆ ಮಾಡ್ತಾರೆ ಅನ್ನೋ ಭರವಸೆ ಇದೆ.

**ಕರ್ನಾಟಕದಲ್ಲಿ ಲೋಹಿಯಾ ವಿಚಾರಧಾರೆ ವ್ಯಾಪಕವಾಗಿ ಹಾಗೂ ಅಳವಾಗಿ ಬೇರು ಬಿಟ್ಟಿದೆ. ಲೋಹಿಯಾ ಹಾಗೂ ಸಮಾಜವಾದದಲ್ಲಿ ನಂಬಿಕೆ ಇಟ್ಟವರ ಪಡೆಯೇ ಇದೆ. ಅದರೂ ಚುನಾವಣಾ ಕಣದಲ್ಲಿ ಪ್ರತಿನಿಧಿಸಲು ಸಮಾಜವಾದಿ ಪಕ್ಷ ಇಲ್ಲ ಮತ್ತು ಸಮಾಜವಾದಿಗಳು ಸೋಲುತ್ತಾರೆ ಏಕೆ ?**

ಸಿದ್ಧಾಂತ ಅಳವಾಗಿ ಬೇರೂರಿದೆ ಎಂದು ಒಪ್ಪಿಕೊಂಡ್ರೂ ಈಗಿರುವ ಅಳಿದುಳಿದ ಸಮಾಜವಾದಿಗಳು ನಿಷ್ಕ್ರಿಯರಾಗಿದ್ದಾರೆ. ಮತ್ತೆ ಕೆಲವರಿಗೆ ಸರ್ಕಾರಗಳ ಸ್ಥಾನ ಮಾನ ಸಿಕ್ಕಿ ಆಮಿಶಗಳಿಗೆ ಒಳಗಾಗಿದ್ದಾರೆ. ಈಗ ಬಾಯಿಮಾತಿನ ಲೋಹಿಯಾವಾದ ಕರ್ನಾಟಕದಲ್ಲಿ ಉಳಿದಿದೆ. ಒಂದು ಪಡೆ ಇದೆ ಅನ್ನೋದು ನನ್ನ ಕಣ್ಣಿಗೆ ಕಾಣ್ತಾಯಿಲ್ಲ. ಇವರೆಲ್ಲ ರೈತ ಸಂಘಟನೆ, ದಲಿತ ಸಂಘರ್ಷ ಸಮಿತಿ, ಪ್ರಗತಿಪರ ಸಂಘಟನೆ ಇದ್ರಲ್ಲಿ ಸೇರ್ಕೊಂಡು ಸಮಾಜವಾದಿ ಸಂಘಟನೆ ಕರ್ನಾಟಕದಲ್ಲಿ ಇಲ್ಲವಾಗಿ ಹೋಯ್ತು ಅನಿಸುತ್ತಿದೆ. ಸಮಾಜವಾದಿ ಪಕ್ಷ ಅನ್ನೋದು ಇಲ್ವೇ ಇಲ್ಲ. ಕರ್ನಾಟಕದಲ್ಲಿ ಇದ್ದ ಪಕ್ಷ ಜನತಾ ಪಕ್ಷದಲ್ಲಿ ವಿಲೀನ ಆಗೋಯ್ತು. ಇಂತ ಬೇರೆ ಬೇರೆ ಸಂಘಟನೆಗಳಲ್ಲಿರೋ ಸಮಾಜವಾದಿಗಳನ್ನ ಸಂಘಟಿಸಿ ಪಕ್ಷ ಕಟ್ಟಬೇಕು ಅನ್ನೋದು ಆಶಯ.

**ಸಮಾಜವಾದಿ ಪಕ್ಷ ಅಥವ ಸಿದ್ಧಾಂತ ಜನಮಾನಸದಲ್ಲಿ ಬೇರೂರದೆ ಇರಲು ಸಮಾಜವಾದಿ ಗುಂಪಿನಲ್ಲಿಯ ಜಾತಿ ವಿಶ್ಲೇಷಣೆಗಳು ಕಾರಣವೇ?**

ಲೋಹಿಯಾ, ಗಾಂಧಿ ಮತ್ತು ಅಂಬೇಡ್ಕರ್ ಈ ಮುವ್ವರು ಮಹಾಶಯರು ಜಾತಿಯ ವಿರುದ್ಧ ವೈಚಾರಿಕವಾಗಿ ಸಂಘಟನೆ ಮಾಡಿದ್ದವರು. ನಾವು ಸಮಾಜವಾದಿಗಳು ಅಂತ ಹೇಳ್ಕೊಂಡು ಬಂದಂತ ಬಹಳಷ್ಟು ಜನ ಅಜೀಜ್ ಸೇಠ್, ಬಂಗಾರಪ್ಪ, ತಿಮ್ಮಪ್ಪ, ಲಿಂಗಪ್ಪ, ಜೆ.ಎಚ್. ಪಟೇಲ್, ಎಂ.ಪಿ ಪ್ರಕಾಶ್ ಇವರೆಲ್ಲ ಜಾತಿ ಬಿಟ್ಟಿದ್ರೂ ಅಂತ ನನ್ನಂತವರಿಗೆ ನಂಬಿಕೆ ಇತ್ತು. ಅದ್ರೆ ಇವರ್‍ಯಾರು ಜಾತಿ ಬಿಟ್ಟು ಚುನಾವಣೆಯಲ್ಲಿ ಗೆಲ್ಲಿಲ್ಲ. ಅಜೀಜ್ ಸೇಠ್ ಸಾಬರೇ ಹೆಚ್ಚಿರುವ ನಜರ್‌ಬಾದ್‌ನಲ್ಲಿ ಗೆದ್ರು. ಜೆ.ಎಚ್. ಪಟೇಲ್ ಚೆನ್ನಗಿರಿಯಲ್ಲಿ ಜಾತಿ ಜನಗಳಿಂದಲೇ ಗೆದ್ದಿದ್ದು. ಜೆ. ಎಚ್. ಪಟೇಲ್ ಮನೆಯಲ್ಲಿ ಹೋಮ ಬೇರೆ ಮಾಡ್ಸಿದ್ರಂತೆ. ಅಂದ್ರೆ ಒಳಗೊಳಗೇ ಇವರು ಜಾತಿ ಸಂಘಟನೆಯಲ್ಲಿ ಇದ್ರು. ಜನ ಕಣ್ಣು ಮುಚ್ಕೊಂಡು ಕೂತಿರಲ್ಲ. ಜನಕ್ಕೆ ನಮ್ಮ ನಡವಳಿಕೆ ಗೊತ್ತಗ್ತಾ ಇರುತ್ತೆ.

ಅಂಬೇಡ್ಕರ್ ಜಾತಿ ವಿನಾಶದ ಬಗ್ಗೆ ಗಂಭೀರವಾಗಿ ಹೋರಾಟ ನಡೆಸಿದ್ರು. ಅವರು ಜಾತಿ ಸಂಘರ್ಷದ ಮೂಲಕ ವರ್ಗ ಸಂಘರ್ಷದ ಪರಿಕಲ್ಪನೆಗೆ ಬಂದಿದ್ರು. ಅದ್ರೆ ಇವತ್ತು ದಲಿತರಲ್ಲೇ ಎಡಗೈ ಬಲಗೈ ಜಾತಿ ಆಗಿ ಪರಿಣಮಿಸಿದೆ. ಮೇಲ್ಜಾತಿಗಳು ನಡೆಸಿಕೊಂಡು ಬಂದಂತೆ ಹಿಂದುಳಿದವರೂ ಇವೊತ್ತು ಮಠಮಾನ್ಯ ಮಾಡ್ಕೊಂಡು ಜಾತಿ ವ್ಯವಸ್ಥೆಯನ್ನು ಗಟ್ಟಿಗೊಳಿಸಿದ್ದಾರೆ. ಈ ಕಾರಣಕ್ಕೆ ರಾಜ್ಯದಲ್ಲಿ ಲೋಹಿಯಾ ವಿಚಾರವಾದ ವ್ಯಾಪಕವಾಗಿ ಹಾಗೂ ಅಳವಾಗಿ ಬೇರು ಬಿಟ್ಟಿದೆ ಅನ್ನೋ ಮಾತು ಸುಳ್ಳಾಗುತ್ತೆ. ಇಷ್ಟಾದರೂ ಕರ್ನಾಟಕದಲ್ಲಿ ಕಟ್ಟಾ ಸಮಾಜವಾದಿಗಳು ಅಲ್ಲೊಬ್ಬರು ಇಲ್ಲೊಬ್ಬರು ಇದ್ದಾರೆ. ಇಂದಿನ

ಮುಖ್ಯಮಂತ್ರಿ ಅಂತಹ ವ್ಯಕ್ತಿಗಳನ್ನ ಗುರುತಿಸಿ ಅವರ ಸಂಪರ್ಕದಲ್ಲಿ ಚಿಂತನೆ ಚರ್ಚೆ ನಡೆಸೋದು ಒಳ್ಳೇದು.

**ಹೊಸ ಸರ್ಕಾರ ರಚನೆಯಾಗಿದೆ. ಮುಖ್ಯವಾಗಿ ಕನ್ನಡ ಅನುಷ್ಠಾನ ಕುರಿತು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ತಿಳಿಸಿ.**

ಕರ್ನಾಟಕದಲ್ಲಿ ಭಾಷೆ ಬಗ್ಗೆ ಯಾರಿಗೂ ಕಳಕಳಿ ಇಲ್ಲ. ಇಂಗ್ಲೀಷ್ ವ್ಯಾಮೋಹ ಮೇಲ್ವರ್ಗದವರಿಗೆ ಮಾತ್ರ ಇದೆ ಅಂತಿದ್ವಿ. ಇದು ಕೆಳವರ್ಗದವರಿಗೂ ಒಂದು ರೋಗವಾಗಿ ಪರಿಣಮಿಸಿದೆ. ಶಿಕ್ಷಣ ಮಾಧ್ಯಮವಾಗಿ ಕನ್ನಡವನ್ನು ಅನುಷ್ಠಾನಗೊಳಿಸಲು ನಿರಂತರ ಹೋರಾಟ ಮಾಡಿದರೂ, ಪಟ್ಟಭದ್ರ ಹಿತಾಸಕ್ತಿಗಳು ಕೋರ್ಟ್ ಮೆಟ್ಟಿಲೇರಿ ಅವನ್ನ ನೆನೆಗುದಿಗೆ ತಂದ್ವು.

ಹೈಕೋರ್ಟ್ ಕನ್ನಡದ ವಿರುದ್ಧ ತೀರ್ಮಾನ ಕೊಟ್ಟಿದೆ. ಸುಪ್ರೀಂ ಕೋರ್ಟ್ ಐದು ವರ್ಷಗಳ ನಂತರ ಇವತ್ತು, ಸಂವಿಧಾನ ಪೀಠಕ್ಕೆ ವರ್ಗಾಯಿಸಿದೆ. ನ್ಯಾಯಾಲಯವು ಕೂಡ ಭಾಷೆಯ ಬಗ್ಗೆ ಅದರಲ್ಲೂ ಮಾತೃಭಾಷೆಯ ಬಗ್ಗೆ ಆದ್ಯತೆಯನ್ನ ಕೊಡ್ತಾ ಇಲ್ಲ. ಇಂಗ್ಲೀಷ್ ಮಾತೃಭಾಷೆ ಅಲ್ಲದಿದ್ರೂ ಪೋಷಕರ ಹಕ್ಕಿನ ಅಡಿಯಲ್ಲಿ ಇಂಗ್ಲೀಷ್‌ಗೆ ನ್ಯಾಯಾಂಗ ಮಾನ್ಯತೆ ಕೊಡ್ತಾ ಇರೋದು ದೊಡ್ಡ ದುರಂತ. ಈಗ ಆರ್.ಟಿ.ಇ. (right to education ) ಬಂದಿದೆ. ಆರ್.ಟಿ.ಇ ನಲ್ಲಿ ಕಲಂ ೮ರ ಪ್ರಕಾರ ಒಂದು ಬಿಲ್‌ನ್ನು ವಿಧಾನಸಭೆಯಲ್ಲಿ ಮಂಡಿಸಿ ಅದನ್ನು ಜಾರಿ ಮಾಡಿ ಕನಿಷ್ಠ ೧-೮ ತರಗತಿವರೆಗೆ ಆದ್ರೂ ಶಿಕ್ಷಣ ಮಾತೃಭಾಷೆಯಲ್ಲಿ ಆಗಬೇಕು ಅಂತ ತೀರ್ಮಾನ ತಕ್ಕೊಂಡ್ರೆ ಕನ್ನಡ ಅಷ್ಟಿಷ್ಟು ಉಳಿಯುವ ಸಾಧ್ಯತೆ ಇದೆ. ಆಗ ಸುಪ್ರೀಂ ಕೋರ್ಟ್‌ನಲ್ಲಿರೋ ಈ ಹಳೆ ಕೇಸ್ ತನ್ನಷ್ಟಕ್ಕೆ ತಾನೇ ಬಿದ್ದು ಹೋಗುತ್ತೆ ಅಂತ ನ್ಯಾಯವಾದಿಗಳ ಅಭಿಪ್ರಾಯ. ಇದಕ್ಕಾಗಿ ಶ್ರೀಮಾನ್ ಸಿದ್ದರಾಮಯ್ಯನವರು ತಕ್ಷಣ ಅಡ್ವೋಕೇಟ್ ಜನರಲ್‌ನ ಕಂಡು ಅವರ ಅಭಿಪ್ರಾಯ ತೆಗೆದುಕೊಂಡು ಕನ್ನಡದ ಅನುಷ್ಠಾನಕ್ಕೆ ಪ್ರಯತ್ನ ಮಾಡಬೇಕು. ಕನ್ನಡ ಸಂಘಟನೆಯವರು ಒಗ್ಗಟ್ಟಾಗಿ ಒಂದು ಭಾಷಾ ಚಳುವಳಿ ಪ್ರಾರಂಭಿಸಬೇಕು.

(ಸಂದರ್ಶನ: **ಅಪೂರ್ವ ಡಿ'ಸಿಲ್ವ**)

# ಶಾಂತವೇರಿ ಗೋಪಾಲ ಗೌಡರು ಹೀಗಿದ್ದರು...



**ಜೆ.**ಎಚ್. ಪಟೇಲರು ಚುನಾವಣಾ ರಾಜಕಾರಣಕ್ಕೆ ಪಾದಾರ್ಪಣೆ ಮಾಡಿದ ೧೯೬೦ರ ತಾಲ್ಲೂಕು ಬೋರ್ಡ್ ಚುನಾವಣೆಯಲ್ಲಿ ಸ್ಪರ್ಧಿಸಿದ್ದಾಗ ನಾನು-ಅವರ ಕಿರಿಯ ಸೋದರ-ಮುಂಬಯಿನಲ್ಲಿ ಸಂಶೋಧನಾ ಸಹಾಯಕನಾಗಿ ಕೇಂದ್ರ ಸರ್ಕಾರದ ಸಟ್ಟಾ ವ್ಯಾಪಾರವನ್ನು ನಿಯಂತ್ರಿಸುವ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೆ. ಈ ತಾಲ್ಲೂಕು ಬೋರ್ಡ್ ಚುನಾವಣೆ ನಡೆದದ್ದು, ಅಕ್ಟೋಬರ್ ೧೯೬೦ರಲ್ಲಿ, ನಾನು ಈ ಚುನಾವಣೆ ಬಗ್ಗೆ ಆಸಕ್ತಿಯಿಂದ ಒಂದು ವಾರ ರಜೆಯ ಮೇಲೆ ಮುಂಬಯಿನಿಂದ 'ಕಾರಿಗನೂರಿಗೆ ಬಂದೆ. ಅಲ್ಲಿ ನೋಡಿದರೆ, ಅಣ್ಣನವರಿಗೆ ಜ್ವರ ಬಂದು ದಾವಣಗೆರೆಯ ನಮ್ಮ ಅಕ್ಕನ ಮನೆಗೆ ಶುಶ್ರೂಷೆಗೆ ಹೋಗಿಬಿಟ್ಟಿದ್ದರು. ಹಾಗಾಗಿ ನಾನು ಅಲ್ಲಿಂದ ಸೀದಾ ಅಕ್ಕನ ಮನೆಗೆ ಹೋದೆ. ನಮ್ಮ ಭಾವ ಅಲ್ಲಿ ದೊಡ್ಡ ಮಂಡಿ ವರ್ತಕರಾಗಿದ್ದರು. ನನ್ನನ್ನು ನೋಡಿ ಅಣ್ಣನವರಿಗೆ ಖುಷಿಯಾಯಿತು. "ನೋಡು ಶಿವು, ನಾನು ಕೆಲವು ದಿನ ಎಲ್ಲಿಗೂ ಹೋಗಬಾರದೆಂದು ವೈದ್ಯರು ಸಲಹೆ ಮಾಡಿದ್ದಾರೆ. ನಾಳೆ ಬೆಳಿಗ್ಗೆ ನೀನು ಕಾರು ತೆಗೆದುಕೊಂಡು ಹೊಸನಗರ ತಾಲ್ಲೂಕಿಗೆ ಹೋಗು. ಅಲ್ಲಿ ಯಾವುದೋ ಊರಿನಲ್ಲಿ ಗೋಪಾಲಗೌಡರು ಕ್ಯಾಂಪ್ ಮಾಡಿ ಚುನಾವಣಾ ಕಾರ್ಯದಲ್ಲಿ ತೊಡಗಿದ್ದಾರೆ. ಅವರನ್ನು ಹುಡುಕಿ ಕರೆದುಕೊಂಡು ನಮ್ಮ ಬಸವಾಪಟ್ಟಣ ಕ್ಷೇತ್ರದಲ್ಲಿ ಸುತ್ತಾಡಿಸಿ, ಸಾಧ್ಯವಾದ ಕಡೆಗೆ ಭಾಷಣವನ್ನು ಏರ್ಪಡಿಸಿ, ಪುನಃ ಅವರನ್ನು ಬಿಟ್ಟು ಬಾ" ಎಂದು ಹೇಳಿದರು.

ನಾನು ಅದೇ ರೀತಿ ಮರುದಿನ ನಮ್ಮ ಕಾರನ್ನು ತೆಗೆದುಕೊಂಡು ಸೀದಾ ಆಯನೂರಿಗೆ ಹೋದೆನು. ಗೋಪಾಲಗೌಡರು ಅಲ್ಲೇ ಇರಬಹುದೆಂಬ ಊಹೆ ಸತ್ಯವಾಯಿತು. ನಾನು ಹೋದಾಗ ರಾತ್ರಿ ಸುಮಾರು ೮.೩೦ ಗಂಟೆಯಾಗಿತ್ತು. ಬೆಳಿಗ್ಗೆ ನಾನು ವಿಚಾರಿಸಿದಾಗ, ಗೋಪಾಲಗೌಡರು ಒಬ್ಬ ರೈತನ ಮನೆಯಲ್ಲಿ ತಂಗಿದ್ದರು ಎಂದು ಗೊತ್ತಾಯಿತು. ನಾನು ಆ ಮನೆಗೆ ಹೋದೆ. ಅವರು ತಾವು ಮಲಗಿದ್ದ ಹಾಸಿಗೆ ಕಟ್ಟೆ ಮೇಲೆ ಸುತ್ತಿಟ್ಟು, ಬೆಳಗಿನ ನಿತ್ಯಕರ್ಮಗಳನ್ನು ತೀರಿಸಲು ಗದ್ದೆಯ ಕಡೆ ಹೋಗಿದ್ದರು. ಅಂದರೆ ಆ ಮನೆಯಲ್ಲಿ ಯಾವ ನಾಗರೀಕ ಸೌಲಭ್ಯಗಳೂ ಇರಲಿಲ್ಲ. ಅಂತಹ ಬಡ ರೈತನ ಮನೆಯಲ್ಲಿ ಗೋಪಾಲಗೌಡರು ಮಲಗಿದ್ದರು. ನಾನು ಅವರ ವಿಷಯವನ್ನು ಕೇಳಿದ್ದೆನೇ ವಿನಃ ಭೇಟಿ ಆಗಿರಲಿಲ್ಲ. ೧೯೫೩ರಿಂದ ಮುಂಬಯಿನಲ್ಲಿ ವಿದ್ಯಾರ್ಥಿಯಾಗಿ, ಎಂ.ಎ., ಎಲ್.ಎಲ್.ಬಿ. ಶಿಕ್ಷಣವನ್ನು ಪಡೆದು ಕೆಲಸಕ್ಕೆ ಸೇರಿದ್ದ ನಾನು ಎಷ್ಟು ಸಾಮಾನ್ಯರಂತೆ ನಡೆದುಕೊಳ್ಳುತ್ತಿದ್ದಾರೆ, ಗೋಪಾಲಗೌಡರು ಅಂದುಕೊಂಡೆ. ಈಗಿನ ನಾಯಕರುಗಳ ಚುನಾವಣಾ ವೈಖರಿ ಬಗ್ಗೆ ಹೇಳುವ ಅವಶ್ಯಕತೆ ಇಲ್ಲ.

ನಂತರ ಗೋಪಾಲಗೌಡರು ಬಂದರು. ನಾನು ನಮಸ್ಕಾರ ಮಾಡಿ, ನನ್ನ ಪರಿಚಯವನ್ನು ಮಾಡಿಕೊಂಡೆ. ಅವರು ಬಹಳ ಸಂತೋಷದಿಂದ "ಓಹೋ ಮುಂಬಯಿನ ಪಟೇಲರು ನೀವಾ" ಎಂದು ಹಾಸ್ಯ ಮಾಡಿದರು. "ನಾನು ತಮ್ಮನ್ನ ಬಸವಾಪಟ್ಟಣ ಚುನಾವಣಾ ಪ್ರಚಾರಕ್ಕೆ ಕರೆದುಕೊಂಡು ಹೋಗಲು ಬಂದಿದ್ದೇನೆ. ಅಣ್ಣನವರು ಹುಷಾರಿರಲಿಲ್ಲದ್ದರಿಂದ ನನ್ನನ್ನು ಕಳುಹಿಸಿ ಕೊಟ್ಟಿದ್ದಾರೆ" ಎಂದು ಹೇಳಿದೆ. ಸ್ವಲ್ಪ ಹೊತ್ತು ಸುಮ್ಮನಿದ್ದು, ತಮ್ಮದೇ ಆದ ವಿಶಿಷ್ಟವಾದ ರೀತಿಯಲ್ಲಿ ಗೌಡರು "ನಿಮ್ಮ ಅಣ್ಣನವರಿಗೆ ತಿಳಿಸಿ, ನಾನು ಪಟೇಲರ ಚುನಾವಣೆಗೆ ಪ್ರಚಾರ ಮಾಡುವ ಅವಶ್ಯಕತೆ ಇಲ್ಲ, ಅವರು ಗೆದ್ದೇ ಗೆಲ್ಲುತ್ತಾರೆ. ಈ ಮಲೆನಾಡ ಪ್ರದೇಶದಲ್ಲಿ ಬಡವರು ನಮ್ಮ ಪಕ್ಷದಿಂದ ಅಭ್ಯರ್ಥಿಗಳಾಗಿದ್ದಾರೆ, ಅವರ ಪರವಾಗಿ ನಾನು ಪ್ರಚಾರ ಮಾಡಬೇಕು" ಎಂದು ಹೇಳಿದರು.

ಅವರು ಬರುವುದಿಲ್ಲವೆಂದು ಹೇಳುವ ರೀತಿಯಲ್ಲಿ ಪಟೇಲರ ಮೇಲೆ ಅಭಿಮಾನವೂ ಇತ್ತು. ಅದಕ್ಕಿಂತ ಹೆಚ್ಚಾಗಿ ಅವರಿಗಿಂತ ಬಡವರಾಗಿದ್ದವರ ಮೇಲೆ ಅಭಿಮಾನ ಹೆಚ್ಚಾಗಿ ಇತ್ತು. ಇದು ನಿಜವಾದ ಸಮಾಜವಾದಿ ನಾಯಕನ ಲಕ್ಷಣ. ಅವರು ಬರುವುದಿಲ್ಲ ಎಂದು ಹೇಳಿದರು. ಅಲ್ಲಿ ಅವರು ಸಾಮಾನ್ಯರಂತೆ ಇದ್ದರು. ನಾನು ವಿಚಾರಿಸಿದಾಗ ಅವರು ಓಡಾಡುತ್ತಿದ್ದ ವಾಹನ ಬಹುಪಾಲು ಗ್ರಾಮಾಂತರ ಬಸ್. ಅದು ಇಲ್ಲದಿದ್ದರೆ, ಯಾವುದಾದರೂ ಮೋಟಾರ್ ಸೈಕಲ್ ಆಗಿತ್ತು. ಕೆಲವೊಮ್ಮೆ ಎತ್ತಿನ ಬಂಡಿಯಲ್ಲೂ ಓಡಾಡುತ್ತಿದ್ದರು. ಅವರ ವರ್ತನೆಯನ್ನು ನಾನು ಎಂದೂ ಮರೆಯುವುದಕ್ಕೆ ಸಾಧ್ಯವಿಲ್ಲ. ನಾನು ಹಾಗೇ ವಾಪಸ್ಸು ಬಂದೆ. ಚುನಾವಣೆ ತನಕವೂ ಇರಲಿಲ್ಲ, ನಾನು ಮುಂಬಯಿಗೆ ವಾಪಸ್ಸು ಹೋದೆ. ಅಣ್ಣ ಪಟೇಲರು ಗೆದ್ದರೆಂಬ ಸುದ್ದಿ ಬಂತು. ಅದೇ ಅಣ್ಣನವರ ಚುನಾವಣಾ ರಾಜಕೀಯಕ್ಕೆ ನಾಂದಿಯಾಯಿತು. ಮುಂದೆ ಅವರು ಮುಖ್ಯಮಂತ್ರಿಯಾಗುವವರೆಗೂ ಅದು ಬೆಳೆಯಿತು ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

**-ಎಸ್.ಎಚ್. ಪಟೇಲ್**

# ಗೋಪಾಲಗೌಡರ ಗುಡುಗು... ಮಿಣಕಮ್ಮನ ಮಿಡುಕು...

–ಕಡಿದಾಳು ಶಾಮಣ್ಣ




**ಆ**ಗ ಶಾಂತವೇರಿ ಗೋಪಾಲಗೌಡರು ತೀರ್ಥಹಳ್ಳಿ ಕ್ಷೇತ್ರದ ಶಾಸಕರು. ಸಮಾಜವಾದಿ ಪಕ್ಷದ ಕಛೇರಿ ಆರಗಕ್ಕೆ ತಿರುಗುವ ರಸ್ತೆಯಲ್ಲಿ ಕಟ್ಟಡವೊಂದರ ಮಹಡಿ ಮೇಲಿತ್ತು. ಸಾಮಾನ್ಯವಾಗಿ ಶಾಂತವೇರಿಯವರು ತೀರ್ಥಹಳ್ಳಿಯಲ್ಲಿದ್ದಾಗ ಹೆಚ್ಚು ಸಮಯವನ್ನು ಪಕ್ಷದ ಕಛೇರಿಯಲ್ಲಿ ಕಳೆಯುತ್ತಿದ್ದರು. ಅವರು ಪಕ್ಷದ ಕಛೇರಿಯಲ್ಲಿದ್ದಾರೆ ಎಂದರೆ ಗ್ರಾಮಸ್ಥರು ಮತ್ತು ಪಟ್ಟಣದವರೂ ಸಹ ಶಾಂತವೇರಿಯವರಲ್ಲಿ ತಮ್ಮ ಕುಂದು ಕೊರತೆಗಳನ್ನು ಹೇಳಿಕೊಳ್ಳಲು ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷದ ಕಛೇರಿಯಲ್ಲಿ ಬಂದು ಸೇರುತ್ತಿದ್ದರು. ಸಂತೆಯ ದಿನವಾದರಂತೂ ತುಂಬಾ ಜನ ಸೇರುವುದೊಂದು ವಿಶೇಷವಾಗಿತ್ತು.

ಹೀಗೇ, ತೀರ್ಥಹಳ್ಳಿಯ ಸಂತೆಯ ದಿನದಂದು ಕಛೇರಿಯಲ್ಲಿ ತುಂಬಾ ಜನ ಸೇರಿದ್ದರು. ಆಗ ಮಳೆಗಾಲವೆಂದು ಕಾಣುತ್ತದೆ. ತುಂಬಾ ಹೊತ್ತು ಪ್ರವಾಹ ಸಂತ್ರಸ್ತ ಜನರ ಸಮಸ್ಯೆಗಳನ್ನು ಶಾಂತವೇರಿಯವರು ಸಹನೆಯಿಂದ ಆಲಿಸುತ್ತಿದ್ದಂತೆ ಅವರಿಗೆ ಏಕೋ ಸಿಟ್ಟೇರಿತು. ಅವರ ಮುಖ ಕೆಂಪಗಾಯಿತು. ಅವರು ಇದ್ದಕ್ಕಿದ್ದಂತೆ 'ನೋಡ್ರಯ್ಯಾ, ನೀವೆಲ್ಲಾ ಅಹವಾಲು ಹೇಳುತ್ತಾ ಇಲ್ಲಿ ಪಕ್ಷದ ಕಛೇರಿಯಲ್ಲಿ ಕುಳಿತು ಜಮಖಾನ ಸವೆಸಿದರೆ ಕೆಲಸ ಆಗೋದಿಲ್ಲ. ನಿಮಗೆ ಕೆಲಸ ಆಗಿಲ್ಲವೆಂದು ಸಿಟ್ಟು ಬಂದಿದ್ದೇ ಹೌದಾದರೆ ನಮ್ಮ ಪಕ್ಷದ ಬಾವುಟ ಹಿಡಿದು ನಿಮ್ಮ ಬೇಡಿಕೆಗಳನ್ನು ಗಟ್ಟಿಯಾಗಿ ಕೂಗುತ್ತಾ ಸುತ್ತಮುತ್ತ ಇದ್ದವರನ್ನೂ ಸೇರಿಸಿಕೊಂಡು ದೊಡ್ಡ ಮೆರವಣಿಗೆಯಲ್ಲಿ ತಹಸೀಲ್ದಾರ್ ಕಛೇರಿಗೆ ಹೋಗಿ ಮನವಿ ಪತ್ರ ಕೊಟ್ಟು, ನಮ್ಮ ಕೆಲಸಗಳನ್ನು ಏಕೆ ಮಾಡಿಕೊಡಲಿಲ್ಲ? ಎಂದು ದಬಾಯಿಸೋಣ. ಮಿಜಿಮಿಜಿ ಎಂದು ಹರಟೆ ಹೊಡೆದುಕೊಂಡು ಕಾಲಹರಣ ಮಾಡಿ ಉಪಯೋಗವಿಲ್ಲ.' ಎನ್ನುತ್ತಾ 'ನಿಮಗೆಲ್ಲ ಸ್ವಲ್ಪ ಸಿಟ್ಟು ಬರಬೇಕು. ಇಲ್ಲದಿದ್ರೆ ವ್ಯವಸ್ಥೆ ಸರಿ ಮಾಡಕ್ಕಾಗಲ್ಲ' ಎಂದು ಗುಡುಗಿದರು..

ಗೌಡರ ಮಾತು ಕೇಳಿದೊಡನೆ ಒಂದಷ್ಟು ಜನ ಗುಜು ಗುಜು ಮಾತಾಡಿಕೊಂಡು ತಹಸೀಲ್ದಾರ್ ಕಛೇರಿಗೆ ಹೋಗಿ ಅಧಿಕಾರಿಗಳಿದ್ದಾರೆಂದು ಖಚಿತ ಪಡಿಸಿಕೊಂಡು ಬಂದರು. ಸರಿ, ಮರುಕ್ಷಣವೇ ಗೋಪಾಲಗೌಡರು ಮತ್ತು ಪಕ್ಷದ ಕಾರ್ಯದರ್ಶಿಗಳಾಗಿದ್ದ ಕೋಣಂದೂರು ಲಿಂಗಪ್ಪನವರು ಜನರ ಜೊತೆ ಕೆಳಗಿಳಿದು ಬಂದರು. ಗುಂಪು ಮೆರವಣಿಗೆ ಹೊರಟಿತು. ಎಂದಿನಂತೆ ಮೂಡುವಳ್ಳಿ ಮಹಾಬಲ ಹೆಗಡೆ ಜನರನ್ನು ಕೂಡಿಸಿ ಕೆಂಪು ಟೋಪಿಯೊಡನೆ ಬಾವುಟ ಹಿಡಿದು ಜೈಕಾರ ಕೂಗುತ್ತಾ ಮೆರವಣಿಗೆ ಹೊರಟರು. ಅಕ್ಕ ಪಕ್ಕದ ಅಂಗಡಿಯವರೆಲ್ಲ ಏನಿದೆಂದು ರಸ್ತೆಗೆ ಬಂದು ಕುತೂಹಲದಿಂದ ನೋಡತೊಡಗಿದರು. ನಾವು ಸಾವಿರ ಜನರಿರುವ ಉತ್ಸಾಹದಲ್ಲಿ ಜೈಕಾರ ಕೂಗುತ್ತಾ ಹೊರಟೆವು


ತಹಸೀಲ್ದಾರ್ ಕಛೇರಿಗೆ ಮೊದಲು ಭಗತರು ಎನ್ನುವವರ ಅಂಗಡಿಯಿತ್ತು. ತುಂಬಾ ಹಳೆ ದಿನಸಿ ಅಂಗಡಿ. ನಮ್ಮ ಕಡಿದಾಳು ಕುಟುಂಬದವರೂ ಅವರಲ್ಲೇ ವಹಿವಾಟು ನಡೆಸುತ್ತಿದ್ದೆವಾದ್ದರಿಂದ ಅವರು ಮೆರವಣಿಗೆಯಲ್ಲಿದ್ದ ನನ್ನನ್ನು ಗುರುತಿಸಿ ಕರೆದರು. ಮೆಲ್ಲಗೆ, ಬೇಸರದಿಂದ 'ಏನಿದು? ಶಾಂತವೇರಿಯವರ ಮುಂದಾಳತ್ವದಲ್ಲಿ ಹಿಡಿಯಷ್ಟು ಜನ ತಾಲ್ಲೂಕು ಆಫೀಸಿಗೆ ಮೆರವಣಿಗೆ ಹೋದರೆ, ಅದಕ್ಕೊಂದು ಮರ್‍ಯಾದೆ ಬೇಡವಾ ಮಾರಾಯ! ಯಾಕೆ ಹೀಗಾಯಿತು?' ಎಂದು ಕೇಳಿದರು.



ನಾವು ಆವರೆಗೆ ಮೆರವಣಿಗೆಯನ್ನು ಹಿಂದಕ್ಕೆ ತಿರುಗಿಯೇ ನೋಡಿರಲಿಲ್ಲ. ಮೆರವಣಿಗೆ ಪಕ್ಷದ ಕಛೇರಿಯಿಂದ ಮುಂದೆ ಸಾಗಿದಂತೆ ಜನ ಸಂತೆಯಲ್ಲಿನ ತಮ್ಮ ವ್ಯವಹಾರಗಳಿಗಾಗಿಯೋ ಅಥವಾ ತಂತಮ್ಮ ದೈನಂದಿನ ಕೆಲಸ-ಕಾರ್ಯಗಳಿಗಾಗಿಯೋ ಅಲ್ಲಲ್ಲೇ ಉದುರಿ ಹೋಗಿದ್ದರು. ನಾನು ಗಾಬರಿಯಾಗಿ ಮುಜುಗರದಿಂದ ಮೆಲ್ಲಗೆ ಗೌಡರ ಬಳಿ ಹೋಗಿ 'ಯಾಕೋ ಜನ ಬರ್‍ತಿಲ್ಲ ಸಾರ್. ಸಂತೆ ಬೇರೆ' ಎಂದೆ. ಗೌಡರು ಈಗ ಸಿಟ್ಟಾಗುವರೆಂದು ನಾನು ಕಾಯುತ್ತಿದ್ದರೆ, ಅವರು ನನ್ನ ನಿರೀಕ್ಷೆಗೆ ವಿರುದ್ಧವಾಗಿ, ಚೂರೂ ಬೇಸರ ತೋರಿಸದೆ ನನ್ನನ್ನೇ ಸಮಾಧಾನಪಡಿಸುವವರಂತೆ ನಿರ್ಲಿಪ್ತವಾಗಿ 'ಜನ ಯಾವಾಗಲೂ ಹಾಗೇ. ಆದರೆ ಅಂಗಡಿ ಕಟ್ಟೆಯಲ್ಲಿ ಕೂತುಕೊಂಡು ಈ ಕಡೆ ಇಣುಕುತ್ತಿದ್ದಾರಲ್ಲ ಅವರೆಲ್ಲ ಯಾರೆಂದು ತಿಳಿದಿದ್ದೀಯಾ? ಎಲ್ಲ ನಮ್ಮವರೇ ಎಂದು ತಿಳಿದುಕೊಂಡು ನಾವು ಮುಂದೆ ಸಾಗಿ ತಹಸೀಲ್ದಾರ್‌ರಿಗೆ ನಮ್ಮ ಮನವಿ ಪತ್ರ ಕೊಟ್ಟು ಎಂಡಾರ್ಸ್‌ಮೆಂಟ್ ಪಡೆದರಾಯಿತು. ಪರಿಹಾರದ ಹಣ ಸರ್ಕಾರದಿಂದ ಬಂದ ನಂತರ ನೋಡು, ದಾರಿಯಲ್ಲಿ ಉದುರಿ ಹೋದ ಜನವೇ ಇಲ್ಲಿಗೆ ನಿಮಗಿಂತ ಮುಂಚೆ ಬಂದು ತಮ್ಮ ಪರಿಹಾರವನ್ನು ಪಡೆದಿರುತ್ತಾರೆ. ಅಂಗಡಿ ಮುಂಗಟ್ಟುಗಳ ಬಳಿ ನಿಂತು ಕಣ್ಣಗಲಿಸಿ ನಮ್ಮನ್ನು ಇಣುಕಿ ನೋಡುತ್ತಿದ್ದಾರಲ್ಲಾ, ಅವರೆಲ್ಲ ನಮ್ಮ ಮೆರವಣಿಗೆಯಲ್ಲಿ ಇದ್ದಾರೆಂದು ತಿಳಿದೇ ನಾವು ಮುಂದೆ ಸಾಗಬೇಕು. ಹಿಂದಿರುಗಿ ನೋಡಬಾರದು' ಎಂದರು. 'ಕಷ್ಟದಲ್ಲಿರುವವರಿಗೆ ಪರಿಹಾರ ಸಿಕ್ಕುವುದಷ್ಟೇ ಮುಖ್ಯ' ಎಂದು ಸೇರಿಸಿದರು. ಅವರು ಅಲ್ಲಿದ್ದ ಒಂದಿಪ್ಪತ್ತೈದು ಜನರೊಡನೆ ನಮ್ಮಿಂದ ಜೈಕಾರ ಹಾಕಿಸುತ್ತಾ ಯಾವ ಬೇಸರವೂ ಇಲ್ಲದೇ ಮೆರವಣಿಗೆಯಲ್ಲಿ ಮುಂದುವರೆದು ತಹಸೀಲ್ದಾರ್‌ರವರನ್ನು ಕಂಡು ಇಡೀ ತಾಲ್ಲೂಕಿನ ಪ್ರವಾಹ ಸಂತ್ರಸ್ತರಿಗೆ ಪರಿಹಾರ ಮಂಜೂರು ಮಾಡಿಸಿದರು.

ಆದರೆ ನನಗೆ ಈ ಸಂದರ್ಭ ನೆನಪಿರುವುದು ಈ ಎಲ್ಲ ವಿವರಗಳ ಕಾರಣದಿಂದಲ್ಲ. ಬದಲಿಗೆ, ಸಮಾಜವಾದಿ ಪಕ್ಷದ ಎಲ್ಲ ಮೆರವಣಿಗೆಗಳಲ್ಲೂ ಪಾಲ್ಗೊಳ್ಳುತ್ತಿದ್ದ ಮಿಣಕಮ್ಮ ಎಂಬ ಕೂಲಿಕಾರ ಹೆಣ್ಣುಮಗಳಿಂದಾಗಿ. ಕಾಗೋಡು ಸತ್ಯಾಗ್ರಹದಲ್ಲೂ ಭಾಗವಹಿಸಿ ಲೋಹಿಯಾ ಅವರ ಗಮನವನ್ನು ಸೆಳೆದಿದ್ದ ಈ ಹೆಣ್ಣು ಮಗಳು ಸದರಿ ಮೆರವಣಿಗೆಯಲ್ಲೂ ಭಾಗವಹಿಸಿದ್ದರು. ಆಕೆ ತಹಸೀಲ್ದಾರ್ ಕಛೇರಿಯ ಬಳಿ ಹಣೆ ಮೇಲೆ ಕೈ ಇಟ್ಟು ಮೆರವಣಿಗೆಯನ್ನು ನೋಡುತ್ತಾ ಅದರಲ್ಲಿ ಇಪ್ಪತ್ತೈದೇ ಜನರಿದ್ದುದನ್ನು ಕಂಡು ಸಂಕಟಪಟ್ಟು 'ಈ ಜನ ಮೆರವಣಿಗೆಯಲ್ಲಿ ಸೇರದೆ ಅಂಗಡಿ ಕಟ್ಟೆಯಲ್ಲಿ ನಿಂತುಕೊಂಡು ಬರೀ ಇಣುಕಿ ನೋಡುತ್ತಾ ಗೌಡರಿಗೆ ಮೋಸ, ಅವಮಾನ ಮಾಡವರಲ್ಲಾ! ಇವರಿಗೆ ಒಳ್ಳೆದಾಗದಿಲ್ಲ' ಎಂದು ಉದ್ಗರಿಸುತ್ತಿದ್ದಾಗ ನಾನು ನನ್ನ ಕ್ಯಾಮೆರಾ ಕ್ಲಿಕ್ಕಿಸಿದೆ. ಆ ಚಿತ್ರವೇ ಈ ಲೇಖನದ ಜೊತೆಗಿರುವುದು. ಈ ಚಿತ್ರಕ್ಕೆ ಶಿವಮೊಗ್ಗ ಭಗವಾನ್ ನಡೆಸುವ ಛಾಯಾಚಿತ್ರ ಸ್ಪರ್ಧೆಯಲ್ಲಿ ಬಹುಮಾನ ಕೂಡ ಬಂದಿತ್ತು. *

# ಒಂದು ಸಮಾಜವಾದಿ ದಾಖಲೆ



ಸೋಷಲಿಸ್ಟ್ ಪಾರ್ಟಿ,

ಸೊರಬ ಶಾಖೆ, ಸೊರಬ. (ಜಿ|| ಶಿವಮೊಗ್ಗ)

## ಮಂಗಾಪುರ ಚಲೋ.

ಗೆಳೆಯರೇ,

ಹಗಲಿರುಳು ಭೂಮಿಯಲ್ಲಿ ಬೆವರು ಸುರಿಸಿ ಹಲವಾರು ವರ್ಷಗಳಿಂದ ದುಡಿದು ಭೂ ಮಾಲೀಕನ ಕಣಜ ತುಂಬಿ, ಅವನಿಂದಲೇ ತನಗರಿವಿಲ್ಲದಂತೆ ವಂಚನೆಗೊಳಗಾಗಿ ತಾನೇ ಉಳುವ ಭೂಮಿಯ ಉಳುಮೆ ಹಕ್ಕನ್ನು ಕಳೆದುಕೊಂಡು ನಿಸ್ಸಹಾಯಕನಾದ ರೈತ ಒಂದೆಡೆ. ರೈತನ ಶೋಷಣೆ ಮಾಡಿ ಗ್ರಾಮಾಧಿಕಾರಿಗಳು ರಕ್ಷಣಾಧಿಕಾರಿಗಳ ವ್ಯವಸ್ಥಿತ ಸಂಚಿನಿಂದ ರೈತನ ಉಳಿಮೆ ಹಕ್ಕನ್ನು ಕಸಿದುಕೊಂಡು ಹಾಯಾಗಿರುವ ಭೂ ಮಾಲಿಕ ಒಂದೆಡೆ.

ಸೊರಬ ತಾಲ್ಲೂಕಿನಲ್ಲಿ ವಂಚನೆಗೆ ಒಳಗಾಗಿ ಉಳುಮೆ ಹಕ್ಕು ಕಳೆದುಕೊಳ್ಳಲಿರುವ ರೈತರ ಹಲವು ಹತ್ತು ಪ್ರಕರಣಗಳಲ್ಲಿ ಜಡೆ ಹೋಬಳಿ ಮಂಗಾಪುರ ಗ್ರಾಮ ಒಂದು.

ಇದೂ ಸಾಲದೇ ಸುಮಾರು 40 ಎಕರೆ ಸರ್ಕಾರಿ ಭೂಮಿಯನ್ನು ಸಾಗು ಮಾಡುತ್ತಿದ್ದ ಭೂಹೀನ ರೈತರನ್ನು ಆ ಭೂಮಿಯಿಂದ ಹೊರದೂಡಿ ಅದನ್ನೂ ಕಬಳಿಸುವ ದುಸ್ಸಾಹಸ ಬೇರೆ. ಭ್ರಷ್ಟ ರಕ್ಷಣಾಧಿಕಾರಿಗಳ ಶಾಮೀಲಿನೊಂದಿಗೆ ನೊಂದ ಬೆಂದ ಈ ರೈತರಿಗೆ ಅಮಾನುಷ ಕಿರುಕುಳ ಬೇರೆ.

ಇಂತಹ ಹಲವಾರು ಪ್ರಕರಣಗಳು ತಾಲ್ಲೂಕಿನಲ್ಲಿ ನಡೆಯುತ್ತಿದ್ದು ಇದನ್ನು ಪ್ರತಿಭಟಿಸಲು ಸೋಷಲಿಸ್ಟ್ ಪಾರ್ಟಿಯು ದಿನಾಂಕ 3—8—1972 ನೇ ಗುರುವಾರ **ಮಂಗಾಪುರ** ಗ್ರಾಮದಲ್ಲಿ ಸತ್ಯಾಗ್ರಹ ನಡೆಸುವುದು.

ಈ ಸತ್ಯಾಗ್ರಹದ ನೇತೃತ್ವವನ್ನು

ಸೋಷಲಿಸ್ಟ್ ಪಾರ್ಟಿಯ ಹಿರಿಯ ನಾಯಕರೂ ಸೊರಬ ತಾಲ್ಲೂಕ್ ಬೋರ್ಡ್ ಅಧ್ಯಕ್ಷರೂ ಆದ

**ಗೆಳೆಯ ಕುಪಗಡ್ಡೆ ಮರಿಯಪ್ಪ ಇವರೂ**

ಮಾಜೀ ಸಂಸತ್ ಸದಸ್ಯ ಗೆಳೆಯ ಜೆ. ಹೆಚ್. ಪಟೇಲ್

ಮುಂತಾದವರು ಈ ಸತ್ಯಾಗ್ರಹದಲ್ಲಿ ಭಾಗವಹಿಸುವರು.

ಈ ಗೇಣಿ ರೈತರ ಹೋರಾಟದಲ್ಲಿ ಸಹಸ್ರ ಸಂಖ್ಯೆಯಲ್ಲಿ ರೈತರು ಭಾಗವಹಿಸಬೇಕೆಂದು ಕೋರುತ್ತೇವೆ.

**ಕಾರ್ಯಕ್ರಮ: ಬಹಿರಂಗ ಸಭೆ 12 ಘಂಟೆಗೆ.**

**ಸತ್ಯಾಗ್ರಹ: ಮಧ್ಯಾಹ್ನ 1 ಘಂಟೆಗೆ.**

ಸೋಷಲಿಸ್ಟ್ ಪಾರ್ಟಿ ಜಿಂದಾಬಾದ್.
ಇಂಕ್ವಿಲಾಬ್ ಜಿಂದಾಬಾದ್.
ಡಾ|| ಲೋಹಿಯಾ ಅಮರರಹೇ.

ಕಾರ್ಯದರ್ಶಿ,
ಸೋಷಲಿಸ್ಟ್ ಪಾರ್ಟಿ, ಸೊರಬ ಶಾಖೆ.

[ಶ್ರೀ ರಂಗನಾಥ ಮುದ್ರಣಾಲಯ, ಸೊರಬ.]

(ಕೃಪೆ: **ರಾಮಮನೋಹರ,** ಕೆಳದಿ)

# ಅಧಿಕಾರ ರಾಜಕಾರಣದ ಹುದಲಲ್ಲಿ ಕಳೆದುಹೋದ ಸಮಾಜವಾದ

**ನಾ**ನು ಪ್ರೌಢಶಾಲೆಯಲ್ಲಿ ಓದುತ್ತಿರುವಾಗ ಕೆ. ಕೃಷ್ಣಗೋಪಾಲ್ ಎಂಬ ಸಮಾಜವಾದಿಯೊಬ್ಬರು ರಾಮನಗರದಲ್ಲಿದ್ದರು. ಅವರು ಆಲದ ಮರದ ಚಿಹ್ನೆಯಡಿಯಲ್ಲಿ ಪುರಸಭೆಯ ಚುನಾವಣೆಗೆ ಸ್ಪರ್ಧಿಸಿ ಸೋಲುತ್ತಿದ್ದರು. ಅವರ ಮಾತು, ಅವರ ಅನ್ಯಾಯದ ವಿರುದ್ಧದ ಏಕಾಂಗಿ ಹೋರಾಟ, ಅವರ ಸಿದ್ಧಾಂತಬದ್ಧ ಕರಪತ್ರಗಳು, ಬಡವರ ನೋವು-ಸಂಕಷ್ಟಗಳನ್ನು ಮತ್ತು ಶ್ರೀಮಂತರಿಂದ ಆಗುತ್ತಿರುವ ಶೋಷಣೆಯನ್ನು ಅಭಿವ್ಯಕ್ತಿಸುವ ಅವರ ಸಣ್ಣಕತೆಗಳು ನನ್ನನ್ನು ಸೆಳೆದವು. ಅವರು ಗೋಪಾಲಗೌಡ ಶಾಂತವೇರಿಯವರ ಶಿಷ್ಯರಾಗಿದ್ದರು. ಅವರ ಹೋರಾಟದ ವಿಶಿಷ್ಟತೆಯು ನನ್ನಲ್ಲಿ ಸಮಾಜವಾದಿ ಚಿಂತನೆ ಮೊಳಕೆಯೊಡೆಯಲು ಕಾರಣವಾಯಿತು. ಇದೇ ತಳವರ್ಗದ ಬಗೆಗಿನ ತಿಳುವಳಿಕೆ ಮತ್ತು ಜಾಗೃತಿಯ ಪರಿಣಾಮವಾಗಿ ಪ್ರಗತಿಶೀಲರ ಸಾಹಿತ್ಯ, ನಂತರದ ದಿನಗಳಲ್ಲಿ ಕುವೆಂಪು ಅವರ ಪದ್ಯಗಳು, ಮತ್ತೂ ಮುಖ್ಯವಾಗಿ ಅವರ ವೈಚಾರಿಕ ಲೇಖನಗಳು ನನ್ನಲ್ಲಿ ಸಮ ಸಮಾಜದ ಕಲ್ಪನೆಗಳು ಒಂದು ಸ್ಪಷ್ಟ ಸ್ವರೂಪ ಪಡೆಯಲು ಕಾರಣವಾದವು.

ಮುಂದೆ ಎಪ್ಪತ್ತರ ದಶಕದ ಆರಂಭದ ದಿನಗಳಲ್ಲಿ ಮೈಸೂರಿಗೆ ಬಂದೆ. ಆಗ ನನಗೆ ವಿಪುಲವಾದ ಪುಸ್ತಕಗಳ ರಾಶಿ ಓದಲು ದೊರೆಯಿತು. ಜೊತೆಗೆ ಪ್ರೊ. ಎಂ. ಡಿ. ನಂಜುಂಡಸ್ವಾಮಿ, ಪ. ಮಲ್ಲೇಶ, ಬಿ. ಎನ್. ಶ್ರೀರಾಮ, ಕೆ. ರಾಮದಾಸ್, ಟಿ. ಎನ್ ನಾಗರಾಜ, ಎನ್. ಈಶ್ವರ, ವೈ. ಮಹೇಶ ಮುಂತಾದವರ ಹತ್ತಿರದ ಒಡನಾಟ. ಪ್ರೊಫೆಸರ್ ಅವರಿಂದ ಲೋಹಿಯಾ ಪಾಠ, ನಮ್ಮ ಹೋರಾಟ ಮತ್ತು ಸಂಘಟಿಸುತ್ತಿದ್ದ ಪ್ರತಿಭಟನೆಗಳಿಗೆ ಒಂದು ಸೈದ್ಧಾಂತಿಕ ಸ್ವರೂಪದ ಶಿಸ್ತು ಬರುವಂತೆ ಮಾಡುತ್ತಿದ್ದ ಗೆಳೆಯರ ಆಶಯಗಳು. ವ್ಯಕ್ತಿ ಸ್ವಾತಂತ್ರ್ಯ-ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಅಷ್ಟೂ ಗೆಳೆಯರು ಲೋಹಿಯಾವಾದದ ಅಡಿಯಲ್ಲಿ ಭಿನ್ನ ಭಿನ್ನ ವಾದ ಮಂಡಿಸುತ್ತಿದ್ದ ಪರಿ; ಅಭಿಪ್ರಾಯ ಭೇದದಿಂದ ಮುನಿಸಿಕೊಂಡರೂ ಸಮ ಸಮಾಜದ ಕನಸಿನ ಆಶಯಕ್ಕಾಗಿ ಎಂದೂ ವಿಘಟಿತವಾಗದ ಚಳವಳಿಗಳು ಇಂದಿಗೂ ನನ್ನ ಬದುಕಿನ ಗಟ್ಟಿ ಇಟ್ಟಿಗೆಗಳಾಗಿವೆ.

ಈ ಹೋರಾಟದ ಕನಸಿನ ದಿನಗಳಲ್ಲಿ ಮೂಡಿಗೆರೆಯಿಂದ ಆಗಿಂದಾಗ್ಗೆ ಪ್ರತ್ಯಕ್ಷವಾಗುತ್ತಿದ್ದ ತೇಜಸ್ವಿ; ಬೆಂಗಳೂರಿನಿಂದ ಆಗ ಈಗ ಬಂದು ತಮ್ಮ ವಿಕಲ್ಪಕತೆಯಿಂದ ವಿಚಿತ್ರವಾಗಿ ತೋರುತ್ತಿದ್ದ ಲಂಕೇಶ; ಧಾರವಾಡದಿಂದ ಬಂದು ತಮ್ಮ ವ್ಯಂಗ್ಯಮಿಶ್ರಿತ ಹಾಸ್ಯ ಮಾತು, ಕವನಗಳಿಂದ ನಮ್ಮನ್ನು ಸೆಳೆಯುತ್ತಿದ್ದ ಚಂಪಾ- ಇವರೆಲ್ಲರೂ ನಮ್ಮ ಹರೆಯದ ಮರೆಯಲಾರದ ವ್ಯಕ್ತಿಗಳು. ಈ ಸಂದರ್ಭದಲ್ಲೇ ಸಮತಾ ಸಂಘಟನೆ, ಬರಹಗಾರ-ಕಲಾವಿದರ ಒಕ್ಕೂಟಗಳು ಸಾಂಸ್ಕೃತಿಕ-ರಾಜಕೀಯ ಜಾಗೃತಿಯ ಜನಮನದಲ್ಲಿ ಗರಿಗೆದರಲು ಕಾರಣೀಭೂತವಾದವು. ಇದರ ಅರಿವಿನಿಂದಲೇ ನಮ್ಮ ಮುಖ್ಯ ಸಂಘಟನೆಯಾದ ದಲಿತ ಸಂಘರ್ಷ ಸಮಿತಿಯ ಜನನ. ಅದಕ್ಕೆ ಆರಂಭದಲ್ಲಿ ಲೋಹಿಯಾವಾದದ ಸ್ಪರ್ಶ. ಈ ಸಿದ್ಧಾಂತ ತಂದುಕೊಟ್ಟ ಅರಿವೇ ನಮ್ಮ ದಲಿತ ಹೋರಾಟಗಾರರಲ್ಲಿ ಡಾ॥ ಅಂಬೇಡ್ಕರ್‌ರವರು ಸಾಂಸ್ಕೃತಿಕ-ರಾಜಕೀಯ ಕಾರಣಗಳಿಂದ ಎಷ್ಟು ಮುಖ್ಯ ನೇತಾರ ಮತ್ತು ತಳ ಸಮಾಜದ ಕಣ್ಬೆಳಕಾಗಿ ನಿಲ್ಲಬಲ್ಲರು ಎಂಬ ಅರಿವು ಮೂಡಿತು.

ಇದೇ ಸಂದರ್ಭದಲ್ಲಿ ಅಂದಿನ ಪ್ರಧಾನಿ ಇಂದಿರಾಗಾಂಧಿ ಅವರು ದೇಶದಲ್ಲಿ ಆಂತರಿಕ ತುರ್ತು ಪರಿಸ್ಥಿತಿಯನ್ನು ಘೋಷಣೆಮಾಡಿ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಿದರು. ನಮ್ಮ ಬಹುಪಾಲು ಸಮಾಜವಾದಿಗಳು ಚಳವಳಿಗೆ ಇಳಿದು ಪ್ರಭುತ್ವದ ವಿರುದ್ಧ ಸೆಟೆದು ಜೈಲಿಗೆ ಸೇರಿದರೆ, ಕೆಲವರು ಭೂಗತರಾಗಿ ಹೋರಾಡಿದರು. ಮತ್ತೆ ಕೆಲವರು ನಿಶ್ಶಬ್ದವಾಗಿ ಹೋರಾಟಗಾರರಿಗೆ ಸಹಾಯಕರಾಗಿ ಕೆಲಸ ಮಾಡಿದರು. ೧೯೭೭ರಲ್ಲಿ ತುರ್ತು ಪರಿಸ್ಥಿತಿ ತೆರವಾಗಿ, ಅನಂತರ ನಡೆದ ಲೋಕಸಭೆ ಚುನಾವಣೆಯಲ್ಲಿ ಭಾರತದಲ್ಲಿ ಮೊತ್ತ ಮೊದಲ ಬಾರಿ ಕಾಂಗ್ರೆಸ್ಸೇತರ ಸರ್ಕಾರ ಕೇಂದ್ರದಲ್ಲಿ ಬಂತು.

ಕರ್ನಾಟಕದಲ್ಲಿ ಎಂಭತ್ತರ ದಶಕದ ಪ್ರಾರಂಭದಲ್ಲಿ ಜನತಾಪಕ್ಷವು ಅಧಿಕಾರಕ್ಕೆ ಬಂತು. ೧೯೮೩ರ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಜಯಶಾಲಿಯಾಗಿ ಬಂದ ತರುಣನೇ ಈಗ ಮುಖ್ಯಮಂತ್ರಿಯಾಗಿರುವ ಸಿದ್ಧರಾಮಯ್ಯ. ಸಮಾಜವಾದಿ ಗೆಳೆಯ ವೈ. ಮಹೇಶನ ಆತ್ಮೀಯರಾಗಿದ್ದ ಸಿದ್ಧರಾಮಯ್ಯ, ಶಾಸಕರಾದ ನಂತರ ಸಮಾಜವಾದಿಗಳ ಸಂಪರ್ಕಕ್ಕೆ ಬಂದರು. ಅವರು ಶಾಸಕರಾಗುವ ಮುನ್ನ ಕೆಲವು ಕಾಲ ನನ್ನ ಸಹ ಉದ್ಯೋಗಿಯಾಗಿಯೂ ಆಗಿದ್ದರು. ಪ. ಮಲ್ಲೇಶ, ಕೆ. ರಾಮದಾಸ್ ಮತ್ತು ದೇವನೂರ ಮಹಾದೇವ ಅವರು ಆ ದಿನಗಳಲ್ಲಿ ನೀಡಿದ ಸಲಹೆ ಮತ್ತು ಮಾರ್ಗದರ್ಶನಗಳು ಅವರನ್ನು ಜನರ ಹತ್ತಿರಕ್ಕೆ ತಂದಿದ್ದವು.

೮೦ರ ದಶಕದ ಆ ದಿನಗಳು ಕರ್ನಾಟಕದ ಸಮಾಜವಾದಿಗಳಿಗೆ ನಿಜಕ್ಕೂ ಆತ್ಮ ವಿಮರ್ಶೆಯ ದಿನಗಳಾಗಿದ್ದವು. ಅವರ ಗೆಳೆಯರು ಅಧಿಕಾರಸ್ಥರಾಗಿದ್ದರು. ಅವರ ಮಾತು ರಾಜಕೀಯ ವಲಯದಲ್ಲಿ ಪ್ರಭಾವ ಬೀರುವ ಶಕ್ತಿಯನ್ನು ಪಡೆದಿತ್ತು. ಮೈಸೂರು, ಶಿವಮೊಗ್ಗ, ಬೆಂಗಳೂರು ಮತ್ತು ಧಾರವಾಡಗಳಲ್ಲಿ ತಮ್ಮ ರಾಜಕೀಯ 'ಗುರು'ಗಾರಿಕೆಯಿಂದಾಗಿ ಕೇಂದ್ರಗಳನ್ನು ಸ್ಥಾಪಿಸಿಕೊಂಡರು. ರಾಜಕೀಯ ಗುಂಪುಗಳ ಆಸ್ಥಾನ ಸಲಹೆಗಾರರಂತೆ, ಪಂಡಿತರಂತೆ, ರಾತ್ರಿ ಬೈಠಕ್ಕುಗಳನ್ನು ನೀಡಲಾರಂಭಿಸಿದರು. ಪ್ರಭುತ್ವದ ಅನ್ಯಾಯಗಳ ವಿರುದ್ಧ ಹೋರಾಡಬೇಕಿದ್ದ ಸಮಾಜವಾದಿಗಳು ಅಧಿಕಾರ ರಾಜಕಾರಣದ ಹುದಲಲ್ಲಿ ಕಳೆದುಹೋದರು.

ಇದೇ ಸಂದರ್ಭದಲ್ಲಿ ರಾಜಕಾರಣಿಯಾಗಿ ಬೆಳೆದ ಸಿದ್ಧರಾಮಯ್ಯ ಪ್ರಾರಂಭದ ವರ್ಷಗಳಲ್ಲಿ ನಿಜಕ್ಕೂ ಜನನಾಯಕನಂತೆ ಗೋಚರಿಸಿದ್ದರು. ಆಗ ಅವರು ಒಂದು ರೀತಿಯ ಸಮಗ್ರ ಜನತೆಯ ಪ್ರತಿನಿಧಿಯಂತೆ ಗೋಚರಿಸುತ್ತಿದ್ದರು. ಆದರೆ ಎರಡು-ಮೂರು ಚುನಾವಣೆಗಳ ನಂತರ ಬಹುಶಃ ಜಾತಿ ಕೇಂದ್ರಿತ ಶಕ್ತಿ ರಾಜಕಾರಣದ ಅರಿವು ಅವರಲ್ಲಿ ಪ್ರಬಲವಾಗತೊಡಗಿತು. ಅನಿವಾರ್ಯವಾಗಿ ಚುನಾವಣೆಯಲ್ಲಿ ಗೆದ್ದು, ಅಧಿಕಾರ ಹಿಡಿಯಲು ಅವರು ಜಾತಿಯೊಂದರ ನಾಯಕರಾಗಿ ಹೊರ ಹೊಮ್ಮಬೇಕಾಗಿತ್ತು. ಸಿದ್ಧರಾಮಯ್ಯ ಆ ನೆಲೆಯಲ್ಲಿ ಇಂದು ಗೆದ್ದಿದ್ದಾರೆ ಅಷ್ಟೆ. ಹಾಗಾಗಿ ಅವರಿಂದ ಸಮಾಜವಾದಿ ರಾಜಕಾರಣ ನಿರೀಕ್ಷಿಸಲಾಗದೇನೋ!

**-ಪ್ರೊ. ಶಿವರಾಮು ಕಾಡನಕುಪ್ಪೆ**



ಪ್ರಿಯ ಓದುಗರೇ,

ಈ ಸಂಚಿಕೆ ನಿಮಗೆ ಅಂಚೆಯಲ್ಲಿ ತಲುಪಿದಾಗ ಅದಕ್ಕೆ ಸುತ್ತಿರುವ ಕಾಗದದ ಮೇಲಿನ ನಿಮ್ಮ ವಿಳಾಸದ ಮೊದಲಲ್ಲಿರುವ ಸಂಖ್ಯೆಯೇ ನಿಮ್ಮ ಹೊಸ ಚಂದಾ ಸಂಖ್ಯೆ. ಚಂದಾ ಪಾವತಿ, ನವೀಕರಣ ಅಥವಾ ಪತ್ರಿಕೆ ತಲುಪದಿರುವ ಬಗೆಗಿನ ನಿಮ್ಮ ಯಾವುದೇ ಸಂದೇಶದಲ್ಲಿ ಈ ಚಂದಾ ಸಂಖ್ಯೆಯನ್ನು ನಮೂದಿಸಲು ಮರೆಯದೆ ದಯವಿಟ್ಟು ಸಹಕರಿಸಿ-ಸಂ.

# ಆ ದಿನ ಆದಷ್ಟು ಬೇಗ ಬರಲಿ!



**ಹಾ**ಸನದ ಸರ್ಕಾರಿ ಕಾಲೇಜಿನಲ್ಲಿ ಪದವಿ ವ್ಯಾಸಂಗ. ನಮ್ಮ ಗೆಳೆಯರದೊಂದು ದೊಡ್ಡ ಗುಂಪು. ಅನ್ಯಾಯ ಕಂಡಲ್ಲೆಲ್ಲ ಪ್ರತಿಭಟಿಸುವುದು ನಮ್ಮ ಮುಖ್ಯ ಕೆಲಸ.

೧೯೭೩-೭೪; ಜೆಪಿ ಚಳುವಳಿಯ ಗಾಳಿ ದೇಶದೆಲ್ಲೆಡೆ. ಎಲ್ಲ ಯುವ ಮನಸ್ಸುಗಳಿಗೆ ವಿಶೇಷ ಆಮ್ಲಜನಕ. ಗಾಢವಾಗಿ ಉಸಿರೆಳೆದುಕೊಂಡವರನ್ನೆಲ್ಲ ಸೆಳೆದುಕೊಂಡ ಚಳುವಳಿ. ಹಾಸನಕ್ಕೆ 'ಸಮಾಜವಾದಿ ಯುವಜನ ಸಭಾ'ದ ಪ್ರವೇಶ. ನಮ್ಮ ಗೆಳೆಯರ ದೊಡ್ಡ ಗುಂಪು ಅದರಲ್ಲಿ ಸೇರ್ಪಡೆಯಾಯಿತು.(ಇದೇ ಪೂಚಂತೇ ಅವರ 'ಚಿದಂಬರ ರಹಸ್ಯ'ದಲ್ಲಿನ ಪಡ್ಡೆ ಕ್ರಾಂತಿಕಾರಿಗಳ ಗುಂಪಿನ ಕಲ್ಪನೆಗೆ ಸ್ಫೂರ್ತಿ ಇದ್ದರೂ ಇದ್ದೀತು!) ರಾಜ್ಯದೆಲ್ಲೆಡೆ ನಡೆದ ಹಲವಾರು ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದೆವು. ಗಾಂಧಿ-ಲೋಹಿಯಾ-ಜೆಪಿ-ಅಂಬೇಡ್ಕರ್-ಮಾರ್ಕ್ಸ್ ಸಿದ್ಧಾಂತಗಳ ಪರಿಚಯ. ಹಾಗೇ ನಾಡಿನ ಬಹಳಷ್ಟು ಜನ ಸಮಾಜವಾದಿಗಳ, ಪ್ರಗತಿಪರ ಚಿಂತಕರ ಪರಿಚಯ, ಒಡನಾಟ, ಸ್ನೇಹ.

೧೯೭೫ರ ತುರ್ತು ಪರಿಸ್ಥಿತಿ. ೧೯೭೭ರ ಚುನಾವಣೆ-ಬದಲಾವಣೆ ಬಯಸಿ ಓಡಾಟ. ಒಂದೆರಡು ವರ್ಷದಲ್ಲೇ ನಿರಾಸೆ. ಇದರ ಪರಿಣಾಮವಾಗಿ ೭೮ರಿಂದ ದಲಿತ ಸಂಘರ್ಷ ಸಮಿತಿ ಜೊತೆಗೂಡಿ ಹಲವಾರು ಚಳುವಳಿಗಳು. ಎಲ್ಲ ರೀತಿಯ ಸಾಮಾಜಿಕ ಅನ್ಯಾಯಗಳ ಇರುದ್ಧ ಪ್ರತಿಭಟನೆಗಳು. ಆ ವರ್ಷವೇ ರೈತರಿಗಾಗುತ್ತಿರುವ ಅನ್ಯಾಯಗಳನ್ನು ಪ್ರತಿಭಟಿಸಿ ಸಾಲಗಾಮೆಯಿಂದ ಹಾಸನದವರೆಗೆ ಕಾಲು ನಡಿಗೆ ಜಾಥಾ.

೧೯೮೦ರಲ್ಲಿ ಆರಂಭವಾಯಿತು ರೈತ ಚಳುವಳಿ. ಇದು ಯುದ್ಧ ತರಬೇತಿ ಪಡೆದ ಸೈನಿಕರಿಗೆ ಯುದ್ಧದ ಕರೆ ಬಂದಂತೆ! ಹಾಸನದ ನಮ್ಮ ಗೆಳೆಯರ ಇಡೀ ಗುಂಪು ಚಳುವಳಿಗೆ ಧುಮುಕಿತು. ದೇಶದಲ್ಲಿದ್ದ ಅಸಮಾನತೆ, ಭ್ರಷ್ಟಾಚಾರ, ಜಾತೀಯತೆ ಹೀಗೆ ಇನ್ನೂ ಎಲ್ಲಾ ಅನ್ಯಾಯಗಳನ್ನು ಒಂದೇ ಹೊಡೆತಕ್ಕೆ ಮುಗಿಸಿಬಿಡುವ ಛಲದಲ್ಲಿ ರಾಜ್ಯಾದ್ಯಂತ ಪ್ರವಾಸ ಮಾಡಿ ಸಂಘಟನೆ ಮಾಡಿ ಹೋರಾಟ ಹಮ್ಮಿಕೊಂಡೆವು. ಜನರೂ ಸಹ ಒಟ್ಟುಗೂಡಿದರು. ೮೦ರಿಂದ ೮೪ರವರೆಗೆ ಭರಪೂರ ಚಳುವಳಿ.

ಮುನ್ನುಗ್ಗುವ ಭರದಲ್ಲಿ ಪಕ್ಕಕ್ಕೆ ತಿರುಗಿ ನೋಡಿದರೆ ಮುಖ್ಯ ಕಾರ್ಯಕರ್ತರಿಗೆಲ್ಲ ಮದವೇರಿದೆ. ಮುಂದೆ ಸಾಗಬೇಕಾದ ದಾರಿಯಾಗಲಿ, ಸೇರಬೇಕಾದ ಗುರಿಯಾಗಲಿ ಯಾರಿಗೂ ಸ್ಪಷ್ಟವಿಲ್ಲ. ಅಹಂಕಾರ ಮೈದುಂಬಿದೆ. ಸಂಘಟನೆಗಿಂತ ವೈಯುಕ್ತಿಕ ಪ್ರತಿಷ್ಠೆ ಹೆಚ್ಚಾಗಿದೆ. ೮೫-೮೬: ರಾಜ್ಯಾದ್ಯಂತ ನಾಯಕರಿಂದ ಹಲವಾರು ಮುಖ್ಯ ಕಾರ್ಯಕರ್ತರ ಉಚ್ಚಾಟನೆ. ರೈತ ಸಂಘ ಹೋಳಾಗುವಿಕೆಯ ಪ್ರಕ್ರಿಯೆ ಆರಂಭ. ಸೋದರ ಸಂಘಟನೆ ದಲಿತ ಚಳುವಳಿಯದೂ ಇದೇ ಕಥೆ.



ನಂತರ ಸಣ್ಣ ಸಣ್ಣ ಸಂಘಟನೆಗಳೊಂದಿಗೆ ಹಲವಾರು ಚಳುವಳಿಗಳು. ೨೦-೨೫ ವರ್ಷ ಹಾಗೇ ಕಳೆದುಹೋದವು. ಭ್ರಷ್ಟಾಚಾರದ, ಕುಟುಂಬ ರಾಜಕಾರಣದ, ಜಾತಿ ರಾಜಕಾರಣದ ಹಲವು ಸರ್ಕಾರಗಳು ಬಂದುಹೋದವು. ವ್ಯವಸ್ಥೆ ದಿನೇ ದಿನೇ ಕೆಡುತ್ತಲೇ ಇದೆ. ಜಾಗತೀಕರಣದ ಕೊಳ್ಳುಬಾಕ ಸಂಸ್ಕೃತಿಯಲ್ಲಿ ಜನ ವಸ್ತು ವಿಷಯಗಳಲ್ಲಿ ಮುಳುಗಿ ಹೋಗಿದ್ದಾರೆ. ಶ್ರೀಮಂತರು ಹೆಚ್ಚು ಶ್ರೀಮಂತರಾಗುತ್ತಾ, ಮಧ್ಯಮ ವರ್ಗ ಬಡವರಾಗುತ್ತಾ, ಬಡವರು ದೀನರಾಗುತ್ತಾ ಇಡೀ ಸಮಾಜ ಕ್ರಿಯಾಶೀಲತೆಯನ್ನೇ ಕಳೆದುಕೊಳ್ಳುತ್ತಿದೆ.

ಪ್ರಜಾಪ್ರಭುತ್ವವೊಂದೇ ನಂಬಿಕೆ. ಐದು ವರ್ಷಕ್ಕೊಮ್ಮೆ ಮತ ಚಲಾಯಿಸುವುದೇ ಪರಮ ಸಾಧನೆಯೆಂದುಕೊಂಡ ಮತದಾರರಿಂದ ಖಂಡಿತ ಬದಲಾವಣೆ ಸಾಧ್ಯವಿಲ್ಲ. ಯಾವುದೇ ಸಿದ್ಧಾಂತವು ಮತದಾರರ ಕಿವಿ ಮುಟ್ಟುತ್ತಿಲ್ಲ. ನೈತಿಕತೆ ದಿನೇ ದಿನೇ ಕಾಣೆಯಾಗುತ್ತಿದೆ. ಹೊಸದೊಂದು ರಾಜಕೀಯ ಚಳುವಳಿಯೇ ನಡೆಯಬೇಕು. ಮನುಷ್ಯನ ಆಳದಲ್ಲಿನ ಒಳ್ಳೆಯತನದಲ್ಲಿ ನಂಬಿಕೆಯಿಟ್ಟು ಹೊಸದೊಂದು ರಾಜಕೀಯ ಸಿದ್ಧಾಂತ ರೂಪಿಸಬೇಕು. ಮತದಾರರು ತಮಗೆ ಬೇಕಾದ ಒಳ್ಳೆಯ ಅಭ್ಯರ್ಥಿಗಳನ್ನು ತಾವೇ ಚುನಾವಣೆಗೆ ನಿಲ್ಲಿಸಿ ಇಡೀ ಚುನಾವಣೆಯ ಕೆಲಸವನ್ನು ಮತದಾರರೇ ನಿರ್ವಹಿಸಿ ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿ ಸರ್ಕಾರ ನಡೆಸಬೇಕು. ನಾಡು ನಮ್ಮದು ಎಂಬ ಭಾವನೆ ಎಲ್ಲರಲ್ಲೂ ಬೆಳೆಯಬೇಕು. ನೈತಿಕತೆ ಸರ್ವರ ಅಭಿವೃದ್ಧಿಗೆ ಅನಿವಾರ್ಯ ಎಂಬುದನ್ನು ಜನತೆ ಮನಗಾಣಬೇಕು.

ಹೌದು, ಇದನ್ನೆಲ್ಲ ಮಾಡುವವರು ಯಾರು? ಈ ನಾಡಿನ ಪ್ರಗತಿಪರರೆನಿಸಿಕೊಂಡವರು, ಬುದ್ಧಿಜೀವಿಗಳೆನಿಸಿಕೊಂಡವರು ತಮ್ಮ ಸಿದ್ಧಾಂತ ಮತ್ತು ಅಹಂಗಳನ್ನು ಅದುಮಿಟ್ಟು ತಮ್ಮ ವೈಯುಕ್ತಿಕ ಆಶೆಗಳನ್ನು ಕೊನೆಗಾಣಿಸಿ ಎಲ್ಲರೂ ಒಟ್ಟುಗೂಡಿ ಹೊಸದೊಂದು ದಾರಿಯನ್ನು ಜನರ ಮುಂದಿಟ್ಟರೆ ಖಂಡಿತ ಜನ ಸ್ಪಂದಿಸುವರು. ಆ ದಿನ ಆದಷ್ಟು ಬೇಗ ಬರಲಿ.


**-ಕೆ.ಎಂ. ರಾಜೇಗೌಡ**

**ಪ್ರಿಯ ಓದುಗರೇ,**

**ನಿಮ್ಮಲ್ಲಿ ಹಲವರು 'ಸಂಪಾದಕರು: ಹೊಸ ಮನುಷ್ಯ' – ಈ ಹೆಸರಿನಲ್ಲಿ ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ ವಿನೋಬ ನಗರ ಶಾಖೆಯಲ್ಲಿ ತೆರೆಯಲಾಗಿರುವ ಚಾಲ್ತಿ ಖಾತೆ(ಕರೆಂಟ್ ಅಕೌಂಟ್) ಸಂಖ್ಯೆ: ೬೪೧೧೦೩೫೮೩೦ ಇಲ್ಲಿ ಚಂದಾ ಅಥವಾ ಜಾಹೀರಾತಿನ ಹಣ ತುಂಬುವಿರಿ. ಆದರೆ ಅದನ್ನು ಸಂಪಾದಕರಿಗೆ ತಿಳಿಸುವುದಿಲ್ಲ. ಬ್ಯಾಂಕ್ ದಾಖಲೆಗಳಲ್ಲಿ ಹಣ ತುಂಬಿದವರ ವಿವಿರ ಸಿಗುವುದಿಲ್ಲ. ಇದರಿಂದ ತುಂಬ ಗೊಂದಲವಾಗುತ್ತಿದೆ. ಹಾಗಾಗಿ ಬ್ಯಾಂಕ್ ಖಾತೆಗೆ ಹಾಗೆ ಹಣ ತುಂಬುವವರು/ಹಣ ವರ್ಗಾವಣೆ ಮಾಡುವರು ದಯವಿಟ್ಟು ಅದರ ವಿವರಗಳನ್ನು ಒಂದು ಅಂಚೆ ಕಾರ್ಡ್ ಮೂಲಕವಾಗಲೀ ಅಥವಾ ದೂರವಾಣಿ ಸಂದೇಶದ ಮೂಲಕವಾಗಲೀ ತಿಳಿಸಲು ಮರೆಯದೆ ದಯವಿಟ್ಟು ಸಹಕರಿಸಿ.–ಸಂ**

# ಕಿಶನ್ ಪಟ್ನಾಯಕ್: ಮತ್ತೆ ಅವರ ಭೇಟಿ ಎಂದು? ಎಲ್ಲಿ?

**–ಸವಿತಾ ನಾಗಭೂಷಣ**



**ಕರ್ನಾಟಕದ ಸಮಾಜವಾದಿಗಳಿಂದ ಕಿಷನ್‌ಜಿ ಎಂದೇ ಪ್ರೀತಿಯಿಂದ ಕರೆಯಲ್ಪಡುತ್ತಿದ್ದ ಕಿಷನ್ ಪಟ್ನಾಯಕ್ ಮೂಲತಃ ಒರಿಸ್ಸಾದವರು. ಎಪ್ಪತ್ತರ ದಶಕದಲ್ಲಿ ಹಸಿವಿನಿಂದ ಸತ್ತ ಬಡಜನರಿಗೆ (ಕು)ಪ್ರಸಿದ್ಧವಾಗಿದ್ದ ಸಂಭಲಪುರ ಜಿಲ್ಲೆಯ ಒಂದು ಗ್ರಾಮದ ಸಾಮಾನ್ಯ ಕಾಯಸ್ಥ ಕುಟುಂಬದಿಂದ ಬಂದವರು. ಸುತ್ತಲ ಸಮಾಜದ ಅಸಮಾನತೆಗಳಿಂದ ಅಶಾಂತರಾಗಿ ಹದಿಹರೆಯದಲ್ಲೇ ಸಮಾಜವಾದಿ ತತ್ವಗಳಿಂದ ಆಕರ್ಷಿತರಾಗಿ ಸಮಾಜವಾದಿ ಪಕ್ಷದ ಕಾರ್ಯಕರ್ತರಾಗಿ ಬೆಳೆದವರು. ತಮ್ಮ ಬದ್ಧತೆ ಮತ್ತು ಪ್ರತಿಭೆಗಳಿಂದ ಲೋಹಿಯಾರ ಕಣ್ಣಿಗೆ ಬಿದ್ದ ಇವರು ೧೯೬೨ರ ಮೂರನೇ ಲೋಕಸಭಾ ಚುನಾವಣೆಗಳಲ್ಲಿ ಸಂಭಲಪುರ ಕ್ಷೇತ್ರದಿಂದ ಗೆದ್ದು ಸದನದ ಅತ್ಯಂತ ಕಿರಿಯ ಸದಸ್ಯರೆನಿಸಿಕೊಂಡರು. ಪಕ್ಷದಲ್ಲಿ ಲೋಹಿಯಾರ ಆಪ್ತ ಕಾರ್ಯದರ್ಶಿಯಾಗಿ ಸದನದಲ್ಲಿ ಪ್ರಧಾನಿ ನೆಹ್ರೂರನ್ನು ತಮ್ಮ ಚೂಪಾದ ಪ್ರಶ್ನೆಗಳ ಮೂಲಕ ಇಕ್ಕಟ್ಟಿಗೆ ಸಿಲುಕಿಸಿದವರು. ಆ ಮೂಲಕ ನೆಹ್ರೂ ಸಮಾಜವಾದದ ವೈರುಧ್ಯಗಳನ್ನು ಬಯಲಿಗೆಳೆಯಲು ಕಾರಣರಾದವರು.**

**ಮುಂದಿನ ಚುನಾವಣೆಗಳಲ್ಲಿ ಲೋಹಿಯಾ ಕಿಷನ್ ಪರ ಪ್ರಚಾರ ಮಾಡುವಾಗ ಸಾಮಾನ್ಯ ನಾಗರೀಕ ಸಂಹಿತೆಯನ್ನು ಪ್ರತಿಪಾದಿಸಿದ ಕಾರಣದಿಂದಾಗಿ, ಮುಸ್ಲಿಂ ಮತದಾರರು ಗಣನೀಯ ಸಂಖ್ಯೆಯಲ್ಲಿದ್ದ ಆ ಕ್ಷೇತ್ರದಲ್ಲಿ ಅವರು ಮತ್ತೆಂದೂ ಗೆಲ್ಲಲಾಗದಾದರು. ನಂತರದ ತಮ್ಮ ರಾಜಕೀಯ ಜೀವನದ ಬಹುಭಾಗವನ್ನು ಸಮಾಜವಾದಿಗಳ ಕರ್ಮಭೂಮಿಯೆನಿಸಿದ್ದ ಬಿಹಾರದಲ್ಲಿ ಕಳೆದ ಕಿಷನ್, ಲೋಹಿಯಾ ನಿಧನಾನಂತರ ಅವರ ತಾತ್ವಿಕ ಉತ್ತರಾಧಿಕಾರಿಯೆನಿಸಿ, ರಾಷ್ಟ್ರಾದ್ಯಂತ ಯುವ ಸಮಾಜವಾದಿಗಳ ಮಾರ್ಗದರ್ಶಕರಾದರು. ಕರ್ನಾಟಕದ ಯುವ ಸಮಾಜವಾದಿಗಳ ಅಚ್ಚುಮೆಚ್ಚಿನ ವ್ಯಕ್ತಿಯಾಗಿದ್ದ ಕಿಷನ್‌ಜಿ ರಾಜ್ಯದಲ್ಲಿನ ದಲಿತ ಮತ್ತು ರೈತ ಚಳುವಳಿಯ ನಾಯಕರುಗಳೊಂದಿಗೆ ನಿಕಟ ಸಂಪರ್ಕವಿರಿಸಿಕೊಂಡು ಸಮಯೋಚಿತ ಸಲಹೆಗಳನ್ನು ನೀಡುತ್ತಿದ್ದರು. ಮೇಧಾ ಪಾಟ್ಕರ್, ರಾಜೇಂದ್ರ ಅಗರ್‌ವಾಲ್, ಯೋಗೇಂದ್ರ ಯಾದವ್ ಮುಂತಾದ ಜನಪರ ಚಿಂತಕರು ಮತ್ತು ಹೋರಾಟಗಾರರಿಂದ ಕೂಡಿದ್ದ ಜನಪರ ಚಳುವಳಿಗಳ ರಾಷ್ಟ್ರೀಯ ಮೈತ್ರಿಕೂಟದ ಪ್ರಧಾನ ಸಂಚಾಲಕರಾಗಿ ರಾಷ್ಟ್ರಕ್ಕೊಂದು ಹೊಸ ಸಮಾಜವಾದಿ ಪರ್ಯಾಯ ರಾಜಕಾರಣದ ಮಾದರಿಯನ್ನು ರೂಪಿಸುತ್ತಿದ್ದಾಗಲೇ ೨೦೦೪ರಲ್ಲಿ ಹೈದರಾಬಾದ್‌ನಲ್ಲಿ ಈ ಮೈತ್ರಿಕೂಟದ ಸಭೆಯ ಸಂದರ್ಭದಲ್ಲಿ ಅಸು ನೀಗಿದರು. ಇದರೊಂದಿಗೆ ಲೋಹಿಯಾ ಪರಂಪರೆಯ ಸಮಾಜವಾದಿ ಹೋರಾಟದ ಕೊನೆಯ ಕೊಂಡಿಯೂ ಕಳಚಿಕೊಂಡಿತೆಂದೇ ಹೇಳಬಹುದು–ಸಂ.**

೧೯೮೩ರ ಆಸುಪಾಸು. ಅದೇ ತಾನೇ ಸಾಹಿತ್ಯಲೋಕಕ್ಕೆ ಕಣ್ಣು ತೆರೆಯತೊಡಗಿದ್ದ ನಾನು ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಲೋಹಿಯಾ ಕುರಿತ ಪುಟ್ಟ ಟಿಪ್ಪಣಿಯಿಂದ ಆಕರ್ಷಿತಳಾಗಿದ್ದೆ. ನನ್ನನ್ನು ಲೋಹಿಯಾ ಅವರ ವಿಚಾರಧಾರೆಯತ್ತ ಸೆಳೆದದ್ದು ಅವರು ಹಿರಿಯ ಸಮಾಜವಾದಿ ಎಂದಾಗಲೀ ಪ್ರಖರ ಬುದ್ಧಿಜೀವಿ ಎಂದಾಗಲೀ ಅಲ್ಲ! ಬದಲಾಗಿ ಆ ಟಿಪ್ಪಣಿಯಲ್ಲಿ ಉಲ್ಲೇಖಿಸಲಾಗಿದ್ದ ಲೋಹಿಯಾ ಅವರು ತಮ್ಮ ಗೆಳತಿ ರೋಮಾ ಮಿತ್ರಾಗೆ ಬರೆದ ಪತ್ರದ ತುಣುಕುಗಳು:

"ನಿನ್ನ ಚಪ್ಪಲಿ ಮತ್ತು ಇತರ ವಸ್ತುಗಳು ನನ್ನ ನೆನಪಿನಲ್ಲಿದ್ದವು. ಅದಕ್ಕಾಗಿ ಇಂದಿನ ದಿನವನ್ನು ಒಳ್ಳೆಯ ಕೆಲಸಕ್ಕಾಗಿ ಉಪಯೋಗಿಸುವ ಮನಸ್ಸಾಗಿ ನಿನಗೊಂದು ಜತೆ ಚಪ್ಪಲಿಯನ್ನು ಕೊಂಡ ಸಮಾಧಾನ. ಇಂತಹ ಸಮಾಧಾನ ನನಗೆ ಯಾವುದೇ ದೇಶದ ಮಾತ್ರವಲ್ಲ ಇಡೀ ಪ್ರಪಂಚದ ಅತ್ಯಂತ ಬಲಾಢ್ಯ ವ್ಯಕ್ತಿಯನ್ನು ಭೇಟಿಯಾದ ತೃಪ್ತಿಗಿಂತಲೂ ದೊಡ್ಡದು." (೪ ನವೆಂಬರ್, ೧೯೬೧ರಲ್ಲಿ ಕೈರೊನಿಂದ ರೋಮಾಗೆ ಬರೆದ ಪತ್ರ)

"ಹೆಣ್ಣು ಸಮರ್ಥಳಾಗುವುದನ್ನು ಕಂಡು ಗಂಡು ಸಾಮಾನ್ಯವಾಗಿ ಹೆದರಿಕೊಳ್ಳುತ್ತಾನೆ. ನನ್ನ ಒಲವು ತದ್ವಿರುದ್ಧ." (೯ ಮಾರ್ಚ್, ೧೯೬೧ರಲ್ಲಿ ರೋಮಾ ಮಿತ್ರಾಗೆ ಬರೆದ ಪತ್ರ.)

ಲೋಹಿಯಾ ಅವರ ಪತ್ರದ ತುಣುಕುಗಳು ನನ್ನಲ್ಲಿ ಲೋಹಿಯಾ ಅವರನ್ನು ವಿಸ್ತೃತವಾಗಿ ಓದಬೇಕೆಂಬ ಆಸೆಯನ್ನು ಉದ್ದೀಪಿಸಿತ್ತು. ಯೋಗಾನುಯೋಗವೋ ಎಂಬಂತೆ ಆ ಕಾಲದಲ್ಲಿ ಪ್ರಖರ ಲೋಹಿಯಾವಾದಿಯಾಗಿದ್ದ ನಾಗಭೂಷಣ ಅವರನ್ನು ಮದುವೆಯಾಗುವ ಸಂದರ್ಭ ಒದಗಿ ಬಂತು. ಹಾಗೆ ಲೋಹಿಯಾ ವಿಚಾರಗಳ ದಾರಿ ಸಿಕ್ಕತೊಡಗಿತ್ತು. ಆವರೆಗೆ ಗಾಂಧಿಯನ್ನು ಅಲ್ಪಸ್ವಲ್ಪ ಓದಿಕೊಂಡಿದ್ದ ನನಗೆ ಬೇರಾವ ವಾದದ ಪರಿಚಯವೂ ಇರಲಿಲ್ಲ. ಈ ಸಮಯದಲ್ಲೇ ನಾನು ಕಿಷನ್ ಅವರನ್ನು ಭೆಟ್ಟಿಯಾದದ್ದು–೧೯೮೫ರಲ್ಲಿ.

ಚನ್ನಪಟ್ಟಣ ಸಮೀಪದ ಅರಳಾಳುಸಂದ್ರದಲ್ಲಿ ಸಮಾಜವಾದಿ ಶಿಬಿರದಲ್ಲಿ ಭಾಗವಹಿಸಿದ ಸಂದರ್ಭವದು. ಕಿಷನ್ ಅವರು ಹಿರಿಯ ಸಮಾಜವಾದಿಯೆಂದೂ, ಲೋಹಿಯಾ ಅವರ ನಿಕಟವರ್ತಿಯೆಂದೂ, ಘನತೆವೆತ್ತ ವ್ಯಕ್ತಿಯೆಂದೂ ಅದಾಗಲೇ ನಾಗಭೂಷಣ ಅವರಿಂದ ಅವರ



**ಕಿಷನ್ ಹಾಸನಕ್ಕೆ ಬಂದಿದ್ದಾಗ ಸವಿತಾ, ಬಾನು ಮುಷ್ತಾಕ್‌ರೊಂದಿಗೆ**

ಬಗ್ಗೆ ಸಾಕಷ್ಟು ಕೇಳಿದವಳಾಗಿದ್ದೂ ಸಮಾಜವಾದದ ಬಗ್ಗೆ ಏನೇನೂ ಕಲ್ಪನೆ ಇರದಿದ್ದ ನನಗೆ ಅವರನ್ನು ಭೆಟ್ಟಿಯಾಗುವ ಉತ್ಸುಕತೆಯೇನೂ ಇರಲಿಲ್ಲ. ಅವರಿಗೆ ಕನ್ನಡ ಬೇರೆ ಬರುವುದಿಲ್ಲವೆಂದು ಹೇಳಿದ್ದರಿಂದ ಮತ್ತು ಇಂಗ್ಲೀಷು–ಹಿಂದಿಯಲ್ಲಿ ಮಾತನಾಡುವಷ್ಟು ಧೈರ್ಯ, ಕುಶಲತೆ ನನ್ನಲ್ಲಿ ಇರಲಿಲ್ಲವಾದ್ದರಿಂದ ಅವರನ್ನು ಹೇಗೆ ಎದುರುಗೊಳ್ಳುವುದು ಎಂದು ಒಳಗೊಳಗೆ ಚಿಂತಿತಳಾಗಿದ್ದೆ. ಆದರೆ ನಾಗಭೂಷಣ ಅವರೊಂದಿಗೆ ನನ್ನನ್ನು ನೋಡಿದಾಕ್ಷಣ ಕಿಷನ್‌ರವರು ಪರಿಚಯದ ನಗೆ ನಕ್ಕು ತಮ್ಮನ್ನು ತಾವೇ ಪರಿಚಯಿಸಿಕೊಂಡು ನನ್ನನ್ನು ಬಹಳ ಕಾಲದಿಂದ ಬಲ್ಲವರಂತೆ ಕೈ ಕುಲುಕಿದರು. ಅಲ್ಲದೆ ಕುಟುಂಬದ ಬಗ್ಗೆ ಸಮಾಜವಾದಿಗಳ ಅವಜ್ಞೆ ಬಲ್ಲವರಾಗಿ ನನ್ನನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂದೂ ನಾಗಭೂಷಣ ಅವರಿಗೆ ಕಿವಿಮಾತು ಹೇಳಿದರು. ಕಿಷನ್ ಅವರ ಈ ಮಾತುಗಳನ್ನು ಕೇಳಿ ಅಲ್ಲೇ ಜಗುಲಿಯ ಮೇಲೆ ಕುಳಿತಿದ್ದ ಅವರ ಪತ್ನಿ ವಾಣಿ ನಸುನಕ್ಕರು! ನನ್ನ ಅಳುಕು, ಆತಂಕ ಕಾವಳದಂತೆ ಕರಗಿ ಹೋಯಿತು. ರೈತಸಂಘದ ಅನಸೂಯಮ್ಮ



ಲೋಹಿಯಾರೊಂದಿಗೆ ಕಿಷನ್‌ಜಿ

ಅವರು ಹರುಕುಮುರುಕು ಇಂಗ್ಲೀಷಿನಲ್ಲಿ ಕಿಷನ್ ರೊಂದಿಗೆ ನಿರರ್ಗಳವಾಗಿ ಸಂಭಾಷಿಸುತ್ತಿದ್ದುದನ್ನು ನೋಡಿದ ಮೇಲಂತೂ ನಾನೂ ನಿಸ್ಸಂಕೋಚದಿಂದ ಮುರುಕು ಹಿಂದಿಯಲ್ಲಿ ಕಿಷನ್ ಅವರೊಂದಿಗೆ ಮಾತಿಗಿಳಿದೆ. ಅದೇ ತಾನೆ ಕವಿತೆ ಬರೆಯಲು ಶುರು ಮಾಡಿದ್ದ ನಾನು, ಕವಿಯೆಂದೂ ಧಾರಾಳವಾಗಿ ಪರಿಚಯಿಸಿಕೊಂಡೆ!!

ಆ ದಿನ ಸಭೆಯಲ್ಲಿ ಕಿಷನ್‌ರವರು ಸವಿಸ್ತಾರವಾಗಿ ಗ್ರಾಮ ಪರಿಸರ ಕುರಿತು ಮಾತನಾಡಿದ ನೆನಪು. ಅವರ ಭಾಷಣದಿಂದ ನಾನೆಷ್ಟು ಪ್ರಭಾವಿತಳಾದೆನೆಂದರೆ.... ಮುಂದಿನ ವರುಷ ಅರಳಾಳುಸಂದ್ರದಲ್ಲಿ ಗಿಡನೆಡುವ ಕಾರ್ಯಕ್ರಮ ಹಾಕಿಕೊಳ್ಳೋಣ, ನಾನೂ ಖಂಡಿತ ಬರುವೆ ಎಂದು ಅನಸೂಯಮ್ಮನಿಗೆ ವಚನವಿತ್ತೆ! ಆ ರಾತ್ರಿ ನಾವು ಅನಸೂಯಮ್ಮ ಅವರ ಮನೆಯಲ್ಲೇ ತಂಗಿದ್ದೆವು. ಅವರಿಂದ ರೈತಸಂಘದ ಹೋರಾಟದ ಕತೆಗಳನ್ನು ಕೇಳಿ ರೋಮಾಂಚಿತಳಾದೆ. ಅವರ ಮಾತುಗಳಿಗೆ ತೆರೆದುಕೊಳ್ಳುತ್ತಾ ಎಷ್ಟೊಂದು ಒಳ್ಳೆಯ ದಾರಿಗಳಿವೆ... ನಾನೇಕೆ ಈ ದಾರಿಗೆ ತಡವಾಗಿ ಬಂದೆ ಎಂದು ನನಗೆ ನಾನೇ ಕೇಳಿಕೊಂಡೆ.

ಮಾರನೆಯ ದಿನದ ಸಭೆಯಲ್ಲಿ ಯಾವುದೋ ವಿಷಯ ಕುರಿತು ಬಿಸಿಬಿಸಿ ಚರ್ಚೆ ಶುರುವಾಗಿ ಸಮಾಜವಾದಿಗಳ ಸಿಟ್ಟು, ಸೆಡವು, ಜಗಳಗಂಟತನದ ಪರಿಚಯವೂ ಆಯಿತು. ಕೆ. ರಾಮ್‌ದಾಸ್, ರವಿವರ್ಮ ಕುಮಾರ್, ಆರ್.ಪಿ. ವೆಂಕಟೇಶಮೂರ್ತಿ ಮೊದಲಾದವರನ್ನು ಮೊಟ್ಟಮೊದಲ ಬಾರಿ ನೋಡಿದ್ದೇ ಅಲ್ಲಿ. ಮಾತು ಜಗಳವಾಗಿ ಜಗಳ ಕದನವಾಗಿ ಇನ್ನೂ ಏನೇನೋ ಆಗುತ್ತಿರುವುದನ್ನು ಕಣ್ಣಾರೆ ಕಂಡು ಗಾಬರಿಯಾದೆ. ಕಿಷನ್ ಮಾತ್ರ ಇದೆಲ್ಲಾ ಸಹಜವೆಂಬಂತೆ ಮೌನವಾಗಿ ಕುಳಿತು ಇದನ್ನೆಲ್ಲಾ ವೀಕ್ಷಿಸುತ್ತಿದ್ದರು. ಸ್ವಲ್ಪ ಸಮಯದಲ್ಲೇ ಕದನ ನಿಲುಗಡೆಗೆ ಬಂದು ಎಲ್ಲಾ ರಾಜಿಯಾಗಿ ಕನಸುಗಳನ್ನು ಹೆಣೆಯತೊಡಗಿದ್ದರು. ಕೋಪದ ಜಾಗದಲ್ಲಿ ಪರಿತಾಪ, ಜಗಳದ ಜಾಗದಲ್ಲಿ ಪಶ್ಚಾತ್ತಾಪ, ಹೊಸ ಆಶೆ, ನಿರೀಕ್ಷೆ, ಭರವಸೆಯ ಮಾತುಗಳಾಗಿ ರೂಪಾಂತರಗೊಂಡು ಮತ್ತೆ ಪರಸ್ಪರ ಭೇಟಿಯಾಗುವ ವಾಗ್ದಾನದೊಂದಿಗೆ ಶಿಬಿರ ಮುಕ್ತಾಯವಾದರೂ, ಸಮಾಜವಾದದೊಂದಿಗಿನ ನನ್ನ ಒಡನಾಟ ಅಲ್ಲಿಂದ ಆರಂಭವಾಗಿತ್ತು.

ನಂತರದ ವರುಷಗಳಲ್ಲಿ ಕಿಷನ್ ಅವರನ್ನು ನಾನು ಮತ್ತೆ ಭೇಟಿಯಾದದ್ದು ೧೯೯೧ರಲ್ಲಿ. ಹಾಸನದ 'ಲೋಹಿಯಾ ನೆನಪು' ಕಾರ್ಯಕ್ರಮದಲ್ಲಿ ತೇಜಸ್ವಿ, ದೇವನೂರು ಮಹಾದೇವ ಸೇರಿದಂತೆ ಕರ್ನಾಟಕದ ಅನೇಕ ಹಿರಿಯ ಸಮಾಜವಾದಿಗಳು ಸೇರಿದ್ದರು. ಅಂದು ಕಿಷನ್‌ರವರು, ಮನುಷ್ಯನ ಅಗತ್ಯಗಳು ಮತ್ತು ಅವನ ಆಕಾಂಕ್ಷೆ ಕುರಿತು ಮಾಡಿದ ಭಾಷಣ ನನ್ನನ್ನು ವಿಚಲಿತಗೊಳಿಸಿತ್ತು. ಮನುಷ್ಯನ ಚಿತ್ತವೃತ್ತಿಯ ಬಗ್ಗೆ ಆಳವಾಗಿ ಆಲೋಚಿಸುವಂತೆ ಪ್ರೇರೇಪಿಸಿತ್ತು. ಓರ್ವ ಮಹಿಳೆ ಎಷ್ಟು ಸೀರೆಗಳನ್ನು ಹೊಂದಿದರೆ ಒಳ್ಳೆಯದು ಎನ್ನುವುದನ್ನು ಎಷ್ಟು convincing ಆಗಿ ಹೇಳಿದರೆಂದರೆ ನಂತರದ ವರುಷಗಳಲ್ಲಿ ಕೆಲಕಾಲ ನಾನು ಸೀರೆಗಳನ್ನು ಕೊಳ್ಳುವುದನ್ನೇ ನಿಲ್ಲಿಸಿದೆ.

ಕಿಷನ್‌ರವರು ಕರ್ನಾಟಕಕ್ಕೆ ಭೇಟಿಯಿತ್ತಾಗ ಒಂದೆರಡು ಸಲ ನಮ್ಮ ಮನೆಯಲ್ಲಿ ಉಳಿದುಕೊಂಡಿದ್ದರಿಂದ ತಾಸುಗಟ್ಟಲೆ ಅವರ ವಿಚಾರಗಳನ್ನು ಆಲಿಸಿದ್ದೇನೆ. ಪ್ರತಿ ಭೇಟಿಯಲ್ಲೂ ಅವರ ವಿಚಾರಗಳಿಂದ ಹೊಸದೇನನ್ನೋ ಪಡೆದಿದ್ದೇನೆ ಎಂದೇ ಅನಿಸುವುದು. ಅವರ ಸರಳತೆ, ವಿಚಾರಗಳ ಸ್ಪಷ್ಟತೆ, ಕಾವ್ಯಾತ್ಮಕ ಅಭಿವ್ಯಕ್ತಿ, ನಡೆ-ನುಡಿಗಳನ್ನು ಸಮನ್ವಯಗೊಳಿಸಿದಂತಹ ಬಿರುಕಿಲ್ಲದ ಪಾರದರ್ಶಕ ವ್ಯಕ್ತಿತ್ವ, ಖಚಿತ ನಿಲುವುಗಳು ನನ್ನ ಸೀಮಿತ ಬದುಕನ್ನು ಸಂಪನ್ನಗೊಳಿಸಿದೆ. ಮೂರು ವರುಷದ ಹಿಂದೆ ನಾವು ಚಿತ್ರದುರ್ಗದಲ್ಲಿದ್ದಾಗ ಮೇಧಾ ಪಾಟ್ಕರ್ ಅವರನ್ನು ಭೇಟಿಯಾಗುವ ಸಂದರ್ಭ ಒದಗಿ ಬಂದಿತ್ತು. 'ಬಸವಶ್ರೀ' ಪ್ರಶಸ್ತಿ ಪಡೆಯಲು ಬಂದಿದ್ದ ಅವರು ನಮ್ಮ ಮನೆಗೂ ಭೇಟಿ ನೀಡಿದ್ದರು. ಮಾತಿನ ನಡುವೆ ನಾಗಭೂಷಣ ಅವರು ಕಿಷನ್‌ರ ಬಗ್ಗೆ ಪ್ರಸ್ತಾಪ ಮಾಡಿದಾಗ ಮೇಧಾ ತಾವು ಕಿಷನ್ ಅವರ ಶಿಷ್ಯೆ ಎಂದು ಹೇಳಿ ನಮ್ಮನ್ನು ಚಕಿತಗೊಳಿಸಿದರು. ನಾವೆಲ್ಲ ಹೇಗೆ ಕಿಷನ್‌ಜೀ ಅವರ ಸ್ನೇಹ ತಂತುವಿನಿಂದ ಬೆಸೆಯಲ್ಪಟ್ಟಿದ್ದೇವೆ ಎಂದು ಸೋಜಿಗಪಟ್ಟೆ.




ನವೆಂಬರ್ ೧೦, ೨೦೦೭ರಲ್ಲಿ ಶಿವಮೊಗ್ಗೆಯಲ್ಲಿ ನಾಗಭೂಷಣ ಅವರು ಕುವೆಂಪು ವಿಶ್ವವಿದ್ಯಾಲಯ ಮತ್ತು ಮೈಸೂರಿನ ರಾಮಮನೋಹರ ಲೋಹಿಯಾ ಪ್ರತಿಷ್ಠಾನದ ಸಹಯೋಗದಲ್ಲಿ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಕಿಷನ್‌ಜಿ ಅವರಿಗೆ ಕರ್ನಾಟಕದ ಸಮಾಜವಾದಿಗಳ ಪರವಾಗಿ ಒಂದು ಲಕ್ಷ ರೂಪಾಯಿಗಳಿಗೂ ಮಿಕ್ಕಿದ ಹಮ್ಮಿಣಿಯನ್ನು ಅರ್ಪಿಸಿ ಗೌರವಿಸಲಾಯಿತು. ಆ ಸಂದರ್ಭದಲ್ಲಿ ಅವರು ಆಡಿದ ಮಾತುಗಳು ಇನ್ನೂ ಕಿವಿಯಲ್ಲೇ ಇವೆ....


"ಭಾರತದಲ್ಲಿಂದು ಮತೀಯತೆ ಹೆಚ್ಚುತ್ತಿದೆ. ಸರ್ವಾಧಿಕಾರಿಗಳ ಆರ್ಭಟ ಮೇರೆ ಮೀರುತ್ತಿದೆ. ಪ್ರತಿಯೊಬ್ಬ ಭಾರತೀಯನೂ ರಾಮನಿಗೆ ವಂದಿಸಬೇಕೆಂಬ ಒತ್ತಡ ಸೃಷ್ಟಿಯಾಗುತ್ತಿದೆ. ವೈವಿಧ್ಯತೆಯೇ ಭಾರತ ದೇಶದ ಸಂಸ್ಕೃತಿ. ಇದರ ನಾಶ ಎಂದರೆ ಭಾರತದ ವಿನಾಶವೇ ಆಗಿದೆ. ಏಕ ಸಂಸ್ಕೃತಿಯ ಕೊನೆ ಕೂಡ ವಿನಾಶವೇ. ಅದು ಎಂತಹ ಬಲಾಢ್ಯ ದೇಶವನ್ನೂ ನಾಶಗೊಳಿಸುತ್ತದೆ. ರಾಮಕೃಷ್ಣ ಪರಮಹಂಸರು ನಾವು ಅನುಸರಿಸಬೇಕಾದ ಧರ್ಮ ನಿರಪೇಕ್ಷತೆಗೆ, ಸೂಕ್ತ ಉದಾಹರಣೆ. ಅವರು ವೈಷ್ಣವರಂತೆ ಪೂಜೆ ಮಾಡಿದರು. ಮುಸ್ಲಿಮರಂತೆ ನಮಾಜು ಮಾಡಿದರು, ಆಧ್ಯಾತ್ಮಿಕತೆಯ ಏಕತೆಯ ಪ್ರತಿನಿಧಿ ಅವರು. ಧರ್ಮ ನಿರಪೇಕ್ಷತೆಯ ಪ್ರವಾದಿ..."

"ನಿನ್ನ ಒಳಿತು ನಿನ್ನಾಚೆ ಇರುವಂತಹದ್ದು. ನಿನ್ನ ಸ್ವಾರ್ಥದಿಂದಾಚೆ ಇರುವಂತಹದ್ದು ಮತ್ತು ಅದು ನೈತಿಕ ನೆಲೆಯಲ್ಲಿ ಇರುವಂತಹದ್ದು ಎಂದು ನಂಬುವುದೇ ಆಧ್ಯಾತ್ಮ. ಸೇವೆಯೇ ಅದರ ಮುಖ. ಅದರ ನೆಲೆಯಲ್ಲಿಯೇ ನಂನಮ್ಮ ಬದುಕನ್ನು ಕಟ್ಟಿಕೊಳ್ಳಬೇಕಾಗಿದೆ."

ಕಳೆದ ವರುಷ ಕಿಷನ್‌ರವರನ್ನು ಇಲ್ಲೇ ಮೈಸೂರಿನ ರೈಲ್ವೇ ನಿಲ್ದಾಣದಲ್ಲಿ ಬೀಳ್ಕೊಟ್ಟಾಗ, ಯಾಕೋ ವಯಸ್ಸಿನ ಭಾರದಿಂದ ಕೊಂಚ ನಲುಗಿದಂತೆ ಕಂಡರು. ಸಮಾಜವಾದ ಎಂಬ ಸಮ್ಮೋಹಿನಿಯ ಜೊತೆ ಬಾಳುವೆ ಮಾಡಿ "ಆಧುನಿಕ ಜಗತ್ತಿನ ಮುಂದೆ ಇರುವುದು ಎರಡೇ ಆಯ್ಕೆ, ಒಂದು ಅಣುಬಾಂಬ್ ಮತ್ತೊಂದು ಗಾಂಧಿ" ಎಂಬ ಲೋಹಿಯಾ ಮಾತನ್ನು ಪುನರುಚ್ಚರಿಸುತ್ತಲೇ ಇದ್ದಕ್ಕಿದ್ದಂತೆ ನಮ್ಮ ನಡುವೆಯಿಂದ ನಿರ್ಗಮಿಸಿರುವ ಕಿಷನ್ ಈಗ ಎಲ್ಲಿರುವರೋ? ಮತ್ತೆ ಅವರ ಭೇಟಿ ಎಂದು? ಎಲ್ಲಿ? ಯಾವಾಗ? ತಿಳಿಯದು. *

# ಪ್ರೊ. ಎಂ.ಡಿ.ಎನ್: ಇನ್ನಷ್ಟು ನೆನಪುಗಳು

–ಬಿ.ಎನ್ ಶ್ರೀರಾಮ್



ನಾನು ೧೯೫೯–೬೦ರಲ್ಲಿ ಮೈಸೂರಿಗೆ ಬಂದಾಗ ಶ್ರೀ ಕೋಣಂದೂರು ಲಿಂಗಪ್ಪ, ಶ್ರೀ ಪೂರ್ಣಚಂದ್ರ ತೇಜಸ್ವಿ ಮತ್ತು ಕೆ. ಎಚ್ ಶ್ರೀನಿವಾಸ್ ಇವರುಗಳು ಕನ್ನಡಪರ ಧ್ವನಿ ಎತ್ತಲು ಒಂದು ಸಂಘಟನೆ ಬೇಕೆಂದು 'ಕನ್ನಡ ಸಮಾಜವಾದಿ ಯುವಜನ ಸಭಾ ಎಂಬ ಸಂಘಟನೆಯನ್ನು ಪ್ರಾರಂಭಿಸಿದರು. ಈ ಸಂಘಟನೆಯ ಮೂಲಕ ವಿಶ್ವವಿದ್ಯಾನಿಲಯದಲ್ಲಿ ಘಟಿಕೋತ್ಸವದ ಕಾರ್ಯಕ್ರಮವು ಕನ್ನಡದಲ್ಲೇ ನಡೆಯಬೇಕು, ಕುಲಪತಿಗಳಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಕನ್ನಡದಲ್ಲಿಯೇ ಮಾತಾಡಬೇಕು ಮುಂತಾದ ಕಾರ್ಯಕ್ರಮಗಳನ್ನು ನಡೆಸಿದರು. ಕೆಲವು ಕಾರ್ಯಕ್ರಮಗಳಾದ ಮೇಲೆ ನಮ್ಮ ಕನ್ನಡ ಪ್ರೀತಿ ಜಾಸ್ತಿಯಾಯಿತೆಂದು ಕೆ.ಎಚ್. ಶ್ರೀನಿವಾಸ್‌ರು ತಮ್ಮ ಇಂಗ್ಲಿಷ್ ಒಲವಿನಿಂದ ಈ ಸಂಘಟನೆಯಿಂದ ದೂರವಾದರು.

ಕೆಲವು ಕಾಲದ ನಂತರ ನಮ್ಮ ಕನ್ನಡ ಪರವಾದ ಕಾರ್ಯಕ್ರಮಗಳು ಸಮಾಜವಾದಿ ಪಕ್ಷದ ಕಾರ್ಯಕ್ರಮಗಳೊಡನೆ ಮಿಳಿತವಾಗತೊಡಗಿತು. ಆ ದಿನಗಳಲ್ಲಿ ಶಾಂತವೇರಿ ಗೋಪಾಲಗೌಡರು, ಕೋಣಂದೂರು ಲಿಂಗಪ್ಪ, ಶ್ರೀಕಂಠಶರ್ಮ, ಶಾಮಣ್ಣ ಇವರೆಲ್ಲಾ ದಸರಾ ಕಾರ್ಯಕ್ರಮಗಳ ಬಗ್ಗೆ, ಬೆಲೆ ಏರಿಕೆಯ ಬಗ್ಗೆ ಮತ್ತು ಸರ್ಕಾರದ ಜನ ವಿರೋಧಿ ನೀತಿಗಳ ಬಗ್ಗೆ ಆಗಾಗ್ಗೆ ಪ್ರತಿಭಟಿಸುತ್ತಿದ್ದರು. ಈ ಪ್ರತಿಭಟನೆಗಳಲ್ಲಿ ನಾವೂ ಭಾಗಿಗಳು. ಹಿರಿಯ ನಾಯಕರುಗಳನ್ನು ಪೋಲೀಸರು ಬಂಧಿಸಿದ ಮೇಲೆ ನಾವೆಲ್ಲ ವಾಪಸ್ ಆಗುತ್ತಿದ್ದೆವು.

ಈ ಕಾಲಘಟ್ಟದಲ್ಲಿ ಪಾರ್ಲಿಮೆಂಟಿನಲ್ಲಿ ಆಗುತ್ತಿದ್ದ ಗಂಭೀರ ಚರ್ಚೆಗಳಿಂದ ನಾವು ಆಕರ್ಷಿತರಾದೆವು. ಸೋಷಲಿಸ್ಟ್ ಪಕ್ಷದ ಮಧು ಲಿಮಯೆ, ಕರ್ಪೂರಿ ಠಾಕೂರ್, ಕಿಷನ್ ಪಟ್ನಾಯಕ್, ಸಿ.ಪಿ.ಎಂ ಪಕ್ಷದವರಾದ ಜ್ಯೋತಿರ್ಮಯಿ ಬಸು, ಸೋಮನಾಥ ಚಟರ್ಜಿ ಮುಂತಾದ ನಾಯಕರು ನಮ್ಮನ್ನು ತುಂಬಾ ಆಕರ್ಷಿಸಿದರು. ಒಂದು ರೀತಿ ನಾವು ಸಮಾಜವಾದಿ ಆಲೋಚನೆಗಳ ಕಡೆಗೆ ಸೆಳೆಯಲ್ಪಟ್ಟೆವು.

ಇದೇ ಸಂದರ್ಭದಲ್ಲಿ ಮೈಸೂರಿನ ಹಿರಿಯ ಲಾಯರ್ ಆಗಿದ್ದ ಟಿ.ಎನ್.ನಾಗರಾಜ್‌ರವರು ನಮ್ಮಂತಹ ಕೆಲವು ಯುವಕರನ್ನು ಸೇರಿಸಿಕೊಂಡು ಲೋಹಿಯಾರವರ ಬರಹಗಳ ಬಗ್ಗೆ ಸಣ್ಣ ಸಣ್ಣ ಅಧ್ಯಯನ ಶಿಬಿರಗಳನ್ನು ನಡೆಸತೊಡಗಿದರು. ಈ ಶಿಬಿರಗಳಲ್ಲಿ ಲೋಹಿಯಾರವರ ಭಾಷೆ, ಜಾತಿಪದ್ಧತಿ, ರಾಜಕೀಯದ ಮಧ್ಯೆ ಬಿಡುವು ಪುಸ್ತಕಗಳು ಮತ್ತು ಬಿಡಿ ಬಿಡಿ ಬರಹಗಳ ಬಗ್ಗೆ ಅಧ್ಯಯನ ಮತ್ತು ಚರ್ಚೆಗಳನ್ನು ನಡೆಸುತ್ತಿದ್ದರು.

ಈ ಶಿಬಿರ ಮತ್ತು ಚರ್ಚೆಗಳ ಫಲವಾಗಿ "ಸಮಾಜವಾದಿ ಯುವಜನ ಸಭಾ" ಎಂಬ ಸಂಘಟನೆಯನ್ನು ಪ್ರಾರಂಭಿಸುವ ವಿಚಾರವನ್ನು ಎಲ್ಲ ಯುವಕರ ಮುಂದಿಟ್ಟರು. ಇದರಿಂದ ನಾನು, ಕೆ. ರಾಮದಾಸ್, ರಾಮಚಂದ್ರದೇವ, ಸೂ. ರಮಾಕಾಂತ, ದೇವನೂರು ಮಹಾದೇವ, ಬೆಸಗರಳ್ಳಿ ರಾಮಣ್ಣ, ಯು.ಆರ್.ಅನಂತಮೂರ್ತಿ, ಕೆ.ಜಿ.ಎಸ್.ಪ್ರಸನ್ನ, ಶಬ್ಬೀರ್ ಅಹಮದ್ ಮುಸ್ತಫಾ, ಎನ್.ಡಿ.ಸುಂದರೇಶ್, ಪೂರ್ಣಚಂದ್ರ ತೇಜಸ್ವಿ, ಪ. ಮಲ್ಲೇಶ್ ಎಲ್ಲಾ 'ಸಮಾಜವಾದಿ ಯುವಜನ ಸಭಾ'ದ ಸಕ್ರಿಯ ಸದಸ್ಯರಾದೆವು. ಇದೇ ಸಂದರ್ಭದಲ್ಲಿ ನಾವು ಮಹಾರಾಜ ಕಾಲೇಜಿನ ಕಾರ್ಯಕ್ರಮಗಳು, ಮಾನಸಗಂಗೋತ್ರಿಯ ಕಾರ್ಯಕ್ರಮಗಳು, ಆಗಾಗ್ಗೆ ರಾಜಕೀಯ ಮುಷ್ಕರಗಳಲ್ಲೆಲ್ಲ ಉತ್ಸಾಹದಿಂದ ಭಾಗವಹಿಸುತ್ತಿದ್ದೆವು.



ಆಗ ಟಿ.ಎನ್. ನಾಗರಾಜ್‌ರವರ ವಾಹನವನ್ನು ನಡೆಸುತ್ತಾ ಒಬ್ಬ ಸಣಕಲ ಗಡ್ಡಧಾರಿ ಬರತೊಡಗಿದರು. ಇವರ ವೇಷಭೂಷಣ, ಟೈ,ಸೂಟುಗಳನ್ನೆಲ್ಲಾ ನೋಡಿ ಯಾರೀ ವ್ಯಕ್ತಿ? ಎಲ್ಲಿಯೋ ದಾರಿ ತಪ್ಪಿ ಸಮಾಜವಾದಿಗಳ ಸಹವಾಸಕ್ಕೆ ಬಂದಂತಿದೆಯಲ್ಲಾ ಎಂದು ಯೋಚಿಸಲಾರಂಭಿಸಿದೆವು. ಇವರ ಕೈಯಲ್ಲಿನ ಸಿಗರೇಟು, ಬ್ರಿಟಿಷ್ ಉಚ್ಚಾರಣೆಯ ಇಂಗ್ಲಿಷನ್ನು ನೋಡಿ ನಮಗೆ ಅಚ್ಚರಿಯಾಗುತ್ತಿತ್ತು. ಆದರೆ ಟಿ.ಎನ್. ನಾಗರಾಜ್‌ರವರು ಈ ವ್ಯಕ್ತಿಯನ್ನು ತುಂಬಾ ಪ್ರೀತಿಯಿಂದ ಕಾಣುತ್ತಿದ್ದರು. ನಮಗೆಲ್ಲಾ ಇವರು ಎಂ.ಡಿ. ನಂಜುಂಡಸ್ವಾಮಿ ಎಂದೂ, ಮೈಸೂರಿನ ಹಿರಿಯ ನ್ಯಾಯವಾದಿ ಮಹಾಂತದೇವರು ಅವರ ಪುತ್ರನೆಂದೂ, ಈಗ ತಾನೆ ಜರ್ಮನಿಯಿಂದ ಹಿಂತಿರುಗಿದ್ದಾರೆಂದೂ, ಸಮಾಜವಾದಿ ಚಳವಳಿಯಲ್ಲಿ ತುಂಬಾ ಆಸಕ್ತಿ ಹೊಂದಿರುವವರೆಂದೂ ನಮಗೆ ಪರಿಚಯಿಸಿದರು.

ಮುಂದೆ ನಮ್ಮ ಎಲ್ಲ ಕಾರ್ಯಕ್ರಮಗಳಲ್ಲಿ ಎಂ.ಡಿ. ನಂಜುಂಡಸ್ವಾಮಿಯವರು ನೆಚ್ಚಿನ ಎಂ.ಡಿ.ಎನ್ ಆದರು. ವೇಷ ಪೈಜಾಮ, ಜುಬ್ಬಾಕ್ಕೆ ಬದಲಾಯಿತು. ಸಿಗರೇಟು ಹಾಗೇ ಉಳಿಯಿತು. ಹೀಗಿರುವಾಗ ಗೆಳೆಯ ಪ. ಮಲ್ಲೇಶರು ಒಂದು ಪ್ರಿಂಟಿಂಗ್ ಪ್ರೆಸ್ಸನ್ನು ಪ್ರಾರಂಭಿಸಿದರು. ಹಣವೇ ಇಲ್ಲದ ಆ ಕಾಲದಲ್ಲಿ ಇವರು ನಮಗೆಲ್ಲಾ ಕಾಫಿ ತಿಂಡಿ ಕೊಡಿಸಿ ನಮ್ಮ ಹೋರಾಟಗಳಿಗೆ ಕರಪತ್ರಗಳನ್ನು ಪುಕ್ಕಟೆಯಾಗಿ ಮುದ್ರಿಸಿ ಕೊಡುತ್ತಿದ್ದರು ಮತ್ತು ನಮ್ಮ ಕಾರ್ಯಕ್ರಮಗಳ ಮುಂದಾಳತ್ವ ವಹಿಸುತ್ತಿದ್ದರು.

"ಕನ್ನಡ ಬಳಸಿ, ಇಂಗ್ಲಿಷ್ ಇಳಿಸಿ" ಎಂಬ ಬೃಹತ್ ಸಮ್ಮೇಳನವನ್ನು ಆಯೋಜಿಸಿ ಪ್ರಾಂತೀಯ ಭಾಷೆಗಳ ಬಗ್ಗೆ ಒಂದು ದೊಡ್ಡ ಆಂದೋಲನವನ್ನೇ 'ಸಮಾಜವಾದಿ ಯುವಜನ ಸಭಾ' ನಡೆಸಿತು. ಆಗೆಲ್ಲಾ ಮೈಸೂರಿನಲ್ಲಿ ನಾನು, ಪ. ಮಲ್ಲೇಶ್ , ಕೆ. ರಾಮದಾಸ್ ಎಲ್ಲ ಕಾರ್ಯಕ್ರಮಗಳನ್ನು ಯೋಜಿಸುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದೆವು. ೧೯೬೪ ರಲ್ಲಿ ಶಿವಮೊಗ್ಗದಲ್ಲಿ ಸಮಾಜವಾದಿ ಯುವಜನ ಸಭಾದ ಬೃಹತ್ ರಾಜ್ಯ ಸಮ್ಮೇಳನವನ್ನು ನಡೆಸಿದಾಗ ಅದನ್ನು ಉದ್ಘಾಟಿಸಿದವರು ಪೂರ್ಣಚಂದ್ರ ತೇಜಸ್ವಿ. ಆ ಸಮ್ಮೇಳನಕ್ಕೆ ಸಮಯಕ್ಕೆ ಸರಿಯಾಗಿ ಬರದ ಕೆಲವು ಹಿರಿಯ ಸಮಾಜವಾದಿ ಧುರೀಣರ ವಿರುದ್ಧ ನಾವು ಘೋಷಣೆಗಳನ್ನು ಕೂಗಿ ಧಿಕ್ಕಾರ ಸೂಚಿಸಿದೆವು. ಅಂದಿನಿಂದಲೇ ಹಿರಿಯ ಸಮಾಜವಾದಿಗಳು ಮತ್ತು ಕಿರಿಯ ಸಮಾಜವಾದಿಗಳು ಎಂಬ ಎರಡು ಗುಂಪುಗಳಾದವು. ಹಿರಿಯರ ನೇತೃತ್ವವನ್ನು ಜೆ.ಎಚ್. ಪಟೇಲರೂ, ಕಿರಿಯರ ನೇತೃತ್ವವನ್ನು ಎಂ.ಡಿ.ಎನ್‌ರೂ ವಹಿಸಿದ್ದರು. ನಾವೆಲ್ಲ ಎಂ.ಡಿ.ಎನ್. ಪರ ನಿಂತೆವು.

ಹೀಗೆ ಎಂ.ಡಿ.ಎನ್.ರ ಪ್ರವೇಶ ವಿವಾದಾತ್ಮಕವಾಗಿಯೇ ಪ್ರಾರಂಭವಾಯಿತು. ಇಲ್ಲಿಂದಾಚೆಗೆ ಹಿರಿಯರಿಗೂ ಕಿರಿಯರಿಗೂ ಒಂದು ರೀತಿಯ ಮುಖ ಮುನಿಸು ಉಂಟಾಯಿತು. ಹಿರಿಯರ ಹೇಳಿಕೆಗಳನ್ನು ತಾತ್ವಿಕವಾಗಿ ಕಿರಿಯರು ವಿರೋಧಿಸುವುದೂ, ಈ ವಿರೋಧಕ್ಕೆ ಹಿರಿಯರು


ಸಿಟ್ಟಾಗುವುದು ಮತ್ತು ಇವರಿಂದ ಶಾಂತವೇರಿ ಗೋಪಾಲಗೌಡರ ಕಿವಿ ಕಚ್ಚುವುದೂ ನಡೆಯುತ್ತಿತ್ತು. ಆದರೂ ಗೋಪಾಲಗೌಡರು ಕಿರಿಯರ ಅಗಮನ ಸಮಾಜವಾದಿ ಆಂದೋಲನಕ್ಕೆ "ಒಂದು ಹೊಸ ಗಾಳಿಯಂತೆ" ಎಂದು ನಮ್ಮನ್ನು ಬೆಂಬಲಿಸುತ್ತಿದ್ದರು. ಇದನ್ನು ಹಿರಿಯರು ಸಹಿಸುತ್ತಿರಲಿಲ್ಲ. ಗೌಡರ ಕಿವಿ ಕಚ್ಚಲು ಸಮಯಕ್ಕಾಗಿ ಕಾಯುತ್ತಲೇ ಇರುತ್ತಿದ್ದರು.

ಮೈಸೂರಿನಲ್ಲಿ ಸಮಾಜವಾದಿ ಆಶಯದಂತೆ "ಜಾತಿ ವಿನಾಶ ಸಮ್ಮೇಳನ" ಎಂಬ ದೊಡ್ಡ ಕಾರ್ಯಕ್ರಮವನ್ನು ನಡೆಸಿದಾಗ ಅದನ್ನು ಕುವೆಂಪು ಉದ್ಘಾಟಿಸಿದರು. ಕೇಂದ್ರದಿಂದ ಕಿಷನ್ ಪಟ್ನಾಯಕ್‌ರು ಭಾಗವಹಿಸಿದ್ದರು. ಆಗ ಕಿರಿಯ ಗೆಳೆಯರಾದ ಕಾಳೇಗೌಡ ನಾಗವಾರ, ಶಿವರಾಮು ಕಾಡನಕುಪ್ಪೆ, ಶ್ರೀಕೃಷ್ಣ ಆಲನಹಳ್ಳಿ ಚಟುವಟಿಕೆಯಿಂದ ಓಡಾಡಿ ಬೆಂಬಲಿಸಿದರು ಮತ್ತು ಗಾಂಧಿ ವಿಚಾರ ಪರಿಷತ್‌ನ ಅನಂತರಂಗಾಚಾರ್ ಸಹ ನಮ್ಮೊಡನೆ ಸಹಕರಿಸಿದರು. ಇಲ್ಲಿ ರಾಜ್ಯದ ಹಿರಿಯ ಸಮಾಜವಾದಿಗಳಿಗೆ ಅವಕಾಶವೇ ಇರಲಿಲ್ಲ. ಇದಕ್ಕೆಲ್ಲಾ ಎಂ.ಡಿ.ಎನ್‌ರೇ ಕಾರಣವೆಂದು, ಅವರ ಮೇಲೆ ಸಿದ್ಧವಾಗತೊಡಗಿದ ಛಾರ್ಜ್‌ಶೀಟ್ ಉದ್ದವಾಗುತ್ತಲೇ ಹೋಯಿತು. ಈ ಸಮ್ಮೇಳನ ನಡೆದ ಒಂದೆರಡು ವರ್ಷಗಳಲ್ಲಿ 'ಕರ್ನಾಟಕದ ಬರಹಗಾರರ ಮತ್ತು ಕಲಾವಿದರ ಒಕ್ಕೂಟ' ಎನ್ನುವ ಸಾಂಸ್ಕೃತಿಕ ಕ್ರಾಂತಿಯನ್ನು ಘೋಷಿಸಿದೆವು. ಇದು ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದಲ್ಲಿ ಅಲ್ಲೋಲ ಕಲ್ಲೋಲವನ್ನು ಉಂಟುಮಾಡಿತು. ಹೀಗೆಯೇ ಕೋವೂರ್‌ರಿಂದ ಪ್ರಭಾವಿತರಾಗಿ ವಿಚಾರವಾದಿ ಒಕ್ಕೂಟವನ್ನು ಪ್ರಾರಂಭಿಸಿದೆವು. ಈ ಎಲ್ಲ ಕಾರ್ಯಕ್ರಮಗಳಲ್ಲಿ ಮೈಸೂರಿನ ಗೆಳೆಯರೇ ಮಂಚೂಣಿಯಲ್ಲಿದ್ದರೂ ಈ ಬಗ್ಗೆ ತಾತ್ವಿಕ ಬುನಾದಿ, ಪತ್ರಿಕಾಗೋಷ್ಠಿ, ಕರಪತ್ರ ಬರಹ, ಗೋಡೆ ಮೇಲಿನ ಬರಹ ಇವುಗಳೆಲ್ಲದರ ರೂವಾರಿ ಎಂ.ಡಿ.ಎನ್.ರೇ ಆಗಿರುತ್ತಿದ್ದರು. ಅಕ್ಷರಗಳನ್ನು ಕಲಾತ್ಮಕವಾಗಿ ಬರೆಯುತ್ತಾರೆಂದು ಗೋಡೆ ಬರಹ, ಭಿತ್ತಿಪತ್ರಗಳ ಮೇಲಿನ ಬರಹ ಇವುಗಳೆಲ್ಲದರ ಜವಾಬ್ದಾರಿಯನ್ನು ದೇವನೂರು ಮಹಾದೇವರಿಗೆ ವಹಿಸಲಾಗಿತ್ತು. 'ಸಮಾಜವಾದಿ ಯುವಜನ ಸಭಾ'ದ ಎಲ್ಲ ರೂಪಾಂತರಗಳ ಹೋರಾಟಕ್ಕೂ ನಾನೇ ಖಜಾಂಚಿ ಆಗಿರುತ್ತಿದ್ದೆ. ಕಾರ್ಯಕರ್ತರ ಕಾಫಿ, ತಿಂಡಿ, ಮುದ್ರಣ ಸಾಮಗ್ರಿಗಳ ಖರ್ಚುಗಳೆಲ್ಲವನ್ನು ಗೆಳೆಯ ಪ. ಮಲ್ಲೇಶರು ಭರಿಸುತ್ತಿದ್ದರು.

ಈ ರೀತಿ ನಡೆಯುತ್ತಿದ್ದ ನಮ್ಮ ಹೋರಾಟದ ರೂಪವನ್ನು ಬದಲಾಯಿಸಿ ಜೆ.ಪಿ. ಚಳವಳಿಯನ್ನು ಹೊಕ್ಕೆವು. ಎಂ.ಡಿ.ಎನ್, ತೇಜಸ್ವಿ, ಲಂಕೇಶ್, ಚಂಪಾ, ಸಿದ್ಧಲಿಂಗ ಪಟ್ಟಣಶೆಟ್ಟಿ ಇನ್ನೂ ಮುಂತಾದ ಗೆಳೆಯರು ಸೇರಿ 'ನವ ನಿರ್ಮಾಣ ಕ್ರಾಂತಿ' ಎನ್ನುವ ಹೋರಾಟವನ್ನು ಇಡೀ ಕರ್ನಾಟಕದಲ್ಲಿ ರೂಪಿಸಿದರು. ಆಗ ರಾಜಶೇಖರ ಕೋಟಿಯವರು ಧಾರವಾಡದಿಂದ ಬಂದು ನಮ್ಮನ್ನು ಸೇರಿಕೊಂಡರು.ಈ ಸಂದರ್ಭದಲ್ಲಿ ಯುವಜನ ಸಭಾದ ಹೋರಾಟಗಳು ಎಂ.ಡಿ.ಎನ್.ರವರ ನೇತೃತ್ವದಲ್ಲಿ ಅನೇಕ ಜನಪ್ರಿಯ ಮತ್ತು ರೋಚಕ ರೂಪಗಳನ್ನು ಪಡೆಯಿತು. ಕೆಲವು ಮುಖ್ಯವಾದವು ಎಂದರೆ ಬೆಂಗಳೂರು ಅಶೋಕ ಹೋಟೆಲ್‌ನಲ್ಲಿ ಯುವಜನ ಸಭಾ ಸದಸ್ಯರೆಲ್ಲಾ 'ಮಸಾಲದೋಸೆ'ಯನ್ನು ತಿಂದು, ಎಲ್ಲ ಕಡೆ ಕೊಡುವಂತೆ ೭೫ ಪೈಸೆ ಮಾತ್ರ ಕೊಡುತ್ತೇವೆಂದು ಧಿಕ್ಕಾರ ಕೂಗಿದ್ದು–ಪ್ರಧಾನಿ ಇಂದಿರಾಗಾಂಧಿ ಬೆಂಗಳೂರಿಗೆ ಬಂದಾಗ ಯುವಜನ ಸಭಾ ಸದಸ್ಯರು ಇಂಟೆಲಿಜೆನ್ಸ್ ಆಫೀಸರ್‌ಗಳಂತೆ ಒಳಹೊಕ್ಕು ಇಂದಿರಾ ಗಾಂಧಿಯವರು ವಿಮಾನದಿಂದ ಇಳಿಯುತ್ತಿದ್ದಂತೆ ಧಿಕ್ಕಾರ ಕೂಗುತ್ತ ಅವರ ಕಡೆ ಕರಪತ್ರಗಳನ್ನು ತೂರಿದ್ದು–ಹೈಕೋರ್ಟ್ ನ್ಯಾಯಾಧೀಶರುಗಳು ಕೆಲವು ತೀರ್ಮಾನಗಳನ್ನು ನಿಷ್ಪಕ್ಷಪಾತವಾಗಿ ಕೊಡುತ್ತಿಲ್ಲವೆಂದು ಸಿಟ್ಟಿನಿಂದ ಸಮಾಜವಾದಿ ಯುವಜನ ಸಭಾ ಸದಸ್ಯರು ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲೂ ಸಹ ಕರಪತ್ರಗಳನ್ನು ತೂರಿದ್ದು. ಈ ಕೊನೆಯ ಘಟನೆ ಇಡೀ ಕರ್ನಾಟಕದ ನ್ಯಾಯವಾದಿಗಳ ವೃಂದಕ್ಕೆ ಸಿಡಿಲಿನಂತೆ ಎರಗಿತು. ಆಗ ಎಂಡಿಎನ್‌ರನ್ನು ನೋಡಿದ ಕೆಲವು ಲಾಯರ್‌ಗಳು ವೀರಾವೇಶದಿಂದ ಎಂ.ಡಿ.ಎನ್.ರ ಕಡೆಗೆ ನುಗ್ಗಿ ಬಂದು ಜೋರು ಧ್ವನಿಯಲ್ಲಿ The sanctity of the court is spoiled today. You are responsible. ಎಂದು ಕೂಗಿದರು. ಎಂ.ಡಿ.ಎನ್.ರು ತಮ್ಮ ಗಡ್ಡ ಕೆರೆಯುತ್ತ Yeah, yeah, cleansing has just begun ಎಂದು ಹೇಳುತ್ತಾ ನಿಧಾನವಾಗಿ ಹೊರನಡೆದರು.

ಕೆಲವು ವೇಳೆ ಬೇರೆಯವರ ನಡವಳಿಕೆಯಿಂದ ಸ್ವತಃ ಎಂ.ಡಿ.ಎನ್.ರವರಿಗೆ ನೋವಾಗುತ್ತಿತ್ತು. ಇಂಥ ಅನೇಕ ಘಟನೆಗಳಿವೆ. ಇವುಗಳಲ್ಲಿ ಒಂದು ಘಟನೆಯನ್ನು ಮಾತ್ರ ಹೇಳಲಿಚ್ಛಿಸುತ್ತೇನೆ. ಒಂದು ಶಿವರಾತ್ರಿಯ ದಿನ ಬೆಳಗ್ಗೆ ಯಾವುದೋ ಕಾರ್ಯಕ್ರಮವನ್ನು ಚರ್ಚಿಸಲು ಗೆಳೆಯ ರಾಮದಾಸ್ ಎಂ.ಡಿ.ಎನ್.ರ ಮನೆಗೆ ಹೋದರು. ರಾಮದಾಸ್‌ರವರನ್ನು ನೋಡಿ ಎಂ.ಡಿ.ಎನ್.ರು ಎದ್ದು ಒಳಗೆ ಹೋದರು. ಸ್ವಲ್ಪ ಹೊತ್ತಿನ ನಂತರ ಸರಸರನೆ ತಮ್ಮ ದಿರಿಸನ್ನು ಧರಿಸಿ ಗೆಳೆಯ ರಾಮದಾಸ್‌ರೊಡನೆ ಹೊರಹೊರಟರು. ಪ್ರತಿದಿನದ ರೂಢಿಯಂತೆ ಸರಸ್ವತಿಪುರಂನ ೧೪ನೇ ಮೇಯಿನ್‌ನಲ್ಲಿದ್ದ ರಾಮದಾಸ್ ಮನೆಕಡೆ ಬರುತ್ತಿದ್ದರು. ನೋಡಲು ತುಂಬಾ ಸಿಟ್ಟು ಮತ್ತು ದುಗುಡದಿಂದಿರುವಂತೆ ಕಾಣುತ್ತಿದ್ದರು. ಎಂ.ಡಿ.ಎನ್. ಮತ್ತು ರಾಮದಾಸ್‌ರ ಮನೆಗಳ ನಡುವೆ ನನ್ನ ಮನೆ ಇತ್ತು. ಇಬ್ಬರೂ ನೇರ ನಮ್ಮ ಮನೆಗೆ ಬಂದು 'ಏನು ಮಾಡುತ್ತಿದ್ದೀರಿ ಪದ್ಮಾ?' ಎಂದು ಕೂಗಿದರು. ಇವರ ಧ್ವನಿ ಕೇಳಿಸಿಕೊಂಡು ನಾನು, ಪದ್ಮಾ ಹೊರಬಂದು ಮಾತನಾಡಿಸಿ, ಕೂರಲು ಹೇಳಿ ಇಬ್ಬರಿಗೂ ಕಾಫಿ ಕೊಟ್ಟೆವು. ಏನು ತಿಂಡಿ ಮಾಡುತ್ತಿರುವಿರಿ ಎನ್ನುತ್ತಾ, ಪದ್ಮಾ ರುಚಿಕರವಾಗಿ ಮಾಡುತ್ತಿದ್ದ ಅವರೆಕಾಳಿನ ರೊಟ್ಟಿಯನ್ನು ಅವರೇ ಕೇಳಿ ಪಡೆದು ಸವಿದರು. ಗೆಳೆಯರಿಬ್ಬರೂ ಚಾರ್‌ಮಿನಾರ್ ಸಿಗರೇಟನ್ನು ಹತ್ತಿಸಿ ೧೪ನೇ ಮೇಯಿನ್ ಕಡೆ ಹೊರಟರು.

ಅವತ್ತೆಲ್ಲಾ ಎಂ.ಡಿ.ಎನ್. ತುಂಬಾ ಸಪ್ಪಗೇ ಇದ್ದರು. ಆ ಸಂಜೆ ನಮ್ಮ ಮಾಮೂಲಿನಂತೆ ಗಂಗೋತ್ರಿಯ ಕ್ಯಾಂಟೀನ್‌ನಲ್ಲಿ ಅವರನ್ನು ಭೇಟಿಯಾಗಲು ಹೋದೆ. ನಾನು ಅಲ್ಲಿಗೆ ಹೋದಾಗ ಅವರು ಏಕಾಂಗಿಯಾಗಿ ಕುಳಿತಿದ್ದರು. ಮಾಮೂಲಿ ಟೀ ಹೇಳಿದ ಮೇಲೆ ಮೆಲ್ಲಗೆ ಅವರ ಮೌನಕ್ಕೆ ಕಾರಣವೇನೆಂದು ಪ್ರಶ್ನಿಸಿದೆ. ಕೆಲವು ನಿಮಿಷಗಳು ಸುಮ್ಮನಿದ್ದು ನಿಧಾನವಾಗಿ ಹೇಳಿದರು. ಅಂದು ಬೆಳಗ್ಗೆ ಅವರ ಮನೆಗೆ ರಾಮದಾಸ್ ಹೋದಾಗ ಎಂ.ಡಿ.ಎನ್.ರು ಒಳಗೆ ಹೋಗಿ ಕೆಲಸದಾಕೆಗೆ ರಾಮದಾಸ್‌ರವರಿಗೆ ಕಾಫಿ ಕೊಡಲು ಹೇಳಿದ್ದಾರೆ. ಆಗ ಆ ಮನೆಯ ಹಿರಿಯರೊಬ್ಬರು 'ಇಂದು ಶಿವರಾತ್ರಿ. ಅವನು ಕುಡಿದ ಲೋಟವನ್ನು ತೊಳೆಯಲು ಸಾಧ್ಯವಿಲ್ಲ'ವೆಂದು ಹೇಳಿದರಂತೆ. ಇದರಿಂದ ಆಘಾತಗೊಂಡ ಎಂ.ಡಿ.ಎನ್.ರವರು ಬೆಳಗ್ಗೆ ಮನೆ ಬಿಟ್ಟವರು ಮನೆಯ ಕಡೆ ಹೋಗಿರಲೇ ಇಲ್ಲ. ಆ ಸಂಜೆ ಅಲ್ಲಿಗೆ ಬಂದ ಪೋಲಂಕಿ, ನಾನು ಮತ್ತು ಎಂ.ಡಿ.ಎನ್. ಮೆಟ್ರೋಪೋಲ್ ಹೋಟೆಲ್‌ಗೆ ಹೋದೆವು. ಅಲ್ಲಿ ಸಾಹಿತ್ಯ, ರಾಜಕೀಯ ಇತ್ಯಾದಿ ವಿಷಯಗಳ ದೀರ್ಘ ಚರ್ಚೆಯ ನಂತರ ಮಧ್ಯರಾತ್ರಿ ಹೊತ್ತಿಗೆ ಎಂ.ಡಿ.ಎನ್.ರನ್ನು ಅವರ ಮನೆ ತಲುಪಿಸಿ ನಾನು ನನ್ನ ಮನೆಗೆ ಬಂದೆ. ಈ ಘಟನೆಯಿಂದ ಸಮಾಜವಾದದ ಆಚರಣೆ ಎಷ್ಟು ಕಷ್ಟ ಎಂಬುದು ಎಂ.ಡಿ.ಎನ್.ರಿಗೆ ಹೊಳೆದಿರಬೇಕು.



ಕೆ. ರಾಮದಾಸ್‌ರೊಂದಿಗೆ ಎಂ.ಡಿ.ಎನ್.

ಎಂ.ಡಿ.ಎನ್.ರವರು ಬೆಂಗಳೂರಿನ ಬಿ.ಎಂ.ಎಸ್. ಕಾಲೇಜಿನಲ್ಲಿ ಕೆಲಸಕ್ಕೆ ಸೇರಿದ ಮೇಲೆ ತಮ್ಮ ಕಾರ್ಯಕ್ಷೇತ್ರವನ್ನು

ಬೆಂಗಳೂರಿಗೆ ವಿಸ್ತರಿಸಿಕೊಂಡರು. ಗಣೇಶ ಲಾಡ್ಜ್‌ನಲ್ಲಿ ವಾಸ, ರಾಮಕೃಷ್ಣ ಲಾಡ್ಜ್‌ನಲ್ಲಿ ಬೆಳಗಿನಿಂದ ಸಂಜೆವರೆಗೆ ಕಾಫಿ, ಟೀ, ತಿಂಡಿ, ಹರಟೆ, ವಿಚಾರ ಗೋಷ್ಠಿ, ಕರಪತ್ರ ತಯಾರಿ ಇತ್ಯಾದಿ ಕಾರ್ಯಗಳಲ್ಲೇ ಮಗ್ನರಾಗಿರುತ್ತಿದ್ದರು. ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳ ಗೆಳೆಯರೆಲ್ಲರೂ ಅವರನ್ನ ಭೇಟಿ ಮಾಡಲು ಅಲ್ಲಿಗೇ ಬರುತ್ತಿದ್ದರು. ಇಂಥ ಸಮಯದಲ್ಲೇ ರವಿವರ್ಮಕುಮಾರ್ ಹಾಗೂ ಎಸ್.ಆರ್.ನಾಯಕ್, ಕಲಾವಿದ ಕೆ.ಟಿ.ಶಿವಪ್ರಸಾದ್ ಇವರ ಸಂಪರ್ಕಕ್ಕೆ ಬಂದರು. ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಒಂದು ವರ್ಷ ತುಂಬಾ ಬರಗಾಲ. ಆ ಕಡೆಯ ಜನರಿಗಾಗಿ 'ಸಮಾಜವಾದಿ ಯುವಜನ ಸಭಾ' ಒಂದು ಪರಿಹಾರ ಕಾರ್ಯಕ್ರಮವನ್ನು ಹಾಕಿಕೊಂಡು, ಹಣ ಇತ್ಯಾದಿಗಳನ್ನು ಸಂಗ್ರಹಿಸಿ ಆಯಾ ಜಿಲ್ಲೆಗಳಲ್ಲಿ ಡೆಪ್ಯುಟಿ ಕಮೀಷನರ್ ಮತ್ತು ಕೆಲವು ಸಂಘ ಸಂಸ್ಥೆಗಳೊಡನೆ ಕೈ ಜೋಡಿಸಿ ಪರಿಹಾರವನ್ನು ಹಂಚುತ್ತಿದ್ದೆವು. ಇಂಥ ಒಂದು ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ದೊಡ್ಡ ಪ್ರಮಾಣದಲ್ಲಿ ಏರ್ಪಡಿಸಿದ್ದೆವು. ರಾಜ್ಯದ ಎಲ್ಲ ಗೆಳೆಯರು ಇದರಲ್ಲಿ ಭಾಗವಹಿಸಿದ್ದರು. ಈ ವಿಷಯವಾಗಿ ಒಂದು ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ, ಬೆಂಗಳೂರಿನ ಕೆಲವು ಕಡೆ ಹಣ ಸಂಗ್ರಹಿಸುವುದಾಗಿಯೂ, ಯುವಜನ ಸಭಾದ ಗೆಳೆಯರಲ್ಲದೆ ಆಸಕ್ತರೆಲ್ಲರೂ ಭಾಗವಹಿಸಬೇಕೆಂದು ಪ್ರಾರ್ಥಿಸಿದ್ದೆವು.

ಮರುದಿನ ಬೆಂಗಳೂರಿನ ಕೆಲವು ಕಡೆ ನಮ್ಮ ಕಾರ್ಯಕ್ರಮ ಸರಿಯಾಗಿ ಚಾಲೂ ಆಯಿತು. ನಾವೆಲ್ಲ ಕೆಂಪೇಗೌಡ ರಸ್ತೆಯ ಅಲಂಕಾರ್ ಟಾಕೀಸಿನ ಎದುರು ಹಣ ಸಂಗ್ರಹಿಸುತ್ತಿದ್ದೆವು. ಜನ ಜಾಸ್ತಿಯಾಗಿದ್ದರಿಂದ 'ಏನಿದು?' ಎಂದು ಕುತೂಹಲದಿಂದ ನೋಡುವವರ ಸಂಖ್ಯೆ ಜಾಸ್ತಿಯಾಗಿ ಸಂಚಾರಕ್ಕೆ ಸ್ವಲ್ಪ ತೊಂದರೆಯಾಗುತ್ತಿತ್ತು. ಅಲ್ಲಿದ್ದ ಏಳೆಂಟು ಜನ ಪೋಲೀಸರು ಸಂಚಾರವನ್ನು ನಿಯಂತ್ರಿಸಲು ಹೆಣಗುತ್ತಿದ್ದರು. ನಾನು, ತೇಜಸ್ವಿ, ರಾಮದಾಸ್, ಎಂ.ಡಿ.ಎನ್. ಇನ್ನೂ ಕೆಲವರು ಟಾಕೀಸಿನ ಎದುರು ಫುಟ್‌ಪಾತಿನಲ್ಲಿದ್ದ ಗುಪ್ತಾ ಮಾರ್ಕೆಟ್ ಬಳಿ ನಿಂತಿದ್ದೆವು. ಆಗ ಸಂಚಾರಕ್ಕೆ ತೊಂದರೆ ಆಗಿದ್ದನ್ನು ತಿಳಿದೋ ಏನೋ ಒಬ್ಬ ಪೋಲಿಸ್ ಆಫಿಸರ್ ಒಂದು ಬುಲೆಟ್ ಮೋಟಾರ್ ಸೈಕಲ್ ಮೇಲೆ ಅಲ್ಲಿಗೆ ಡುಗ್ಗು...ಡುಗ್ಗು ಎನ್ನುತ್ತಾ ಬಂದರು. ಬಂದು ಅತ್ಯಂತ ದರ್ಪದಿಂದ ನಮ್ಮೆಲ್ಲರ ಕಡೆ ನೋಡುತ್ತಾ 'What is this? What is going on?' ಎಂದು ಜೋರಾಗಿ ಕೇಳಿದರು. ಪ್ರೊ.ಎಂ.ಡಿ.ಎನ್ ತಮ್ಮ ಗಡ್ಡವನ್ನು ನೀವಿಕೊಳ್ಳುತ್ತಾ 'Have you not read today's news papers first in the morning?' ಎಂದರು. ಆಗ ಆ ಪೋಲಿಸ್ ಆಫಿಸರ್ ಅವಾಕ್ಕಾದರು. ಮುಂದುವರಿದ ಎಂ.ಡಿ.ಎನ್.ರು 'Please go home and come back after reading the news papers' ಎಂದರು. ತಕ್ಷಣ ಆ ಪೋಲಿಸ್ ಆಫಿಸರ್ ತನ್ನ ಮೋಟಾರ್ ಸೈಕಲ್‌ನೊಡನೆ ಮಾಯವಾದನು.

ಪೂರ್ಣಚಂದ್ರ ತೇಜಸ್ವಿಯವರು ಮೂಡಿಗೆರೆಯಲ್ಲಿ ವ್ಯವಸಾಯವನ್ನು ಪ್ರಾರಂಭಿಸಿದಾಗ ಸಹಜವಾಗಿ ಕಾಫಿ ಬೋರ್ಡಿನ ವಿರುದ್ಧ ಸಿಡಿದೆದ್ದರು. ಕಾಫಿ ಬೋರ್ಡಿನ ಅನೇಕ ಕಾನೂನುಗಳ ವಿರುದ್ಧ ಹೋರಾಟವನ್ನು ಯುವಜನ ಸಭಾದ ಸಹಯೋಗದೊಂದಿಗೆ ರೂಪಿಸುತ್ತಿದ್ದರು. ಬ್ಯಾಂಕಿನವರ ಕಿರುಕುಳ, ಸಾಲ ಮಂಜೂರು ಮಾಡಲು ವಿವಿಧ ದಾಖಲೆಗಳನ್ನು ಕೇಳುತ್ತಿದ್ದುದು, ಒಂದನ್ನು ಕೊಟ್ಟರೆ ಇನ್ನೊಂದನ್ನು ತಾ ಎನ್ನುತ್ತಿದ್ದುದು ರೈತರಿಗೆ ವಿನಾಕಾರಣ ಕಿರುಕುಳ ಕೊಡುವ ಕಾರ್ಯಕ್ರಮದಂತೆ ಕಂಡಿತು. ಆಗೆಲ್ಲ ಬ್ಯಾಂಕ್‌ಗಳ ಮುಂದೆ ಎಂ.ಡಿ.ಎನ್.ರ ನೇತೃತ್ವದಲ್ಲಿ ಯುವಜನ ಸಭಾದವರು ಪ್ರತಿಭಟಿಸುತ್ತಿದ್ದರು. ಕೆಲವು ವೇಳೆ ೧೦೭ನೇ ಸೆಕ್ಷನ್ ಪ್ರಕಾರ ಕೇಸುಗಳೂ ದಾಖಲಾದವು. ಆಗ ಇವುಗಳೆಲ್ಲದರ ವಿರುದ್ಧ ಹೋರಾಡಲು ಸಂಘಟನೆಯೊಂದಿರಬೇಕೆಂದು "ದಕ್ಷಿಣ ಭಾರತ ಸಣ್ಣ ಬೆಳೆಗಾರರ ಒಕ್ಕೂಟ" ಎಂಬ ಸಂಘಟನೆಯನ್ನು ತೇಜಸ್ವಿ ಹುಟ್ಟುಹಾಕಿದರು.

ಶಿವಮೊಗ್ಗದಲ್ಲಿ ಎನ್.ಡಿ.ಸುಂದರೇಶ್, ಕಡಿದಾಳ್ ಶಾಮಣ್ಣ, ಬಸವರಾಜಪ್ಪ ಇನ್ನೂ ಅನೇಕ ಸಮಾಜವಾದಿ ಗೆಳೆಯರು "ಕಬ್ಬು ಬೆಳೆಗಾರರ ಒಕ್ಕೂಟ" ಎಂಬ ಸಂಘಟನೆಯನ್ನು ಪ್ರಾರಂಭಿಸಿ ಇಡೀ



ಜಿಲ್ಲೆಯಾದ್ಯಂತ ತೀವ್ರವಾದ ಹೋರಾಟವನ್ನು ನಡೆಸಿದರು. ಇವರ ಹೋರಾಟ, ಮುಷ್ಕರ, ರಸ್ತೆ ತಡೆ, ಕಾರ್ಖಾನೆಗೆ ಮುತ್ತಿಗೆ ಕಾರ್ಯಕ್ರಮಗಳು ಇಡೀ ರಾಜ್ಯದ ಗಮನ ಸೆಳೆದವು. ರೈತರ ಹೋರಾಟ ಇಷ್ಟೊಂದು ಗಂಭೀರ ಸ್ವರೂಪ ಪಡೆದಿದ್ದರೂ ಸರ್ಕಾರ 'ಕಮಕ್ ಕಿಮಕ್' ಅನ್ನದೆ ಒಳಗೊಳಗೆ ಕಾರ್ಖಾನೆಯ ಮಾಲೀಕನ ಪರವೇ ಇತ್ತು. ರೈತರ ಮುಷ್ಕರ ತೀವ್ರವಾದಷ್ಟೂ ಸರ್ಕಾರ ಮೌನಕ್ಕೆ ಶರಣಾಯಿತು.

ಇದೆಲ್ಲಾ ಕಾರಣಗಳಿಂದ ಮುಷ್ಕರವನ್ನು ತೀವ್ರಗೊಳಿಸಬೇಕೆಂದೂ, ಕಬ್ಬಿನ ಬೆಳಗಷ್ಟೇ ಅಲ್ಲದೆ ರೈತರ ಎಲ್ಲ ಬೆಳೆಗಳಿಗೂ ವೈಜ್ಞಾನಿಕವಾದ ದರ ನಿಗದಿಯಾಗಬೇಕೆಂದೂ, ಮಾಜಿ ಮಂತ್ರಿ ಹೆಚ್.ಎಸ್.ರುದ್ರಪ್ಪನವರ ನೇತೃತ್ವದಲ್ಲಿ ರೈತಸಂಘವನ್ನು ಸ್ಥಾಪಿಸಬೇಕೆಂದೂ ಎನ್.ಡಿ.ಸುಂದರೇಶ್ ಮತ್ತು ಗೆಳೆಯರು ನಿರ್ಧರಿಸಿದರು. ಆಗ ತೇಜಸ್ವಿಯವರೂ ಸಹ ದಕ್ಷಿಣ ಭಾರತ ಸಣ್ಣ ಬೆಳೆಗಾರರ ಒಕ್ಕೂಟವನ್ನು ರೈತಸಂಘದಲ್ಲಿ ಸೇರಿಸಿ ರೈತಸಂಘವನ್ನು ಬಲಪಡಿಸಬೇಕೆಂದು ದನಿಗೂಡಿಸಿದರು. ಈ ವಿಷಯದಲ್ಲಿ ರಾಜ್ಯಾದ್ಯಂತ ಪ್ರವಾಸ ಮಾಡಿ ವಿವಿಧ ಜಿಲ್ಲೆಗಳಲ್ಲಿ ರೈತರನ್ನು ಒಗ್ಗೂಡಿಸಿ ಶಿವಮೊಗ್ಗಾದಲ್ಲಿ ರೈತಸಂಘದ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಿದರು. ಆಗ ಪೂರ್ಣಚಂದ್ರ ತೇಜಸ್ವಿಯವರು 'ನಿಮ್ಮ ಹೋರಾಟಕ್ಕೆ ಕಾನೂನಿನ ಬೆಂಬಲ, ತಾತ್ವಿಕ ರೂಪ, ಅಂಕಿ ಅಂಶಗಳಿಂದ ರೈತರ ಬವಣೆಯನ್ನು ವಿವರಿಸುವ ಕಾರ್ಯ, ಸರ್ಕಾರದೊಡನೆ ಮಾತುಕತೆಯಾಗಬೇಕಾದರೆ ಜಾಣ ನಿಲುವು, ಇನ್ನಿತರ ಸಹಾಯಗಳನ್ನು ಸಮರ್ಥವಾಗಿ ನಿರ್ವಹಿಸಲು ನಂಜುಂಡಸ್ವಾಮಿಯವರೇ ಸೂಕ್ತ ವ್ಯಕ್ತಿ. ಆದ್ದರಿಂದ ನೀವು ಎಂ.ಡಿ.ಎನ್.ರನ್ನು ರೈತಸಂಘದಲ್ಲಿ ಇಟ್ಟುಕೊಳ್ಳಿ' ಎಂದು ಎಲ್ಲ ನಾಯಕರುಗಳಿಗೂ ಸೂಚಿಸಿದರು. ಹೀಗೆ ರೈತಸಂಘಕ್ಕೆ ಎಂ.ಡಿ.ಎನ್.ರ 'ಎಂಟ್ರಿ' ಆಯಿತು.

ರೈತಸಂಘದ ಉದ್ಘಾಟನೆ ಆದ ಮೇಲೆ ಎಲ್ಲ ಜಿಲ್ಲೆಗಳಲ್ಲೂ ರೈತಸಂಘವನ್ನು ಸ್ಥಾಪಿಸಿದ ನಾಯಕರುಗಳೆಲ್ಲಾ ರಾಜ್ಯಾದ್ಯಂತ ಪ್ರವಾಸ ಮಾಡಿ ಬಹುಶಃ ೧೯೮೨ರ ಅಕ್ಟೋಬರ್ ೨, ಗಾಂಧಿ ಜಯಂತಿಯಂದು ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲಿ ಬೃಹತ್ ರಾಜ್ಯ ಸಮ್ಮೇಳನವನ್ನು ಏರ್ಪಡಿಸಿದರು. ಅಲ್ಲಿಂದಲೇ ವಿಧಾನಸೌಧದ ಮೇಲೆ ರೈತರ ಬಾವುಟ ಹಾರಿಸುವುದಾಗಿ ಎಂ.ಡಿ.ಎನ್.ರವರು ಘೋಷಿಸಿದರು. ಈ ಸಭೆಯಲ್ಲಿ ಎನ್.ಡಿ. ಸುಂದರೇಶ್, ತೇಜಸ್ವಿ, ಬೇರೆ ಬೇರೆ ಜಿಲ್ಲೆಗಳ ಪ್ರಮುಖ ರೈತ ನಾಯಕರೆಲ್ಲರೂ ಮಾತನಾಡಿದರು. ಈ ಸಭೆಯಲ್ಲಿ ತೇಜಸ್ವಿ ಮಾಡಿದ ಭಾಷಣ ಎಂ.ಡಿ.ಎನ್.ರಿಗೆ ಇಷ್ಟವಾದಂತೆ ಕಾಣಲಿಲ್ಲ.

ಇಲ್ಲಿಯವರೆಗೆ ನಮಗೆ ಆತ್ಮೀಯರಾಗಿದ್ದ ಎಂ.ಡಿ.ಎನ್.ರ ಧೋರಣೆ ನಮ್ಮ ಬಗ್ಗೆ ಬದಲಾಯಿತು. ನಮ್ಮನ್ನು ಸಭೆ ಸಮಾರಂಭಗಳಲ್ಲಿ ಭೇಟಿಯಾದರೆ ಕಂಡರೂ ಕಾಣದಂತೆ ಇರುತ್ತಿದ್ದರು. ನಾವೇ ಹೋಗಿ ಮಾತನಾಡಿಸಿದರೆ ಬಹಳ ಹಿಂದಿನ ಮಿತ್ರರನ್ನು ಜ್ಞಾಪಿಸಿಕೊಂಡಂತೆ 'ಓಹೋ! ನೀವೋ! ಮೈಸೂರಿನಲ್ಲಿ ಕೆಲವು ಕ್ರಾಂತಿಕಾರಿಗಳಿದ್ದಾರೆಂದು

(೬೦ನೇ ಪುಟಕ್ಕೆ

# 'ಚಾರ್ವಾಕ'ದ ಅಂಗಳದಲ್ಲಿ ಕಲಿತ ಸಮಾಜವಾದ..

–ಎನ್. ಆರ್. ಸ್ನೇಹಾ



**ಕೋ**ಪವಿತ್ತು, ತಾಪವಿತ್ತು, ತಾಪತ್ರಯವಿತ್ತು, ಸಿಡುಕಿತ್ತು, ಸೆಡವಿತ್ತು, ಕುಹಕದ ಮಾತುಗಳಿದ್ದವು. ಜತೆಗೇನೆ, ಪ್ರೇಮವಿತ್ತು, ಔದಾರ್ಯವಿತ್ತು, ಹೊಗಳಿಕೆಯಿತ್ತು, ನೊಂದವರಿಗೆ, ಸಂಕಟದಲ್ಲಿದ್ದವರಿಗೆ ಮಿಡಿಯುವ ಮನುಷ್ಯತ್ವವಿತ್ತು. ಒಮ್ಮೊಮ್ಮೆ ಕೋಪದ ತಾಪ ತಟ್ಟಿದ ಗಳಿಗೆ ಸಿಟ್ಟಾಗಿದ್ದು, ಸಿಡುಕುಗಳು ಸಹನೆಯನ್ನು ಕೆಡಿಸಿದ್ದು ಮತ್ತೊಂದು ಗಳಿಗೆಯ ಪ್ರೀತಿಯಲ್ಲಿ, ಇನ್ಯಾರದೋ ಕಣ್ಣ ನಗೆ ಬೆಳಕಲ್ಲಿ ಅದೆಲ್ಲ ಮಾಯವಾಗಿ ಹೋಗಿದ್ದು; ಕೋಪ ತಾಪ ತಾಪತ್ರಯಗಳೇ ಪಾಠಗಳಾಗಿ ಪರಿಣಮಿಸಿದ್ದು... ಬದುಕಿನಲ್ಲಿ 'ಬಣ್ಣ'ದ ಗೌಜಿಲ್ಲದ, ಕಪ್ಪು ಗೆರೆಯ, ಅದೆಷ್ಟೊಂದು ಸ್ಪಷ್ಟ ಚಿತ್ತಾರಗಳು ?

–

ಕೆಲವು ಓರಗೆಯವರಂತೆ,ಸಹಪಾಠಿಗಳಂತೆ ಯಾವುದೋ ವೃತ್ತಿ ಉಸಾಬರಿಯಲ್ಲಿ ಕಳೆದುಹೋಗದೆ, ದೊಡ್ಡ ಸಂಬಳದ ಬೆನ್ನು ಬೀಳದೆ, ಖುಷಿ ಕೊಡುವ ವೃತ್ತಿಗೆ;ಬದುಕಿಗೆ ನನ್ನನ್ನು ಒಳಗು ಮಾಡಿಕೊಂಡು ಇದ್ದುದರಲ್ಲೇ ಸಂಭ್ರಮಿಸುವುದು ಸಾಧ್ಯವಾಗಿದೆ ಎಂದರೆ ಅದಕ್ಕೆ ಆ ಹೊತ್ತು 'ಚಾರ್ವಾಕ'ದ ಅಂಗಳ ಕಲಿಸಿದ ಇಂಥೆಲ್ಲ ಪಾಠಗಳೇ ಕಾರಣವಿರಬೇಕು. ಈ ಅಂಗಳಕ್ಕೆ ಬಂದು ಹೋದವರ ಘನತೆ, ತಿಳುವಳಿಕೆಯ ಹರವು, ಕಾಡು ಹರಟೆಯಲ್ಲಿಯೂ ಫಲಿಸುತ್ತಿದ್ದ ಒಳಿತಿನ ಆಶಯ, ಗಹನ ಚರ್ಚೆಗಳನ್ನೊಳಗೊಂಡಿರುತ್ತಿದ್ದ ಕ್ಷಣಿಕ ಜಗಳಗಳು; ಅದರಾಚೆಗೂ ಅರಳುತ್ತಿದ್ದ ನಗೆಯ ಸಮಾಧಾನಗಳು;ಯಾವುದೋ ನಮ್ಮದಲ್ಲದ ಸಂಗತಿಯನ್ನೂ ನಮ್ಮೊಳಗೊಳಿಸಿಕೊಂಡು ಸ್ಪಂದಿಸುವ ಕಳಕಳಿಗಳು...ಹೀಗೆ ಒಳಿತನ್ನು, ಖುಷಿಯನ್ನು, ಕೆಡುಕನ್ನು, ನೋವನ್ನು;ದುಗುಡ–ದುಮ್ಮಾನಗಳನ್ನು ಸಮವಾಗಿ ಹಂಚಿಕೊಳ್ಳುವ; ಯಾರಿಗೂ ಕೇಡು ಬಯಸದ;ಬಯ್ದವರೆನ್ನ ಬಂಧುಗಳೆಂದು ಮುನ್ನಡೆಯುವ, ಒಳಿತಿಗೆ ತುಡಿಯುವ ಕೂಟಗಳು... ಸಂಗತಿಗಳು ಒಂದೇ ಎರಡೇ.

–

ಇದೇನಾ ಸಮಾಜವಾದ? ಅದೊಂದು ಪದವಾಗಿ, ವಾದವಾಗಿ ತಿಳುವಳಿಕೆಯ ನೆಲೆಯಲ್ಲಿ ನಾನು ಬಲ್ಲ ಸಂಗತಿ ಅಷ್ಟಕ್ಕಷ್ಟೆ. ಆದರೆ, ತೀರಾ ಎಳೆಯ ವಯಸ್ಸಿನಿಂದಲೇ ಬದುಕಿನ ನಿತ್ಯದಲ್ಲಿ ಆ ಪದವನ್ನು; ಅದರ ಸದಾಶಯವನ್ನು ಕಿವಿ ಮೇಲೆ ಬೀಳಿಸಿಕೊಂಡೇ ಬೆಳೆದವಳಾದ ನನಗೆ, ಒಮ್ಮೊಮ್ಮೆ ಅದು ಸುಡು ನೀರಿನ ಅನುಭವ ನೀಡಿದೆ. ಮತ್ತೊಮ್ಮೆ ಸುಟ್ಟ ಗಾಯಕ್ಕೆ ಹಚ್ಚುವ ಮದ್ದಿನ ಮುಲಾಮು ಆಗಿಯೂ ಪರಿಣಮಿಸಿದೆ. ಕೌಟುಂಬಿಕ ನೆಲೆಯಲ್ಲಿ ಬೇರೆಯದೇ ರೀತಿಯ ಸಂಭ್ರಮಗಳನ್ನು ತುಳುಕಿಸುತ್ತಿದ್ದ ಮನೆಗಳನ್ನು ನೋಡುತ್ತಿದ್ದ ನನಗೆ 'ನಮ್ಮ ಮನೆ ಹೀಗೇಕಿಲ್ಲ' ಎಂದು ಅನೇಕ ಬಾರಿ ಅನ್ನಿಸಿದ್ದಿದೆ. ಅವೆಲ್ಲಕ್ಕಿಂತ ಭಿನ್ನ ಎನ್ನುವ ಸಂಗತಿ ಬೇರೆಯದೇ ತೆರನಾದ ಖುಷಿಯನ್ನೂ ತುಂಬಿದೆ. ಒಟ್ಟು ಹರಟೆಗಳಲ್ಲಿ, ಚಳವಳಿ ಸಿದ್ಧತಾ ಸಭೆಗಳಲ್ಲಿ, 'ಮಾನವ ಮಂಟಪ'ದ ಮದುವೆಗಳಲ್ಲಿ ಇರುತ್ತಿದ್ದ ಲವಲವಿಕೆ, ಜೀವಂತಿಕೆಯ ಜೊತೆ ಜೊತೆಗೇ ಮತ್ಯಾವುದೋ ಸಂದರ್ಭದ ಸುಡು ನೋವಿನಲ್ಲಿ ಅನಾಥ ಭಾವ ಮೂಡಿಸಿದ್ದೂ ಇದೆ. ಇಂಥೆಲ್ಲ ಸುಖ–ಕಷ್ಟದ ಎರಕ ಮನಸ್ಸನ್ನೂ ಗಟ್ಟಿಗೊಳಿಸಿದೆ; ಬದುಕಿನ ಪ್ರಶ್ನೆಗಳನ್ನೆದುರಿಸಲು ಹದಗೊಳಿಸಿದೆ.

–



ಸ್ವಾತಂತ್ರ್ಯ ಹೋರಾಟಗಾರ ದಿ. ಎಂ.ಎನ್. ಜೋಯಿಸ್ ದಂಪತಿಗಳೊಂದಿಗೆ ತಂದೆ ಕೆ. ರಾಮದಾಸ್, ತಾಯಿ ನಿರ್ಮಲಾ ಹಾಗೂ ದೇವನೂರ ಮಹಾದೇವ ಅವರ ಜೊತೆಯಲ್ಲಿ ಸ್ನೇಹಾ

ಅಪ್ಪ–ಅಮ್ಮ ನನಗೆ ಮೊದಲಿಟ್ಟ ಹೆಸರು 'ಸಮತಾ'. ಅದೂ, ತಾವು ನಂಬಿದ್ದ ಸಮತಾವಾದದ ಕಾರಣಕ್ಕೆ. ನನ್ನ ಹುಟ್ಟಿನ ಆಜೂಬಾಜಿನಲ್ಲಿ ಸ್ನೇಹಲತಾ ರೆಡ್ಡಿ ಅವರು ತೀರಿ ಹೋಗಿಲ್ಲವಾಗಿದ್ದರೆ ಬಹುಶಃ ಶಾಲೆಗಳ ದಾಖಲೆಯಲ್ಲಿಯೂ ನಾನು 'ಸಮತಾ' ಆಗಿಯೇ ಉಳಿಯುತ್ತಿದ್ದೆ. ಆದರೇನು, ಹೆಸರು ಬದಲಿಸಿದರೂ ಅವರು ನಂಬಿದ್ದ ಆಶಯಗಳ ಬೆಳಕು ನನ್ನ ದಾರಿಯನ್ನೂ ಬೆಳಗುವಂತೆ ಎಚ್ಚರದ ಕೈ ದೀವಿಗೆ ಹಿಡಿದರು. ಸಮತೆಯ ಸುಖದಲ್ಲಿ ಸಂಭ್ರಮಿಸುವುದನ್ನು ಕಲಿಸಿದರು.

–

ಮಾಯಾ ಬದುಕಿನ ಅಬ್ಬರ, ಆಕರ್ಷಣೆಗಳು ಒಮ್ಮೊಮ್ಮೆ ಸೆಳೆದೊಯ್ದಾಗ, ಅದರಲ್ಲಿ ದಕ್ಕಿದ ದುಬಾರಿ ಸುಖಾನುಭವ ಪಾಪಪ್ರಜ್ಞೆ ಮೂಡಿಸಿದ್ದು,ಒಳಗನ್ನು ಕೆಣಕಿ ಒಳಗಣ್ಣನ್ನು ತೆರಸಿದ್ದು, ಆ ವರ್ಣರಂಜಿತ ದಾರಿಯಲ್ಲೇ ಮುಂದುವರಿಯದೆ ಹಿಮ್ಮುಖ ನಡೆದು ಮತ್ತೆ ನಮ್ಮದೇ ಬದುಕಿನೊಂದಿಗೆ ಸೇರಿಕೊಂಡು ಸುಖಿಸಿದ್ದು, ಎಲ್ಲರಂತೆ, ಎಲ್ಲೆಡೆಯಂತೆ ಇದ್ದ ಜಾತಿ, ಧರ್ಮ, ವರ್ಗ,ಬಡವ, ಬಲ್ಲಿದರೆಂಬಿತ್ಯಾದಿ ತರತಮಗಳು ನನ್ನೊಳಗೆ ಪಾಲನೆಯಾಗದೆ, ಅವುಗಳ ಕುರಿತು ಕಾಡುವಂತಾಗಿದ್ದು, ಆ ಮೂಲಕವೇ ಸಮಾನತೆಯ ಅರ್ಥದ ವಿವಿಧ ಬಣ್ಣಗಳು ಮನ ತುಂಬಿಕೊಂಡಿದ್ದು, ಅಸಹನೀಯ ಎನಿಸಿದ್ದನ್ನೂ ಸಹನೀಯವಾಗಿಸಿಕೊಳ್ಳಲು ಸಾಧ್ಯವಾಗಿದ್ದು;ಯಾವುದೇ ಸಂಗತಿಯನ್ನು ವಿವೇಕದ ಕಣ್ಣ ಇಶಾರೆಯಲ್ಲಿಯೇ ಕಾಣಲು, ಚಿಕಿತ್ಸಕ ದೃಷ್ಟಿಯ ನೆರಳಲ್ಲೇ ಅಂತರಂಗ,ಆತ್ಮ ಒಪ್ಪಿತ ದಾರಿಯಲ್ಲಿ ಸಾಗಿ ಬದುಕನ್ನು ಕಟ್ಟಿಕೊಳ್ಳಲು, ಏನು ಮಾಡಲಾಗದಿದ್ದರೂ 'ಏನೇನನ್ನೋ...' ಮಾಡದೆ ಉಳಿಯುವುದು ಸಾಧ್ಯವಾಗಿದ್ದು; ಪರಿಸ್ಥಿತಿ ಸೃಷ್ಟಿತ ಮನಸ್ಸಿನ ಗಾಯಗಳು ಹುಣ್ಣಾಗುವ ಮೊದಲೇ ವಾಸಿಯಾಗಿಸಿ;ತಿಳಿಗೊಳಿಸುತ್ತಿರುವುದು...ಬಹುಶಃ ಇದಕ್ಕೆಲ್ಲಕ್ಕೂ 'ಸಮಾಜವಾದ'ವೆಂಬ ಆ ಮುಲಾಮು ಕಾರಣವೇ?

–

ಒಂದು ದಿನ, ಬೆಳ್ಳಂಬೆಳಗ್ಗೆ ಹಿತ್ತಲ ತೆಂಗಿನ ಮರದ ಕಾಯಿ ಕೀಳಲೆಂದು ವ್ಯಕ್ತಿಯೊಬ್ಬ ಬಂದಿದ್ದ. ಎಂದಿನಂತೆ ಆತನಿಗೆ ಅಪ್ಪನಿಂದ ಒಂದಷ್ಟು ನೀತಿ ಪಾಠ. ಕಾಯಿ ಕಿತ್ತು, ಸುಲಿದವನು 'ನನಗೆ ಪರಿಚಯದವರ ಅಂಗಡಿ ಇಲ್ಲೇ ಇದೆ. ಒಳ್ಳೇ ರೇಟು ಕೊಡ್ತಾರೆ. ಮಾರಿಕೊಂಡು ಬರ್‍ಲಾ ಸಾರ್..'ಎಂದು ಕೇಳಿದ. ಅಪ್ಪ ಒಪ್ಪಿದರು. ಆತನೋ ಗೋಣಿ ಚೀಲದಲ್ಲಿ ಅರ್ಧದಷ್ಟು ಕಾಯಿ ತುಂಬಿಕೊಂಡು

ಹೋದ. ಇನ್ನೊಂದು ಬಾರಿ, ಅಷ್ಟೊಂದು ಹೊರಬೇಡ ಎಂದರೂ ಕೇಳದೆ ಪೂರ್ತಿ ತುಂಬಿಕೊಂಡು ಕಷ್ಟಪಟ್ಟು ಹೊತ್ತೊಯ್ದ. ಅದಾಗಿ ಎಷ್ಟು ಹೊತ್ತಾದರೂ ಮರಳಿ ಬರಲೇ ಇಲ್ಲ. ಸ್ವಲ್ಪ ದೂರದಲ್ಲಿದ್ದ ಅಂಗಡಿಗೆ ಹೋಗಿ ವಿಚಾರಿಸಲಾಗಿ 'ಮೊದಲು ಬಂದು ಅರ್ಧ ಚೀಲ ಕಾಯಿ ಇಟ್ಟವನು ದುಡ್ಡು ಕೇಳಿದ. ಆ ಮನೆಯವರು ಗೊತ್ತು; ಅವರಿಗೇ ಕೊಡ್ತೀನಿ ಅಂತ ಹೇಳಿದೆ. ಮತ್ತೊಂದು ಚೀಲ ತರುವುದಾಗಿ ಹೇಳಿ ಹೋದವನು ಬಂದೇ ಇಲ್ಲ...' ಎಂದು ಮಾಲೀಕ ಹೇಳಿದ. ಒಂದು ಮೂಟೆ ಪೂರ್ತಿ ಕಾಯಿಯ ಜತೆಗೇ ಆತ ಪರಾರಿಯಾಗಿದ್ದ. ಮೋಸ ಹೋಗಿದ್ದ ಅಪ್ಪ ಅದೆಲ್ಲವನ್ನು 'ಸಂಭ್ರಮಿಸುತ್ತ' ಕುಳಿತಿದ್ದರು. ಆ ಸಮಯ, ಗೆಳೆಯರೊಬ್ಬರ ಆಗಮನವಾಯಿತು; ಮತ್ತೊಮ್ಮೆ ಎಲ್ಲ ಘಟನೆಯ ರಸವತ್ತಾದ ವರ್ಣನೆ. ಆ ಗೆಳೆಯರೋ ಇನ್ನೂ ಆಶಾವಾದಿ. 'ಬಹುಶಃ, ಆ ಅಂಗಡಿಯಲ್ಲಿ ಕಾಯಿಗೆ ಒಳ್ಳೇ ರೇಟು ಸಿಕ್ಕಿರಲಿಕ್ಕಿಲ್ಲ. ಈತ ಹೆಚ್ಚು ರೇಟು ಸಿಗುವ ಕಡೆ ಹುಡುಕಿಕೊಂಡು ಹೋಗಿರಬೇಕು. ಇನ್ನೇನು ಬಂದೇ ಬರ್ತಾನೆ....' ಎಂದರು. ಆದರೆ, ಆ ನಿರೀಕ್ಷೆ ನಿಜವಾಗದೆ ಮೋಸ ಹೋಗಿದ್ದೇ ಖಚಿತವಾಯಿತು. ಅಪ್ಪ ಆತ ಬಿಟ್ಟು ಹೋಗಿದ್ದ ಹಳೆಯ ಚಪ್ಪಲಿಗಳನ್ನು ಬಂದವರಿಗೆಲ್ಲ ತೋರಿಸಿ ಎಲ್ಲವನ್ನೂ ಹೇಳಿ ನಗುತ್ತಿದ್ದರು. ತಪ್ಪಿಯೂ ಆತನ ಬಗ್ಗೆ ಲಘುವಾಗಿ ಮಾತನಾಡಿದ್ದು ನನ್ನ ಕಿವಿಗೆ ಬೀಳಲಿಲ್ಲ. ಇಂಥವು ಅದೆಷ್ಟೋ ಘಟನೆಗಳು. 'ಆತನಿಗೇನು ತುರ್ತು ಅಗತ್ಯವಿತ್ತೋ?' ಎಂದುಕೊಂಡು ಸ್ವಯಂ ಮೋಸ ಹೋಗಿದ್ದನ್ನೂ ಸಂಭ್ರಮಿಸುವ ಇಂಥ ಮನಸ್ಥಿತಿಯ ಹಿಂದೆ ಅದ್ಯಾವ ವಾದ ಕೆಲಸ ಮಾಡಿರಬಹುದು?

–

ತೀರಾ ಮೊನ್ನೆ ಮೊನ್ನೆ, ಕಾಲೇಜಿಗೆ ಬಸ್‌ನಲ್ಲಿ ಹೋಗುತ್ತಿದ್ದೆ. ಪುಟ್ಟ ಮಗು ಎತ್ತಿಕೊಂಡ ಮಹಿಳೆಯೊಬ್ಬರು ಮಾರ್ಗ ಮಧ್ಯದಲ್ಲಿ ಬಸ್ ಹತ್ತಿದರು. ಮಗು ಇದ್ದ ಕಾರಣಕ್ಕೆ ನನ್ನ ಸೀಟು ಬಿಟ್ಟುಕೊಟ್ಟು ನಿಂತೆ. ಮುಂದಿನ ಸೀಟಿನಲ್ಲಿದ್ದ, ವಯಸ್ಸಿನಲ್ಲಿ ನನಗಿಂತ ಹಿರಿಯರಾದ ಸಹೋದ್ಯೋಗಿಯೊಬ್ಬರು 'ಆಕೆ ಮುಸ್ಲಿಂ ಆಗಿರದಿದ್ದಿದ್ದರೆ ನಾನೇ ಸೀಟು ಬಿಟ್ಟುಕೊಡುತ್ತಿದ್ದೆ' ಎಂದು ಯಾವುದೇ ಲಜ್ಜೆ ಇಲ್ಲದೆ, ಸಹಜವೆನ್ನುವಂತೆ ಹೇಳಿದರು. ಸದ್ಯ, ನನ್ನಲ್ಲಿ ಅಂಥದೊಂದು 'ಧರ್ಮ ಸೂಕ್ಷ್ಮ' ಜಾಗೃತವಾಗಲಿಲ್ಲವಲ್ಲ ಎಂದು ಖುಷಿಪಟ್ಟೆ. ನನ್ನನ್ನು ಆ ಮಟ್ಟಿಗೆ 'ಅಸೂಕ್ಷ್ಮ'ಳನ್ನಾಗಿಸಿದ್ದು ಸಮಾಜವಾದವೇ ಇರಬೇಕು. ಹೌದಾಗಿದ್ದರೆ, ಅದಕ್ಕಾಗಿ ಕೃತಜ್ಞತೆ ಹೇಳಲೇಬೇಕು.

*

# ನಾನು ಸದನದಲ್ಲಿ ಥರ್ಡ್ ಅಂಪೈರ್! : ಪುಟ್ಟಣ್ಣಯ್ಯ

**ಗೋಪಾಲಗೌಡರ ನಂತರ ನಮ್ಮ ವಿಧಾನಸಭೆಯನ್ನು ನಿಜವಾದ ಅರ್ಥದಲ್ಲಿ ಜನತೆಯ ಸದನವನ್ನಾಗಿ ಮಾಡಿದವರು ರೈತ ಸಂಘದ ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರು. ಆನಂತರ, ಅವರ ನಾಯಕತ್ವದ ವಿರುದ್ಧ ಬಂಡೆದ್ದ ಕೆ.ಎಸ್. ಪುಟ್ಟಣ್ಣಯ್ಯ ವಿಧಾನಸಭೆಯನ್ನು ಪ್ರವೇಶಿಸಿ ಅಲ್ಲಿ ತಮ್ಮದೇ ವಿಶಿಷ್ಟ ರೀತಿಯಲ್ಲಿ ರೈತ ಧ್ವನಿಯನ್ನು ಮೊಳಗಿಸಿದರು. ಆದರೆ ನಂತರದ ಎರಡು ಚುನಾವಣೆಗಳಲ್ಲಿ ಸೋಲುಂಡ ಪುಟ್ಟಣ್ಣಯ್ಯ ಈಗ ಮತ್ತೆ ಸದನವನ್ನು ಪ್ರವೇಶಿಸಿ ಆಸೆ ಹುಟ್ಟಿಸಿದ್ದಾರೆ. ಆದರೀಗ 'ಸರ್ವೋದಯ ಕರ್ನಾಟಕ'ವೆಂಬ ಚುನಾವಣಾ ಕಾಲದಲ್ಲಿ ಮಾತ್ರ ಪತ್ತೆಯಾಗುವ ಪಕ್ಷವೊಂದರಿಂದ! ಇದರ ನಾಯಕರೇನೋ ಈಗ ಸದನದಲ್ಲಿ ನಿಜವಾದ ವಿರೋಧ ಪಕ್ಷವೆಂದರೆ ಪುಟ್ಟಣ್ಣಯ್ಯ ಒಬ್ಬರೇ ಎನ್ನುತ್ತಿದ್ದಾರೆ. ನಿಜವೇ? ಇದರ ಸುತ್ತ ಹಲವಾರು ಪ್ರಶ್ನೆಗಳಿವೆ. ಅಂತಹ ಕೆಲವನ್ನೀಗ 'ಹೊಸ ಮನುಷ್ಯ' ಪುಟ್ಟಣ್ಣಯ್ಯನವರನ್ನು ಇಲ್ಲಿ ಕೇಳಿದೆ: ಸಂ.**



**ಬಹಳ ದೀರ್ಘಕಾಲದ ನಂತರ ವಿಧಾನಸಭೆಗೆ, ಅದೂ ಸರ್ವೋದಯ ಕರ್ನಾಟಕದ ಪ್ರತಿನಿಧಿಯಾಗಿ, ಆಯ್ಕೆಯಾಗಿದ್ದೀರಿ. ಈ ಆಯ್ಕೆಗೆ ಮಾಜಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ, ಅಶೋಕ್‌ಖೇಣಿ ಮತ್ತು ಲಿಂಗಾಯಿತ ಕೋಮಿನ ಲಾಬಿ ಕಾರಣವಾಗಿದೆ ಎಂಬ ಟೀಕೆ ವ್ಯಾಪಕವಾಗಿದೆ. ನೀವೇನು ಹೇಳುತ್ತೀರಿ?**

ಈ ಟೀಕೆಗಳೆಲ್ಲ ಸುಳ್ಳು. ಹೆಂಡ ಕುಡ್ದಿರೋನು, ಕೆಜೆಪಿಯವನು, ಬೇರೆ ಪಕ್ಷದಿಂದ ಬೇಸತ್ತಿರುವವನು ಪುಟ್ಟಣಯ್ಯ ನಿಮ್ಗೆ ಓಟಾಕ್ತಿನಿ ಅಂದ್ರೆ ನಾನ್ಯಾಕೆ ಬ್ಯಾಡ ಅನ್ಲಿ? ಜನ ಜೆಡಿಎಸ್ ವಿರುದ್ದ ಮತ ಹಾಕ್ಬೇಕಿತ್ತು. ಆದ್ದರಿಂದ ನನಗೆ ಮತ ಹಾಕಿದ್ದಾರೆ.

**ಬಹಿರಂಗ ಸಭೇಲಿ ನಿಮ್ಮ ಹೆಗಲ ಮೇಲೆ ಕೆಜೆಪಿಯ ಟವಲ್ಲು ಇದ್ದ ದ್ದನ್ನ ಕಂಡವರವರಲ್ಲ?**

ಅದು ಸಹಕಾರ ಅಷ್ಟೆ. ಆ ದಿನದ ಸಭೇಲಿ ತಕ್ಷಣಕ್ಕೆ ಪಕ್ಷದ ಟವಲ್ ಹಾಕಿದ್ರು. ನಾನು ಏನು ಮಾಡಕಾಗ್ಲಿಲ್ಲ. ಆ ಕ್ಷಣನೆ ಆ ಟವಲ್ನ ತಗ್ದಾಕ್ದೆ. ಒಂದೊಂದ್ ಸಲ ಹಾಗಾಗ್ಬಿಡತ್ತೆ. ನಮಗಾಗ್ದೆ ಇರೊ ಶತ್ರು ಸತ್ತಾಗ್ಲು ಶ್ರದ್ಧಾಂಜಲಿ ಸಭೆಗೊಗ್ತಿವಲ್ಲ ಹಾಗೆ. ನಾನು ಕೆಜೆಪಿ ಪಕ್ಷ ಸೇರ್‌ಬೇಕು ಅಂದಿದ್ರೆ ೩೨ ವರ್ಷಕಾಯಬೇಕಿತ್ತ? ನಾನಾವಗ್ಲೆ ಬೇರೆ ಪಕ್ಷ ಸೆರ್‍ಕೊಂಡಿದ್ರೆ ಇಷ್ಟೊತ್ತಿಗೆ ಮಂತ್ರಿಯಾಗಿರ್ತಿದ್ದೆ.

. **'ಸರ್ವೋದಯ ಕರ್ನಾಟಕ' ಚುನಾವಣೆಗಳ ಸಂದರ್ಭದಲ್ಲಿ ಮಾತ್ರ ಕಣ್ಣಿಗೆ ಬೀಳುವ ಪಕ್ಷವಾಗಿದೆಯಲ್ಲಾ? ಅದು ಒಂದು ರಾಜಕೀಯ ಪಕ್ಷವಾಗಿ ರಾಜ್ಯದ ಎಲ್ಲ ಕಡೆ ಜನರ ಕಣ್ಣಿಗೆ ಬೀಳುವುದು ಯಾವಾಗ? ರೈತ ಸಂಘ ಹಾಗು ಸರ್ವೋದಯ ಕರ್ನಾಟಕದ ನಡುವಿನ ಸಂಬಂಧ ಎಂತಹದು ?**

ಹೌದು. ಇನ್ನು ಐದು ವರ್ಷಗಳಲ್ಲಿ ಎಲ್ಲ ತಾಲ್ಲೂಕು, ಜಿಲ್ಲೆಗಳಲ್ಲಿ ಶಾಖೆಗಳನ್ನ ಸ್ಥಾಪಿಸ್ತಿವಿ. ಆದ್ರೆ ರೈತ ಸಂಘದ ಸಮಸ್ಯೆ ದೊಡ್ಡದಿದೆ. ರೈತ ಸಂಘದ ಒಳಗಿರೊರ್‍ಗೆ ಅಂದ್ರೆ ನಮ್ಮೊಳಗೇ ಭಿನ್ನಾಭಿಪ್ರಾಯವಿರೋದು. ನನ್ನ ಗದ್ದೆ ಇರೊದು ಕ್ಯಾತ್ನಳ್ಳಿಲಿ. ನಾನೇಕೆ ಮೈಸೂರಲ್ಲಿ ಇರ್ಬೇಕು? ಅರಸಿಕೆರೆಲಿ ಜಮೀನು ಇರೊರು ಒಬ್ರು ಬೆಂಗಳೂರಲ್ಲಿ ಇರೊಕೆ ಯಾಕೆ ಬಯಸಬೇಕು? ಹಾಗಾಗಿ ಇದು ರೈತರ ಸಂಘ ಅಲ್ಲ, ವ್ಯಾಪಾರಿ ಸಂಘ. ರಾಜಕೀಯದ ಬಗ್ಗೆ ಎಲ್ಲಿ ಚರ್ಚೆ ಆಗ್ತಾ ಇದೆ? ಸಂಘದಲ್ಲಿ ಬಹುಸಂಖ್ಯಾತ ದುಡಿಯೊ ವರ್ಗದ ಬಗ್ಗೆ ಚಿಂತನೆ ಎಲ್ಲಿದೆ? ಡಾಕ್ಟ್ರು ಮಗ ಡಾಕ್ಟ್ರು, ಬಿಪಿಎಲ್‌ನವನ ಮಗ ಬಿಪಿಎಲ್. ನೆಹರು ಕೈಗಾರಿಕೀಕರಣದ ಮೂಲಕ ದೇಶ ಉದ್ದಾರ ಮಾಡ್ತಿನಿ ಅಂದ್ರು. ಅದರ ಬದ್ಲು ಜನಸಂಖ್ಯೆ ನಿಯಂತ್ರಣದ ಯೋಜನೆ ಹಾಕಬೇಕಿತ್ತು,

ಈಗ ಜಗತ್ತಿನ ಜನರನ್ನ ಗುಲಾಮರಾಗಿ ಇಟ್ಟುಕೊಳ್ಳೋದಕ್ಕೆ ಜಾಗತೀಕರಣ ತಂದವ್ರೆ. ನಮ್ಮ ದೇಶದ ಜನರ ಆಧಾರದ ಮೇಲೆ

ರಾಜಕಾರಣ ಕಟ್ಟಬೇಕು. ಈಗ ವಿದೇಶಿ ನೇರ ಬಂಡಾಳ ಹೂಡಿಕೆಗೆ ಬಂದವ್ರೆ. ನಮ್ಮದೇ ದೇಶದ ಸಗಟು ವ್ಯಾಪಾರದವರನ್ನ ಸೆದೆ ಬಡಿಯಲು ಹೋಗೋದು ಎಷ್ಟು ಸರಿ? ನಮ್ಮ ದೇಶದ ಆರ್ಥಿಕ ಪರಿಸ್ಥಿತಿ, ಆಹಾರ ಸಂಸ್ಕೃತಿ ಬೇರೆ. ನಾವೇಕೆ ಅಮೇರಿಕಾ ಆಗೋ ಕನಸು ಕಾಣಬೇಕು? ಸೊಪ್ಪು ಸದೆ, ಪಾನಿಪುರಿ ವ್ಯಾಪಾರ ಮಾಡಿ ಅವರ ಬದುಕಿನ ಕನಸು ಕಾಣ್ತಾ ಇರ್ತಾರೆ ಸಾವಿರಾರು ಕೋಟಿ ಬಂಡವಾಳ ಹೂಡೊ ಕಂಪನಿ ಇವರ ಕನಸನ್ನ ಹೊಸಕಾಕ್ತದೆ. ಚಳುವಳಿ ಅರಿವಿಲ್ಲದ ರಾಜಕಾರಣದ ಫಲ ಇದು. ಅದಕ್ಕೇ ಯಾವಾಗಲು ರಾಜಕೀಯಕ್ಕೆ ಚಳುವಳಿಯ ಜ್ಞಾನ ಇರಬೇಕು. ಚಳುವಳಿಗೆ ರಾಜಕೀಯ ಬೇಕು. ಚಳುವಳಿ ಅಂದ್ರೆ ಪ್ರತಿಭಟನೆ ಧಿಕ್ಕಾರ ಬೇರೇನು ಇಲ್ಲ ಅನ್ನೊಂಗೆ ಆಗಬಾರ್ದು.

**ಹಿಂದೊಮ್ಮೆ ಪಂಚಮ ಪತ್ರಿಕೆಗಾಗಿ ದೇವನೂರು ಮಾದೇವ ಪ್ರೊ. ಎಂ.ಡಿ.ಎನ್.ರವರ ಸಂದರ್ಶನ ಮಾಡ್ತ ರೈತ ಮತ್ತದಲಿತ ಚಳುವಳಿಗಳು ಒಂದಾಗಿ ಕೆಲಸ ಮಾಡುವ ಬಗ್ಗೆ ಪ್ರಶ್ನೆ ಕೇಳಿದ್ದರು. ಎಂ. ಡಿ. ಎನ್ ತಾತ್ವಿಕವಾಗಿ ಇದನ್ನ ಒಪ್ಪಿಕೊಂಡಿದ್ದರು. ಈಗ ಈ ಅಂತರ ಇನ್ನೂ ಹೆಚ್ಚಾಗಿದೆ ಅಂತ ಅನಿಸುವುದಿಲ್ಲವೆ? ಈ ಬಗ್ಗೆ ರೈತ ಸಂಘ ಮತ್ತು 'ಸರ್ವೋದಯ ಕರ್ನಾಟಕ'ದ ಕಾರ್ಯಕ್ರಮವೇನು?**

ಜಗತ್ತಿನ ಅದ್ಭುತ ಅನುಭವ ಮಂಟಪ ಅದು. ವಿಶ್ವವಿದ್ಯಾನಿಲಯ. ಅನುಭವದ ಕೆಲಸ ೯೬% ಆದ್ರೆ ವಿಶ್ವವಿದ್ಯಾನಿಲಯದ ಕೆಲಸ ೪%. ಶ್ರಮದ ಶಾಲೆಯಲ್ಲಿ ಕಲಿತವರಿಗೆ ಹೆಚ್ಚಿನ ಆದ್ಯತೆ ಸಿಗಬೇಕು. ಯಾವ ಜಾತಿಯ ಶ್ರೀಮಂತರು ತಮ್ಮ ತಮ್ಮ ಜಾತಿಯ ಬಡವರನ್ನ ಉದ್ಧಾರ ಮಾಡಿದ್ದಾರೆ ತೋರ್ಸಿ? ಯಾರು ಏನು ಹೇಳಿದ್ದಾರೆ ಅಂತ ಹೇಳುವುದಕ್ಕಿಂತ ನಾನು ಏನು ಮಾಡಿದ್ದೇನೆ ಅಂತ ತಿಳಿಬೇಕು. ಎಲ್ಲಾ ವರ್ಗದ ಜನರು ಸೇರುವಂತೆ ಗ್ರಾಮ ಕಾರ್ಯಕ್ಷೇತ್ರವಾಗಬೇಕು,

ರೈತಸಂಘ ನಮ್ಮೆಲ್ಲರ ಕೂಸು. ಅದನ್ನ ಬೆಳಸಬೇಕು. ಜಾತಿ ಹುಟ್ಟಿಸಿದವರೊಡನೆ ಘರ್ಷಣೆ ಇಲ್ಲ. ದಲಿತ ಮತ್ತು ರೈತ ದೂರ ಇದಾರೆ. ಒಕ್ಕಲಿಗ ವರ್ಸಸ್ ಲಿಂಗಾಯಿತ; ಒಕ್ಕಲಿಗ, ಲಿಂಗಾಯಿತ ವರ್ಸಸ್ ಪರಿಶಿಷ್ಟ ಜಾತಿ ದಲಿತ ಈ ನಡುವೆ ಘರ್ಷಣೆ ಇದೆ. ಈ ಅಂತರವನ್ನ ಕಡಿಮೆ ಮಾಡಲು ಪ್ರಯತ್ನಸ್ತ ಇದ್ದೀವಿ, ಅವ್ರು ನಾವು ಇಬ್ರು ಛಿದ್ರ ಆಗಿದ್ದೇವೆ. ಕೆಲವರು ಹಸಿರು ಟವಲ್ ಅಡ ಇಟ್ಟು ಬದುಕ್ತಾ ಇದ್ದಾರೆ, ಕೆಲವರು ಅಂಬೇಡ್ಕರ್‌ನ ಅಡ ಇಟ್ಟು ಬದುಕ್ತಾ ಇದ್ದಾರೆ. ಆದ್ರೆ ದಲಿತ ಚಳುವಳಿ ನಮಗಿಂತ ದೊಡ್ಡ ಚಳುವಳಿ. ನಮ್ಮೂರಲ್ಲೆ ಅಸ್ಪೃಶ್ಯತೆ ಎಷ್ಟಿತ್ತು ಅಂದ್ರೆ, ಅಸ್ಪೃಶ್ಯರಿಗೆ ಮಜ್ಜಿಗೆ ಬಿಟ್ರೆ ಕರಾವು ನಿಂತೋಗತ್ತೆ ಅಂತ ಮಜ್ಜಿಗೆ ಬಿಡ್ತಾ ಇರ್ಲಿಲ್ಲ. ಇದಕ್ಕಿಂತ ಅವಮಾನ ಇದೆಯೇನ್ರಿ?

**ಕನ್ನಡ ಶಾಲೆಗಳ ಪುನರುಜ್ಜೀವನಕ್ಕೆ ನಿಮ್ಮ ಕಾರ್ಯಾಕ್ರಮ ಏನು?**

ಕನ್ನಡ ಶಾಲೆಗಳ ಬಗ್ಗೆ ಮಾತಾಡೊದು ಅಂದ್ರೆ ಅದು ಖಾಸಗಿ ಶಾಲೆಗಳ ಹುನ್ನಾರ. ಅಲ್ಲಿ ಗೋವಿನ ಹಾಡಿನ ಮೇಲೆ ಪುಸ್ಸಿ ಕ್ಯಾಟ್‌ಅನ್ನೊ ಇಂಗ್ಲೀಷ್ ಸವಾರಿ ಮಾಡ್ತ ಇರುತ್ತೆ, ಸರ್ಕಾರಿ ಶಾಲೆಯಲ್ಲಿ ಓದಿದವರಿಗೆ ಕೆಲಸದಲ್ಲಿ ೧೦ರಿಂದ ೧೫% ರಿಸರ್ವ್‌ವೇಷನ್ ಅವಕಾಶ ನೀಡಿ; ಸರ್ಕಾರಿ ಶಾಲೆ ತುಂಬುತ್ತೆ..

**ಕಾವೇರಿ ವಿವಾದ ಕರ್ನಾಟಕದ ಮುಖ್ಯ ಸಮಸ್ಯೆ ನ್ಯಾಯಾಲಯಗಳಿಂದ ಇದನ್ನ ಪರಿಹರಿಸಕ್ಕಾಗಲ್ಲ ಅಂತ ಅನ್ಸಿದೆ. ಈ ಹಿನ್ನೆಲೆಯಲ್ಲಿ ಕಾವೇರಿ ಕುಟುಂಬ ಒಟ್ಟಿಗೆ ಸೇರಿ ಸಮಸ್ಯೆ ಪರಿಹರಿಸಿಕೊಳ್ಳುವ ಪ್ರಯತ್ನ ನಡೆದಿತ್ತು. ಈಗ ನೀವು ಶಾಸಕರಾಗಿದ್ದೀರಿ. ಈ ಬಗ್ಗೆ ನಿಮ್ಮ ಮುಂದಿನ ಹೆಜ್ಜೆ ಏನು?**

ಮಾತುಕತೆ ಮೂಲಕವೇ ಬಗೆಹರಿಸಿಕೊಳ್ಳಬೇಕು ಅಷ್ಟೆ. ಯಾಕಂದ್ರೆ ಇವ್ರು ಮುಂಚೇನೆ ಬರ್ದ್ ಕೊಟ್ಟವ್ರಲ್ಲ! ಅದಕ್ಕೆ ಅವ್ರು ನಮ್ಮ್ ಭಾಗದ್ ನೀರ್ ನಮಗ್ ಕೊಡಿ ಅಂತ ಇದಾರೆ. ವಿಪರ್ಯಾಸ ಅಂದ್ರೆ ಸತ್ಯ ಗೊತ್ತಿರುವ ಕೆಲವು ಶಾಸಕರು ಮುಖ್ಯಮಂತ್ರಿಗೆ ತಿಳಿ ಹೇಳೊಕಾಗ್ದೆ ಸುಮ್ಮನಿದಾರೆ ಆದರೆ ನೀರಿನ ವೈಜ್ಞಾನಿಕ ಬಳಕೆಯ ಬಗ್ಗೆ, ಹೆಚ್ಚುವರಿ ನೀರನ್ನು ಸಂಗ್ರಹಿಸುವ ಕುರಿತು ಎರಡು ರಾಜ್ಯಗಳು ಚಿಂತನೆ ಮಾಡ್ಬೇಕು. ನಮ್ಮಲ್ಲಿ ದೂರದೃಷ್ಟಿ ಇಲ್ಲ. ಕೆರೆ ಹೂಳೆತ್ತುವ ಆಧುನಿಕ ಪರಿಕರಗಳ ಬಗ್ಗೆ ಚರ್ಚೆಇಲ್ಲಾ, ಕುಡಿಯುವ ನೀರಿನ ಚರ್ಚೆಇಲ್ಲಾ, ನೀರು ಕೂಡಾಕೋದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯ ಆಗ್ಬೇಕು.

**ಕಳೆದ ಸರ್ಕಾರದ ಅವಧಿಯಲ್ಲಿ ಬಹಳಷ್ಟು ಹಣವನ್ನ ಸಾವಯವ ಕೃಷಿ ಜನಪ್ರಿಯಗೊಳಿಸಲು ವಿತರಿಸಲಾಗಿತ್ತು ಇದು ನಿಮಗೆ ಹೇಗನಿಸುತ್ತೆ?**

ಕೃಷಿಗೆ ನಿರಂತರವಾಗಿ ಸಾವಯವ ಕೃಷಿ, ನೈಸರ್ಗಿಕ ಕೃಷಿ ಅಂತ ಜಟಾಪಟಿ ಇದೆ. ನಾನು ನೈಸರ್ಗಿಕ ಕೃಷಿಗೆ ಒತ್ತು ನೀಡ್ತೇನೆ. ಇದರಲ್ಲಿ ಮಾತಿಗಿಂತ ಪ್ರಾಕ್ಟಿಕಲ್ ಅನುಭವ ಮುಖ್ಯ .

**ವಿದ್ಯುತ್ ಮತ್ತು ನೀರಿನ ಮಿತ ಬಳಕೆಗಾಗಿ ಹನಿ ನೀರಾವರಿ ಹಾಗು ತುಂತುರು ನೀರಾವರಿ ಒಂದು ಉತ್ತಮ ಪರಿಹಾರ. ಆದರೆ ಅಧಿಕಾರಶಾಹಿ ವಿಳಂಬದಿಂದ ಸಬ್ಸಿಡಿ ಹಣ ಸರಿಯಾಗಿ ರೈತರಿಗೆ ತಲುಪುತ್ತಿಲ್ಲ. ಸರ್ಕಾರ ಈ ಯೋಜನೆಗೆ ಸ್ಪಂದಿಸುವ ನಿಟ್ಟಿನಲ್ಲಿ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ?**

ಹನಿ ನೀರಾವರಿ ಮಾಡ್ತಿನಿ ಅಂದ್ರೆ ಪ್ರತಿಯೊಬ್ಬನಿಗು ಉಚಿತವಾಗಿ ೫೦೦೦ ರೂಪಾಯಿ ಕೊಡಬೇಕು. ಸಬ್ಸಿಡಿ ಹಣ ನೇರವಾಗಿ ರೈತರಿಗೆ ನೀಡಿ ಮಧ್ಯವರ್ತಿಗಳ ಕಾಟ ತಪ್ಪಿಸಬೇಕು. ಒಟ್ಟು ೨೫ ಲಕ್ಷ ಪಂಪ್‌ಸೆಟ್ ಇದ್ರೆ, ಗಣನೀಯ ಇಳುವರಿ ಕಾಣಬಹುದು. ನನಗೆ ಗೊತ್ತಿರುವ ಒಬ್ಬ ರೈತ ೧೦ ಎಕರೆ ಹೊಲದಲ್ಲಿ ೧೫ ಲಕ್ಷ ಖರ್ಚು ಮಾಡಿ ಹನಿ ನೀರಾವರಿಯಲ್ಲಿ ಹತ್ತು ಕೂಳೆ ತಗಿತಾನೆ. ಕನಿಷ್ಟ ೬೦ರಿಂದ ೭೦ ಲಕ್ಷ ಸಂಪಾದನೆ ಆಗುತ್ತೆ.

**ಛೇಂಬರ್‌ಆಫ್‌ಕಾಮರ್ಸ್ ಅವರ ಅನುಕೂಲಕ್ಕೆ ತಕ್ಕಂತೆ ರೂಪುಗೊಳ್ಳುವ ಬಜೆಟ್‌ನ ಬಹುಪಾಲು ಭಾಗ ಯುವಕರ, ರೈತರ ಬಜೆಟ್ ಆಗಿ ರೂಪುಗೊಳ್ಳಲು ಸಾಧ್ಯವಿಲ್ಲವೆ ?**

ಈ ಬಜೆಟ್ ಎಲ್ಲರನ್ನ ಸಮಾಧಾನ ಮಾಡೊ ಕೆಲ್ಸ ಅಷ್ಟೆ. ಸರಿಯಾಗಿ ಆದ್ಯತೆಯ ವಲಯಕ್ಕೆ ೬೦% ಉಳಿದಂತೆ ೪೦% ಆಗ್ಬೇಕು

**ಸರ್ಕಾರ ಸಾಲದ ರೂಪದಲ್ಲಿ ಕೈಗಾರಿಕೆಗಳಿಗೆ ಕೊಡುವ ಉತ್ತೇಜನ ರೈತರಿಗೆ ಏಕೆ ಸಿಗುತ್ತಿಲ್ಲ? ರೈತರ ಭೂಮಿಯನ್ನ ಕೈಗಾರಿಕೆಗೆ ಕಬಳಿಸಲಾಗುತ್ತಿದೆ. ರೈತರ ಬೆಳೆಗಳಿಗೆ ಪೂರಕವಾದ ಕೈಗಾರಿಕೆ ಸ್ಥಾಪಿಸಲು ಸಾಧ್ಯವಿಲ್ಲವೆ?**

ರೂರಲ್ ಎಕನಾಮಿಯನ್ನ ಯಾರು ಬರೆದಿದ್ದಾರೆ? ಕೃಷಿಯನ್ನು ಒಂದು ಉದ್ಯಮ ಎಂದು ಯಾರು ಬರೆದಿದ್ದಾರೆ? ದೈಹಿಕ ಶ್ರಮವನ್ನು ಜ್ಞಾನ ಎಂದು ಈ ದೇಶ ಪರಿಗಣಿಸಿಯೆ ಇಲ್ಲ. ಕೃಷಿ ಬಂಡವಾಳದ ಬಗ್ಗೆ ಯಾವ ಆರ್ಥಿಕ ತಜ್ಞ ಬರೆದಿದ್ದಾರೆ? ಮೊದಲು ಈ ಕೆಲ್ಸ ಆಗಬೇಕು.

**ಗಾಂಧಿ ಹೇಳ್ತಾ ಇದ್ರು, ಪಟ್ಟಣದ ಹಣ ಹಳ್ಳಿಗಳ ಕಡೆ ಹರಿದು ಬರಬೇಕು ಅಂತ. ಆದರೆ ಹಳ್ಳಿಯ ಯುವಕರು ಪಟ್ಟಣದ ಕಡೆಗೆ ವಲಸೆ ಹೋಗ್ತಾ ಇದಾರೆ. ಅವರು ಅಲ್ಲೆ ಇರಲು ಪೂರಕವಾದ ವಾತಾವರಣ ಹೇಗೆ ಸೃಷ್ಟಿಸಬಹುದು?**

ಅವರಿಗೆ ಸುಲಭವಾಗಿ ಲೋನ್ ಕೊಡಬೇಕು. ಆವಾಗ ಗುಳೆ ಹೋಗೋದು ತಪ್ಪುತ್ತೆ. ಒಂದು ಮನೆಗೆ ೩೦ಕೆಜಿ ಅಕ್ಕಿ ನೀಡಿದಂತೆ ಒಂದೊಂದು ಮನೆಗೂ ಕುರಿ ಹಸು ಹಣ ನಿರ್ದಿಷ್ಟವಾಗಿ ಕೊಡೊದಕ್ಕೆ ಹೇಳಿ. ಹಾಲು ಕುಡಿಯೊ ಅಧಿಕಾರಿ ಯಾವತ್ತು ಗಂಜಲ ಮುಟ್ಟಲ್ಲ, ತೊಪ್ಪೆ ಎತ್ತಲ್ಲ, ಗುಲಾಮರಾಗಿ ಮಾಡ್ತರೆ ಅಂತ ಪಟ್ಣ ಸೆರ್ಕ್ಕೋತಾರೆ. ಮುಂದೆ ಹಳ್ಳಿ ಅಂದ್ರೆ ವೃದ್ಧಾಶ್ರಮ ಅಷ್ಟೆ

**ರೈತ ಸಂಘ ಯಾವಾಗಲು ನೀರಾವರಿ ರೈತರ ಬಗ್ಗೆ ಯೋಚನೆ ಮಾಡುತ್ತೆ. ಖುಷ್ಕಿ ರೈತರ ಬಗ್ಗೆ ಕಾಳಜಿ ಇಲ್ಲ ಅನ್ನೋರ್ಗೆ ಏನು ಹೇಳ್ತಿರಿ?**

ಹಸಿ ಬರ ಒಣ ಬರದ ಬಗ್ಗೆ ಚರ್ಚೆಯನ್ನು ಮೊದಲು ಮಾಡಿದ್ದೆ ರೈತಸಂಘ. 'ಇಷ್ಟೆಲ್ಲ ಏಳು ಬೀಳುಗಳ ನಡುವೆ ೩೨ ವರ್ಷದಿಂದ ಉಳಿದುಕೊಂಡಿರೋದಕ್ಕೆ ನೀವು ಯಾವುದಾದರು ಪದ್ಮಶ್ರಿ ಕೊಡಬೇಕು.

**ಕೊನೆಯದಾಗಿ ನೀವು ವಿರೋಧ ಪಕ್ಷದಲ್ಲಿ ಕೂರುವುದಕ್ಕೆ ಇಚ್ಚಿಸುತ್ತೀರೊ ಸರ್ಕಾರದ ಪರವಾಗಿ ಯೋಚಿಸುತ್ತೀರೊ?**

ನಾನು ಮೂರನೆ ಅಂಪೈರ್ ತರ ಕೆಲಸ ಮಾಡ್‌ತೀನಿ. ಎಲ್ಲಾ ಪಕ್ಷಗಳ ಸಮನ್ವಯ ಸಮಿತಿಯ ಅಧ್ಯಕ್ಷನ ತರ ವರ್ತಿಸ್ತಿನಿ.

(ಸಂದರ್ಶನ: **ರವಿಚಂದ್ರ ಚಿಕ್ಕೆಂಪಿಹುಂಡಿ**)

# ಸಮಾಜವಾದಿಗಳ ಸಹವಾಸದಲ್ಲಿ...

–ಎಂ.ಬಿ.ನಟರಾಜ್




"ಸಮಾಜವಾದಿಗಳಲ್ಲಿ ಎರಡು ವೆರೈಟಿಗಳಿವೆ. ತೀವ್ರಗಾಮಿಗಳು, ಮಂದಗಾಮಿಗಳು. ಇದು ನಿನಗೆ ತಿಳಿದಿದೆಯೇ?" ಎಂದು ನಮ್ಮ ಹಿರಿಯ ಗೆಳೆಯ ಎಂ.ಬಿ.ಶಿವಣ್ಣ ಒಮ್ಮೆ ಕೇಳಿ ನನ್ನ ಮುಖ ನೋಡಿದರು. ಮತ್ತೆ ಅವರು ನಕ್ಕು, ಗಬಕ್ಕನೆ ತುಟಿಗೆ ಸಿಗರೇಟು ಸಿಕ್ಕಿಸಿಕೊಂಡು ಹೇಳಿದರು. ಚಳುವಳಿಗೋಸ್ಕರ ಚಳುವಳಿ ಮಾಡುವವರು ತೀವ್ರಗಾಮಿಗಳು. ಅವರಿಗೆ ಪ್ರತಿದಿನವೂ ಯಾವುದಾದರೂ ಚಳುವಳಿ ಬೇಕೇ ಬೇಕು. ಇಲ್ಲದಿದ್ದರೇ ಅವರೇ ತಮ್ಮ ಊಟ ನಿದ್ರೆಯನ್ನು ಕಟ್ ಮಾಡಿಕೊಳ್ಳುತ್ತಾರೆ. ಗೃಹಸ್ಥರಾಗಿದ್ದರೆ ಹೆಂಡತಿ ಜೊತೆ ಮಾತನಾಡುವುದಿಲ್ಲ, ಬ್ರಹ್ಮಚಾರಿ ಆಗಿದ್ದರೆ ಹೆಣ್ಣು ಮಕ್ಕಳನ್ನು ಕಣ್ಣೆತ್ತಿ ನೋಡುವುದಿಲ್ಲ. ಮಂದಗಾಮಿಗಳು ಚಳವಳಿ ಮುಗಿದ ಮೇಲೆ ಬರುವವರು– ಇನ್ನು ಮುಂದೆ ಚಳವಳಿರಹಿತ ಪ್ರಜಾಪ್ರಭುತ್ವಕ್ಕಾಗಿ ಚಳವಳಿ ಮಾಡಬೇಕು ಎನ್ನುತ್ತಾರೆ– ಎಂದು ಮತ್ತೆ ನಕ್ಕರು. "ನೀವು ಯಾವ ಗಾಮಿಗಳು?" ಎಂದು ಕೇಳಿದೆ. ಅವರು ಕಣ್ಣು ಹೊಡೆದು ಗೊ....ತ್ತಾ....ಗು....ತ್ತೆ. ತೆಪ್ಪಗಿರು" ಎಂದರು. ಆದರೆ ಶಿವಣ್ಣ ಹಾಗೆ ತೆಪ್ಪಗಿರುವ ಪೈಕಿಯಲ್ಲ. ಸಮಾಜವಾದ ಬಲವಾಗಿ ನೆಲೆಯೂರಬೇಕೆಂದರೆ, ಎರಡು ಆಯುಧಗಳು ಮುಖ್ಯ: ಒಂದು –'ನಗು', ಎರಡು–'ಬಸವಣ್ಣನವರ ವಚನಗಳು'. ಏಕೆಂದರೆ ನಗುನಗುತ್ತಾ ಸಮಾಜವಾದಿ ಕೆಲಸ ಮಾಡಬೇಕಪ್ಪ..... ಛಲಬೇಕು ಶರಣಂಗೆ 'ಪರಧನವನೊಲ್ಲೆನೆಂಬ' ಛಲಬೇಕು. ಇಲ್ಲಿ ಶರಣ ಎಂದರೆ ಪ್ರಾಮಾಣಿಕ ಸಮಾಜವಾದಿ, ನಿಷ್ಠೆ, ಶ್ರದ್ಧೆ, ಇಲ್ಲದೇ ಸಮಾಜವಾದವಿಲ್ಲ. ಇಲ್ಲದಿದ್ದರೆ ಸುಮ್ಮನೆ ಏಗಿದಂತಾಗುತ್ತದೆ. 'ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ, ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ' – ಹೀಗೆಲ್ಲ ವಚನಗಳ ಸಾಲುಗಳನ್ನು ಹೇಳುತ್ತಾ, ಸಿಗರೇಟಿನ ಹೊಗೆ ಉಗುಳುತ್ತಾ, ನಮ್ಮನ್ನು ಹೇಗಿದೆ? ಎನ್ನುವಂತೆ ಅವರ ನೋಟ.

ಶಿವಣ್ಣ ಹೇಳಿದ ಎರಡು ವಿಧವಾದ 'ಗಾಮಿ'ಗಳಲ್ಲಿ ಇನ್ನೂ ಕೆಲವು ಕವಲುಗಳಿವೆ, ಕೆಲವರು ತೀವ್ರ ಉತ್ಸಾಹಿಗಳು, ತೀವ್ರ ಕೋಪದವರು, ತೀವ್ರಾತಿತೀವ್ರ ಮಾತಿನವರು–ಭಾಷಣಕಾರರು ಅರ್ಥಾತ್ ಕೊರೆತದವರು– ಎಲ್ಲರೂ ಸ್ಪರ್ಧೆಗೆ ನಿಂತವರಂತೆ ಸುಳಿಯುತ್ತಾರೆ. ಮಾತಿನಲ್ಲಿ ಏಕಸ್ವಾಮಿತ್ವ ಸ್ಥಾಪಿಸದಿದ್ದರೆ ಸಮಾಜವಾದಿ ಸಮಾಜವನ್ನು ಸ್ಥಾಪಿಸುವುದು ಕಷ್ಟ.......ಕಷ್ಟ.... ರೀ– ಎಂದು ಇವರೆಲ್ಲರೂ ಮಾತನಾಡಲೂ ತೊಡಗುತ್ತಾರೆ! ಯಾವ ಸಮಾಜವಾದಿಯ ಮಾತು ಎಲ್ಲಿ ಮುಗಿದಿದೆ? ಒಬ್ಬರಾದರೂ ಸುಮ್ಮನಾಗಿದ್ದಾರೆಯೇ? ಕೇಳುವವರಿಲ್ಲದಿದ್ದರೆ ಅವನೊಬ್ಬನೇ ಒಂದು ಪಕ್ಷ ಯಾ ವೇದಿಕೆ ಯಾ ಮಂಚಗಳನ್ನು ಮಾಡಿಕೊಂಡಿಲ್ಲವೇ?

ಈ ದೇಶ........ಈ ದೇಶ........ ಎಂಬುದು ಕೆಲವು ಸಮಾಜವಾದಿಗಳ ಪಲ್ಲವಿ. ಈ ದೇಶ, ಕಟ್ಟಕಡೆಯ ಬಡಟ್ಟಗೂ, ಜಾತಿ ವಿನಾಶ, ದಮನ, ದಬ್ಬಾಳಿಕೆ, ಧಿಕ್ಕಾರ, ಅತ್ಯಂತ ಶೋಷಣೆ, ಲೋಹಿಯಾ (ಅಥವಾ ಡಾಕ್ಟರ್), ಶೂದ್ರ...ರೀ, ಬ್ರಾಹ್ಮಣ.... ರೀ– ಈ ತರಹ ಕೆಲವು ಶಬ್ದಗಳು ಅವರ ಗಂಟಲಿನಿಂದ ಹೊರಬರಲು ತರಾತುರಿಯಿಂದಿರುತ್ತವೆ. ಯಾರಾದರೂ ಸಮಾಜವಾದಿ ವಿರೋಧಿ ಆಡಳಿತಗಾರ ಈ ಶಬ್ದಗಳ ಮೇಲೆ ನಿಷೇಧ ಹೇರಿದರೆ?– ಎಸ್.ಎಸ್.ಕುಮಟ ನಗುತ್ತ ಹೇಳುತ್ತಿದ್ದರು. 'ಅರೆಹುಚ್ಚಿನಿಂದ ಪೂರ್ಣ ಹುಚ್ಚಿಗೆ ತಿರುಗುತ್ತಾರೆ ಅಷ್ಟೇ' ಸಂಗೀತಗಾರನಿಗೆ ಸ್ವರ–ಲಯಗಳು ಅವನ ಒಳಗೇ ಕುಣಿಯುತ್ತಿರುವಂತೆ, ಈ ಪದಗಳು ಇವರಿಗೆ.



ಹೀಗೆ, ಒಂದು ದಿನ ರಾತ್ರಿ ಸುಮಾರು ೯ ಗಂಟೆ. ನಾನು, ದಿವಾಕರ ಹೆಗ್ಗಡೆ ಶಿವಮೊಗ್ಗ ನೆಹರು ರಸ್ತೆಯಲ್ಲಿ ಹೋಗುತ್ತಿದ್ದಾಗ ಹಳೆಯ ರೋಲೆಕ್ಸ್ ಹೋಟೆಲಿನ ಮುಂದೆ ಮತ್ತೆ ಶಿವಣ್ಣ ಭೇಟಿಯಾದರು. ಆ ದಿನ ಕಬ್ಬು ಮಾರಾಟದ ಹಣ ಅವರ ಕಿಸೆಯನ್ನು ತುಂಬಿತ್ತು ಒಳ್ಳೆಯ ಲಹರಿಯಲ್ಲಿದ್ದರು. ಆಗ ರೈತ ಚಳವಳಿ ತೀವ್ರವಾಗಿದ್ದ ಕಾಲ. ಹೆಗಡೆ "ಹೋಗಿ ಹೋಗಿ ಆ ಭೂ ಮಾಲೀಕರನ್ನೇ, ರಾಜಕೀಯದವರನ್ನೇ ನಿಮ್ಮ ರೈತ ಸಂಘದ ನಾಯಕರನ್ನಾಗಿ ಒಪ್ಪಿಕೊಂಡಿದೀರಲ್ರೀ..... ಏನ್ರೀ ಶಿವಣ್ಣ ನೀವು ಹಾಳಾಗಿದೀರಲ್ರೀ...?" ಎಂದರು. ಶಿವಣ್ಣನ ಕಪ್ಪು ಶರೀರದ ಕಣ್ಣುಗಳು ಕೆಂಪಾದವು. ರೈತ ಸಂಘದ ಅಧ್ಯಕ್ಷ ಎಚ್.ಎಸ್.ರುದ್ರಪ್ಪನವರ ಹೆಸರು ಬಂದ ಕೂಡಲೇ ಇನ್ನೂ ಕೆಂಪಾದವು. ಶಿವಣ್ಣ "ಓ..... ಹಾಗೋ...?" ಎಂದು, ಕೂಡಲೆ ಅಲ್ಲಿ ಹೋಗುತ್ತಿದ್ದ ಆಟೋ ರಿಕ್ಷಾವನ್ನು ಕರೆದರು. ನಮ್ಮಿಬ್ಬರನ್ನು ಅದರಲ್ಲಿ ಹತ್ತಿಸಿಕೊಂಡು ಆಟೋ ಡ್ರೈವರ್‌ಗೆ ಚಲೋ ಎಂದರು. ಅವರ ಧಡೂತಿ ಶರೀರದ ಅಕ್ಕ–ಪಕ್ಕ ನಾವು ಇರುಕಿಕೊಂಡು ಕೂತಿದ್ದೆವು. ದಾರಿಯುದ್ದಕ್ಕೂ "ಇಲ್ಲ.... ಅಲ್ಲಿ ಎಲ್ಲ ಸರಿಯಿಲ್ಲ, ರೈತ ಸಂಘ ಬದಲಾಗಬೇಕು" ಎಂದು ಮತ್ತೆ ಮತ್ತೆ ಹೇಳುತ್ತಾ ಆಟೋದವನಿಗೆ ದಾರಿಯನ್ನು ಹೇಳುತ್ತಿದ್ದರು. "ಎಲ್ಲಿಗೆ ಹೋಗುತ್ತೀದ್ದೀರಿ ಶಿವಣ್ಣ? ಎಲ್ಲಿಗೆ?" ಎಂದು ಕೇಳಿದರೆ "ನೋಡಿ ಈಗ ಗೊ....ತ್ತಾ.....ಗು.....ತ್ತೇ" ಎಂದು ಹಾಡಿದರು. ಹೆಗಡೆ "ಸರಿಯಿಲ್ಲ ಎಂದರೆ ಹೇಗ್ರೀ...? ಪ್ರತಿಭಟಿಸಿ ಹೊರಗೆ ಬರಬೇಕ್ರೀ....." ಎಂದರು. ಶಿವಣ್ಣ ಹೆಗಡೆಯನ್ನು ದುರು ದುರು ನೋಡಿದರು. ಕೂಡಲೇ ನಕ್ಕು " ನೋಡಿ ಈಗ" ಎಂದರು. ಮಧ್ಯರಾತ್ರಿ, ಕುವೆಂಪು ರಸ್ತೆಯಲ್ಲಿದ್ದ ರುದ್ರಪ್ಪನವರ ಮನೆ ಮುಂದೆ ಆಟೋ ನಿಲ್ಲಿಸಿದರು. ನಾನು, ಶಿವಣ್ಣ ಈಗೇನು ಮಾಡುತ್ತಾರೆ ಎಂದು ಯೋಚಿಸಲು ಶುರುಮಾಡಿರಬಹುದು ಅಷ್ಟೇ. ಅವರು ಆಟೋವೊಳಗೆ ಕುಳಿತುಕೊಂಡೆ "ರೈತ ಸಂಘದ ಅಧ್ಯಕ್ಷ ರುದ್ರಪ್ಪನವರಿಗೆ.... ಧಿಕ್ಕಾರ, ಭೂಮಾಲೀಕರ ನಾಯಕ ಎಚ್.ಎಸ್.ಆರ್‌ಗೆ ಧಿಕ್ಕಾರ..." ಎಂದು ಜೋರಾಗಿ ಘೋಷಣೆ ಅರ್ಥಾತ್ ಬೊಬ್ಬೆ ಹಾಕಿದರು. ಹತ್ತಿರದಲ್ಲಿದ್ದ ಮನೆಯ ಗೋಡೆಗಳು ಪ್ರತಿಧ್ವನಿ ಎಸೆದವು. ಅಲ್ಲಲ್ಲಿ ಬಿದ್ದುಕೊಂಡಿದ್ದ ನಾಯಿಗಳು ಗಾಬರಿಯಿಂದೆದ್ದು ಶಿವಣ್ಣನ ಜೊತೆ ಸ್ಪರ್ಧೆಗಿಳಿದವು. ನಮಗಿಬ್ಬರಿಗೂ ಕಕ್ಕಾಬಿಕ್ಕಿಯಾಯಿತು. ಎದುರು ಮನೆಗಳವರು ದೀಪಗಳನ್ನು ಬೆಳಗಿಸಿದರು. ಶಿವಣ್ಣ ಇನ್ನೂ 'ಫಾರಂ'ಲ್ಲಿದ್ದರು. ಅವರ ತಲೆಯನ್ನು ಆಟೋ ಹೊರಗೆ ತೂರಿಸಿ "ರೈತ ಕಾರ್ಮಿಕರ ವಿರೋಧಿ ಎಚ್.ಎಸ್.ಆರ್.ಗೆ ...... ಧಿಕ್ಕಾರ" ಕೂಗು ಹಾಕುತ್ತಿದ್ದರು. ಆಟೋ ಡ್ರೈವರ್ ಹೆದರಿ ಕಂಗಾಲಾದ "ಅಣ್ಣಾ, ಇದೇನು ಎಲ್ಲರೂ ಮಲಗಿರೋ ಹೊತ್ತಿನಲ್ಲಿ ಸ್ಟ್ರೈಕು?" ಎನ್ನುತ್ತಾ ಭರ್ರನೆ ಆಟೋ ಓಡಿಸಿದ.

ಸಮಾಜವಾದಿಗಳ ಕೆಲವು ಚಳುವಳಿಗಳು ಅನಿರೀಕ್ಷಿತ, ಕೆಲವು ಸಕಾಲಿಕ, ಕೆಲವು ಅಕಾಲಿಕ, ಕೆಲವು ಆ ವೇಳೆ, ಅವೇಳೆ, ಅಲ್ಪಕಾಲಿಕ, ಯಾವ ಜಾಗ ಎಂದು ಹೇಳಲೂ ಬರುವುದಿಲ್ಲ.

ಇಂತಹ ನನ್ನ ಗೆಳೆಯರಿಗೆ "ಚಳುವಳಿಗಾಗಿ.... ಅವರ ಕರೆ" ಎಂಬುದಕ್ಕಾಗಿ ಕಾಯುತ್ತಿದ್ದವರಲ್ಲ, ಮೇಲಿನವರ ಆದೇಶವನ್ನು ಪಾಲಿಸಬಹುದು ಅಥವಾ ವಿರೋಧಿಸಬಹುದು ಅಥವಾ ತಾವೇ



**ಶಿವಮೊಗ್ಗದಲ್ಲಿ ಡೊನೇಷನ್ ವಿರುದ್ಧ ಲೇಖಕ ಎಂ.ಬಿ. ನಟರಾಜ್, ಬಿ.ಕೃಷ್ಣಪ್ಪ, ಪುಟ್ಟಯ್ಯ ಮತ್ತಿತರರಿಂದ ಧರಣಿ.**

ಸ್ವತಂತ್ರವಾಗಿ– ಒಬ್ಬಿಬ್ಬರು ಇದ್ದರೂ ಸೈ... ಯಾವುದೇನು ಕಾರಣ? ನಡಿ ಅಲ್ಲಿಗೆ ಹೋಗೋಣ, ಅವರ ಬಡಿದು ಎಬ್ಬಿಸೋಣ– ಎಂದು, 'ಬಾವುಟ ಯಾಕೋ? ಬ್ಯಾನರ್ ಯಾಕೋ? ಬಾಯಿಯೆ ಬೊಂಬಾಯಂತಿದೆಯಲ್ಲೋ' ಎಂದು ಹೊರಡುವವರು. ಕೆಲವು ಚಳುವಳಿಗಳಿಗೆ ಒಂದು ಸಣ್ಣ 'ಚುಚ್ಚು' ಸಾಕು.

ಗುಂಡೂರಾಯರು ಮುಖ್ಯಮಂತ್ರಿಯಾಗಿದ್ದ ಕಾಲ. ಖಾಸಗಿ ಶಾಲೆ, ಕಾಲೇಜುಗಳಲ್ಲಿ ಡೊನೇಷನ್ ಎತ್ತುವಂತಿರಲಿಲ್ಲ– ಅದು ಕಾನೂನು ಬಾಹಿರವಾಗಿತ್ತು. ನಮ್ಮ ದಿವಾಕರ ಹೆಗ್ಗಡೆಯ 'ಕವಿಶೈಲ' ಪುಸ್ತಕದ ಅಂಗಡಿಯಲ್ಲಿ ಐದಾರು ಮಂದಿ ಗೆಳೆಯರು 'ಹಾಳಾಯಿತಲ್ರೋ ಈ ದೇಶ' ಎಂದು ಮಾಮೂಲಿ ಭಜನೆ ಕೊಚ್ಚುತ್ತಿದ್ದೆವು. ಅನಿರೀಕ್ಷಿತವಾಗಿ ಕಡಿದಾಳು ಶಾಮಣ್ಣ 'ಹೋಯ್....' ಎನ್ನುತ್ತಾ ಬಂದರು. ಅವರು ಬಂದ ಒಂದೆರಡು ಕ್ಷಣದಲ್ಲೇ ಸೀತಾರಾಮು ಎಂಬ ಕಾಂಗ್ರೆಸ್–ಸಮಾಜವಾದಿ ಬಿರುಗಾಳಿಯಂತೆ ಎರಗಿದ. "ಅಲ್ರಯ್ಯ, ಇಲ್ಲಿ ಪುಕ್ಕಟ್ಟೆ ಹರಟೆ ಕೊಚ್ತಿದೀರಲ್ಲ. ಥ್ಥೂ.....ನಿಮ್ಮ. ಅಲ್ಲಿ ಡಿ.ವಿ.ಎಸ್. ಜೂನಿಯರ್ ಕಾಲೇಜ್‌ನಲ್ಲಿ ಸಾವಿರಾರು ರೂಪಾಯಿ ಡೊನೇಷನ್ ಎಬ್ಬುತ್ತಾ ಇದ್ದಾರೆ. ನೀವು ಸಮಾಜವಾದಿಗಳು ಇಲ್ಲಿ ಪಿಂಚಣಿದಾರರ ಹಾಗೆ ಮಾತಾಡ್ತಾ ಕೂತಿದೀರ. ತಾಕತ್ ಇದ್ದರೆ ಅಲ್ಲಿಗೆ ಹೋಗಿ ವಿರೋಧ ಮಾಡ್ರಿ......ನೋಡೋಣ" ಎಂದು ರಣವೀಳ್ಯವನ್ನು ನಮ್ಮೆದುರು ಬಿಸಾಕಿ, ಕ್ಷಣಮಾತ್ರದಲ್ಲಿ ಮಾಯವಾದ. ನಾವು ಸಮಾಜವಾದಿಗಳು ಹೌದೋ ಅಲ್ಲವೋ ಅದು ಬೇರೆ. ಆದರೆ ಸೀತು, ನಾವು 'ಗಂಡಸರೇ ಅಲ್ಲ' ಎನ್ನುವಂತೆ ಉಚಾಯಿಸಿ ಕಣ್ಮರೆಯಾಗಿದ್ದ. ಅಷ್ಟೇ ಶೀಘ್ರವಾಗಿ ಕಡಿದಾಳು ಶಾಮಣ್ಣನ ನೇತೃತ್ವದಲ್ಲಿ ಆ ಕಾಲೇಜಿಗೆ ೮–೧೦ ಮಂದಿ ಹೊರಟೆವು. ನೂರಾರು ವಿದ್ಯಾರ್ಥಿಗಳು, ಪೋಷಕರು ಪ್ರವೇಶ ಪಡೆಯುವ ತಲೆಬಿಸಿಯಿಂದ ಘೇರಾಯಿಸಿದ್ದರು. ನಾವು ಹೇಗೆ ಹೇಗೋ ನುಗ್ಗಿಕೊಂಡು, ಡೊನೇಷನ್ ವಸೂಲಾತಿ ಆಗುತ್ತಿದ್ದ ಆಡಳಿತ ಮಂಡಳಿ ಕೋಣೆಗೆ ನುಗ್ಗಿದೆವು. ಅಲ್ಲಿ ಕುಳಿತಿದ್ದ ವ್ಯವಸ್ಥಾಪಕ ಮಂಡಳಿಯವರು, ನಮ್ಮ ಗುಂಪನ್ನು ನೋಡಿದ ಕೂಡಲೇ ಕಕ್ಕಾಬಿಕ್ಕಿಯಾದರು. ನಮ್ಮಲ್ಲಿ ಯಾರೊ ಒಬ್ಬರು "ಧಿಕ್ಕಾರ...... ಧಿಕ್ಕಾರ.... ಡೊನೇಷನ್ ವಸೂಲಿಗೆ ಧಿಕ್ಕಾರ" ಎಂದು ಘೋಷಣೆ ಹಾಕಿದ ಕೂಡಲೆ ಅಲ್ಲೆಲ್ಲ ಗಲಿಬಿಲಿ ಪ್ರಾರಂಭವಾಯಿತು. ಸ್ಫೂರ್ತಿಗೊಂಡು, ಹೊರಗೆ ಕ್ಯೂ ನಿಂತಿದ್ದ ಕೆಲವರು ಘೋಷಣೆ ಹಾಕಿದರು. ಆಡಳಿತ ಮಂಡಳಿಯವರಿಗೆ ಉಸಿರು ಕಟ್ಟಿದಂತಾಗಿ ಕಂಗಾಲಾದರು, ಕಾರ್ಯದರ್ಶಿ ಹೆದರಿ, ಹಣದ ಚೀಲವನ್ನು ಭದ್ರವಾಗಿ ಎದೆಗೆ ಅವುಚಿಕೊಂಡಿದ್ದರು. ಆಗ ಗಾಬರಿಯಿಂದ ಏನೋ ತೊದಲುತ್ತಿದ್ದರು. ಪೊಲೀಸರಿಗೆ ವಿಷಯ ತಿಳಿದು ಅವರು ಬರುವವರೆಗೂ ಘೋಷಣೆಯು ನಡೆಯುತ್ತಿತ್ತು.. ಇಡೀ ವಾತಾವರಣವೆಲ್ಲ ಗೊಂದಲಮಯವಾಯಿತು. ಒಬ್ಬರು ಎಸ್.ಐ., ಕೆಲವು ಪೊಲೀಸರು ಬಂದು, ನಮಗೆ ಸಮಾಧಾನ ಪಡಿಸುವಂತೆ, ವಸೂಲಿಗಾರರನ್ನೇನೊ ನಿಂದಿಸಿದರು. ಹಣದ ಚೀಲವನ್ನು ವಶಪಡಿಸಿಕೊಂಡರು. ಮುಂದೆ, ಇದು ಇಲಾಖಾ ತನಿಖೆಯಾಯಿತು, ವರದಿ ಎಂದಿನಂತೆ ಮೂಲೆಗೆ ಬಿತ್ತು. ಹಣ ಆಡಳಿತ ಮಂಡಳಿಗೆ ಸೇರಿತು! ಉಳಿದಿದ್ದು ಎಂದರೆ, ಆ ಗಲಭೆ, ಗೊಂದಲಗಳ ನಡುವೆಯೂ ಶಾಮಣ್ಣ ತಮ್ಮ ಕ್ಯಾಮರಾ ಕ್ಲಿಕ್ ಮಾಡುತ್ತಿದ್ದುದು!

ನಮ್ಮ ಗೆಳೆಯ ಪಿ.ಪುಟ್ಟಯ್ಯ ಮೊದಲು ಕ್ಷಿಪ್ರ ಕ್ರಾಂತಿಯ ಪ್ರತಿಪಾದಕ, ಸಮಾಜವಾದಿ ಯುವಜನ ಸಭಾದಲ್ಲಿ ಪುಟ್ಟಯ್ಯನಿದ್ದರೆ, ಎಂ.ಡಿ.ನಂಜುಂಡಸ್ವಾಮಿ ಕೆ.ರಾಮದಾಸ್‌ಗೂ ಸ್ಫೂರ್ತಿ. ಆಗಾಗ್ಗೆ ಸಣ್ಣ ಸಣ್ಣ ಹೋರಾಟಗಳು ನಡೆಯುತ್ತಿರಬೇಕು, ನಮ್ಮ ಸಿದ್ಧಾಂತವನ್ನು ಜನಕ್ಕೆ ತಲುಪಿಸಲು ಇದರಿಂದ ಅನುಕೂಲ; ನಮ್ಮ ಸ್ವಾತಂತ್ರ್ಯ ಚಳುವಳಿಯೂ ಹಾಗೆಯೆ, ಮಾವೋ ಕ್ರಾಂತಿಯೂ ಹಾಗೆಯೇ ಆಯಿತಪ್ಪಾ – ಎಂದು ಅವನು ಆಗಾಗ್ಗೆ ನಮಗೆ ಸ್ನೇಹ–ಪಾಠ ಮಾಡುತ್ತಿದ್ದ. ಅವನು ರಾಜ್ಯ ಶಾಸ್ತ್ರದ ಎಂ.ಎ ವಿದ್ಯಾರ್ಥಿ ಬೇರೆ. ಆತನಿಗೆ ಸಮಾಜವಾದ, ಲೋಹಿಯಾ, ಗಾಂಧಿ, ಕ್ರಾಂತಿ ಎಂಬ ಶಬ್ದಗಳು ಮೈ ಜುಮ್ಮೆನ್ನಿಸುತ್ತಿದ್ದವು. ಈ ಸದ್ಯಕ್ಕೆ ಯಾವ ಕಾರ್ಯಕ್ರಮವೂ ಇಲ್ಲವಲ್ಲ ಎಂದು ಚಡಪಡಿಸುತ್ತಿದ್ದ. ಅವನೊಂದು ರೀತಿಯಲ್ಲಿ ಬೆಂಕಿ ಪೆಟ್ಟಿಗೆಯಿದ್ದಂತೆ ಇದ್ದ. ಅವನ ಪ್ರೊಫೆಸರ್ ಒಮ್ಮೆ ಯಾವುದೋ ಮಾತಿಗೆ 'ನೀನು ಹೇಗೆ ಎಂ.ಎ.ಮಾಡುತ್ತಿ, ನೋಡುತ್ತೇನೆ,' ಎಂದು ಕೆರಳಿದ್ದರು. ಇವನು ಕೂಡಲೇ ಬೆಂಕಿಯಂತಾದವನು 'ನೀವು ಯಾರು ಪಾಸು ಮಾಡಲು? ಹುಷಾರ್! ನಿಮ್ಮ ಕೆಲಸ ನೀವು ಮಾಡಿ, ನನ್ನದು ನಾನು...' ಎಂದು ತಿರುಗೇಟು ಕೊಟ್ಟಿದ್ದವನು.

ಪುಟ್ಟಯ್ಯ ಇದ್ದ ಮಾನಸ ಗಂಗೋತ್ರಿ ಹಾಸ್ಟೆಲಿನಲ್ಲಿ ಕೆಲವು ಕೊಡವ ವಿದ್ಯಾರ್ಥಿಗಳ ಆರ್ಭಟವನ್ನು ಏಕಾಂಗಿಯಾಗಿ ಖಂಡಿಸುತ್ತಿದ್ದವನು. ಯಾರೋ ಒಬ್ಬ ಕೊಡಗಿನ ವೀರ ತರುಣ ಮಿಡ್ಡೆಯಾಗಿದ್ದ ಅನ್ನವನ್ನು ಉಂಡೆ ಮಾಡಿ ಎದುರು ಗೋಡೆಗೆ ರಬಕ್ಕನೆ ಎಸೆದ. ಆ ಉಂಡೆ ಕೊಡಗಿನ ಶಿಸ್ತಿನಂತೆ ಗೋಡೆಗೆ ಅಂಟಿಕೊಂಡಿತು. ಪುಟ್ಟಯ್ಯನ ಅನ್ನದ ಹಸಿವು ಕೆರಳಿತು. ಇವನ ಪರ–ವಿರೋಧದ ಭಯಂಕರ ಹೊಡೆದಾಟ ಪ್ರಾರಂಭವಾಯಿತು. ಈ ರೀತಿಯ ಕ್ಷಿಪ್ರ ಪ್ರತಿಭಟನೆಗಳಿಗೆ ಒಂದು ವಿಧವಾದ ವಾಸನೆಯೂ ಇರುತ್ತದೋ ಏನೋ..... ಅದೇ ವಾಸನೆ ಹಿಡಿದು ರಾಮದಾಸ್ – ಅವರು ಹಾಸ್ಟೆಲಿನಲ್ಲಿ ಇದ್ದವರಲ್ಲ– ಬೊಂಬು ಬಜಾರ್‌ನ ಅವರ ಮನೆಯಿಂದ ಹಾರಿ ಬಂದರು. ಅವರು ಬಂದ ಕೂಡಲೆ ಪ್ರತಿಭಟನೆಗಳ ಆರ್ಭಟ ಮತ್ತಷ್ಟು ಏರಿತು. ವಾರ್ಡನ್, ಅಡಿಗೆ ಕೆಲಸದವರು, ಆಳುಗಳು ಹೆದರಿ ಮೂಲೆಗಳಲ್ಲಿ ನಿಂತರು, ನಾನು–ಯಾರೋ ಗೈರು ಹಾಜರಿಯ ವಿದ್ಯಾರ್ಥಿಯ ಊಟಕ್ಕೆ ಇದೇ ಪುಟ್ಟಯ್ಯ ನನ್ನನ್ನು ಕರೆದಿದ್ದು– ದಿಕ್ಕೆಟ್ಟು ನಿಂತೆ. ಪೈಲ್ವಾನನಂತೆ ಇದ್ದ ಒಬ್ಬ ವಿದ್ಯಾರ್ಥಿ ಪುಟ್ಟಯ್ಯ, ರಾಮದಾಸ್ ವಿರುದ್ಧ ದೈಹಿಕ ಹಲ್ಲೆಗೆ ನಿಂತ. ಅದನ್ನರಿತ ಪುಟ್ಟಯ್ಯ ಮಿಂಚಿನಂತೆ ಅಡಿಗೆ ಮನೆಗೆ ಹೋಗಿ, ಈಳಿಗೆ ಮಣೆಯನ್ನು ತಂದು, ಆ ವಿದ್ಯಾರ್ಥಿಯ ಎದುರು ವೀರ ಕತ್ತಿಯಂತೆ ಝಳಪಿಸುತ್ತ ನಿಂತ. ನಡು ನಡುವೆಯೇ ಅನ್ನ–ಹಸಿವು–ಬಡವರು– ಈ ದೇಶದ ಆಹಾರ ಸಮಸ್ಯೆ– ಇವುಗಳ ಬಗ್ಗೆ ಇಬ್ಬರದೂ ಮಾತಿನ ಕಿಡಿಗಳು ಈಳಿಗೆಯ ಅಲಗಿನಿಂದ ಸ್ಫೋಟವಾಗುತ್ತಿತ್ತು. ಕ್ರಮೇಣ ಕ್ಷಿಪ್ರ ಕ್ರಾಂತಿ ತಣ್ಣಗಾಯಿತು.

ಆದರೆ ಅಲ್ಲಿನ ವ್ಯವಸ್ಥೆ ಬದಲಾವಣೆಯಾಯಿತು. ಉ.ಕಾ. ಸುಬ್ರಾಯಾಚಾರ್ ವಾರ್ಡನ್ ಆದರು, ನಮ್ಮ ಪುಟ್ಟಯ್ಯನೇ ಪ್ರಿಫೆಕ್ಟರ್. ಹಿಂದಿನ ಅನಾವಶ್ಯಕ ದುಂದು ವೆಚ್ಚ ತಪ್ಪಿತು. ಸರಳ, ಶುದ್ಧ, ರುಚಿಕಟ್ಟಾದ ಊಟ ಪ್ರಾರಂಭವಾಯಿತು.

ಸಮಾಜವಾದಿಗಳ ಸಹವಾಸ ಪ್ರೇರಕವೂ ಹೌದು, ರೋಚಕವೂ ಹೌದು. ಆದರೆ ಅದು ಯಾವಾಗ ಏರುತ್ತದೆ, ಇಳಿಯುತ್ತದೆ, ಎಂದು ಹೇಳಲು ಬರುವುದಿಲ್ಲ. ಇದೇ ಶಿವಣ್ಣ, ಪುಟ್ಟಯ್ಯನ ಘಟನೆಗಳನ್ನು ಎಸ್.ಎಸ್.ಕುಮಟಾ ಅವರಿಗೆ– ಅವರು ಲಹರಿಯಲ್ಲಿದ್ದಾಗ ಹೇಳಿದೆ. ಅವರು "ಏ.....ಭಾರೀ ಮಜ ಕೊಡ್ತಾರಯ್ಯಾ ಈ ಸೋಷಲಿಸ್ಟರು" ಎಂದು ನಕ್ಕರು.

*

# ಇಲ್ಲಿ ಪ್ರತಿ ಗಿಡಕ್ಕೂ ತೇಜಸ್ವಿ ಸ್ಪರ್ಶವಿದೆ

## ರಾಜೇಶ್ವರಿ ತೇಜಸ್ವಿಯವರೊಂದಿಗೆ ಒಂದು ಮಾತುಕತೆ



**ತೇಜಸ್ವಿ ದಂಪತಿಗಳು ಮಕ್ಕಳಾದ ಸುಸ್ಮಿತಾ, ಈಶಾನ್ಯೆಯರೊಂದಿಗೆ**

**ನೀವು ತೇಜಸ್ವಿಯವರ ವ್ಯಕ್ತಿತ್ವದಲ್ಲಿ ಯಾವ ವಿಶೇಷಗಳನ್ನು ಕಂಡು ಆಕರ್ಷಿತರಾದಿರಿ?**

ಶ್ರೀ ಪೂರ್ಣಚಂದ್ರ ತೇಜಸ್ವಿಯವರಲ್ಲಿ ನಾನು ತುಂಬ ಮೆಚ್ಚಿಕೊಳ್ಳುವುದು ಅವರ ಸರಳತೆಯನ್ನು. ನೋಡಿ, ನಮ್ಮ ಮದುವೆಗೆ ಐದಾರು ವರ್ಷದ ಮುಂಚೆ ನಮ್ಮ ಮನೆಗೆ ತೇಜಸ್ವಿ ಮೊಟ್ಟ ಮೊದಲಿಗೆ ಬಂದಾಗ, ಆಗ ನಮ್ಮದು ಮೂರು ಕೋಣೆ ಮನೆಯಲ್ಲಿ ಒಂದು ಕೋಣೆಗೆ ಮಾತ್ರ ಸಿಮೆಂಟಿನ ನೆಲ.(ಅದೂ ನನ್ನ ಅಣ್ಣ ವಾಸುನೇ ಮಾಡಿದ್ದು) ಉಳಿದೆರಡು ಕೋಣೆಗೆ ಸೆಗಣಿಯಲ್ಲಿ ಸಾರಿಸಿದ ಮಣ್ಣಿನ ನೆಲ.... ಹೀಗೆ ಕಷ್ಟದ ಬದುಕಾಗಿತ್ತು ಅಂತ ಹೇಳಬಹುದು. ಆದರೆ ತೇಜಸ್ವಿಗೆ ಇದ್ಯಾವುದರ ಕಡೆಗೆ ಲಕ್ಷ್ಯವೇ ಇಲ್ಲ. ಅವರ ಗಮನವೆಲ್ಲ ಮನೆ ಸುತ್ತ ಇದ್ದ ದಟ್ಟ ಕಾಡಿನ ಮೌನ. ಅದೇ ಅವರನ್ನು ಕಾಡಿದ್ದು.

**ತೇಜಸ್ವಿ ಬಹುಮುಖ ಚಟುವಟಿಕೆ ಮತ್ತು ಆಸಕ್ತಿಗಳ ವ್ಯಕ್ತಿ. ಹಾಗಾಗಿ, ಕುಟುಂಬದಲ್ಲಿ ಓರ್ವ ಜವಾಬ್ದಾರಿಯುತ ಗಂಡನಾಗಿ ಮತ್ತು ತಂದೆಯಾಗಿ ತಮ್ಮ ಕರ್ತವ್ಯಗಳನ್ನು (ಸಾಂಸಾರಿಕ ವ್ಯವಹಾರಗಳನ್ನು) ನಿರ್ವಹಿಸುತ್ತಿದ್ದರಾ?**

ಓಹೋ, ನೂರಕ್ಕೆ ನೂರು ಭಾಗ ನಿರ್ವಹಿಸಿದ್ದಾರೆ. ಖಂಡಿತವಾಗಿ, ಮನೆಯ ಎಲ್ಲ ಕೆಲಸ ಮಾಡುತ್ತಿದ್ದರು. ಬಚ್ಚಲ ಒಲೆ ಹಚ್ಚುತ್ತಿದ್ದರು, ಅದೂ ಶೆಡ್ಡಿಂದ ಸೌದೆ ತಂದುಕೊಂಡು. ಅಡುಗೆ ಮಾಡುತ್ತಿದ್ದರು. ಒಟ್ಟಾಗಿ ಕೂತು ಸವಿಯುತ್ತಿದ್ದೆವು(ದಯವಿಟ್ಟು ದಿನಾಲೂ ಎಂದು ತಪ್ಪು ತಿಳಿಯಬೇಡಿ) ಮಳೆ ಭರ್ರೆಂದು ಬಿದ್ದಾಗ ಮಧ್ಯರಾತ್ರಿ ಎದ್ದು ಹಾರೆ ತಗೊಂಡು ಹೋಗಿ ನಮ್ಮ ಮನೆಯಂಗಳದ ಕೆರೆ ತೂಬು ಸ್ವಚ್ಛ ಮಾಡಿ ಬಂದು ಮಲಗುತ್ತಿದ್ದರು "ಹಾಸಿಗೆ ಇದ್ದಷ್ಟು ಕಾಲು ಚಾಚು" ನನ್ನ ಪಾಲಸಿಯನ್ನು ಅವರೂ ಪಾಲಿಸುತ್ತಿದ್ದರು. ಹಾಗೇ ಮಾಡಿ ಹೀಗೇ ಮಾಡಿರೆಂದು ಮಕ್ಕಳಿಗೆ ಒತ್ತಾಯ ಹೇರದೇ ಮಾರ್ಗದರ್ಶನ ಮಾಡುತ್ತಿದ್ದರು. ಹೇಳ್ಬೇಕೆಂದರೆ ನಮ್ಮ ಮಕ್ಕಳಿಗೆ "ಅಣ್ಣ" (ತಂದೆ) ಬಗ್ಗೆನೇ ಹೆಚ್ಚು attachment. ಮಕ್ಕಳ ವಿದ್ಯಾಭ್ಯಾಸದ ಸಂಪೂರ್ಣ ಜವಾಬ್ದಾರಿ ನನಗೇ ಬಿಟ್ಟಿದ್ದರು. ಪಠ್ಯ ಪುಸ್ತಕ ಓದುವರಾ, ತರಗತಿಯಲ್ಲಿ ಅವರ performance ಹೇಗೆ ಎತ್ತ ಎಂದು ಏನೇನೂ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ.General knowledge ಮಾತುಕತೆ ಆಡುತ್ತಿದ್ದರು. ಇಂಥವೆಲ್ಲ ಅವರವರ ಬದುಕನ್ನು ಹೇಗೆ ಉದ್ದೀಪನಗೊಳಿಸುತ್ತೆಂದರೆ ಕಳೆದ ವಾರ ಸುಸ್ಮಿತಾ ಕೀನ್ಯಾದಲ್ಲಿನ ಪ್ರಾಣಿ ಜಗತ್ತು ನೋಡಲು ಹೊರಟರೆ, ಈಶಾನ್ಯೆ ಲೇ ಲಡಾಕ್‌ಗೆ ತೆರಳಿ ಜಗತ್ತಿನ ಅತಿ ಎತ್ತರದ ಪ್ರದೇಶದಲ್ಲಿ ನಿಂತು ನೋಡಿ ಬಂದಳು. ಇಲ್ಲಿ ಇನ್ನೊಂದು ವಿಷಯ ಹೇಳಬೇಕು. ಮೊಮ್ಮಗಳು ವಿಹಾ ಹುಟ್ಟಿದಾಗ ಅವಳಮ್ಮ ಈಶಾನ್ಯೆ ಅವಳಿಗೆ ಅತ್ಯಾಧುನಿಕ ಅಂಗಿಯೊಂದನ್ನು ಹಾಕಿದ್ದಳು. ಅದನ್ನು ನೋಡಿದ ತೇಜಸ್ವಿ ಅದೆಲ್ಲ ಸರಿಯಲ್ಲವೆಂದು, ಈಶಾನ್ಯೆ ಮಗುವಾಗಿದ್ದಾಗ ನಾನೇ ಹೊಲೆದು ಅವಳಿಗೆ ಹಾಕಿದ್ದ ಅಂಗಿಯನ್ನು ನೆನೆದು, ಹಳೆಯ ಫೋಟೋವೊಂರಲ್ಲಿದ್ದ ಅದನ್ನು ಗುರುತಿಸಿ ಸ್ಕ್ಯಾನ್ ಮಾಡಿಕೊಂಡು ಹೋಗಿ ಸ್ವತಃ ತಾವೇ ದರ್ಜಿ ಬಳಿ ಕೂತು ಹೊಲೆಸಿಕೊಂಡು ಬಂದು ಮೊಮ್ಮಗಳಿಗೆ ಹಾಕಿ ಸಂತೋಷ ಪಟ್ಟರು!

**ಸಮಾಜವಾದವನ್ನು ಪ್ರತಿಪಾದಿಸುತ್ತಿದ್ದ ತೇಜಸ್ವಿಯವರಲ್ಲಿ ನೀವು ಯಾವ ಸಮಾಜವಾದಿ ಗುಣಗಳನ್ನು ಗುರುತಿಸುವಿರಿ?**

ಅಲ್ರೀ, ನಮ್ಮ ಬದುಕಿನ ನೆಲೆಗಟ್ಟೇ ಹಾಗಿರುವಾಗ ಇವರಲ್ಲಿನ ಸಮಾಜವಾದಿ ಗುಣಗಳನ್ನು ಗುರುತಿಸಿ ಪಟ್ಟಿಮಾಡಬೇಕಾ ನಾನು. ಗ್ರಾಮೀಣ ಪ್ರದೇಶಕ್ಕೇ ಬಂದು ಬದುಕಿ ಬಿಟ್ಟೆವಲ್ಲ. ತೇಜಸ್ವಿ ಎಂ.ಎ. ಆದಮೇಲೆ ಇಲ್ಲಿ ಬದುಕುವೆನೆಂದು ನಿರ್ಧರಿಸಿದ್ದುದು ಹೊಟ್ಟೆಪಾಡಿಗಾಗಿ ಕಾಫಿತೋಟ ಮಾಡಿದ್ದುದು ಸಾಮಾನ್ಯ ವಿಚಾರವಲ್ಲ. ಸುಲಭದ ತುತ್ತಲ್ಲ. ಅದೂ ಅವರ ಅನ್ವೇಷಕ ಪ್ರತಿಭೆ ಮತ್ತು ಮನೆಯ ಹಿನ್ನೆಲೆಯಲ್ಲಿ ನೋಡಬೇಕು. ನಿಜಕ್ಕೂ GREAT. ಇದನ್ನು ನೆನೆದಾಗೆಲ್ಲ ಅಚ್ಚರಿಯ ಮೆಚ್ಚುಗೆ ಹೆಚ್ಚುತ್ತಲೇ ಹೋಗುತ್ತಿದೆ ನನಗೆ.

**ತೇಜಸ್ವಿಯವರಿಗೆ ಹೆಂಗಸರೆಂದರೆ ಅಲರ್ಜಿ, ಸಂಕೋಚ, ಹಾಗಾಗಿಯೇ ಅವರ ಸಾಹಿತ್ಯದಲ್ಲಿ "ಕಿರಗೂರಿನ ಗಯ್ಯಾಳಿಗಳು" ಹೊರತಾಗಿ ಮಹತ್ವದ ಮಹಿಳಾ ಪಾತ್ರಗಳೇ ಇಲ್ಲ ಅಥವಾ ತುಂಬಾ ಕಡಿಮೆ ಎಂಬೆಲ್ಲ ಅಭಿಪ್ರಾಯಗಳಿವೆ. ನೀವೇನೆನ್ನುತ್ತೀರಿ?**


ತೇಜಸ್ವಿ ತುಂಬಾ ಸಂಕೋಚಪಟ್ಟುಕೊಳ್ಳುತ್ತಿದ್ದರು ಹೌದು. Shy. ನನಗೆ ಪರಿಚಯ ಆದಾಗ್ಲಿಂದ ಗಮನಿಸಿದ್ದೆ. ಯಾರೋ ಲೇಡೀಸ್ ಬಂದಿದಾರೆ ನೋಡು ಅನ್ನೋವ್ರು. ಆಗೆಲ್ಲ ನಗುತ್ತಿದ್ದೆ ನಾನು. ಅಲರ್ಜಿಯಂತ ಯಾರು ಹೇಳ್ತಾರೋ ಅವರ ನೋಡುವ ದೃಷ್ಟಿಯಲ್ಲೇ ಏನೋ ಒಂದು ಕೊಂಕೋ ಕೊರತೆಯೋ ಯಾಕಾಗಬಾರದು. ಅದು ಅವರ ಲಿಮಿಟೇಶನ್ಸ್ ಅಷ್ಟೆ.

ತೇಜಸ್ವಿಗೆ ಮಹಿಳೆಯರ ಬಗ್ಗೆ ಅತ್ಯಂತ ಗೌರವ. ಮಹಿಳೆಯರೇ ಆಗಲಿ ಮಹನೀಯರೇ ಆಗಲಿ ಮನೆಗೆ ಬಂದವರಲ್ಲಿ ಲೋಕಾಭಿರಾಮವಾಗಿ ಔಪಚಾರಿಕವಾಗಿ ಮಾತನಾಡುವುದು ಅವರಿಗೆ ತಿಳಿದಿರಲಿಲ್ಲ. ತಿಂಡಿ ಆಯ್ತಾ, ಯಾವ ಬಸ್ಸಿನಲ್ಲಿ ಬಂದಿರಿ ಇಂಥ ಮಾತುಗಳನ್ನು ಮಾತನಾಡಬೇಕಾಗಿ ಬಂದ ಸಂದರ್ಭದಲ್ಲಿ, ನೀನು ಹೋಗಿ ಮಾತಾಡಿಸಿ ಕಳಿಸಿ ಬಾ ಎಂದು ನನಗೆ ಹೇಳುತ್ತಿದ್ದರು. ಇದು Handicapಆ? ನಿಮಗೆ ಹಾಗನ್ನಿಸುತ್ತಾ?

ನಮ್ಮ ಬದುಕಿನ ಕ್ರಮದ ಶಿಸ್ತಿನಲ್ಲಿ, ತೇಜಸ್ವಿ ಕ್ಲಬ್ಬು, ಪಾರ್ಟಿ ಇಂಥವುಗಳ ಕಡೆಗೆ ಮುಖ ಹಾಕುತ್ತಿರಲಿಲ್ಲ. ಕೆಲವೊಂದು ಸಂದರ್ಭಗಳಲ್ಲಿ ಬಫೆಗೆ ಊಟಕ್ಕೆ ಕರೆದರೂ ಮನೆಗೇ ಬಂದು ಊಟ ಮಾಡುತ್ತಿದ್ದರು. ಡ್ರಿಂಕ್ಸ್ ಇಲ್ವೇ ಇಲ್ಲ. ನಮ್ಮ ಅನುಭವದ ಮೂಸೆಯಿಂದ ಮಾತ್ರ ಕಲ್ಪನೆಯ ಪಾತ್ರ ಸೃಷ್ಟಿಯಾಗುವುದು ತಾನೆ. ನಾವು ಗ್ರಾಮೀಣ ಪ್ರದೇಶದಲ್ಲಿ ಬದುಕು ಕಟ್ಟಿಕೊಂಡಿದ್ದರಿಂದ, ಇವರು ನೋಡುತ್ತಿದ್ದ ಪಾತ್ರಗಳೇ ಕಿರಗೂರಿನ ಗಯ್ಯಾಳಿಗಳಲ್ಲಿ ಸೃಷ್ಟಿಯಾಗಿರುವುದು.

**ತೇಜಸ್ವಿ ತಮ್ಮ ಬರವಣಿಗೆಯನ್ನು ನಿಮ್ಮೊಂದಿಗೆ ಯಾವಾಗಲಾದರೂ ಚರ್ಚಿಸುತ್ತಿದ್ದರಾ? ಒಂದು ಕೃತಿ ಪೂರ್ಣವಾದ ನಂತರವಾದರೂ? ಅಥವಾ ಬೇರೆಯವರ ಸಾಹಿತ್ಯದ ಬಗ್ಗೆ ನಿಮ್ಮೊಂದಿಗೆ ಮಾತನಾಡುತ್ತಿದ್ದರಾ?**

ತೇಜಸ್ವಿ ತಮ್ಮ ಬರವಣಿಗೆ ಬಗ್ಗೆ ಚರ್ಚಿಸುತ್ತಿದ್ದರು ಅಂತ ಹೇಳಿದರೆ ತಪ್ಪಾಗಬಹುದು. ಆದರೆ ಅವರು ಕಂಡುಂಡ ಅನುಭವ



ಮೊಮ್ಮಗಳು ವಿಹಾಳೊಂದಿಗೆ ತೇಜಸ್ವಿ ದಂಪತಿಗಳು

ಹಂಚಿಕೊಳ್ಳುತ್ತಿದ್ದರು. ಅಷ್ಟೇ ಅಲ್ಲ, ಆವತ್ತು ಮೊಟ್ಟೆ ಹಗರಣ ಬಂತು, ಅಯೋಧ್ಯೆಯ ರಾಮ ಬಂದ, ವಾಜಪೇಯಿಯ ದನದ ಮಾಂಸದ ಉಪಾಹಾರ ಸೇವನೆ ಸೇರಿತು, ಹೀಗೇ ಧರ್ಮ, ಜಾತಿ ಬಗ್ಗೆ ಚರ್ಚಿಸುತ್ತಿದ್ದರು. ಹಾಗಾಗಿ ಹೊರಗಿನವರೊಟ್ಟಿಗೆ ಮಾತನಾಡುವಾಗ ಮುಂದೆ ಇದೇ ಪಾಯಿಂಟ್ ಹೇಳ್ತಾರೆನ್ನುವುದು ನನಗೆ ಸ್ಪಷ್ಟ ತಿಳೀತಿತ್ತು. "ಚಿದಂಬರ ರಹಸ್ಯ" ಕಾದಂಬರಿ ರಚಿಸುವಾಗ ಮೊದಲ ಅಧ್ಯಾಯ ಬರೆದಿಟ್ಟಿದ್ದರು. ನಾನು ಓದಿ ನನ್ನ ಅಭಿಪ್ರಾಯ ವ್ಯಕ್ತಪಡಿಸಲು ಹೊರಟಾಗ, ಮೊದಲು ನಿಲ್ಲಿಸು, ನನ್ನನ್ನು ಪ್ರಭಾವಿಸಬೇಡ, ಅದು ಪೂರ್ತಿ ಆದನಂತರ ಓದು ಎಂದರು.

ಅದು ಹಾಗಾದರೆ, ತೇಜಸ್ವಿ Stein Beckನ "My Travels with Charley" ಓದುತ್ತಾ ಮುಂದುವರಿದಂತೆಲ್ಲ ರೋಮಾಂಚನಗೊಂಡು ನನ್ನೊಟ್ಟಿಗೆ ಅದರ ರೋಚಕತೆಯನ್ನು ಹಂಚಿಕೊಳ್ಳುತ್ತಿದ್ದರು. ಪ್ಯಾಪಿಲಾನ್ ಪುಸ್ತಕ ನೀವೂ ಓದಿರಬಹುದು. ಇಂಗ್ಲಿಷ್‌ನಲ್ಲಿ ತೇಜಸ್ವಿ ಓದುವಾಗ ಚೂರು ಚೂರು ಹೇಳಿದ್ರು. ಕನ್ನಡದಲ್ಲಿ ಬಂದನಂತರ ಮುಂದುವರಿದ ಭಾಗ ಪೂರ್ತಿ ಹೇಳಿದ್ರು. ಇತ್ತಿತ್ತಲಾಗಿ ಒಬ್ಬ ಗುಲ್ಬರ್ಗಾದ ಮೆಡಿಕಲ್ ವಿದ್ಯಾರ್ಥಿ ಪ್ಯಾಪಿಲಾನು ಓದಿ ರೋಮಾಂಚನಗೊಂಡು ತೇಜಸ್ವಿ ಸರ್ ಅವರಲ್ಲಿ ಮಾತಾಡಬೇಕು ಮ್ಯಾಮ್, ಕರೆಯಿರಿ ಎಂದನು. ಪ್ಯಾಪಿಲಾನ್ ಪುಸ್ತಕದ ಬಗ್ಗೆ ಮುಂದೇನು ಅಂತ ಕೇಳಬೇಕೆಂದ. ನಾನೇ ಎಲ್ಲ ಹೇಳಿದೆ. ಸರಿ, ಸರ್ ಅವರಲ್ಲೇ ಮಾತಾಡ್ಬೇಕು ಕರೆಯಿರಿ ಎಂದ. ಯಾಕೋ ಮಾರಾಯ, ನಿನಗೆ ಗುಲ್ಬರ್ಗ ತುಂಬಾ ದೂರ ಆಯ್ತೇನು, ಏನೂ ಗೊತ್ತಿಲ್ವ? ಎನ್ನುತ್ತಿದ್ದಂತೆ ತೇಜಸ್ವಿ ಈಗ ಇಲ್ಲದ್ದು ನೆನಪಾಗಿ ದೊಡ್ಡ ಶಾಕ್ ಹೊಡೆದಂತಾಗಿ ಥಟ್‌ಂತ ಸಾರಿ ಮ್ಯಾಮ್ ಅಂತ ಹೇಳಿ ಫೋನು ಇಟ್ಟನು.

ನಾನು ಮೂರನೇ ಆನರ್ಸ್‌ನಲ್ಲಿದ್ದಾಗ "ಕಾನೂರು ಹೆಗ್ಗಡತಿ" ಕಾದಂಬರಿ ಓದಿದ್ದೆ. ಆಗಿನ್ನೂ ತೇಜಸ್ವಿ ಪರಿಚಯವಾಗಿರಲಿಲ್ಲ. ಮತ್ತು ಯಾವ ಸಾಹಿತಿಗಳ ಅಭಿಪ್ರಾಯಕ್ಕೂ ಒಳಗಾಗಿರಲಿಲ್ಲ. ಅಲ್ಲಿ, ಕೊಟ್ಟಿಗೆಯಿಂದ ಬರುವಾಗ ಅವಳ ಬಿಳಿಕಾಲು ಬೆರಳುಗಳ ಸಂದಿಯಿಂದ ಸೆಗಣಿ ಹೊರಬರುತ್ತಿತ್ತು ಎಂಬ ವಿವರಣೆ ಬರುತ್ತೆ. (ಈಗ ನೆನಪಿನಿಂದಲೇ ಬರೆಯುತ್ತಿರುವುದು) ಇದು ಅನಾವಶ್ಯಕವಾದ ವಿವರಣೆ ಎಂಬಂಥ ಟೀಕೆಗಳು ಬಂದಿದ್ದವು. ನಾವು ಚಿತ್ರಕೂಟದಲ್ಲಿದ್ದಾಗ ಇದರ ಬಗ್ಗೆ ತೇಜಸ್ವಿ ವಿವರಿಸಿದ್ದು ನೆನಪಿದೆ. ಅದು ಪೂರಕವಾಗಿ ಒಂದು ಕೃತಿಯಲ್ಲಿ ಹೇಗೆ ಹೊಮ್ಮುತ್ತೆ ಎಂಬುದನ್ನು ಹೇಳಿದಾಗ ನಾನು ತಪ್ಪು ತಿಳಿದುಕೊಂಡಿದ್ದು ಅರಿವಾಯ್ತು.

ಇನ್ನು 'ಭಾರತೀಪುರ' ಓದಿದ ನಂತರನೂ, ಅದರ ಬಗ್ಗೆ ಮಾತಾಡಿದ್ದರು. ಕೆಲವೊಂದು ಒಪ್ಪಿಗೆಯಾಗಿರಲಿಲ್ಲ. ಭಿನ್ನಾಭಿಪ್ರಾಯಗಳಿತ್ತು. ವಿಮರ್ಶಾತ್ಮಕವಾಗಿ ಹಲವು ಮಾತುಗಳನ್ನು ಹೇಳಿದ್ದರಾದರೂ, ಆ ಪುಸ್ತಕವನ್ನು ನಾನು ಓದಿದ್ದಿಲ್ಲದೇ ಇದ್ದುದರಿಂದ,



ಅಣ್ಣ ಕೋಕಿಲೋದಯ ಚೈತ್ರ ಅವರ ಕುಟುಂಬದೊಂದಿಗೆ
ತೇಜಸ್ವಿ ಮತ್ತು ರಾಜೇಶ್ವರಿ ತೇಜಸ್ವಿ

ಅವರ ಮಾತುಗಳು ನನ್ನ ತಲೆಯಲ್ಲಿ record ಆಗಿಲ್ಲ. ನನಗೆ ಗೊತ್ತಿಲ್ಲ.

ಭೈರಪ್ಪನವರಿಂದ ಕನ್ನಡಿಗರಿಗೆ ಓದುವ ಹವ್ಯಾಸ ಹೆಚ್ಚಾಗಿದ್ದನ್ನೂ ಹೇಳಿರುವರು. ಆವರಣದ ಬಗ್ಗೆ ಎಲ್ಲೆಡೆ ಮಾತು ಕೇಳಿ ಬರುತ್ತಿದೆಯೆಂದು ಓದಲೇಬೇಕೆಂದು ಗೆಳೆಯ ಬಿ.ಎನ್.ಶ್ರೀರಾಂರಿಂದ ಪುಸ್ತಕ ತರಿಸಿಕೊಂಡು ಒಂದೂವರೆ ದಿನದಲ್ಲಿ ಓದಿ ಪೂರೈಸಿದ್ದು ನೆನಪುಂಟು......

**ತೇಜಸ್ವಿ ಮತ್ತು ನಿಮ್ಮ ಬದುಕಿನಲ್ಲಿ ಕೊರತೆಗಳೆಂಬುವು ಮತ್ತು ವಿಷಾದಪಡುವಂತಹ ಸಂಗತಿಗಳೇನಾದರೂ ಇದ್ದುವೇ?**

ಕೊರತೆನೂ ಇಲ್ಲ. ವಿಷಾದ ಮೊದಲೇ ಇಲ್ಲ. ಮದುವೆಗೆ ಬದುಕಿನಲ್ಲಿ ಏನೇನೋ ನಿರೀಕ್ಷಿಸಿಕೊಂಡು ಕೂತಾಗ ಕೊರತೆ ಎಂಬುದು ಇರುತ್ತೆ. ನಮಗೇನೂ ಇರಲಿಲ್ಲ.

ಒಂದಿವ್ಸ ನಾನು ಹೇಳಿದೆ, ಯಾರ್‍ಯಾರೋ ಹೇಳ್ತಾರೆ "ನಿಮ್ಮದು ಬಹಳ ಒಳ್ಳೆ ಅದೃಷ್ಟ" ಅಂತೆ ಅಂದೆ. ಹ್ಞೂಂ, ಒಬ್ಬರಿಗೆ ಅದೃಷ್ಟ ಮತ್ತೊಬ್ಬರಿಗೆ ದುರಾದೃಷ್ಟ ಯಾಕಾಗಬಾರ್‍ದು" ಎಂದರು ನನ್ನನ್ನು ಛೇಡಿಸಲಿಕ್ಕಾಗಿ. ಹೌದು ತಾನೆ. ಇಬ್ಬರೂ ನಕ್ಕೆವು.

**ತೇಜಸ್ವಿಯವರ ಅಗಲಿಕೆ/ನೆನಪನ್ನು ಹೇಗೆ ತುಂಬಿಕೊಳ್ಳುತ್ತಿರುವಿರಿ?**

ತೇಜಸ್ವಿ ಇರಬೇಕಿತ್ತು ಅಂತ ಪ್ರತಿ ಗಳಿಗೆ ಅನ್ನಿಸುತ್ತಲೇ ಇರುತ್ತೆ. ಈಗ ಇಲ್ಲಿ ಓಡಾಡ್ತಿರ್‍ತಿದ್ರು ಅಂದುಕೊಳ್ಳುವೆ.... ಕೆಲವು ಸಲ ಅವರನ್ನು ಬೈದುಕೊಳ್ತೀನಿ.... ನಾನೊಬ್ಬಳೇ ಈಗ.... ಕಷ್ಟ.... ಏನು ಮಾಡುವುದು.

ಆದರೆ ಎಲ್ಲರಿಗೂ ತಿಳಿದಿರುವಂತೆ "ನನ್ನ ತೇಜಸ್ವಿ" ಪುಸ್ತಕ ಬರೆದೆ. ಸವಿತಾ ನಾಗಭೂಷಣರಿಗೆ ಅನಂತಾನಂತ ಕೃತಜ್ಞತೆಗಳು. ಬರೆಯಿರೆಂದು ಒತ್ತಾಸೆ ಕೊಟ್ಟರಲ್ಲಪ್ಪ. ಅದೆಷ್ಟು ಧನ್ಯತೆಯ ಭಾವ ಬರುತ್ತೆ. ತುಂಬಾ ತುಂಬಾ ಒಳ್ಳೆಯದಾಯ್ತು. ಇದು ತೇಜಸ್ವಿ ನೆನಪನ್ನು ಮಾತ್ರ ತುಂಬಿಕೊಟ್ಟಿದ್ದಲ್ಲ. ಶ್ರೀ ಜಿ..ಹೆಚ್. ನಾಯಕರ ಮಾತನ್ನೇ ಹೇಳ ಹೊರಟರೆ –ಕನ್ನಡಕ್ಕೆ ಮಹತ್ವದ ಕೃತಿ ಕೊಟ್ಟಿರಿ ಎಂದಾಗ ನನ್ನೊಳಗೇ ಧನ್ಯೋಸ್ಮಿ ಎಂದುಕೊಂಡೆ. ನಮ್ಮ ಪ್ರಕಾಶನದಿಂದಲೇ ಅಂದವಾಗಿ ಪ್ರಕಟಗೊಂಡಿತು. ಮರು ಮುದ್ರಣವೂ ಆಯ್ತು. ಅವರಿಗೂ ಕೃತಜ್ಞತೆಗಳು. ಅನಂತ ಧನ್ಯವಾದಗಳು.

ಇದೀಗ ನನ್ನ "ಅಮ್ಮ ನೇಯ್ದ ಬದುಕು" ಬಗ್ಗೆ ಬರೆಯುತ್ತಿರುವೆನು. *ಕೆಂಡಸಂಪಿಗೆ.ಕಾಂ* ನಲ್ಲಿ ಬರುತ್ತಿದೆ. ಇದು ಹೃದಯ ತುಂಬಿ ಬರುವ ಕೆಲಸವೇ. ಉಳಿದಂತೆ ಕಾಫಿ ತೋಟ ನೋಡಿಕೊಳ್ಳುವ ಕೆಲಸವಿದೆ. ತೇಜಸ್ವಿಯ ಸ್ಪರ್ಶ ಪ್ರತಿಯೊಂದು ಗಿಡಕ್ಕೂ ಇದೆ. ಹೂ ತೋಟ ಉತ್ಸಾಹ ತುಂಬುತ್ತೆ. ಇಷ್ಟಲ್ಲದೆ ತೇಜಸ್ವಿ ಅಭಿಮಾನಿಗಳು ತೇಜಸ್ವಿ ಓಡಾಡಿದ ಜಾಗ ನೋಡಲೆಂದೇ ಇಲ್ಲಿಗೆ ಬರುತ್ತಲೇ ಇರುವರು. ಎಲ್ಲರಿಗೂ ಮತ್ತೊಮ್ಮೆ ಧನ್ಯವಾದಗಳು.

**(ಮಾತುಕತೆ ನಡೆಸಿದವರು : ಡಿಎಸ್ಸೆನ್)**



ಕಥೆ

# ಗೋವ್ರುಗಳಿರಾ ನಿಮ್ಮ ಪಾದಕ್ಕೆರಗುವೆನು

-ಎಚ್. ನಾಗವೇಣಿ

**ಅ**ದು ಜಾರ್ದೆ ತಿಂಗಳು ಕಳೆದು ಪೆರಾರ್ದೆ ತಿಂಗಳ ನಡುಗಾಲ. ಆಗಲೇ ಸರಿದು ಹೋದ ಆಟಿ, ಸೋಣ ತಿಂಗಳಲ್ಲಿ – ಬಾನಸೀಳಿದಂತೆ ಸುರಿದ ಕುಂಭದ್ರೋಣ ಮಳೆಯ ಆರ್ಭಟವೆಲ್ಲ ಮುಗಿದು, ಕನ್ಯೆ ತಿಂಗಳ ಜಡಿಮಳೆಯ ವರಾತವೂ ತಗ್ಗಿ, ಮುಂದಿನ ಜಾರ್ದೆ ತಿಂಗಳ ಹನಿಮಳೆಯ ಆಟವೂ ಮುಗಿದು – ಈಗ ಬಾನು ಮತ್ತು ಭುವಿ ಒಂದು ಹಂತಕ್ಕೆ ಬಂದು ನಿಂತಿತ್ತು. ಇನ್ನೇನು ಮಳೆ ಹಿಂದಾಯ್ತು... ಬಾನಲ್ಲಿ ಬಿಳಿಮೋಡಗಳು ಮೆರವಣಿಗೆ ಹೊರಡೋ ಕಾಲ ಬಂತು– ಎಂಬ ನಿಡಿದಾದ ನಿಟ್ಟುಸಿರು ಬಿಡುತ್ತ ಬೆಸ್ತರಕೇರಿಯ ಹೆಣ್ಮಕ್ಕಳೆಲ್ಲ ಮೂಡಣದ ತಮ್ಮ ಹಕ್ಕಿನ ಕ್ಯಾಕದ ಹಳ್ಳಿಗಳಿಗೆ (ಮೀನು ಮಾರುವ ವರ್ತನೆಯ ಮನೆಗಳುಳ್ಳ ಹಳ್ಳಿ) ಮೀನಬುಟ್ಟಿಗಳನ್ನು ಹೊತ್ತೊಯ್ಯಲು ತಯಾರಿ ನಡೆಸುವ ಪರಿಯೇ ಆ ಕೇರಿಯಲ್ಲಿಡಿ ಒಂದು ತೆರನಾದ ಸಡಗರವನ್ನು ಸೃಷ್ಟಿಸಿತ್ತು.

ಬೆಸ್ತರ ಹೆಣ್ಮಕ್ಕಳ ಆ ನಿಡಿದಾದ ನಿಟ್ಟುಸಿರಿಗೆ ಕಾರಣವಿರದಿರಲಿಲ್ಲ. ಮಳೆಗಾಲ ಬಂತೆಂದರೆ ನೂರಾರು ತಾಪತ್ರಯಗಳ ಸರಮಾಲೆ ಅವರ ಕೊರಳಿಗೆ ಬಂತೆಂದೇ ಅರ್ಥ. ಅಡುಗೆ ಒಲೆಯನ್ನು ಕೋಳಿ ಕೆದಕಬಲ್ಲ ಕಾಲವದು. ಮನೆ ಮುಂದೆ ಮೀನಿನ ಖಜಾನೆಯನ್ನೇ ತುಂಬಿಕೊಂಡಿರುವ ಕಡಲಿದ್ದರೂ, 'ಕಮ್ಮಾರನ ಮನೆಯಲ್ಲಿ ಕೊಯ್ಯಲು ಕತ್ತಿ ಇಲ್ಲ' ಎನ್ನುವ ಬಡತನದ ಸ್ಥಿತಿ ಈ ಬೆಸ್ತರ ಕುಟುಂಬಗಳದ್ದು. ತಿನ್ನುವ ಒಪ್ಪತ್ತಿನ ಅನ್ನಕ್ಕೂ ತತ್ವಾರ ಇರುವ ಮಳೆಗಾಲದ ಈ ಬರಗಾಲವನ್ನು ನಿಭಾಯಿಸುವುದಕ್ಕಾಗಿಯೇ...... ಇನ್ನೇನು ಮಳೆಯ ತಿಂಗಳುಗಳು ಸರಿದು ಹೋಗಿ, ಕಡಲಲ್ಲಿ ರಂಪಣಿಬಲೆ ಎಳೆವ, ಪಟ್ಟೆ ಬಲೆ–ಮಾರಿಬಲೆ ಬೀಸುವ ಕೆಲಸ ಶುರುವಾದೊಡನೆ, ಕಡಲತಡಿಗೆ ಬಂದು ಬೀಳುವ ತರಾವರಿ ಮೀನರಾಶಿಗಳನ್ನು, ಬೆಸ್ತರ ಹೆಣ್ಮಕ್ಕಳು ಮೂಡ್ಲಾಗೆ ರಾತೋರಾತ್ರಿ ಹೊತ್ತೊಯ್ದು, ಒಂದು ದಿನ ಅಲ್ಲೇ ಇದ್ದು ಅಲ್ಲಿ ತಮ್ಮ ಎಂದಿನ ಕ್ಯಾಕದ ಮನೆಗಳಿಗೆ ಮಾರಿ, ಹಾಗೆ ಒಟ್ಟು ಮಾಡುವ ಭತ್ತ–ಬೇಳೆ–ಕಾಳು ಕಾಯಿ–ಹಲಸು, ತರಕಾರಿಗಳನ್ನು ತಮ್ಮ ಮುಂದಿನ ಮಳೆಗಾಲದ ಕಷ್ಟದ ದಿನಗಳಿಗೆ ಸಂಗ್ರಹಿಸಿಡುವುದು– ಅವರ ವಾರ್ಷಿಕ ಜೀವನಕ್ರಮವೇ ಆಗಿದೆ. ಆದರೆ ಹೀಗೆ 'ಕಟ್ಟಿಟ್ಟ ಬುತ್ತಿ'ಯ ಕತೆ ಎಷ್ಟು ದಿನಗಳದ್ದು? ಕಾರ್ತೆಲ್, ಆಟ, ಸೋಣ ತಿಂಗಳು ಸರಿದೊಡನೆ ಈ 'ಪರಿಕರ'ಗಳೆಲ್ಲ ಖಾಲಿಯಾದರೆ, ಒಂದಾ..... ಮಳೆಗಾಲಕ್ಕೆಂದೇ ಬೇಸಿಗೆಯಲ್ಲಿ ಒಣಗಿಸಿಟ್ಟ ಒಣಮೀನುಗಳನ್ನು ಮಾರಿಯೋ.... ಅಥವ ಮನೆ ಗಂಡಸರು ಕಡಲ ಸೆರಗಿಗೋ ಇಲ್ಲವೇ ಹೊಳೆಯ ಕೈಗೋ ಬಲೆ ಎಸೆದು ತರುವ ಪುಡಿಮೀನುಗಳನ್ನು ಮಾರಿಯೋ ಸಂಸಾರದ ಒಡಲನ್ನು ತಣಿಸಬೇಕಷ್ಟೆ.



ಇದೀಗ ಜಾರ್ದೆ ತಿಂಗಳು ಜಾರುತ್ತಿದ್ದಂತೆ ಇನ್ನಿಲ್ಲದಂತೆ ಅಬ್ಬರಿಸುತ್ತಿದ್ದ ಮಳೆರಾಯ ನಿಶ್ಯಕ್ತನಾಗಿ, ಧುಮುಗುಡುತ್ತಿದ್ದ ಫಲ್ಗುಣಿ ನದಿಯೂ ಶಾಂತಸ್ಥಿತಿಗೆ ಬಂದಿಳಿದುದನ್ನು ಕಂಡು, 'ಮೂಡಣದ ಕ್ಯಾಕದ ಮನೆಗಳಿಗೆ ಹೊರಡುವುದರೊಂದಿಗೆ... ಬಡಹೊಟ್ಟೆಯ ಹಸಿವು ನೀಗುವ ಗಳಿಗೆ ಪ್ರಾಪ್ತವಾದುದಕ್ಕೆ' ಬೆಸ್ತರ ಹೆಣ್ಮಕ್ಕಳು ನಿಡಿದಾದ ನಿಟ್ಟುಸಿರು ಬಿಟ್ಟಿದ್ದರು.

ಬೆಸ್ತರ ಹೆಣ್ಮಕ್ಕಳು ಬಿಟ್ಟ ಆ ನಿಟ್ಟುಸಿರ ವಾಲೆಗಳ ಸುರುಳಿ– ಎಷ್ಟೋ ತಲೆಮಾರುಗಳಿಂದ ಆ ಕುಲದ ಹೆಣ್ಮಕ್ಕಳನ್ನು ತನ್ನ ಮೈಮೇಲಿಂದಾಗಿ ದೂರದ ಮೂಡಣಕ್ಕೆ ಹೊತ್ತೊಯ್ಯುತ್ತಿದ್ದ ಫಲ್ಗುಣಿ ನದಿಗೂ ತಲುಪಿತೇನೋ... ಎನ್ನುವಂತೆ, ಮಾಮೂಲಾಗಿ ಆ ಹೆಣ್ಮಕ್ಕಳು ದೋಣಿ ಏರುವ ಸ್ಥಳವಾದ 'ಬ್ಯಾರಿ ಕಡಪಿನ' ಬಳಿ, ನದಿಯು ಬಹಳಷ್ಟು ಹಿಂದಕ್ಕೆ ಸರಿದು ಬಿಟ್ಟಿತ್ತು!

ಜಾರ್ದೆಯು ವರೆಗೂ ಕಾವಿಬಣ್ಣದಿಂದ ಕಾವಿಗೆ ಕೂತ ಹೇಂಟೆಯಂತೆ ಉಬ್ಬಿದ್ದ ಜೀವನದಿ ಫಲ್ಗುಣಿ, ಇದೀಗ ಪೆರಾರ್ದೆ ತಿಂಗಳಿಗೆ ತನ್ನ ಸಹಜವಾದ ಮೈಬಣ್ಣಕ್ಕೆ ಮರಳಿ ಬಂದಿತ್ತು. ಎಂಟು ತಿಂಗಳ ಬಸುರಿಯಂತೆ ಸುಂದರವಾಗಿ ಮೈತುಂಬಿಕೊಂಡು, ತನ್ನ ಸೆರಗಿನ ಎಡ–ಬಲದ ಮುಡಿಗಟ್ಟಲೆ ವಿಸ್ತೀರ್ಣದಲ್ಲಿ ಬೆಳೆದಿರುವ ಕಬ್ಬಿನ ಗದ್ದೆಗಳಿಗೆಲ್ಲ 'ತಾನೇ ಒಡತಿ' ಎಂಬ ಹಮ್ಮಿನಿಂದಲೇ ಆ ನದಿ ಸಂಗಮಾತುರದಿಂದ ಕಡಲಬಾಯತ್ತ ಹರಿಯುತ್ತಿತ್ತು. ಆ ಹಮ್ಮಿನಿಂದಲೇ ಅಲ್ಲವೇ... ಅದು ಮೊನ್ನೆಯ ಸೋಣ ತಿಂಗಳ ಶುರುವಲ್ಲಿ ಬಾನ ಬಿರಿವಂತೆ ಸುರಿದ ಮಳೆಗೆ ದಡ ಮೀರಿ ಉಕ್ಕಿ ಹರಿದು, ತನ್ನ ಸೆರಗಲ್ಲಿದ್ದ ಕಬ್ಬಿನಗದ್ದೆಗಳಿಗೆ ನುಗ್ಗಿ ಎರಡು ದಿನ ಅಲ್ಲೇ ಠಿಕಾಣಿಹೂಡಿದ್ದು! ನದಿ ಹೀಗೆಲ್ಲ ಗದ್ದೆ–ತೋಟಗಳಿಗೆ ನುಗ್ಗಿಬಿಟ್ಟು ದಿನಗಟ್ಟಲೆ ಠಿಕಾಣಿ ಹೂಡಿದಾಗಲೆಲ್ಲ.... ಭೂಮಾಲೀಕರು ಮಾಡುವುದೇನು ಗೊತ್ತೇ? ನದಿಯಮ್ಮನ ಪ್ರೀತಿಪಾತ್ರರಾದ ಬೆಸ್ತರ ಹೆಣ್ಮಕ್ಕಳಿಗೆ ಹೇಳಿ ಕಳುಹಿಸುವುದು!



ಅದೆಂತಹ ವಿಚಿತ್ರವೊ ಏನೋ....., ನದಿಗೆ ಎಷ್ಟೇ ಹಮ್ಮಿದ್ದರೂ, ಆ ಬೆಸ್ತರ ಹೆಣ್ಮಕ್ಕಳು ನದಿಯ ಮುಂದೆ ಸೆರಗೊಡ್ಡಿ ' ಬಡವರ ಹೊಟ್ಟೆಗೆ ಹೊಡಿಬೇಡಮ್ಮ.... ಬಂದ ಹಾಗೇ ಇಳಿದು ಹೋಗಮ್ಮ..., ನಿನ್ನಿಂದಲೇ ನಮಗೆ ಬೆಲೆ, ನಿನ್ನಿಂದಲೇ ನಮಗೆ ನೆಲೆ...' ಎಂದು ಅಲವತ್ತುಕೊಂಡ ತಾಸೊಳಗೆ ಅದು ಇಳಿದು ಹೋಗುತ್ತಿದ್ದುದು ಅಷ್ಟೇ ನಿಜ. ಹೊಟ್ಟೆಪಾಡಿಗಾಗಿ ತನ್ನ ಮೈಮೇಲಿಂದಾಗಿ ಎಲ್ಲಿಂದಲೋ ಎಲ್ಲಿಗೆ ಪಯಣ ಬೆಳೆಸುವ ಬಡವರೆಂದರೆ ಈ ನದಿಗೆ ಬಲು ಅಚ್ಚುಮೆಚ್ಚಿರಬೇಕು. ತಲೆತಲೆಮಾರುಗಳಿಂದ ವರ್ಷಾನುಗಟ್ಟಲೆಯಿಂದ ಮೂಡಣದಿಂದ ಪಡುವಣದ ಬಂದರು, ನದಿತೀರದ ಹಂಚಿನ ಕಾರ್ಖಾನೆಗಳಿಗೆ ಆವೆಮಣ್ಣು, ಬೈಹುಲ್ಲ ಮೂಟೆ, ಭತ್ತದ ಮೂಟೆ, ಅಕ್ಕಿಮುಡಿ, ಅಡಿಕೆಚೀಲ, ತೆಂಗಿನಕಾಯಿ, ಸೌದೆ ಮರಮುಟ್ಟು ಇತ್ಯಾದಿಗಳನ್ನು ತಮ್ಮ ದೋಣಿಗಳ ಮೂಲಕವೇ ಸಾಗಿಸುತ್ತ, ಇಳಿಸಂಜೆಗೆ ಅಲ್ಲಿಂದ ಮರಳಿ ಬರುವಾಗ ಮೂಡಣದ ಹಳ್ಳಿಗಳಿಗೆ ದಿನಸಿ ಸಾಮಗ್ರಿ, ಪಾತ್ರೆಪಗಡಿ, ಸರಕು ಸರಂಜಾಮುಗಳನ್ನು ಹೇರಿಕೊಂಡು ಹಾಗೇ ಬ್ಯಾರಿಕಡಪಿನಿಂದ ಬೆಸ್ತರ ಹೆಣ್ಮಕ್ಕಳನ್ನೂ ಮೀನ ಬುಟ್ಟಿಗಳ ಸಮೇತ ಹತ್ತಿಸಿಕೊಂಡು ಮಧ್ಯರಾತ್ರಿಯಿಡೀ ಪಯಣ ನಡೆಸುತ್ತಿದ್ದ, ದೋಣಿಗಳ 'ಸರದಾರ'ರಾಗಿದ್ದ ಆದಂಬ್ಯಾರಿ, ಬಾವಾಕ, ಸೈಯ್ಯದ್ಯಾಕ, ಮ್ಯೊದಿನಾಕನವರ ಅಜ್ಜ–ಮುತ್ತಜ್ಜಂದಿರು ಈ ನದಿ ಬಗ್ಗೆ ಹೀಗೆ ಹೇಳುವುದಿತ್ತು – 'ಬಿಸಿಲು–ಗಾಳಿ–ಮಳೆ ನೋಡದೆ ಹೊಟ್ಟೆ ಪಾಡಿಗಾಗಿ ದಿನವೂ ದೋಣಿ ನಡೆಸುವಂತಹ ನಮ್ಮಂಥವರಿಗಾಗಿಯೇ... ಈಯಮ್ಮ ಎಂತಹ ಕಾಲದಲ್ಲೂ ನಮಗೆದುರಾಗದೆ, ಬಿರುಬೇಸಿಗೆಯಲ್ಲೂ ನಮಗಾಗಿ ಸೊರಗದೆ 'ಹೇಂಟೆ ತನ್ನ ಹೂ ಮರಿಗಳನ್ನು' ಕಾಪಾಡಿದಂತೆ ಕಾಪಾಡಿದ್ದಾಳೆ, ಇವಳು ಹೆತ್ತ ತಾಯಿಗಿಂತಲೂ ಹೆಚ್ಚು'– ಎಂದು. ಈಗ ದೋಣಿ ನಡೆಸುವ ಎಲ್ಲ ಬ್ಯಾರಿ ಕುಟ್ಟಿಗಳು ಕೂಡಾ ಹೇಳುವುದು ಇದನ್ನೇ... ಪಾಪ...ಮುತ್ತಾತ್ತರ ಮಾತನ್ನೇ.

ತುಂಬಿದ ಆ ನದಿ ಅಂದು.... ಅಂದರೆ ಪೆರಾರ್ದೆ ತಿಂಗಳ ಶುಕ್ಲಪಕ್ಷದ ಚತುರ್ದಶಿಯಂದು, ಕಡಲನ್ನು ಸೇರುವ ತವಕದಲ್ಲಿ, ತನ್ನದೇ ಆದ ಲಹರಿಯಲ್ಲದು ಹರಿಯುತ್ತಿದೆ. ಪಡುವಣದ ಸಂಧ್ಯಾಕಾಶದಲ್ಲಿ ವರ್ಣೋಪವರ್ಣಗಳಲ್ಲಿ ಮೋಹಕವಾದ ಮೋಡಗಳ ಮೆರವಣಿಗೆಯಾಗಲೇ ಆರಂಭಗೊಂಡಿದೆ. ನದಿ ಪಕ್ಕದ ಮರ–ಪೊದೆಗಳು, ಕಬ್ಬಿನ ಗದ್ದೆಗಳೆಲ್ಲ ಬೈಗುಗೆಂಪಿನಂದ ತೋಯತೊಡಗಿ ಅಸಂಖ್ಯ ಹಕ್ಕಿಗಳ ಆಲಾಪನೆಯೂ ಆರಂಭಗೊಂಡಿದೆ. ಪಡುವಣ ದಿಕ್ಕಲ್ಲಿರುವ ಕೆಮ್ಮುಗಿಲ ಸಾಕ್ಷಿಯಲ್ಲಿ ದೇವರು ಪಡುಗಡಲಿಗೆ ಉರುಳುವಷ್ಟರಲ್ಲಿ, ಅತ್ಲಾಗಿಂದ.... ಪಡ್ಲಾಗೆ ಕಡಲಕರೆಯ ಕೇರಿಗಳಿಂದ ಬೆಸ್ತರ ಹೆಣ್ಮಕ್ಕಳು ತಲೆ ಮೇಲೆ ಮಣಭಾರದ ಮೀನಬುಟ್ಟಿಗಳನ್ನು ಹೊತ್ತುಕೊಂಡು ನದಿಸೆರಗತ್ತ 'ಮೆರವಣಿಗೆ' ಹೊರಟಿದ್ದರು.

ಮೀನಬುಟ್ಟಿ ಹೊತ್ತ ತಾಯಂದಿರ ಬಾಲವಾಗಿ ಹತ್ತು–ಹನ್ನೆರಡರ ಹರೆಯದ ಬಾಲೆಯರೂ, ರಾತ್ರಿಗೆ ಬೇಕಾಗಿರುವ ಬಿಸಿಗಂಜಿ, ಒಣಮೀನ ಚಟ್ನಿ ಉಳ್ಳ ಮಣ್ಣಿನ ಕುದುಪೆ(ಗುಂಡಗಿನ ಮಣ್ಣಿನ ಪಾತ್ರೆ) ಗಳನ್ನು ಮತ್ತು ತೆಂಗಿನಗರಿಗಳ ತೂಟೆ (ಪಂಜು)ಗಳುಳ್ಳ ಸಣ್ಣ ಬುಟ್ಟಿಗಳನ್ನು ತಲೆ ಮೇಲೆ ಹೊತ್ತುಕೊಂಡು, ಕೈಲ್ಲೊಂದು ಲಾಟೀನು ಸಮೇತರಾಗಿ ಹೊರಟಿದ್ದರು.

ಅದಮ್ಯ ಛಲದ ಈ ಬೆಸ್ತರ ಹೆಣ್ಮಕ್ಕಳು, ಮೂಡಣದಿಂದ ನದಿ ಹರಿದು ಬರುವ ದಾರಿಯ ಉದ್ದಕ್ಕೂ ಆಚೀಚೆ ಹರಡಿಕೊಂಡಿರುವ ಹಳ್ಳಿಗಳಲ್ಲಿ ತಮಗಿಷ್ಟದ ಹಳ್ಳಿಗಳನ್ನು ಆಯ್ಕೆ ಮಾಡಿಕೊಂಡು, ಮುಂದೆ ಆ ಹಳ್ಳಿಗೆ ವಂಶಪಾರಂಪರ್ಯವಾಗಿ ತಾವೇ ಕ್ಯಾಕದ ಮೀನುಗಳನ್ನು ಮಾರುವುದೆಂಬ 'ಒಪ್ಪಂದ'ವನ್ನು ಊರಿನ ದೈವದ ಮುಂದೆಯೇ ಮಾಡಿಕೊಳ್ಳುವುದು ಹಾಗೆ ಮತ್ತು ಮಾಡಿಕೊಂಡ ಅಲಿಖಿತ ಕರಾರಿನಂತೆ ಪ್ರತೀ ಜಾರ್ದೆ ಪೆರಾರ್ದೆಯಿಂದ ಭೇಷೆ ತಿಂಗಳು ಮುಗಿಯುವವರೆಗೂ ಆ ಹಳ್ಳಿಗಳಿಗೆ ಕ್ಯಾಕದ ಮೀನು ಕೊಟ್ಟು, ಭತ್ತ–ಕಾಳು–ಬೇಳೆ ಪಡೆಯುವುದು ಅವರ ಬದುಕಿನ ಒಂದು ವಾಡಿಕೆಯೇ. ಈ ಬೆಸ್ತರ ಕುಟುಂಬಗಳಿಗೆ.... ತಮ್ಮ ಆ 'ಕ್ಯಾಕದ' ಹಳ್ಳಿ ಕೂಡಾ ತಾವು ಹುಟ್ಟಿ ಬದುಕುತ್ತಿರುವ ಹಳ್ಳಿಯಂತೆಯೇ ಪರಮಾಪ್ತವಾದುದು.

ಇದೀಗ ಈ ಹೆಣ್ಮಕ್ಕಳು ಅವರವರ ಕೇರಿಯಿಂದ ಹೊರಟು ನದಿ ಸೆರಗಿನ ಬರುವಷ್ಟರಲ್ಲಿ ಹೊಳಪು ಕಳೆದುಕೊಂಡಂತಿದ್ದ ಚಂದಿರ ಗಗನ ವೇದಿಕೆಯನ್ನೇರಿ ಆಗಿತ್ತು. ಈ ಮಳೆಗಾಲ ಕಳೆದು ನಂತರದಲ್ಲಿ ಇದು ಈ ಬೆಸ್ತರ ಹೆಣ್ಮಕ್ಕಳಿಗೆ ಮೊದಲ ಮೂಡ್ಲಾಗಿನ ನದಿ ಪಯಣವಲ್ಲ; ಇಂದು ಅವರ ನಾಕನೆ ಬಾರಿಯ ಪಯಣ. ಕೊರಳಕಣ್ಣಿ ಕಳಚಿಕೊಂಡು ಕಿವಿಗೆ ಗಾಳಿ ಹೊಗಿಸಿಕೊಂಡ ಕರುವಿನಂತೆ ಖುಷಿಯಲ್ಲಿದ್ದ ಅವರ ಮಾತಿಗೆ ಕಡಿವಾಣ ಎಂಬುದಿರಲಿಲ್ಲ. 'ಮುಂದಿನ ಮಯಿಂತೆಲ್ ತಿಂಗಳಲ್ಲಿ ಬಜ್ಪೆ ಇಮಾನ(ವಿಮಾನ) ನಿಲ್ದಾಣದ ಉದ್ಘಾಟನೆಗೆ ನೆವ್ರು (ನೆಹರೂ) ಬರ್ತಾರಂತೆ.....; ನೆವ್ರು ಅಂದ್ರೆ ಯಾರು? ಇಮಾನಗಳು ನಮ್ಮ ತಲೆ ಮೇಲೆ ಹಾರಿ... ಏನಾದ್ರು ಹೆಚ್ಚು ಕಮ್ಮಿ ಆದ್ರೆ ಏನು ಕತೆ...? ಇನ್ನು ನಮ್ಮ ಬಾನಲ್ಲಿ ಹಾರುವ ಹಕ್ಕಿಗಳೆಲ್ಲ ಎಲ್ಲಿಗೆ ಹೋಗ್ಬೇಕು.... ಎಲ್ಲಿ ಹಾರ್ಬೇಕು.....?' ...ಹೀಗೆ ಮಾತಿನ ಸರಪಳಿಯನ್ನು ಅವರೆಲ್ಲ ಬಿಗಿಸಿಕೊಂಡು ನದಿದಡಕ್ಕೆ ತಲುಪುವಷ್ಟರಲ್ಲಿ.... ಪರಿಪೂರ್ಣ ಚಂದ್ರ ನದಿ ನೀರನ್ನೆಲ್ಲ ತನ್ನ ನಗುವಿನಿಂದ ತೋಯಿಸತೊಡಗಿದ್ದ.

ಬೈಕಂಡಿ, ಮೀನಕಳಿಯ, ಪಣಂಬೂರಿನ ಬೆಸ್ತರಕೇರಿಯ ಹೆಣ್ಮಕ್ಕಳ 'ಬೆಳದಿಂಗಳ ಮೆರವಣಿಗೆ' ನದಿ ಕರೆಯ ಬ್ಯಾರಿಕಡಪುವಿನ ಬಳಿ ಬರುವಷ್ಟರಲ್ಲಿ, ಪಡುವಣದ ಬಂದರಿಂದ ನಾಲ್ಕು ದೋಣಿಗಳ 'ಸರದಾರ'ರೂ ಹಿಂದಿರುಗಿ ಬಂದು ಒಲೆ ಊರಿ ಉಂಡು, ಎಂದಿನಂತೆ ಅವರ ಹರಟೆಯ ಸ್ಥಳವಾದ ಧೂಪದ ಮರದಡಿ ಬಂದು ಕೂತಾಗಿತ್ತು. ಆ ನದಿಯ ಮೈ ಮೇಲಾಗಿ ದಿನವಿಡೀ ಅನೇಕ ದೋಣಿಗಳು ಸವಾರಿ ನಡೆಸುತ್ತಿದ್ದರೂ, ತಮ್ಮ ಹೆಣ್ಮಕ್ಕಳ ಮೂಡಣದ ಪಯಣಕ್ಕೆ ಅವರವರ ಕೇರಿಯ ಬೆಸ್ತರ ಗುರಿಕಾರರು ಮಾತುಕತೆಯ ಒಪ್ಪಂದ ಮಾಡಿಕೊಂಡಿದ್ದು– ಗುರುಪುರದ ಸೈಯದ್ಯಾಕ, ಮ್ಯೊದಿನಾಕ, ಬಾವಾಕ ಮತ್ತು ಆದಂ ಬ್ಯಾರಿಯವರ ದೋಣಿಗಳನ್ನು. 'ಆದ್ಯಾಕಪ್ಪ ವರ್ಷಾನುಗಟ್ಟಲೆಯಿಂದ ಬರೀ ಬ್ಯಾರಿಕುಟ್ಟಿಗಳೇ ಈ ನದಿಯಲ್ಲಿ ದೋಣಿ ಓಡಿಸುವುದು.? ಅದೇನೋ ನದಿಗೂ ಬ್ಯಾರಿಗಳಿಗೂ ಏನೋ ಒಂದು ಮಾತುಕತೆ ನಡೆದಿರಬೇಕು.....' ಎಂದು– ಪ್ರತೀ ವರ್ಷ ಕನಿಷ್ಠ ಎಂಟು ತಿಂಗಳ ಕಾಲ ಈ ನದಿ ಮೇಲೆ ಓಡಾಡುವ ಬೆಸ್ತರ ಹೆಣ್ಮಕ್ಕಳ ಕೀಟಲೆ ಮಾತುಗಳಿಗೆ ದೋಣಿ ನಡೆಸುವವರು ಪಕಪಕನೆ ನಗುವುದಿದೆ. ಅದು ಅವರಿಗೂ ಅಚ್ಚರಿಯ ವಿಚಾರವೇ ಹೌದು.

ಇದೀಗ ಧೂಪದ ಮರದಡಿ ಕೂತಿದ್ದ ದೋಣಿ ಮಾಲೀಕರು ಇನ್ನೇನು ಕುಡಾಲಪೇಟೆಯ ಮೇಲೆ ಹಾರಲಿರುವ ವಿಮಾನಗಳ ಬಗ್ಗೆಯೇ ಹರಟುತ್ತಿದ್ದಾಗ....., ಅಲ್ಲಿಗೆ ಮೊದಲು ತಲುಪಿದ ಮೀನಕಳಿಯದ ಬೆಸ್ತರ ಹೆಣ್ಮಕ್ಕಳ ತಂಡದ 'ಸ್ವಯಂಘೋಷಿತ ನಾಯಕಿ' ಹಳೆಹಿತ್ಲಿನ ಕಮಲು ಮರಕಾಲ್ತಿ, ಆ ಬ್ಯಾರಿಗಳ ಮಾತಿನ ಮಂಟಪದೊಳಗೆ ತಾನೂ ಹೊಕ್ಕುಬಿಟ್ಟು, ಸುಮಾರು ಎಂಟು ಒಂಭತ್ತು ವರ್ಷಗಳ ಹಿಂದೆ, ತನ್ನ ಹಿತ್ತಲ ಹಿಂದಿನ ಬೈಕಂಡಿ ಕಡಲಕರೆಯ ಮೇಲೆ ಯುದ್ಧ ವಿಮಾನಗಳು




ಹಾರಿ... ತನ್ನೊಳಗೆ ಭಯದ ಅವಲಕ್ಕಿ ಕುಟ್ಟಿಸಿದ್ದನ್ನು ವರ್ಣಿಸಿ ಅವರನ್ನೆಲ್ಲ ದಂಗು ಬಡಿಸಿದ್ದಳು.

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಾಗ ಕಮಲು ಮರಕಾಲ್ತಿಗೆ ೬೨ ವಸಂತಗಳು ತುಂಬಿದ್ದರೆ.... ಈಗ ಆಕೆಗೆ ೬೭ ವಸಂತಗಳು ತುಂಬಿ ಇನ್ನೂ ಒಂದಷ್ಟು ತಿಂಗಳುಗಳು ಉರುಳಿವೆ. ಎರಡನೇ ಮಹಾಯುದ್ಧದ ಕಾಲದಲ್ಲಿ ಕನ್ನಡ ಜಿಲ್ಲೆಯ ಕಡಲಕರೆಯ ಸಂಧ್ಯಾಕಾಶದಲ್ಲಿ ನಮ್ಮ ಭಾರತೀಯ ಯುದ್ಧ ವಿಮಾನಗಳು ಆಗಾಗ ತಾಲೀಮು ನಡೆಸುತ್ತಿದ್ದುದನ್ನು ಈ ಕಮಲು ಮರಕಾಲ್ತಿ ಭಯ, ಗಾಬರಿ, ದಿಗಿಲಿನಿಂದ ಹಿತ್ತಲ ಬಸಳೆದೊಂಪದಡಿ ಕೂತು ದಿಟ್ಟಿಸಿದ್ದಿದೆ. ಆಕೆಯ ಗಂಡ ತಿಮ್ಮಪ್ಪ ಗುರ್ಕರನ ರಂಪಣಿಬಲೆ ಎಳೆವ ಕೆಲಸಕ್ಕೆ ಈ ಯುದ್ಧವಿಮಾನದ ಹಾರಾಟವು ಅಡೆ–ತಡೆಯನ್ನು ತಂದೊಡ್ಡಿ, ಹಲವು ಬೆಸ್ತ ಕುಟುಂಬಗಳ ಹೊಟ್ಟೆಯ ಮೇಲೆ ತಣ್ಣೀರ ಬಟ್ಟೆ ಹೊದಿಸುವಂತಹ ಸನ್ನಿವೇಶವನ್ನ ಒದಗಿಸಿಕೊಟ್ಟಾಗಲೆಲ್ಲ, ಆತ ಆ 'ಹಾರುವ ಕಬ್ಬಿಣದ ಹಕ್ಕಿಯನ್ನು ಏನು ನೋಡ್ತೀಯೇ ..... ಅದು ನಮ್ಮನ್ನು.... ನಮ್ಮಂಥ ಬಡವ್ರನ್ನ ಲಗಾಡಿ ತೆಗೆಯಲು ಬಂದ ದರಿದ್ರದ್ದು...., ಯುದ್ಧ ಅಂತೆ ಯುದ್ಧ....ಯಾರಿಗೆ ಬೇಕು ಯುದ್ಧ.....?' ಎಂದು ವಿಮಾನ ದಿಟ್ಟಿಸುತ್ತಿದ್ದ ಹೆಂಡತಿಯನ್ನು ಮನೆಯೊಳಗೆ ಅಟ್ಟುತ್ತಿದ್ದುದನ್ನು ಇದೀಗ ಆಕೆ ನೆನಪಿನಾಳದಿಂದ ಮೇಲಕ್ಕೆತ್ತಿ ತಂದು ದೋಣಿ ಸರದಾರರಿಗೆ ಹೇಳಬೇಕೆನ್ನುವಷ್ಟರಲ್ಲಿ – ನದಿ ಸೆರಗಿಗೆ ಪಣಂಬೂರಿನ ದನದ ದಲ್ಲಾಳಿ ಖಾದ್ರಿ ಬ್ಯಾರಿಯವರ ಆಗಮನವಾಗಿತ್ತು.

......ಕಮಲ ಮರಕಾಲ್ತಿಯ ನೆನಪಿನಾಳದ ಮಾತು ಅಲ್ಲಿಯೇ ತುಂಡರಿಸಿಕೊಂಡುಬಿಟ್ಟಿತ್ತು. ಅಲ್ಲಿಗೆ ಬರೀ ಖಾದ್ರಿ ಬ್ಯಾರಿಯವರ ಆಗಮನವಾಗಿದ್ದರೆ ಆ ಹರಟೆ ಗುಂಪೊಳಗಿಂತ ಅಷ್ಟು ಬೇಗ ವಿಮಾನ ಮತ್ತು ನೆಹರೂರವರು ಕಾಣೆಯಾಗುತ್ತಿರಲಿಲ್ಲವೇನೋ? ಆದರೆ ಖಾದ್ರಿ ಬ್ಯಾರಿಯವರ ಜತೆ, ಮೀನಕಳಿಯದ ಬಲಿಮೆಯ ನಾರ್ಣಭಟ್ರ ಬಿಳಿನಾಮದ ಕಬೆತಿ ಹಸುವು ತನ್ನ ನಾಲ್ಕು ತಿಂಗಳ ಕರುವಿನ ಜತೆಗೆ ಇರುವುದನ್ನು ನೋಡಿ, ಕಮಲು ಮರಕಾಲ್ತಿ ಒಂದು ಕ್ಷಣ ಕಂಗಾಲಾಗಿ ಹೋಗಿದ್ದಳು. ' ಏನ್ ಸ್ಯಾಬೆರೆ... ಏನ್ಕತೆ ನಿಮ್ದು, ಈ 'ನಾಮ'ದವಳನ್ನು ಕರ್ಕೊಂಡು ಎಲ್ಲಿಗೆ ಹೊರಟ್ರಿ' ಎಂದು ಆತಂಕದಿಂದಲೇ ಕೇಳಿದ್ದಳು.

ಆ ಹೊತ್ತಲ್ಲಿ ಸ್ಯಾಬರಿಗೆ ಈ ಹಸುಕರುವಿನ ಕತೆ ಬೇಡವಾಗಿದ್ದರೂ, ವಿಷಯು ಕೇಳಿದಾಕೆ ಬೆಸ್ತರಕೇರಿಯು ಜವಾಬ್ದಾರಿಯು ಹೆಣ್ಣುಮಗಳಾದ್ದರಿಂದ ಅವರು ಬಾಯಿ ಮುಚ್ಚಿಕೊಂಡಿರಲು ಸಾಧ್ಯವಾಗಿರಲಿಲ್ಲ. ಖಾದ್ರಿಬ್ಯಾರಿಯವರು ಈ ಕಬೆತಿ ಹಸುವಿನ ಕತೆಯನ್ನು ಒಂದಷ್ಟು ಬಿಚ್ಚಿಟ್ಟಿದ್ದ: ಮೀನಕಳಿಯದ ಬಲಿಮೆ ನಾರ್ಣಭಟ್ರ ಕೊಟ್ಟಿಗೆಯಲ್ಲಿ ಹಾಲು ಕರೆಯುವ ಏಳೆಂಟು ಹಸುಗಳಿವೆ. ಅವರ ಆರು ಮಂದಿ ಮಕ್ಕಳಲ್ಲಿ ಏಕೈಕ ಮಗ ವಾಸುಭಟ್ರದ್ದು ಪೌರೋಹಿತ್ಯದಲ್ಲಿ ಎತ್ತಿದ ಕೈ. ಅದರಲ್ಲೂ ವೈಕುಂಠವಾಸಿಗಳಾದವರ ಅಪರಕರ್ಮದ ಪೌರೋಹಿತ್ಯಕ್ಕೆ ಇವರಿಗೆ ನಾಲ್ಕೂರಿನಿಂದಲೂ ಬೇಡಿಕೆ. ಅಪರಕರ್ಮದ 'ಗೋದಾನ ವಿಧಿಯಂತೆ ಅರ್ಹ ಗೋವನ್ನು ಅರ್ಹ ಬ್ರಾಹ್ಮಣನಿಗೆ ದಾನ ಮಾಡಿಸಿ, ಗೋವಿನ ಬಾಲದ ಮೂಲಕ ಸತ್ತವನ ಆತ್ಮವನ್ನು– ವೈಕುಂಠದ ದಾರಿಗೆ ಅಡ್ಡ ಬರುವ ವೈತರಣೀ ನದಿಯನ್ನು ದಾಟಿಸಿ ಅದಕ್ಕೆ ಅದಕ್ಕೆ ಸ್ವರ್ಗಪ್ರಾಪ್ತಿ ಮಾಡಿಸುವುದರಲ್ಲಿ ಇವರಂತೂ ಪರಿಣಿತರಲ್ಲಿ ಪರಿಣಿತರು. ಸತ್ತವರ ಆತ್ಮವನ್ನು ವೈಕುಂಠಕ್ಕೆ ಕಳುಹಿಸುವ ಗೋಧಾನ ವಿಧಿಗೆ, ಸೂಕ್ತ ಗೋವು ದಕ್ಕದಿದ್ದಲ್ಲಿ ಅದನ್ನು ತಕ್ಷಣವೇ ಒದಗಿಸುವ ವ್ಯವಸ್ಥೆ ಇವರ ಅಂಗಳದಲ್ಲಿ ಸದಾ ಲಭ್ಯವಿದೆ. ಈ ಎಲ್ಲ ವ್ಯವಹಾರ ಲೆಕ್ಕಾಚಾರದಿಂದಾಗಿ ಬಲಿಮೆ ಭಟ್ರ ಕೊಟ್ಟಿಗೆಯಲ್ಲಿ ಗೋಸಂಪತ್ತಿಗೆ ಬರವೆಂಬುದೇ ಇಲ್ಲ. 'ಎಲ್ಲಿ ಇಲಿಗಳು ಇರುತ್ವೋ ಅಲ್ಲಿ ಹಾವಿರಬೇಕಲ್ಲವೇ,,,'? ಹಾಗಾಗಿ ದನದ ದಲ್ಲಾಳಿ ಖಾದ್ರಿಬ್ಯಾರಿಗೂ ಬಲಿಮೆ ಭಟ್ರಿಗೂ ಬಿಡಿಸಲಾರದ ನಂಟೊಂದು ಬೆಸೆದುಕೊಂಡಿತ್ತು. ಹಟ್ಟಿಯಲ್ಲಿ ನೂರು ಹಸುಗಳಿದ್ದೂ ಅವುಗಳನ್ನು ಮೇಯಿಸಬಲ್ಲ ಗದ್ದೆ, ಬೈಲಾರೆ ಬೆಟ್ಟುಗದ್ದೆ, ಬೇಣಗಳು ಅಲ್ಲಲ್ಲಿ ಈ ಬಲಿಮೆ ಭಟ್ರಿಗಿವೆ. ಬಲಿಮೆಯ (ನಿಮಿತ್ತ ಹೇಳುವುದು) ಜತೆಗೆ ಊರ ಶ್ಯಾನುಬೋಗಿಕೆ




ಕೆಲಸವೂ ಇವರಿಗೇ ದಕ್ಕಿದ್ದರಿಂದ, ತಮ್ಮ ಭೂಮಿ, ಗದ್ದೆಗಳು ಎಲ್ಲೆಲ್ಲಿವೆ..., ಯಾವ ಸೀಮೆಯಲ್ಲಿವೆ? ಎಂದು ನೆನಪಿಸಿಕೊಳ್ಳಲೂ ಇವರಿಗೆ ಕೆಲವೊಮ್ಮೆ ತಮ್ಮ ಹೆಣ್ಣು ಮಕ್ಕಳ ಸಹಾಯವು ಬೇಕಾಗುವುದಿದೆ.

ತಮ್ಮ ಭೂಮಿಯ 'ಕತೆ'ಯೇ ಹೀಗಿರುವಾಗ, ಭಟ್ರಿಗೆ ತಮ್ಮ ಕೊಟ್ಟಿಗೆಯ ಹಸುಗಳ ಬಗ್ಗೆಯ ತಿಳುವಳಿಕೆಯೂ ಅಷ್ಟಕ್ಕಷ್ಟೆ. ಹಟ್ಟಿಯೊಳಗಿನ ಜೀವಗಳ ವಿಚಾರ ಏನಿದ್ದರೂ... ಅವರ ಮಡದಿ ಜಾನಕಮ್ಮ, ಸೊಸೆ ಸುಶೀಲಮ್ಮನವರ ಸುಪರ್ದಿಗೆ ಸೇರಿದ್ದು. ಮೊನ್ನೆ ಮೊನ್ನೆ ಕೂಳೂರಿನ ಹೆಸರುವಾಸಿ ಅಕ್ಕಸಾಲಿಗ ದೊಡ್ಡಣ್ಣಾಚಾರಿ, ಮೀನಕಳಿಯದ ನಾರ್ಣಭಟ್ರಲ್ಲಿಗೆ ನಿಮಿತ್ತ ಕೇಳಲೆಂದು ಜೋಡೆತ್ತಿನ ಗಾಡಿಯಲ್ಲಿ ಬಂದಿಳಿದ ಹೊತ್ತಲ್ಲಿ... ಭಟ್ರು ತಮ್ಮ ಸ್ಥಿಮಿತ ಕಳೆದುಕೊಳ್ಳುವಷ್ಟು ಸಿಟ್ಟಿಗೆದ್ದಿದ್ದನ್ನು ಕಂಡು, ದೊಡ್ಡಣ್ಣನೇ ಸಮಧಾನಿಸಿ, 'ಏನ್ಕಥೆ, ಏನಾಯ್ತು...?' ಎಂದು ವಿಚಾರಿಸುತ್ತಿದ್ದಾಗ : ಏನ್ ಹೇಳ್ಲೋ ದೊಡ್ಡಪ್ಪ ..., ಎಂದು ನಿಡಿದಾದ ನಿಟ್ಟುಸಿರು ಬಿಡುತ್ತಾ, ಒಂದು ಗಳಿಗೆ ಹಿಂದುಮುಂದೆ ನೋಡಿ... ತನ್ನ ಕೊಟ್ಟಿಗೆಯಲ್ಲಿರುವ ಕೆಲವು ಹಸುಗಳ 'ನಾಯಿ ಬುದ್ಧಿ'ಯನ್ನು ಬಿಚ್ಚಿಟ್ಟಿದ್ದರು – ತುಂಬಾ ವೇದನಾಪೂರ್ಣರಾಗಿ. 'ಅಲ್ವೋ... ದೊಡ್ಡಾಚ್ಚಾರಿ ಈ ನನ್ನ ಜಾನುವಾರುಗಳಿಗೆ ಏನಾಗಿದ್ಯೋ...? ದಿನನಿತ್ಯ ನಾವು ಉಣ್ಣುವ ಮೊದ್ಲೆ... ಇವುಗಳಿಗೆ ತೆಂಗಿನ ಹಿಂಡಿ, ಅನ್ನ, ತೌಡು, ಬೆರೆಸಿದ ಅಕ್ಕಚ್ಚಿಟ್ಟು, ಹಸಿಹುಲ್ಲೋ ಬೈಹುಲ್ಲೋ... ತಿನ್ಸಿ... ನಮ್ಮ ಗದ್ದೆ–ಕಾಡುಗಳಿಗೆ ಮೇಯಕ್ಕಿಂತ ಅಟ್ಟಿದ್ರೆ... ಅವು ಮಾಡುವುದೇನು ಗೊತ್ತಾ? ಯಾರ್‍ಯಾರ್ದೋ ಗದ್ದೆ–ಹಿತ್ಲಿಗೆ ನುಗ್ಗಿ, ಹಸಿಹೇಲು, ಒಣಹೇಲು ಅಂತಾ ವ್ಯತ್ಯಾಸ ನೋಡದೆ ಎಲ್ಲವನ್ನೂ ಮೇದು ಬರುವುದು ಮಾರಾಯ! ಥೂ...ಥೂ...ರಾಮ ರಾಮಾ...ಏನ್ ಹೇಳ್ಲಿ ಮುಂದಕ್ಕೆ ; ಯಾರ್‍ಯಾರ್ದೋ ಶೂದ್ರ ಮಕ್ಕಳ ಅಮೇಧ್ಯ ಮೇದು ಬರುವ... ಇವುಗಳ ಬಾಯಿ ವಾಸನೇಲಿ, ಅವುಗಳ ಹಾಲನ್ನು ಯಾರು ಕರಿಬೇಕು ಹೇಳು? ಆ ಅಮೇಧ್ಯದ ವಾಸನೆ ತುಂಬಿರುವ ಹಾಲು ಯಾರಿಗೆ ಒಪ್ಪೀತು ಹೇಳು...?'

ಭಟ್ಟರ 'ಆಕ್ರಂದನ' ಮುಗಿಲು ಮುಟ್ಟುವ ಮುನ್ನವೇ ದೊಡ್ಡಣ್ಣಾಚಾರಿ ಒಂದು ಸಲಹೆಯನ್ನು ಭಟ್ರ ಮುಂದಿಟ್ಟಿದ್ದ: 'ಅಲ್ಲ ಭಟ್ರೆ...,. – ಇಷ್ಟಕ್ಕೇ ನೀವು ಅಷ್ಟು ಮಂಡೆ ಬಿಸಿ ಮಾಡಿಕೊಳ್ಳುದಾ...? ಹಸು ಮನುಷ್ಯರ ಹೇಸಿಗೆ ತಿನ್ನೋದು ಒಂದು ದೊಡ್ಡ ಸಂಗತಿಯಾ? ಅವಕ್ಕೆ ಇದು ನೈವೇಧ್ಯ... ಅದು ಪಂಚಕಜ್ಜಾಯ... ಇದು ಹೇಸಿಗೆ ಅನ್ನೋದು ಹೇಗೆ ಗೊತ್ತಾಗುತ್ತೆ ಹೇಳಿ? ಅವಕ್ಕೆ ತಿನ್ನಕ್ಕೆ ರುಚಿಯಾದ್ರೆ ಬ್ರಾಹ್ಮಣನ ಹೇಸಿಗೇನೂ ಒಂದೇ...... ಶೂದ್ರನ ಹೇಸಿಗೇನೂ ಒಂದೇ ಮಾರಾಯ್ರೆ;ಕೆಲವಕ್ಕೆ ಹಸೀದು ಇಷ್ಟ, ಇನ್ನೂ ಕೆಲವಕ್ಕೆ ಒಣಗಿದ್ದು ಇಷ್ಟ. ಕೆಲವಕ್ಕೆ ಅವೆರಡೂ ಇಷ್ಟ ಇರದಿರಬಹುದು ...., ಅವಕ್ಕೆ ನಮ್ಮ ವೈರಿಗಳ ಗದ್ದೆ ಹಿತ್ಲಿನ ಪೈರು–ಸೊಪ್ಪು–ತರಕಾರಿಗಳೇ ಇಷ್ಟ ಬಿಡಿ... ಬಿಡಿ..., ಅವುಗಳು ಏನ್ ತಿಂದ್ರೂ ಅವು ಕೊಡುವ ಹಾಲು ಮಾತ್ರ ಅತೀ ಶ್ರೇಷ್ಠದ್ದು, ಅಮೃತ ಸಮಾನದ್ದು, ಹೌದೋ ಅಲ್ವೋ......?'

ಅಕ್ಕಸಾಲಿಗನ ಮಾತು ಬಲಿಮೆಯು ಭಟ್ರಿಗೆ ಇನಿತೂ ಇಷ್ಟವಾಗಲಿಲ್ಲವೇನೋ......! ಅಕ್ಕಸಾಲಿಗನ ಮಾತನ್ನು ಅವರು ಅಲ್ಲಿಗೇ



ಕಡಿದುಬಿಟ್ಟು.... 'ಹೋಗ್ಲಿ ಆ ವಿಷ್ಯನ ಹುಲಿ ಹಿಡೀಲಿ...., ಈಗ ನೀನು ಬಂದ ಕೆಲ್ಸ ನೋಡುವಾ' ಎಂದು ಹೇಳಿದವರೇ, ಮೊನ್ನೆ ಮೊನ್ನೆ ಹುಟ್ಟಿದ ದೊಡ್ಡಣ್ಣನ ಮೊಮ್ಮಗುವಿನ ಜಾತಕವನ್ನು ಓದಿ ಬಿಟ್ಟು ಅದರ ಶುಭಾಶುಭಗಳನ್ನು ಹೇಳಿ 'ಒಮ್ಮೆ ತೊಲಗಲಿ ಇವನ ಮಾರಿ...' ಎಂಬಂತೆ ಆತನನ್ನು ಕಳುಹಿಸಿಕೊಟ್ಟಿದ್ದ.

ಭಟ್ಟರು, ಹಾಗೆ ಕಳುಹಿಸಿಕೊಟ್ಟವರೇ ನೇರ ಅಂಗಳಕ್ಕಿಳಿದು – ಕೆಳ ಅಂಗಳದಲ್ಲಿ ಪೊಲಿ ಬಡಿಯುತ್ತಿದ್ದ ಸಂಜೀವ ಮ್ಯೊಲಿಯನ್ನು ಕರೆದು – 'ನೋಡನಾ ಸಂಜೀವ..... ಒಮ್ಮೆ ಹೋಗಿ ನಮ್ಮ ಆ ದಲ್ಲಾಳಿ ಖಾದ್ರಿಯನ್ನು ಕರೆದು ಬಾ...' ಎಂದು ಸೀದ ಅತನನ್ನು ಪಣಂಬೂರಿಗೆ ಕಳುಹಿಸಿಕೊಟ್ಟ. ತನ್ನ ಹಟ್ಟಿಯ ಹಸುಗಳ ಬಗ್ಗೆ ಮಾವಯ್ಯನಿಗೆ ಏರಿ ಬಂದ ಅ ಪರಿಯ ಸಿಟ್ಟು ಅಸಹನೆಯ ಮಾತುಗಳನ್ನು ಆಗಿನಿಂದ ಕೇಳಿಸಿಕೊಳ್ಳುತ್ತಿದ್ದ ಭಟ್ಟರ ಸೊಸೆ ಸುಶೀಲಮ್ಮ ತಟ್ಟನೆ ಅತ್ತೆಯಲ್ಲಿ – 'ಏನಯೇ ಅತ್ತೇ, ನಮ್ಮ ಹಸುಗಳ ಬಗ್ಗೆ ಮಾವಯ್ಯನದ್ದು ಏನೋ ಒಂದು ಮಸಲತ್ತು ಇದ್ದ ಹಾಗಿದೆ. ಖಾದ್ರಿ ಬ್ಯಾರಿಯನ್ನು ಕರೆತರಲು ಸಂಜೀವನನ್ನು ಕಳಿಸಿದ್ದಾರೆ. ನೀವಾದ್ರೂ ಒಮ್ಮೆ ಅವ್ರಿಗೆ ಹೇಳ್ಬಾರ್ದಾ?'

ಸೊಸೆಯ ಮಾತನ್ನು ಕೇಳಿಸಿಕೊಂಡವರೇ ಜಾನಕಮ್ಮನವರು ಆತಂಕ ಹೊತ್ತು ಅಂಗಳಕ್ಕಿಳಿದವರೇ :– 'ಏನಯೇ ನಿಮ್ಮ ಅವಸ್ಥೆ, ಖಾದ್ರಿ ಸ್ಯಾಬ್ರ ಯಾಕೆ? ಏನವಸರ? ಕೆಂಪಿಯನ್ನು ಕೊಡುದಕ್ಕಾ... ಬೆಳ್ಳಿಯನ್ನ ಕೊಡುದಕ್ಕಾ? ಅಂವಕ್ಕೆ ಏನು ಗೊತ್ತಾಗುತ್ತೆ ಪಾಪ, ಬಾಯಿ ಬರದವು. 'ನಾವು ಕೈಯಲ್ಲಿ ತೋರ್ಸಿದ್ದನ್ನೂ ತಿನ್ತಾವೆ; ಕಾಲಲ್ಲಿ ತೋರ್ಸಿದ್ದನ್ನೂ ಅವು ತಿನ್ತಾವೆ, ಅಂವು ಮನುಷ್ಯರ ಕಸ ತಿನುತ್ತೆವ್ವ ನಿಜ, ಆದ್ರೆ... ಅವು ಬುದ್ಧಿ ಇದ್ದು ತಿನ್ನೋದಾ...? ಇನ್ನು ಮುಂದೆ ಹೇಸಿಗೆ ತಿನ್ನುವವನ್ನೆಲ್ಲ ಕಟ್ಟಿ ಹಾಕಿದ್ರಾಯ್ತು ಬಿಡಿ' ಎಂದು ಗಂಡನಲ್ಲಿ ಹಟ್ಟಿಯ ಹಸುಗಳ ಬಗ್ಗೆ ವಕಾಲತ್ತು ವಹಿಸಿ ಅವರು ವಾದಿಸಿದ್ದರು. ಇತ್ತೀಚೆಗೆ ಜಾನಕಮ್ಮನವರಿಗೂ ನಸುಕು ಹರಿಯಿತೆಂದ್ರೆ ಸಾಕು–ಮನ ತುಂಬ ಬೇಸರಿಕೆ ಆವರಿಸುತ್ತಿದ್ದುದಂತೂ ನಜ. ಅಡುಗೆ ಮನೆಯಲ್ಲಿ ಸೊಸೆಯ ಕೆಲಸಕ್ಕೆ ಸ್ವಲ್ಪ ಕೈಜೋಡಿಸುತ್ತ, ಹಸುಗಳ ಹಾಲುಕರೆವ ಕೆಲಸಕ್ಕೆ, ನಂತರ ಹಟ್ಟಿಗೆ ಎಂದಿನಂತೆ ಹೊಕ್ಕು ಆದರೂ ಉದಯಕಾಲದಲ್ಲೆದ್ದು ಹರಿಸ್ಮರಣೆ ಮಾಡುತ್ತ...

**ಗೋವುಗಳಿರಾ ನಿಮ್ಮ ಪಾದಕ್ಕೆರಗುವೆನು**
**ಎಸೆವ ಕೊಟ್ಟಿಗೆಯಲಿ ಇಂಪಾಗಿರುವಿರಿ**
**ಉದಯದ ಮುಂದೆದ್ದು, ಅಮೃತವನ್ನು ತರುವಿರಿ..**
**ಹರಿಯ ಕೇರಿಗಳ್ಗೆಲ್ಲ ಸಕಲ ತೀರ್ಥಂಗಳು**
**ಗೋಮಯ ಎಂಬುದು ಗೋಮುಖ**
**ಗೋಮುಖ ಎಂಬುದು ಶ್ರೀಗಂಗೆ ಯಥಾಸ್ಥಾನಾತ್**
**ಕೋಡಿನಲ್ಲಿರುವಾತ ಕೌಸ್ತುಭ ಕೇಶವ,**
**ಮೈರೋಮವೆಲ್ಲ ಮೂವತ್ಮೂರು ದೇವಾನುಕೋಟಿ ದೇವತೆಗಳು**
**ನೇತ್ರಂಗಳಿವರು ಸಕಲ ಪಿತೃಗಳೆಂಬರು**
**ನಮಸ್ತೆ ಕರಾವಳಿ ವದನೆ, ನಮಸ್ತೆ ಗಂಗೆ ಮಂಗಳ ಜಾಹ್ನವಿ**
**ನಮಸ್ತೆ ಕಪಿಲಾದೇವಿ**
**ನಮಸ್ತೆ ಪಾತು ಹರೋಹರ...ಗೋವಿಂದಾ....ಗೋವಿಂದಾ..**

**ನಿಮ್ಮಪಾದಗಳಲ್ಲಿ ಜಯಂತರಿದ್ದಾರೆ–ಗಂಧರ್ವರಿದ್ದಾರೆ**
**ಬಾಲದಲ್ಲಿ ಭಾಗೀರಥಿ ಇದ್ದಾಳೆ**
**ಹಿಂಗಾಲಲ್ಲಿ ಶ್ರೀ ಕೃಷ್ಣನಿದ್ದಾನೆ**
**ಮುಂಗಾಲಲ್ಲಿ ಮುಕುಂದನಿದ್ದಾನೆ**
**ಕಂಠದಲ್ಲಿ ಕಪಿಲ ಗಂಧರ್ವರಿದ್ದಾರೆ**
**ಕೆಚ್ಚಲಲ್ಲಿ ಕ್ಷೀರಸಾಗರ ನಾರಾಯಣನಿದ್ದಾನೆ**
**ಕಿವಿಯಲ್ಲಿ ವಾಯುದೇವರಿದ್ದಾರೆ**
**ನಾಲಿಗೆಯಲ್ಲಿ ಸರಸ್ವತಿ ದೇವರಿದ್ದಾರೆ**
**ಹೊಟ್ಟೆಯಲ್ಲಿ ವಿಷ್ಣುಲೋಕವಿದೆ.**
**ಬೆನ್ನಿನಲ್ಲಿ ಬ್ರಹ್ಮದೇವರ ಸಭಾಮಂಟಪವಿದೆ–**
**ಶ್ರೀ ಶ್ರೀ ಶ್ರೀ ಕೃಷ್ಣಾರ್ಪಣಮಸ್ತು**

.....ಎಂದು ಕಪಿಲ ಸ್ತೋತ್ರವನ್ನು ಪಠಿಸುತ್ತಾ (ಕೈಯಲ್ಲಿ ಒಂದಷ್ಟು ಎಳೆಹುಲ್ಲು, ಚೊಂಬು ನೀರು ಸಮೇತ) ಕೈಯಲ್ಲಿದ್ದ ಚೊಂಬನ್ನು ಬೈಪಾಣೆ ಮೇಲಿಟ್ಟರೆ ಸಾಕು –ಈ ಬೆಳ್ಳಿ, ಕೆಂಪಿ, ಕರ್ಪಿ, ಕಬೆತಿ ಹಸುಗಳು ಕೈಯಲ್ಲಿದ್ದ ಹುಲ್ಲಿಗೋ ಅಥವಾ ಒಡತಿ ಮೇಲಿನ ಪ್ರೀತಿಗೋ... ತಮ್ಮ ಕೊರಳೆತ್ತಿ ಒಡತಿಯ ಮುಖಕ್ಕೆ ಮುಖ ತರುವಾಗ... ಜಾನಕಮ್ಮನವರಿಗೆ ಹೊಟ್ಟೆಯಲ್ಲಿದ್ದದ್ದೆಲ್ಲ ಬಾಯಿಗೆ ಬರುವಷ್ಟು ವಾಕರಿಕೆ ; ಅಷ್ಟು ದುರ್ನಾತ. ಅವರ ಹಟ್ಟಿಯಲ್ಲಿದ್ದ ಹಿಂದಿನ ಹಸುಗಳೆಲ್ಲ ಇಷ್ಟೊಂದು ದಾರಿ ತಪ್ಪಿರಲಿಲ್ಲ; ಈ ಹಿಂಡುಗಳ್ಯಾಕೆ ಈ ಪರಿಯಲ್ಲಿ ಬೇಡದ್ದನ್ನೇ ಬಯಸುತ್ತಿವೆ? – ಎಂಬ ಚಿಂತೆಯಲ್ಲಿ ಭಟ್ರ ಹೆಂಡ್ತಿಯೂ ಸದಾ ಬೇಯುವುದಿದೆ.

ಇದೀಗ ... ಜಾನಕಮ್ಮನವರು 'ಇಷ್ಟು ಅವಸರದಲ್ಲಿ ಖಾದ್ರಿ ಬ್ಯಾರಿಯನ್ನು ಅಂಗಳಕ್ಕೆ ಕರೆತರುವ ಅವಶ್ಯ ಏನಿತ್ತ್ವೋ?'ಎಂದು ಭಟ್ಟರಲ್ಲಿ ಕೇಳಿದೊಡನೆ ಅವರು 'ಅಲ್ವೇ ಕೆಂಪಿಯನ್ನು, ಬೆಳ್ಳಿಯನ್ನು ಕೊಡುವುದಕ್ಕೆ ನಂಗೆ ತಲೆಕೆಟ್ಟಿದ್ಯಾ ? ಅಂವು ವೈತರಣಿ ವ್ರತಾಚರಣೆಯಲ್ಲಿ ಶಂಭಟ್ರ ಮನೆ ಮತ್ತು ಕೈನಾಲು ಮನೆಯಿಂದ ದಾನ ಬಂದವು. ಆ ವ್ರತದಲ್ಲೋ ಅಥವ ಅಪರಕರ್ಮದ ವಿಧಿಯಲ್ಲೋ ದಾನ ಪಡೆದ ಗೋವನ್ನು ಇನ್ನೊಬ್ಬನಿಗೆ ಮಾರಿದರೆ, ಅದು ನನ್ನ ಏಳು ಕುಲಗಳನ್ನು ಸುಟ್ಟು ಹಾಕುತ್ತದೆ ಮತ್ತು ಮುಂದೆ ನನ್ನ ಆತ್ಮವೂ ವೈತರಣೀ ನದಿಯಲ್ಲಿ ಬಿದ್ದು ಒದ್ದಾಡುವುದಿಲ್ವೇನೇ? ನಾನು ಈಗ ಬ್ಯಾರಿಗೆ ಕೊಡೋದು ... ಅಂವನ್ನಲ್ಲ, ನಮ್ಮ ಕೊಟ್ಟಿಗೆಯ ಎಲ್ಲ ಹಸುಗಳನ್ನು ದಾರಿ ತಪ್ಪಿಸುವ ಆ ಬಿಳಿನಾಮದ ಕಬೆತಿಯನ್ನು ಮಾತ್ರ. ಅದುಂಟಲ್ಲಾ... ತನ್ನ ಕೊರಳಕಣಿ ಬಿಚ್ಚಿದ ಕೂಡಲೇ ಉಳಿದೆಲ್ಲ ಹಸುಗಳನ್ನು ಬೆನ್ನ ಹಿಂದೆ ಹಾಕಿಕೊಂಡು ಸೀದ ಓಡೋದು ಶೂದ್ರರಿರುವ ಸೊಪ್ಪಿನ ಗುಡ್ಡದ ಕಡೆ; ಮನುಷ್ಯರ ಹೇಸಿಗೆ ತಿನ್ನಕ್ಕೆ ; ಥೂ ಭಾರಿ ದರಿದ್ರದ್ದು ಅದು...' ಅದರ ಹಣೆಬರಹವನ್ನು ಕಟ್ಟಿಹಾಕಿಯೂ ನೋಡಿಯಾಯ್ತು; ಹಗ್ಗ ಬಿಟ್ರೆ... ಮತ್ತೆ ಹೇಲಿನ ಬುಡಕ್ಕೆ ಓಡೋದು...

ಗಂಡನ ಮಾತು ಕೇಳಿ ಜಾನಕಮ್ಮನವರಿಗೆ ಅಕಲು ತಪ್ಪಿದಂತಾಗಿತ್ತು. ಗಂಡನ ಸಿಟ್ಟಿನ ಬಗ್ಗೆ ಗೊತ್ತಿದ್ದವರು ಮತ್ತೆ ಒಂದೂ ಮಾತನ್ನಾಡದೆ ಹನಿಗಣ್ಣಾಗಿ ದೇವರ ಕೋಣೆಗೆ ಹೋದವರೆ, ದೇವರಿಗೊಂದು ತುಪ್ಪದ ದೀಪ ಹಚ್ಚಿ ಬಿಟ್ಟು ಅಲ್ಲೇ ಕೂತುಬಿಟ್ಟಿದ್ದರು.

ಬಲಿಮೆ ಭಟ್ರ ಹಿತ್ತಲಿನಿಂದ ಕರೆ ಬಂದಾಗ, ಬೆಲ್ಲದ ಅಲೆಮನೆಯಲ್ಲಿದ್ದ ಖಾದ್ರಿ ಬ್ಯಾರಿಯವರು ಕಾಲಿನ ಧೂಳು ಮೂಗಿಗೇರುವಷ್ಟು ರಭಸದಿಂದ ಹಿತ್ತಲ ಕಡೆಯಾಗಿಯೇ ಅಂಗಳವೇರಬೇಕೆನ್ನುವಷ್ಟರಲ್ಲಿ ಅವರ ಕಣ್ಣಿಗೆ ಮೊದಲು ಬಿದ್ದವರು ಭಟ್ರ ಹೆಂಡತಿ ಜಾನಕಮ್ಮನವರು. ಖಾದ್ರಿ ಬ್ಯಾರಿಯವರಿಗೆ ಜಾನಕಮ್ಮನವರೆಂದರೆ, ಭಟ್ರಿಗಿಂತ ತುಸು ಜಾಸ್ತಿಯೇ ಗೌರವ. ಇದೀಗ ಜಾನಕಮ್ಮನವರ ಬಾಡಿದ ಮುಖದಲ್ಲಿದ್ದ ಆತಂಕವನ್ನು ಗ್ರಹಿಸಿಕೊಂಡ ಖಾದ್ರಿ ಬ್ಯಾರಿಯವರು ವಿಷಯವೇನೆಂದು ಅಮ್ಮನವರಲ್ಲಿ ಪ್ರಸ್ತಾಪಿಸಿದೊಡನೆ, ಜಾನಕಮ್ಮನವರು ವಿಷಯವನ್ನು ತಲೆಯಿಂದ

ಬಾಲದವರೆಗೆ ವಿವರಿಸಿದವರೆ, ' ನನ್ನ ಕಬೆತಿ ಹಸುವನ್ನು ನಿಂಗೇನಾದ್ರೂ ಮಾರಿದ್ರೆ, ನೀನದನ್ನು ಕಸಾಯಿಖಾನೆಗೆ ಮಾರಕೂಡದು..., ಹಾಗೇನಾದ್ರೂ ನೀನು ಮಾರಿದ್ರೆ ಏಳು ಜನ್ಮದ ಪಾಪ ನನ್ಗೆ ತಟ್ಟುತ್ತೆ; ನನ್ನ ಮದುವೆ ಕಾಲದಲಿ ಅಪ್ಪಯ್ಯ ಅದರ ತಾಯಿಯ ತಾಯಿಯನ್ನು ನನ್ನೊಡ್ತೆ ಕಳುಹಿಸಿಕೊಟ್ಟಿದ್ದು ; ಇದರ ಇಡಿಯ ಸಂತಾನವೇ ಬಂಗಾರದಂತಹ ಬುದ್ಧಿಯವು. ಈಚೀಚೆಗೆಲ್ಲೋ ಇದು ಕೆಟ್ಟದ್ದಕ್ಕೆ ಬಾಯಿ ಹಾಕಿ, ಈ ಅವಸ್ಥೆಗೆ ಬಂದು ನಂತಿದೆ...' ಎಂದು ಕಣ್ಣೀರಿಟ್ಟಿದ್ದರು. ಅಮ್ಮನ ಮಾತಿಗೆ ಏನು ಹೇಳಬೇಕೆಂದು ತೋಚದೆ ಮೌನವಾಗಿ ತಲೆ ತಗ್ಗಿಸಿ ಖಾದ್ರಿ ಬ್ಯಾರಿಯವರು ಅಂಗಳಕ್ಕೆ ಕಾಲಿಟ್ಟಿದ್ದರು.

ಬಲಿಮೆ ಭಟ್ರು ಹಾಗೆಯೇ... ಅವರು ಒಮ್ಮೆ ಹೇಳಿದರೆ ಮುಗಿಯಿತು. ಪೆಟ್ಟೊಂದು ತುಂಡೆರಡು. ಅಂಗಳಕ್ಕೆ ಬಂದ ಖಾದ್ರಿಯನ್ನು ನೋಡಿದೊಡನೆ ಭಟ್ರು – 'ನೋಡನಾ ಖಾದ್ರಿ, ದುಡ್ಡು ನಿಂಗಿಷ್ಟ ಬಂದಷ್ಟು ನಿನ್ ಕೈಲಿ ಆದಾಗ ಕೊಡುವಿಯಂತೆ, ಮೊದಲಿಗಿದನ್ನು ಸಾಗಿಸು..., ಆದ್ರೆ ನೀನೆ ಸಾಕ್ಬೇಕು ನೋಡು...' ಎಂದು ಅಂಗಳದ ಆಳಿನ ಕೈಲಿ ಸೊಪ್ಪಿನ ಗುಡ್ಡದಿಂದ ಅಟ್ಟಿಸಿಕೊಂಡು ಬಂದು ತೆಂಗಿನ ಬುಡಕ್ಕೆ ಬಿಗಿದಿದ್ದ ಕಬೆತಿ ಹಸು ಮತ್ತದರ ಕರುವನ್ನು ತೋರಿಸಿ, ಬ್ಯಾರಿಗೆ ಮಾವ ಹೇಳುತ್ತಿರುವುದನ್ನೆಲ್ಲ ಮನೆಯ ಹಿತ್ಲ ಬಾಗಿಲಲ್ಲಿ ನಿಂತು ಕೇಳಿಸಿಕೊಳ್ಳುತ್ತಿದ್ದ ಸೊಸೆ ಸುಶೀಲಮ್ಮನವರು ತಟ್ಟನೆ ಹನಿಗಣ್ಣಾಗಿದ್ದರು– ಇದು 'ನರಿಯ ಕೈಯಲ್ಲಿ ಕೋಳಿ ಸಾಕಲು ಕೊಟ್ಟ ಹಾಗಾಯ್ತು...' ಎಂದು ಸುಶೀಲಮ್ಮ ಯೋಚಿಸುತ್ತಾ ಮಾವಯ್ಯನಿಗೆ ತಾನೂ ಒಂದು ಮಾತು ಹೇಳೋಣವೆಂದು ಹೆಜ್ಜೆ ಇಟ್ಟವರೂ ಮತ್ತೆ ಮಾವನ ಹಠ ಸ್ವಭಾವ ತಿಳಿದು ಸುಮ್ಮನಾಗಿ ಬಿಟ್ಟು, ಹನಿಗಣ್ಣಾಗಿ ಹಿತ್ತಲ್ಲ ಬಾಗಿಲಲ್ಲೇ ನಿಂತು ಅಂಗಳ ಬಿಟ್ಟು ಹೊರಡುತ್ತಿದ್ದ ಕಬೆತಿ ಹಸು ಮತ್ತವಳ ಕರುವನ್ನು ದಿಟ್ಟಿಸಿದ್ದರು. ಜಾನಕಮ್ಮನಿವರಂತೂ 'ಹರಿ... ಹರಿ' ಎನ್ನುತ್ತಾ ದೇವರ ಕೋಣೆಯ ಪಾಲಾಗಿದ್ದರು.

ಸೂರ್ಯ ನೆತ್ತಿಯಿಂದ ಜಾರಿ ಬಹಳವೇ ಹೊತ್ತಾಗಿತ್ತು. ಭಟ್ರ ಅಣತಿಯಂತೆ, ಹಸುವನ್ನು ಕರೆದೊಯ್ಯಲು ಒಪ್ಪಿದ ಖಾದ್ರಿ ಬ್ಯಾರಿಗಳು ಭಟ್ಟರ ಹಿತ್ಲಿಂದ ನೇರ ಹೊರಟಿದ್ದು ಪಂಜಿಮುಗೆರತ್ತ, ಅಲ್ಲಿರುವ ಅಳಿಯ ಚಾಯಬ್ಬನ ಹಿತ್ತಲಲ್ಲಿ ಈ ಹಸುವನ್ನು ಸ್ವಲ್ಪ ದಿನ ಕಟ್ಟಿ ಬಿಟ್ಟು... ನಂತರ ಮುಂದೆ ನೋಡಿದರಾಯ್ತು ಎಂಬ ತೀರ್ಮಾನಕ್ಕೆ ಬಂದವರೇ ಸ್ಯಾಬರು, ಹಸು–ಕರುವಿನ ಜತೆಗೆ ಹೊರಟೇಬಿಟ್ಟಿದ್ದರು. ಕಬೆತಿ ಹಸುವಿಗೆ ಖಾದ್ರಿ ಬ್ಯಾರಿಯವರೇನು ಹೊಸಬರಲ್ಲರ ಕಾರಣ ದಲ್ಲಾಳಿ ಬ್ಯಾರಿಯ ಹಿಂದೆ 'ಆಟಿ ತಿಂಗಳಲ್ಲಿ ತವರು ಮನೆಗೆ ಹೊರಟ ಹೊಸ ಮದುಮಗಳಂತೆ' ಬಿರ ಬಿರನೆ ಹೆಜ್ಜೆ ಹಾಕುವುದನ್ನು ನೋಡಿಯೇ ಖಾದ್ರಿ ಬ್ಯಾರಿಗೆ ಹಸುವಿನ ಮೇಲೆ ಪ್ರೀತಿ ಉಕ್ಕಿ ಬಿಟ್ಟಿತ್ತು. 'ಅಲ್ಲ ..... ದಲ್ಲಾಳಿಯೊಬ್ಬ ತಾನು ಖರೀದಿ ಮಾಡುವ ಜಾನುವಾರುಗಳನ್ನೆಲ್ಲ ಅಂವ ತನ್ನ ಹಿತ್ತಲಲ್ಲೇ ಕಟ್ಟಿಹಾಕಿ ಸಾಕಿಕೊಂಡ್ರೆ, ಅಂವ ಮತ್ತೆ ಹೊಟ್ಟೆಗೇನು ತಣ್ಣೀರು ಬಟ್ಟೆ ಹಾಕಿಕೊಳ್ಳಬೇಕಾ,,,,? ಎಂದು, ಭಟ್ಟರ 'ನೀನೇ ಸಾಕಿಕೋ......' ಎಂಬ ಮಾತನ್ನು ಖಾದ್ರಿ ಬ್ಯಾರಿಗಳು ನೆನಪಿಸಿಕೊಳ್ಳುತ್ತಾ– ವಿಶ್ಲೇಷಿಸಿಕೊಳ್ಳುತ್ತಾ ಫಲ್ಗುಣಿ ನದಿಯ ಬ್ಯಾರಿ ಕಡಪುವಿನತ್ತ ತಲುಪುವಾಗ ಸೂರ್ಯ ಕಂತಿ ಸುಮಾರು ಹೊತ್ತಾಗಿತ್ತು.

ಇದೀಗ... ಖಾದ್ರಿ ಬ್ಯಾರಿಯವರು ನದಿಯ ಸೆರಗಲ್ಲಿದ್ದವರಿಗೆ ಕಬೆತಿ ಹಸುವಿನ 'ಗೋಳಿನ ಕತೆ' ಹೇಳುತ್ತಿದ್ದಂತೆ, ಕಮಲು ಮರಕಾಲ್ತಿಗೆ ಕಳೆದ ಮಾರ್ನಮಿ ಹಬ್ಬದಂದಿನ ಆ ದಿನವೇ ನೆನಪಿಗೆ ಬಂದುಬಿಟ್ಟಿತು–

ಕಮಲು ಮರಕಾಲ್ತಿ ಆಗೊಮ್ಮೆ ಈಗೊಮ್ಮೆ, ನಿಮಿತ್ತ ಕೇಳುವುದಕ್ಕೋ... ನೂಲು ಮಂತ್ರಿಸಿ ತರುವುದಕ್ಕೋ ... ಭಟ್ರ ಹಿತ್ಲಿಗೆ ಹೋಗಿ ಬರುವುದಿತ್ತು. ಆಕೆಯ ತಾಯಿಕಾಲದಿಂದಲೂ ಬಲಿಮೆಭಟ್ರ ಹಿತ್ಲು ಅಂದ್ರೆ ಆಕೆಗೆ ತುಂಬ ಪ್ರಿಯವಾದುದು. ಜಾನಕಮ್ಮ ಸ್ವಲ್ಪ ಜಾಸ್ತಿಯೇ –ಮಡಿ ಮಡಿ – ಅಂತ ಸಾಯ್ತಾರಾದ್ರೂ, ಮನುಷ್ಯರನ್ನು ಪ್ರೀತಿಸುವುದರಲ್ಲಿ ಅವರು ಜಿಪುಣೆಯಲ್ಲ. ಕಳೆದ ಅಮವಾಸ್ಯೆಗೆ ಮೊಮ್ಮಗನಗೊಂದು ನೂಲು ಮಂತ್ರಿಸಿ ತರೋಣವೆಂದು ಭಟ್ರ ಹಿತ್ತಲಿಗೆ ಹೋದವಳೇ... ಗದ್ದೆ ಹುಣಿಯಲ್ಲಿ ಹೊನ್ನಂಗಣಿ ಸೊಪ್ಪು ಕೀಳುತ್ತಿದ್ದ ಜಾನಕಮ್ಮನನ್ನು ಕಂಡವಳು– ಇನ್ನೇನು ಅಮ್ಮನವರು ಬರುವವರೆಗೂ ಇಲ್ಲಿಯೇ ಕಾಯುವ – ಎಂದು ಅಲ್ಲೇ ಇದ್ದ ಮಣ್ಣಿನದಿಣ್ಣೆ ಮೇಲೆ ಕೂತು ದಿಟ್ಟಿಯನ್ನೆಲ್ಲಾ ಗದ್ದೆಯ ಹುಣಿ ಮೇಲೆಯೇ ನಟ್ಟಿದ್ದಳು. ಇದ್ದಕ್ಕಿದ್ದಂತೆ ಕಮಲುವಿಗೆ ತಲೆಸೂಡಿಯನ್ಯಾರೋ ಅಮುಕಿದಂತಾಯ್ತು..! ತಟ್ಟನೆ ಹಿಂದಿರುಗಿ ನೋಡಿದರೆ ಸೂಡಿಗೇರಿಸಿದ್ದ ದಾಸವಾಳ ಹೂಗಳನ್ನು ಕಿತ್ತು ತಿನ್ನುತ್ತಿದೆ ಬಿಳಿನಾಮದ ಕಬೆತಿ ಹಸು! ಅಷ್ಟಾಗಿದ್ರೆ ಪರವಾಗಿಲ್ವೇನು? ಅತೀ ಕೊಂಡಾಟದಿಂದ ಅದು ಆಕೆಯ ಬಾಯತ್ತ ಮುಖ ತರುವಷ್ಟರಲ್ಲಿ, ಆ ಗಬ್ಬುವಾಸನೆಗೆ ಕಮಲು ಮರಕಾಲ್ತಿ ಭಟ್ರ ಅಂಗಳದತ್ತ ಪರಾರಿಯಾಗಿದ್ದಳು.


ಬಲಿಮೆಯ ನಾರ್ಣಭಟ್ರ ಮನೆಯ ಎಲ್ಲ ಹಸು–ಕರುಗಳಿಗೂ, ತಮ್ಮ ಗದ್ದೆ ಹುಣಿಯ ಮೂಲಕ ನದಿ ಸೆರಗಿಗೆ ಹೋಗಿ ಬರುವ ಬೆಸ್ತರ ಹೆಣ್ಮಕ್ಕಳೆಂದರೆ ಒಂದು ರೀತಿಯ ಸಲುಗೆಯಿದೆ. ಕಮಲು ಮರಕಾಲ್ತಿಯಂತೂ, ಈ ಹಸುಕರುಗಳು ಆಕೆಯ ಎದುರು ಸಿಕ್ಕಾಗಲೆಲ್ಲ ಅವುಗಳ ತಲೆ ಮೈ ನೇವರಿಸುವುದು ಮಾತ್ರವಲ್ಲ, ಮೂಡ್ಲಾಗಿಂದ ಅವುಗಳಿಗೆ ಎಳೆ ಹುಲ್ಲನ್ನು ಕಿತ್ತು ತರುವುದಿತ್ತು. ಅದೇ ಅತಿ ಸಲುಗೆಯಿಂದ ಅದೀಗ ಆಕೆಯ ತಲೆಹೂವಿಗೆ ಬಾಯಿ ಹಾಕಿದ್ದನ್ನು ಮತ್ತು ಅದರ ಬಾಯಿಂದ ಬಂದ 'ದುರ್ಗಂಧ'ದ ಕತೆಯನ್ನು ಗದ್ದೆಯಿಂದ ಹಿಂದಿರುಗಿದ್ದ ಜಾನಕಮ್ಮನವರಿಗೆ – ಕಮಲು ಮರಕಾಲ್ತಿ ವರದಿ ಒಪ್ಪಿಸಿದ್ದಳು. ಏರಿ ಬಂದ ಸಿಟ್ಟಲ್ಲಿ, ಅಮ್ಮನವರು ಹುಣಿಸೆ ಬರಲಿಂದ ಕಬೆತಿ ಹಸುವಿಗೆ ಒಂದಷ್ಟು ಏಟು ಬಿಗಿದವರೇ, ತನ್ನ ಕೊಟ್ಟಿಗೆ ಹಸುಗಳ ಇತ್ತೀಚೆಗಿನ ದುರ್ಬುದ್ಧಿಯನ್ನು ಹೇಳಿಕೊಂಡು ನಿಟ್ಟುಸಿರು ಬಿಟ್ಟಿದ್ದರು.

ಇದೀಗ... ಖಾದ್ರಿಬ್ಯಾರಿಯವರು ನದಿ ಸೆರಗಲ್ಲಿದ್ದ ದೋಣಿ ನಡೆಸುವ ಬ್ಯಾರಿಗಳಿಗೆ ಮತ್ತು ಬೆಸ್ತರ ಹೆಣ್ಣು ಸಂಕುಲಕ್ಕೆ, ಕಬೆತಿ ಹಸುವಿಗೆ ಒದಗಿಬಂದ ದುಃಖದ ಕತೆಯನ್ನು ಹೇಳುತ್ತಿದ್ದಂತೆ ಕಮಲುವಿನ ಗಂಟಲುಬ್ಬಿ ಬಂದು ಕಣ್ಣುಗಳು ಹನಿಗೂಡಿದ್ದವು ಅವರೆಲ್ಲರ ಮಾತು ಹಾಗೂ ಅವರ ಭಾವವೂ ತನಗರ್ಥವಾಗುತ್ತಿದೆ ಎಂಬಂತೆ ಮೌನವಾಗಿ ನಿಂತು ಕಿವಿ ನಿಮಿರಿಸುತ್ತ ಎಲ್ಲವನ್ನು ಕೇಳಿಸಿಕೊಳ್ಳುತ್ತಿದ್ದ ಕಬೆತಿ ಹಸುವನ್ನು ಕಂಡೊಡನೆ ಕಮಲುವಿಗೆ ಮರುಕ ಪ್ರೀತಿ ಉಕ್ಕಿಬಂದಿತ್ತು.

ಆ ಭಾವದಿಂದಲೇ ಆಕೆ 'ಸ್ಯಾಬೆರೆ, ನಿಮ್ಮಲ್ಲಿ ನನ್ನದೊಂದು ಮಾತಿದೆ.., ನೀವು ನನ್ನ ಒಡಹುಟ್ಟಿದ ಅಣ್ಣನಂತೆ, ಇವಳನ್ನು (ಹಸುವನ್ನು) ಇವತ್ತು ಕೂರಿಕಟ್ಟದ ಸೋಜರ ಮನೆಯಲ್ಲಿ ಕಟ್ಟಿ ಬಿಡಿ.., ನಾನು ಹೇಳಿದ್ದೇನಂತೆ ಹೇಳಿ. ನಾಡಿದ್ದು ಮೂಡ್ಲಾಗಿಂದ ನಾನು ಹಿಂದಿರುಗಿ ಬಂದವಳೇ, ನಿಮ್ಗೆ ಅವಳ ಬೆಲೆ ಕೊಟ್ಟ ನಂತರವಷ್ಟೇ... ನೀವವ್ಳನ್ನು ನನ್ನ ಹಿತ್ತಲ್ಲಿಗೆ ತಂದು ಕಟ್ಟುವಿರಂತೆ...' ಎಂದು ಹೇಳಿದೊಡನೆ ಖಾದ್ರಿ ಬ್ಯಾರಿಯವರು,

' ಅಯ್ಯೋ ಕರ್ಮವೇ.. ಹಣಕ್ಕೇನು ಅವಸರ ಕಮಲಕ್ಕ... ನನಗೂ ಈ ಬಾಯಿ ಬಾರದ ತಾಯಿ ಮಗಳಿಗೆ ಒಂದು ನೆಲೆ ತೋರಿಸುವುದೇ ಒಂದು ದೊಡ್ಡ ಮಂಡೆ ಬಿಸಿ ಆಗಿತ್ತು. ನಾನು ಇಂವನ್ನ ಈಗ ಮನೇಲಿ ಕಟ್ಕೊಂಡ್ರೂ...ಭಟ್ರ ಮನೇಲಿ ಹೆಂಗಸ್ರ ಕಣ್ಣೀರ ಹೊಳೆ ತಪ್ಲಿಕ್ಕಿಲ್ಲ. ಎಲ್ಲಿ ಆ ಬ್ಯಾರಿ ಅವುಗಳನ್ನು ಕಸಾಯಿಖಾನೆಗೆ ಮಾರಿ ಬಿಡ್ತಾನೋ... ಎನ್ನುವ ಚಿಂತೆ ಅವರಿಗೆ ತಪ್ಪೀತಾ? ಕಮಲಕ್ಕ... ನೀನು ನಿನ್ಕೈಲಿ ಆದಾಗ ಹಣ ಕೊಡುವೆಯಂತೆ..., ನಾನೀಗಲೇ ನಿನ್ನ ಹಿತ್ಲಿಗಿವಳನ್ನು ಕಟ್ಟಿ... ತಿಮ್ಮಪ್ಪ ಗುರ್ಕಾರಣ್ಣರ ಕೈಲಿ ಒಂದಷ್ಟು ಬೈಸಿಕೊಂಡು ಬರ್ತೀನಿ...' ಎಂದು ಹೇಳಿದವರೆ ಖಾದ್ರಿ ಬ್ಯಾರಿಯವರು ಬಂದ ದಾರಿಯಲ್ಲೇ ಹೊರಟು ಬಿಡುವಷ್ಟರಲ್ಲಿ, ಕೂರಿಕಟ್ಟದ ಬೆಸ್ತರ ಕೇರಿಯ ಹೆಣ್ಮಕ್ಕಳು ಉರಿವ ಪಂಜುಗಳನ್ನು ಹಿಡಿದುಕೊಂಡು ನದಿ ಸೆರಗಿಗೆ ಬಂದಾಗಿತ್ತು. ಖಾದ್ರಿ ಬ್ಯಾರಿಯ ಮತ್ತು ಕಬೆತಿ ಹಸುವಿನ ಬೆನ್ನು ಕಂಡೊಡನೆ ನದಿ ಫಲ್ಗುಣಿಗೆ ಮತ್ತು ಆ ಪಡುವಣದ ಕಡಲಿಗೆ ಏನನಿಸಿತೋ.....ಏನೋ ! ಕಡಲಲ್ಲಿ ಭರತ ಉಕ್ಕಿತ್ತು...! ಆ ಕಡಲ ಉಬ್ಬರಕ್ಕೆ ನದಿಯೂ ಉಬ್ಬಿ ನಕ್ಕಿತ್ತು. ನದಿಯ ಆ ಉಕ್ಕು ಸಂಭ್ರಮಕ್ಕೆ ದೋಣಿಗಳೆಲ್ಲವೂ ನದಿಗಿಳಿದವು.

*



## ಇಂದಿನ ಕಾವ್ಯ

### ಬುರುಗುಡುವ ಮೌನ ಮುಖೇನವೂ



**ಕ**ರಿಯಾಗುತ್ತಿವೆ ಮೋಡ.
ತಣ್ಣಗೆ ವೈಯಾರದ ಗಾಳಿ.
ಜನರಿಲ್ಲದ ರಸ್ತೆ ಭಯದಲಿ ಬಿದ್ದಂತಿದೆ.

ಉದುರುತ್ತಿವೆ ಎಲೆ
ಬೀಳುತ್ತಿವೆ ಹೂವು
ಮುಂದಾಗುವುದ ಬಲ್ಲೆ ಎಂಬಂತೆ
ಗೊತ್ತಿರದ ಹೆಸರಿನ ಹಕ್ಕಿ ಕೂಗುತ್ತಿದೆ..



ಗುಡುಗಬಹುದು ಮುಗಿಲು
ಬಡಿದರೆ ಸಿಡಿಲು !

ಗೊತ್ತು : ಸಾವು ಹೇಗೂ ಬರಬಹುದು ;
ಲಭಿಸದ ಮಾತು ;
ಬುರುಗುಡುವ ಮೌನ ಮುಖೇನವೂ,

ಸಿಡಿಲೇ ಹೊಡೆಯಬೇಕಾದ್ದಿಲ್ಲ.

**–ಕೆ.ಪಿ. ಮೃತ್ಯುಂಜಯ**

### ಕಾವಿಗೆ ಸುಟ್ಟ ನಾಲಿಗೆ



**ಇ**ದೆಂಥಾ ಮರೆವಿನ ಕಾಲ
ತಿಳಿವುಗೇಡಿಯ ಹಾಗೆ
ಮೆಚ್ಚಿನ ಕಲ್ಯಾಣಿರಾಗವನ್ನೆ
ಮರೆತು ಕೂತಿದ್ದೇನೆ

ಮರುಕಳಿಸಿದ ಹಳೆಖಾಯಿಲೆಯಂತೆ
ಹಳೆ ಪಾಪವ ನೆನೆಸಿದಂತೆ
ಮೈಮೇಲೆ ಕೆಂಪು ಗಲ್ಲೆಗಲ್ಲೆಗಳ ಗುಳ್ಳೆ
ಸಿಡುಬು ಸಂಕರದ ಕೀವು ಒಡೆದಂತೆ
ಅಪಾಯ ಸಿಳ್ಳು ಹಾಕಿ ಕರೆದಂತೆ

ಖಿನ್ನವಾದ ಈ ಹಗಲು ರಾತ್ರಿಗಳ
ಬೇಡುವೆ ನಿಸ್ತೇಜಗೊಂಡ ಗಂಟಲಿನಲಿ
ಪಿಳುಕಿಸುವ ಹಳದಿಗಂಗಳಲಿ
ಕೇಳುವೆ ಬೆಳಕ ಗೊತ್ತು ಮಾಡಿಕೊಡಿ ಎಂದು

ತಿನ್ನುವ ಅನ್ನಕ್ಕೆ ಹೇಸುವ
ರೆಪ್ಪೆಗಳು ಬಡಿಯಲಾರದ
ಸಾವಿನಂತಾ ಈ ಜ್ವರ
ದಿನಮಾನಗಳ ಕ್ಷಣಕಾಲಗಳ
ತನ್ನ ಹಂಗಿನಲ್ಲಿ ಮುಳುಗಿಸಿ ಮೀಯಿಸುವ
ದರ್ಪದ ಈ ಜ್ವರ




ನೆನಪುಗಳ ದೊಂಬಿಗೆ
ನಿದ್ದೆ ಹತ್ತುವುದಿಲ್ಲ
ಶಬ್ದಗಳ ಊಳಿಡುತ್ತ
ಬೆಳಗಿಗೆ ಕಾಯಬೇಕು

**–ತಾರಿಣಿ ಶುಭದಾಯಿನಿ**

### ಮಲೆಯೂರ ಸೆಲುವೆ

(ಒಂದು ಸೋಲಿಗ ಭಾಷೆಯ ಪದ್ಯ)



**ಭೋ**ರೆಂಬ : ಸದ್ದ ಮಾಡಿ ಎದ್ದು ಬಿದ್ದು
ಓಡಿದಿವೆ ಬೇಗನೆ ಎಲ್ಲಿಗವ? ಎಲ್ಲೆಲುವೆ ಇದ್ದು
ಹೇಳಿದವರಾರ ಗಂಗೆ? ಓಡಗೆ ನಿಂಗ
ಹೇಳವರೆಸರ ನಿಂತ್ತೊಂದ್ಬೀಸು ಮೆಳ್ಳಗೆ ನಂಗ

ಕವಿದ ಕಾನಿಂದ ಬುಟ್ಟು ಇಳಿಗಣ್ಣ
ಮೆತ್ತಿದೆ: ಓದೋದಿಕ್ಕುವೆ ಹಸುರು ಬಣ್ಣ
ಜ್ಞೀಂವಕ ಜ್ಞೀಂವಾಗಿ ಮಣ್ಣ ಮಡಿಲಿಗ
ಕರುಮ – ಧರುಮ ತೂಕಿ ಹೊತ್ತು ಕಡಲಿಗ

ಧಗೆ, ದಾವ ಆರಿಸಾ.. ಅಮೃತ
ಧರೆಕ ಸ್ಣೇಂವೆ ಏಷೂ ಶಾಶಿತ
ಆರಿಂದ ಏನುವಿಲ್ಲದ ಪತಿ ಉಪಕಾರ ನಿಂಗ
ಇರಲಿ ಮಾಡು ಅದೆ ಮೆಚ್ಚದಕ ಶಿವಲಿಂಗ



ನಿಲಿಸಿದೆ ಮರಕಟನ ಆಟವ
ಕಟ್ಟಿ ಕಣ್ಣಿಗ ಕೊಟ್ಟು ಕಾಟವ
ಮಾಡಿಕಿ ಹಸುರು ತೋಟವ
ಎತ್ತಿಡಿದೆ ಮೇಲೆಕ ನೆಲಸಿರಿ ನೋಟವ

ಮಾಳಾಡಿತು ಸೂಲ್ಗತ್ತಿ
ಸತುವ ಕುಡ್ತು ತಲೆ ಎತ್ತಿ
ಈ ಸೂಲು ನೀ ಕೊಟ್ಟದು ಎಂದು
ಎಂದತು: ಸಾಕ ತಾಯೇ ನೀನೆಂದು

ಪಾಲಿಸದಕ ಪಾಲಕಟ್ಟಿ ಕಡಲ ದೂರಕ
ಸೇರಿದಿವೆ: ಹರಿದು ಹಾವಾಗಿ ದೂರ ತೀರಕ
ಆರಿಸು ಹಾಲ ಕುಡಿತವನಿಗ ಒಂದ್ದಾದಿಯ ಪಾಡ
ಜಲುಮದಲಿ ಧರುಮ ಮಾಡಿ ದಕ್ಕಿಸಲಿ ಜಾಡ

**–ಎಂ. ಜಡೆಯಗೌಡ**

---

**ಪದಗಳ ಅರ್ಥ :** – ನಿಂಗ – ನಿನಗೆ, ನಂಗ – ನನಗೆ, ಮೆಳ್ಳಗೆ – ಮೆಲ್ಲಗೆ, ನಿಧಾನವಾಗಿ, ಧಗೆ – ಸೆಕೆ, ಸ್ಣೇಂವೆ – ಸೇವೆ, ಏಷೂ – ಎಷ್ಟು, ಕುಡ್ತು – ಕುಡಿದು, ಬುಟ್ಟು – ಬಿಟ್ಟು.



## ಲಚ್ಚಿ



ಮಂಜು ಮುಸುಕದ ಸಂಜೆ
ರಾತ್ರಿ, ತನ್ನ ನೀಲಿ ಸೆರಗು ಹೊಚ್ಚುವ
ಮುನ್ನದ ಸಂಜೆ
ಆ ಹಾದಿಯಲ್ಲಿ ನಾನು...

ಕಾಲ್ದಾರಿಗುಂಟ ಸೀಳುದಾರಿ
ಯಾರೂ ಹಾಯದ ಕುರುಚಲು ಗುಡ್ಡ
ಪೂರ್ಣ ಬೆಳದಿಂಗಳು ರಾತ್ರಿ ಲಕಲಕಿಸುವ ಲಚ್ಚಿ
ಅಂಗೈಯಲ್ಲಿ ಟಾರ್ಚು ಹಿಡಿದವಳಂತೆ ನನ್ನ ಮುಂದೆ
ಮುಂದೆ

ಮಾರಾಯನ ಬಂಡೆ, ಗವ್ವೆನ್ನುವ ಗುಹೆ
ಗೋಧಿ ಕಾಳಿನ ಮೈಯ ಜಾಡು ಸಿಗದ ಸೀಗರದ ಕಿರುದಾರಿ
ಜಾಲಿಯನು ತೂರಿ ನಡೆಯುವಾಗ ನೆಟ್ಟ ನೆಗ್ಗಿನ ಮುಳ್ಳು
ಜರತಾರಿ ಬದ್ದುಗೆಗೆ ಅಂಟಿದ ಬಿಳಿಯ ಊಬು

ಒಂದೊಂದೇ ಊಬನು ಆಯ್ದು
ಹೂಗಾಲಿನ ರಗುತವನು ಉಗುಳ ಮುಲಾಮಿನಿಂದ ಸವರಿ
ಕುರುಮಾಳಿ ಮಾಡಿಕೊಂಡು ನಡೆದೆ ನಡೆದೆ
ಇನ್ನೂ ಎತ್ತರದ ಗಿರಿಪರ್ವತದ ತುಟ್ಟಾನು ತುದಿಗೆ

ಜಡೆಯಂತೆ ಇಳಿಬಿದ್ದ ಆಲದ ಮರ
ಅದರಡಿಯಲ್ಲಿ ಲಚ್ಚಿ ಮತ್ತು ನಾನು ಬಹಳ ಹೊತ್ತು
ಕಳ್ಳ ಪೋಲೀಸು ಆಟ ಆಡುತ್ತಿದ್ದಾಗ
ಇನ್ನೇನು ಸಿಕ್ಕು ಬೀಳುವ ಹೊತ್ತಲ್ಲಿ
ಮರದ ಬಳಿ ಅವಳು ಮರದ ಹಾಗೆ ನಿಂತು
ತೋರಿದಳು ಬೇರು ಕಾಂಡ ಚಿಗುರು ಎಲೆಗಳನ್ನು
ಕಾಯಿ ಹಣ್ಣಾಗುವ ಬಗೆಯನ್ನು
ಒಂದೊಂದಾಗಿ ಕೀಳುವಂತೆ ಹೂವಿನ ಪಕಳೆಗಳನ್ನು
ಕಳಚಿ ಎಸೆದಳು ತನ್ನ ಒಳ ಉಡುಪುಗಳನ್ನು
ಬೆರಗುಗಣ್ಣಿನಿಂದ ನೋಡುವ ನನ್ನೆಡೆಗೆ

ನಿರಾಳ ನಗ್ನತೆಯಲ್ಲಿ ನಿಂತೇ ಇದ್ದಳು ಅವಳು
ಬಂದೂಕು ಕಣ್ಣಿಗೆ ಮೈ ಕೊಟ್ಟು
ನಿಂತೇ ಇದ್ದಳವಳು ಶಿಲಾಬಾಲಿಕೆಯಂತೆ
ಮನದ ಹತ್ತಿ ಬಣವೆಗೆ ನೋಟದ ಕಿಡಿ ಎಸೆದು

ಕಣ್ಣು ಕಣ್ಣು ಕೂಡಿಸಲಾಗಲಿಲ್ಲ
ಅವಳು ಅವಳಾಗಿರಲಿಲ್ಲ
ನನ್ನ ದೇಹ ಚೂಪು ಚೂಪಾದ ಕೊಡಲಿಯೇಟಿಗೆ
ಉರುಳಿ ಬಿದ್ದ ಬೊಡ್ಡೆಯಂತೆ
ಲಕ್ವಾ ಹೊಡೆದಂತಿರುವ ಕೈ ಕಾಲುಗಳು
ಸಾಗರ ಬಿದ್ದು ಅಂಬೆಗಾಲಿಡುತ್ತ 'ತಾಯಿ' ಎಂದೆ,
ಮಾಯವಾದಳವಳು
ತಂಗೀ ಎಂದೆ, ಕತ್ತಲಾವರಿಸಿತು
ಮಗಳೇ ಎಂದೆ, ಕೊಕಾಸಿ ನಗುವದು ಕೇಳಿತು
ಮ್... ಮ್... ಮಾ... ಯೆ ಅಂದೆ,
ತುಟಿ ಅದರಿ ಮಾತು ಹೊರಡಲಿಲ್ಲ

ಆಕಾಶದಂಚಿನಲಿ ಚಂದಿರನ ಕಪ್ಪಿಟ್ಟ ಮುಖ
ಮಿಣ ಮಿಣುಕು ಹುಳುಗಳ ಮೆರವಣಿಗೆ
ತೆವಳಿದೆ ಸರಿಸೃಪದ ಹಾಗೆ
ಸಿಕ್ಕ ಸಿಕ್ಕ ಕಡೆಗೆ

ಮರುದಿನದ ಸೂರ್ಯ ಬೆಂಬತ್ತಿ ಬಂದಾಗ
ಕಾಮದ ಕಡಾಯಿಯಂಥ ನೆಲದ ಮೇಲೆ
ಆಕಾಶ ಛತ್ರಿಯ ಕೆಳಗೆ ಮಲಗಿದ್ದಳವಳು
ನೆಲದುದ್ದಕ್ಕೆ ಅಷ್ಟಗಲ

**–ಶಿವರಾಜ ಬೆಟ್ಟದೂರು**

## ಸಿ. ರವೀಂದ್ರನಾಥರ ಕೆಲವು ಹಾಯ್ಕುಗಳು

ಚರ್ ಚರ್ ಚರ್
ಅವಳ ಅಂಗಾಲುಗಳ ಜೊತೆ ಮಾತನಾಡುತ್ತಿವೆ
ತರಗೆಲೆಗಳು

***

ದೀರ್ಘ ಸಮಯದ ಬಳಿಕ
ಮುಖದಲ್ಲಿ ಮುಗುಳು ನಗು
ಬಿದಿರು ಮೆಳೆಯಲ್ಲೀಗ ಹೂ ಬಿಡುವ ಕಾಲ

***

ಅವಳ ಕೈಬೆರಳ ಸ್ಪರ್ಶ ತಿಳಿಸಿತು
ಏನನ್ನೂ ಬಯಸದ ಸ್ಥಿತಿ
ಪ್ರೀತಿ

***



ನನ್ನ ತಪ್ಪುಗಳನ್ನು
ತೇಲಿ ಬಿಡುತ್ತೇನೆ
ಅವಳು ಕ್ಷಮೆಯ ನದಿ

***

ದೀಪದ ಬೆಳಕಲ್ಲಿ
ದೀಪ
ನನ್ನ ಕಂಗಳು

****

ಬಟ್ಟೆಯಂಗಡಿಯಲ್ಲಿ
ಪುಟ್ಟ ಮಗು
ಅವಳು


# ಸಾಂಸ್ಕೃತಿಕ ವೈವಿಧ್ಯತೆ ಮತ್ತು ಅಹಿಂಸೆ

–ಜಿ.ಎಸ್. ಜಯದೇವ



**ಸಂ**ಸ್ಕೃತಿ ನಡೆದು ಬಂದ ದಾರಿ ಮನುಷ್ಯನ ಸಮೂಹ ಮನಸ್ಸು ವಿಕಾಸವಾಗುವ ರೀತಿ ನೀತಿಗಳ ಮೇಲೆ ಬೆಳಕು ಚೆಲ್ಲುತ್ತದೆ. ಗುಹೆಗಳಲ್ಲಿ ವಾಸವಾಗಿದ್ದ ಆದಿಮಾನವ ಈಗ ನಾಗರಿಕನಾಗಿದ್ದಾನೆ, ಸುಸಂಸ್ಕೃತನಾಗಿದ್ದಾನೆ. ನಿರಂತರವಾದ ಸಂಘ ಜೀವನದ ತಿಕ್ಕಾಟಗಳ ನಡುವೆ ಅವನ ಸಮಾಜ ಸುಧಾರಣೆಯಾಗಿದೆ, ಸಂಸ್ಕೃತಿ ನೆಲೆಯೂರಿದೆ. ಎಲ್ಲರಿಗೂ ಬದುಕುವ ಹಕ್ಕನ್ನು ಒದಗಿಸಿಕೊಡುವುದು ಮತ್ತು ಸಮಾನ ಅವಕಾಶಗಳನ್ನು ಕಲ್ಪಿಸುವುದು ಈ ಸಂಸ್ಕೃತಿಯ ಎರಡು ಪ್ರಮುಖ ಬೌದ್ಧಿಕ ಆಶಯಗಳು. ಆಗಿ ಹೋದ ಎಲ್ಲಾ ಕ್ರಾಂತಿಗಳೂ ಈ ಎರಡು ಆಶಯಗಳ ಸುತ್ತಮುತ್ತ ನಡೆದ ಆಂದೋಲನಗಳು. ಸೂಕ್ಷ್ಮವಾಗಿ ಗಮನಿಸಿದರೆ ಆಳವಾಗಿ ಬೇರೂರಿರುವ ಹಿಂಸಾ ಪ್ರವೃತ್ತಿಯಿಂದ ಪಾರಾಗುವ ಮೂಲಕ ನಮ್ಮ ಸಮುದಾಯ ಈ ಎರಡು ಆಶಯಗಳನ್ನು ಸಾಧಿಸಬಹುದು ಎಂದು ನಂಬಿದೆ. ಆದರೆ ಈ ನಂಬಿಕೆಗಳು ಸಮೂಹ ಮನಸ್ಸಿನ ಭಾಗವಾಗಿ ಕ್ರಿಯಾಶೀಲವಾಗುವುದು ಬೌದ್ಧಿಕ ಚಿಂತನೆಯ ಮೂಲಕ ಎಂದು ಅನ್ನಿಸುವುದಿಲ್ಲ. ಬೌದ್ಧಿಕ ಮೂಲದಿಂದ ಜನಿಸಿದ ಯಾವ ಚಿಂತನೆಯೂ ನಮ್ಮ ಸಮೂಹ ಮನಸ್ಸಿನ ನಡವಳಿಕೆಗೆ ಮೂಲ ಆಕರವಾಗಿಲ್ಲ, ಆಗುವುದೂ ಇಲ್ಲ. ಒಂದು ದೊಡ್ಡ ಜನಸಮುದಾಯದ ನಡವಳಿಕೆಯನ್ನು ರೂಪಿಸುವ ಶಕ್ತಿಗಳು ಸಾಮಾನ್ಯವಾಗಿ ಅವನ ಬೌದ್ಧಿಕತೆಯಿಂದಾಚೆಗೆ ಮೆದುಳಿನ ಆಳದಲ್ಲಿ ಎಲ್ಲೋ ಹುದುಗಿದೆ. ಇದು ವಿಕಾಸದ ಹಾದಿಯಲ್ಲಿ ಬಹಳ ಹಿಂದೆಯೇ ರೂಪುಗೊಂಡ ನರಮಂಡಲದ ಒಂದು ವಿನ್ಯಾಸ. ಈ ನರಮಂಡಲ ಪ್ರಚೋದನೆಯಿಂದಾಗಿ ಕ್ರಿಯಾಶೀಲವಾದಾಗ ಏಕರೂಪದ ನಡವಳಿಕೆಗಳು ಹುಟ್ಟುತ್ತವೆ. ಒಂದು ವೇಳೆ ಬೌದ್ಧಿಕ ಅರಿವು ನಡವಳಿಕೆಯಲ್ಲಿ ಮೂಡಿಬಂದಂತೆ ಕಂಡರೂ ಅದು ಆಳದಲ್ಲಿ ಹುದುಗಿರುವ ಈ ನರಮಂಡಲದ ಅಭಿವ್ಯಕ್ತಿಗೆ ಪೂರಕವಾಗಿ ಕೂಡಿಕೊಂಡ ಸಂದರ್ಭದಲ್ಲಿ ಮಾತ್ರ. ಇಂತಹ ಸಂದರ್ಭದಲ್ಲಿ ನಡವಳಿಕೆಯ ಏಕರೂಪತೆಯನ್ನು ಗುರುತಿಸುವುದು ಕಷ್ಟವಲ್ಲ. ಹೀಗೆ ಸಿದ್ಧರೂಪದ ನಡವಳಿಕೆಗಳು ಅಥವಾ Programmed behavior ಸಮೂಹ ಮನಸ್ಸಿನ ಅಭಿವ್ಯಕ್ತಿಗೆ ಕಾರಣವಾಗುತ್ತದೆ. ಇಂತಹ 'ಪ್ಯಾಕೇಜ್ ನಡವಳಿಕೆಗಳು' ಅಥವಾ ನಡವಳಿಕೆಯ ಸಮೀಕರಣಗಳು ಬೌದ್ಧಿಕತೆ ಸಾಧ್ಯವಾಗದ ಪ್ರಾಣಿ ಪ್ರಪಂಚದಲ್ಲಿ ಅನಿವಾರ್ಯ. ಅರಿವು ಸಾಧ್ಯ ಎನಿಸಿದಾಗ Programmed behavior ಅಸಂಬದ್ಧವಾಗಿ ಕಾಣಲಾರಂಭಿಸುತ್ತದೆ.

ಹಿಂಸೆ ಇಂತಹ ಒಂದು ಅಸಂಬದ್ಧ ನಡವಳಿಕೆ. ಒಬ್ಬ ತರುಣ ತನ್ನ ಗರ್ಲ್‌ಫ್ರೆಂಡ್ ಜೊತೆಗೆ ಹೊರಟಾಗ ಎದುರಾಗಬಹುದಾದ, ಪ್ರತಿಸ್ಪರ್ಧಿಗಳಂತೆ ಕಾಣುವ ಗಂಡುಗಳ ಕಡೆ ಘರಂ ಆಗಿ ನೋಡುವುದನ್ನು ನಾವು ಹೇಗೆ ಅರ್ಥ ಮಾಡಿಕೊಳ್ಳಬಹುದು? ಪ್ರತಿಸ್ಪರ್ಧಿಗಳೇ ಅಲ್ಲದ ಅನೇಕರ ಕಡೆ ಈ ಯುವಕ ಘರಂ ಆಗಿರುತ್ತಾನೆ. ಪ್ರಪಂಚದಲ್ಲಿ ಎಲ್ಲ ಗಂಡಸರೂ ತಮ್ಮ ಹೆಂಡತಿಯರ ಸಂಬಂಧವಾಗಿ ಅನುಭವಿಸುವ ಕಸಿವಿಸಿ ಇದು. ಹುಟ್ಟರಿವಿನ ಪ್ರಚೋದನೆಯಿಂದ ಅಗತ್ಯಕ್ಕಿಂತ ಹೆಚ್ಚು ರಕ್ಷಣೆಯ



ಧೋರಣೆಯನ್ನು ಮನುಷ್ಯ ತಳೆಯುತ್ತಾನೆ. ಒಟ್ಟಿನಲ್ಲಿ ತನ್ನ ಲೈಂಗಿಕ ಸಾಧ್ಯತೆಗೆ ಸವಾಲಾಗಿ ಎದುರಾಗುವ ಎಲ್ಲಾ ಪ್ರಚೋದನೆಗಳಿಗೂ ಪ್ರತಿಸ್ಪಂದಿಸುವ ಪರಿಹಾರೋಪಾಯ ಹಿಂಸೆ. ಇಲ್ಲಿ ವಾಸ್ತವ–ಅವಾಸ್ತವದ ವಿಚಾರ ಬೌದ್ಧಿಕ ಸ್ತರಕ್ಕೆ ಸೇರಿದ್ದಾಗಿದೆ. ಆದರೆ ಸವಾಲಿಗೆ ಪ್ರತಿಕ್ರಿಯೆ ಹುಟ್ಟರಿವಿಗೆ ಸಂಬಂಧಿಸಿದ್ದಾಗಿದೆ. ಮಿಲಿಯಂತರ ವರ್ಷಗಳ ವಿಕಾಸದ ಹಾದಿಯಲ್ಲಿ ಲೈಂಗಿಕತೆಗೆ ಸಂಬಂಧಪಟ್ಟ ನಮ್ಮ ನರಮಂಡಲ ಕಂಡುಕೊಂಡ ಪರಿಹಾರ ಹಿಂಸೆ. ಹಾಗಾಗಿ ನಮ್ಮ ಮೆದುಳಿಗೆ ಮಿಲಿಯಂತರ ವರ್ಷಗಳ ಹಿಂಸೆಯ ಇತಿಹಾಸವಿದೆ. ಹಿಂಸೆ ಎನ್ನುವುದು ಒಂದು ಗುರಿಸಾಧನೆಯಲ್ಲಿ ಅಡ್ಡ ಬರುವ ತೊಡಕುಗಳನ್ನು ಪರಿಹರಿಸುವ ಕ್ರಮ. ಇದು ಎಲ್ಲಾ ಜೀವಿಗಳಿಗೂ ಚಿರಪರಿಚಿತವಿರುವ ಕಾರ್ಯಶೈಲಿ. 'ಸೆಕ್ಸ್ ಅಂಡ್ ವೈಲೆನ್ಸ್' ಇಲ್ಲದೇ ಇರುವ ಮನೋರಂಜನೆಯನ್ನು ನಾವು ಊಹಿಸುವುದಕ್ಕೆ ಸಾಧ್ಯವಿಲ್ಲ; ಹೀಗೇಕೆ? ನಾವು ಆನಂದ (Pleasure) ಪಡುವ ಎಲ್ಲಾ ಸಂದರ್ಭದಲ್ಲೂ 'ಸೆಕ್ಸ್ ಅಂಡ್ ವೈಲೆನ್ಸ್' ಸಂಬಂಧದ ನರಮಂಡಲದ ಜೊತೆ ಸಂಪರ್ಕ ಏರ್ಪಡುತ್ತದೆ. Pleasure center ಅನ್ನು ಸಂಪರ್ಕಿಸಬೇಕಾದರೆ ನರಪ್ರಚೋದನೆಗಳು 'ಸೆಕ್ಸ್ ಅಂಡ್ ವೈಲೆನ್ಸ್' ಮಾರ್ಗವಾಗಿಯೇ ಹೋಗಬೇಕೋ ಏನೋ? ಒಟ್ಟಿನಲ್ಲಿ ನಮ್ಮ ಇಡೀ ಮನೋರಂಜನೆಯ ಉದ್ಯಮ 'ಸೆಕ್ಸ್ ಅಂಡ್ ವೈಲೆನ್ಸ್' ಅನ್ನೇ ಬಂಡವಾಳ ಮಾಡಿಕೊಂಡು ಅತ್ಯಂತ ಯಶಸ್ವಿಯಾಗಿಯೂ, ಲಾಭದಾಯಕವಾಗಿಯೂ ಮುನ್ನಡೆಯುತ್ತಿದೆ. ಹಾಗೆಯೇ 'ಸೆಕ್ಸ್ ಅಂಡ್ ವೈಲೆನ್ಸ್' ಗೆ ಸಂಬಂಧಪಟ್ಟ ನಮ್ಮ ನರಮಂಡಲದ ಭಾಗ ಮನುಷ್ಯನ ಬಹುಮುಖೀ ವ್ಯಕ್ತಿತ್ವಗಳಿಗೂ ಆಧಾರವಾಗಿದೆ. ಬೌದ್ಧಿಕತೆಯ ಜೊತೆ ಬೆರೆತು ಇದು ಕಲೆಯಾಗಿ ಸೌಂದರ್ಯವಾಗಿ ವ್ಯಕ್ತವಾಗುತ್ತದೆ.

ಹಿಂಸೆ ಸೌಂದರ್ಯ ರೂಪಗಳನ್ನು ತಳೆಯುವುದು ಅಪರೂಪ. ಹಿಂಸೆ ವಿಧ್ವಂಸಕಕಾರಿ ರೂಪ ತಳೆಯುವುದೇ ಹೆಚ್ಚು. ಅಗತ್ಯವೇ ಇಲ್ಲದೆ ಘರಂ ಆಗುವ ಗಂಡಿನ ನಡವಳಿಕೆಯನ್ನು ಗಮನಿಸಿದಾಗ ಕಾರಣವೇ ಇಲ್ಲದೆ ವಿಧ್ವಂಸಕಕಾರಿ ಕ್ರಿಯೆಗೆ ಇಳಿಸುವ ಮಾನಸಿಕ ಶಕ್ತಿಗಳ ಕುರಿತು ಆತಂಕ ಹುಟ್ಟುತ್ತದೆ. ಈ ಮಾನಸಿಕ ಶಕ್ತಿಗಳು ಬೌದ್ಧಿಕ ಚಿಂತನೆಯ ಮೂಲಕ ನಾವು ಕಡೆದು ತೆಗೆಯುವ ವಾಸ್ತವದ ಅರಿವನ್ನು ಪಕ್ಕಕ್ಕೆ ಸರಿಸಿ ತನ್ನ ನಡವಳಿಕೆಯ ಸಿದ್ಧರೂಪವನ್ನು (Programmed behavior) ಹೊರಹಾಕುತ್ತದೆ. ಈ ಬಗೆಯ ನಡವಳಿಕೆ ಅಸಂಬದ್ಧ ಎಂದು ವೈಚಾರಿಕವಾಗಿ ಪರಿಗಣಿಸುವುದು ಅನಿವಾರ್ಯವಾದಾಗ ಇವನ್ನು ಒಳಗೇ ತಳ್ಳಿಬಿಡುತ್ತೇವೆ; ಇವು ಒಳಗೇ ಸಂಗ್ರಹವಾಗುತ್ತಾ ಹೋಗುತ್ತವೆ. ಒತ್ತಡ ಮಿತಿಮೀರಿದಾಗ ಸ್ಫೋಟಗೊಂಡು ಕಾರಣವೇ ಇಲ್ಲದೆ ಕಣಕ್ಕೆ ಇಳಿಸುತ್ತವೆ.

ಲೈಂಗಿಕತೆಯ ಹಾಗೆಯೇ ಭದ್ರತೆಗೆ (Self preservation, security) ಸಂಬಂಧಪಟ್ಟ ಮಾನಸಿಕ ಸನ್ನದ್ಧತೆಗಳು ಹಿಂಸೆಯ ಮೂಲದಿಂದಲೇ ಹುಟ್ಟುತ್ತವೆ. ವ್ಯಕ್ತಿ ಅಥವಾ ಸಮುದಾಯ ತನ್ನನ್ನು

(೫೪ನೇ ಪುಟಕ್ಕೆ

# ನಾ ಕಂಡ ಲೋಹಿಯಾ

**ಮೂಲ ಹಿಂದಿ: ಧರ್ಮವೀರ ಭಾರತಿ**
**(ಕನ್ನಡಕ್ಕೆ: ಮುರುಳೀಧರ ಕುಲಕರ್ಣಿ)**

**ಡಾ. ರಾಮ ಮನೋಹರ ಲೋಹಿಯಾ ಮೂರನೇ ಜಗತ್ತಿನ ದೇಶಗಳನ್ನು ಗಮನದಲ್ಲಿಟ್ಟುಕೊಂಡು ಇಪ್ಪತ್ತನೇ ಶತಮಾನದ ಜಗತ್ತಿಗಾಗಿ ಕಟ್ಟಿಕೊಟ್ಟ ಹೊಸ ಸಮಾಜವಾದ ಈ ಇಪ್ಪತ್ತೊಂದನೇ ಶತಮಾನದಲ್ಲೂ ತನ್ನ ವಿವಿಧ ರೂಪಗಳಲ್ಲಿ ನವನವೋನ್ಮೇಷನಶಾಲಿಯಾಗಿ–ಅದು ವಾಸ್ತವಿಕ ರಾಜಕಾರಣವಿರಬಹುದು, ರಾಜಕೀಯ ತಾತ್ವಿಕ ರಾಜಕಾರಣವಿರಬಹುದು ಅಥವಾ ಸಾಂಸ್ಕೃತಿಕ ರಾಜಕಾರಣವಿರಬಹುದು–ಚರ್ಚೆಗೆ, ಅನ್ವೇಷಣೆಗೆ ಒದಗಿಬರುತ್ತಿದ್ದರೆ, ಅದಕ್ಕೆ ಬಹು ಮುಖ್ಯ ಕಾರಣ ಅದರಲ್ಲಿ ಅಂತರ್ಗತವಾಗಿರುವ ಬದುಕಿನ ಸೂಕ್ಷ್ಮ ಮತ್ತು ಬಹುಮುಖ ಗ್ರಹಿಕೆ. ಇದು ಕವಿ–ಕಲಾವಿದರ ಗ್ರಹಿಕೆಗೆ, ಸಂವೇದನೆಗೆ, ಅನ್ವೇಷಣೆಗೆ ಮತ್ತು ನಿರ್ಮಾಣ ಶಕ್ತಿಗೆ ಹತ್ತಿರವಾದದ್ದು. ಹಾಗಾಗಿಯೇ ಅಂದೂ. ಇಂದೂ ಲೇಖಕ–ಕಲಾವಿದರು ಲೋಹಿಯಾಗೆ, ಅವರ ಚಿಂತನೆಗೆ ಬಹು ಆಪ್ತರು. ಅವರ ಜೀವಿತ ಕಾಲದಲ್ಲಿ, ರಾಷ್ಟ್ರದ ಬಹುಪಾಲು ಲೇಖಕ–ಕಲಾವಿದರು ಅವರ ಆಪ್ತ ಬಳಗಕ್ಕೆ ಸೇರಿದವರಾಗಿದ್ದರು. ಅಂತಹ ಬಳಗದಲ್ಲಿದ್ದ, ಹಿಂದಿಯ ಖ್ಯಾತ ಹಾಗೂ ಜ್ಞಾನಪೀಠ ಪುರಸ್ಕೃತ ಲೇಖಕ ದಿ. ಧರ್ಮವೀರ ಭಾರತಿ ಅವರು ತಾವು ಕಂಡ ಲೋಹಿಯಾರ ಒಂದು ಆಪ್ತ ವ್ಯಕ್ತಿ ಚಿತ್ರವನ್ನು ಇಲ್ಲಿ ಕಡೆದುಕೊಟ್ಟಿದ್ದಾರೆ.–ಸಂ**



**ಲೋ**ಹಿಯಾರೊಂದಿಗೆ ನನ್ನ ಮೊದಲ ಭೇಟಿ ತುಂಬ ರೋಮಾಂಚನಕಾರಿಯಾಗಿತ್ತು. ನಾವು ಅವರನ್ನು ಭೇಟಿ ಮಾಡುವ ಸಮಯ ಹಾಗೂ ದಿನಾಂಕವನ್ನು ಜಿತೇಂದ್ರಸಿಂಹರು ಮೊದಲೇ ಗೊತ್ತುಪಡಿಸಿದ್ದರು. ನಮ್ಮ ಊರಿನಿಂದ ಅವರಿರುವ ಸ್ಥಳ ಸುಮಾರು ೧೮–೧೯ ಕಿಲೋಮೀಟರ್ ದೂರದಲ್ಲಿತ್ತು. ಸೈಕಲ್ ಅಥವಾ ಕುದುರೆ ಗಾಡಿಯಿಂದ ಹೋದರೆ ಸುಮಾರು ಒಂದು ಗಂಟೆಯ ದಾರಿ. ಶನಿವಾರ ಬೆಳಗ್ಗೆ ೮ ಗಂಟೆಗೆ ಅವರನ್ನು ಭೇಟಿಯಾಗುವುದೆಂದು ನಿಗದಿಪಡಿಸಲಾಗಿತ್ತು. ನಾವು ನಾಲ್ಕೈದು ಜನ ಸಾಹಿತಿ ಮಿತ್ರರು ಮುಂಜಾನೆ ಬೇಗನೆ ಎದ್ದು ಅವರ ಭೇಟಿಗೆ ಹೊರಟೆವು.

ಆಗ ಲೋಹಿಯಾರವರು ಇದ್ದ ಸ್ಥಳವೂ ವಿಲಕ್ಷಣವಾಗಿತ್ತು. ಅವರು ನೆಹರೂ ಸರ್ಕಾರದ ಅತಿಥಿಯಾಗಿ ನೈನಿ ಜೈಲಿನಲ್ಲಿದ್ದರು. ಅವರು ಮಾಡಿದ ಕೆಲವು ಭಾಷಣಗಳು ಆಕ್ಷೇಪಾರ್ಹವೆಂದು ಘೋಷಿಸಿ ಅವರ ಮೇಲೆ ಮೊಕದ್ದಮೆ ಹೂಡಲಾಗಿತ್ತು. ಅದು ಸ್ವತಂತ್ರ ಭಾರತದ ಒಂದು ವಿಲಕ್ಷಣ ಘಟನೆಯಾಗಿತ್ತು. ಗಾಂಧೀಜಿಯ ಅಹಿಂಸಾ ಮಂತ್ರವನ್ನು ಪಠಿಸುವ ನೆಹರೂ ಸರ್ಕಾರ ಒಬ್ಬ ದೇಶಭಕ್ತ ಸ್ವಾತಂತ್ರ್ಯದ ಸೇನಾನಿಯನ್ನು ಕ್ಷುಲ್ಲಕ ಕಾರಣಕ್ಕಾಗಿ ಜೈಲಿನಲ್ಲಿ ಕೂಡಿಹಾಕಿತ್ತು.



ಯಮುನಾ ನದಿಯ ಕೆಂಬಣ್ಣದ ಉಕ್ಕಿನ ಸೇತುವೆಯ ಮೇಲಿನಿಂದ ನಮ್ಮ ಕುದುರೆ ಗಾಡಿ ಸಾಗುತ್ತಿದ್ದಾಗ ನಾನು, "ಹೇಗಿದ್ದಿರಬಹುದು ಲೋಹಿಯಾರನ್ನು ಬಂಧಿಸಿಟ್ಟ ಜೈಲಿನ ಆ ಕೋಣೆ? ಹೇಗೆ ಕಳೆಯುತ್ತಿರಬಹುದು ಲೋಹಿಯಾರವರು ಜೈಲಿನ ಆ ಕೋಣೆಯಲ್ಲಿ? ಒಂದು ಕಾಲಕ್ಕೆ ನೆಹರೂ, ಮೌಲಾನಾ ಅಬ್ದುಲ್ ಕಲಮ್ ಆಜಾದ್ ಮುಂತಾದವರು ಬಂಧಿತರಾಗಿದ್ದುದು ಅದೇ ನೈನಿ ಸೆರೆಮನೆಯಲ್ಲಿ. ಯಾವ ಸೆರೆಮನೆಯಿಂದ ನೆಹರೂ ತಮ್ಮ ಮಗಳಿಗೆ ನೂರಾರು ಪತ್ರಗಳನ್ನು ಬರೆದಿದ್ದರೋ ಅದೇ ನೈನಿ ಸೆರೆಮನೆಯಲ್ಲಿ ತಮ್ಮ ಮಿತ್ರನೊಬ್ಬನನ್ನು ಬಂಧಿಸಿಟ್ಟಿದ್ದಾರೆ. ಕಾರಣ ತಮ್ಮ ಸರ್ಕಾರದ ವಿರುದ್ಧವಾಗಿರುವ ಕೆಲವು ಹೇಳಿಕೆಗಳು. ಇದು ನಮಗೆ ದೊರೆತ ಸ್ವಾತಂತ್ರ್ಯದ ಕುರುಹೆ?" ಎಂದು ಯೋಚಿಸುತ್ತಿದ್ದೆ.

ಹೀಗೆ ಯೋಚಿಸುತ್ತಿರುವಾಗಲೇ ಕಬ್ಬಿಣದ ದೈತ್ಯಾಕಾರದ ಗೇಟನ್ನು ದಾಟಿ ನಮ್ಮ ಕುದುರೆ ಗಾಡಿ ಜೈಲಿನ ಆವರಣವನ್ನು ಪ್ರವೇಶಿಸಿತ್ತು. ನಾವು ಕೈದಿಗಳ ವಾರ್ಡುಗಳನ್ನು ದಾಟಿ ಹೋಗುತ್ತಿದ್ದಾಗ ಅವರು ತಾವು ಮಾಡುತ್ತಿದ್ದ ಕೆಲಸವನ್ನು ನಿಲ್ಲಿಸಿ ಕುತೂಹಲದಿಂದ ನಮ್ಮತ್ತಲೇ ನೋಡುತ್ತಿದ್ದರು. ನಮ್ಮ ಜೊತೆಯಲ್ಲಿದ್ದ ವಾರ್ಡನ್, ಇವರೆಲ್ಲ ಡಾಕ್ಟರ್ ಸಾಹೇಬರನ್ನು ಕಾಣಲು ಬಂದಿದ್ದಾರೆ ಎಂದು ಹೇಳಿದಾಗ ಅವರು ತುಂಬ ಗೌರವದಿಂದ ನಮಗೆ ನಮಸ್ಕರಿಸಿ ಪುನಃ ತಮ್ಮ ಕೆಲಸದಲ್ಲಿ ತೊಡಗಿದರು. ಡಾಕ್ಟರ್ ಸಾಹೇಬರೊಂದಿಗೆ ಅವರ ಗೆಳೆತನ ಈಗಾಗಲೇ ಏರ್ಪಟ್ಟಂತಿತ್ತು.

ತೆರೆದಿರುವ ಪೋರ್ಟಿಕೋದಲ್ಲಿ ವಿಶಾಲವಾದ ಕಿಟಕಿಗಳಿರುವ ಒಂದು ಕೋಣೆ. ಒಳಗೊಂದು ಮರದ ಹಲಗೆ. ಅದರ ಮೇಲೊಂದು ಕಂಬಳಿ ಮತ್ತು ಒಂದು ಶುಭ್ರವಾದ ಬೆಡ್ ಶೀಟ್. ಮೇಲೊಂದು ತಲೆದಿಂಬು. ಆ ಹಾಸಿಗೆಯ ಮೇಲೆ ಕುಳಿತಿದ್ದರು ಲೋಹಿಯಾ. ಖಾದಿ ಪಂಚೆ, ಖಾದಿ ಶರ್ಟು, ಗೌರವರ್ಣ, ಚಿಕ್ಕದಾಗಿದ್ದರೂ ಹೊಳಪುಳ್ಳ ಕಣ್ಣುಗಳು, ದಪ್ಪವಾದ ತುಟಿಗಳಲ್ಲಿ ತೆಳುವಾದ ಮಂದಹಾಸ. ಪರಸ್ಪರರ ಪರಿಚಯವಾಯಿತು. ನಮ್ಮೊಂದಿಗೆ ನಡೆಸಿದ ಸಂಭಾಷಣೆಯಲ್ಲಿ ದೇಶಕ್ಕೆ ನಮ್ಮಂತಹ ತರುಣ ಬರಹಗಾರರ ಅವಶ್ಯಕತೆ ತುಂಬ ಇದೆ ಎಂಬ ಭಾವವನ್ನು ಅವರು ನಮ್ಮಲ್ಲಿ ಮೂಡಿಸಿದರು. ಇನ್ನಾವುದೇ



**ಗೋವಾ ಹೋರಾಟದ ಸಂದರ್ಭದಲ್ಲಿ ಲೋಹಿಯಾ**

ಸಂದರ್ಭವಾಗಿದ್ದರೆ ಅವರ ಪ್ರಶಂಸಾತ್ಮಕವಾದ ಮಾತಿನಿಂದ ನಾವು ಉಬ್ಬಿ ಹೋಗುತ್ತಿದ್ದೆವೇನೋ; ಆದರೆ ಈ ಯಕ್ಷಿಣಿಗಾರ ನಮ್ಮ ಮೇಲೆ ಅದೇನು ಮೋಡಿ ಮಾಡಿದ್ದನೋ ನಮ್ಮ ಮೇಲೆ ನಿಜವಾಗಿಯೂ ಒಂದು ಹೊಣೆಗಾರಿಕೆ ಇದೆ ಎಂಬುದನ್ನು ಅಂದು ನಾವು ಮನಗಂಡಿದ್ದೆವು. ಪ್ರಸ್ತುತ ವ್ಯವಸ್ಥೆಯನ್ನು ಬದಲಿಸಲು ನಾವು ಏನ್ನಾದರೂ ಮಾಡಲೇಬೇಕು ಎಂದು ನಮಗೆ ಅನಿಸಿತು. ಬಿಳಿ ಕಾಲರಿನ ನಮ್ಮ ವ್ಯಕ್ತಿತ್ವ ಹಾಗೂ ತುಳಿಯಲ್ಪಟ್ಟ ಭಾರತೀಯ ಜನಮಾನಸದ ನಡುವೆ ಇದ್ದ ಮುಚ್ಚಿದ ಕದವನ್ನು ತೆರೆದಿದ್ದರು.

ಆ ದಿನ ನಮ್ಮೊಡನೆ ಅವರು ರಾಜನೀತಿಯನ್ನು ಕುರಿತು ಮಾತನಾಡಲಿಲ್ಲ. ನೆಹರೂ ಅವರನ್ನು ಕುರಿತು ಮಾತನಾಡಲಿಲ್ಲ. ತಮ್ಮ ಪಕ್ಷದ ಬಗೆಗೂ ಮಾತನಾಡಲಿಲ್ಲ. ಅಂದು ಅವರು ಮಾತನಾಡಿದ್ದು ಸಾಹಿತ್ಯದ ಬಗ್ಗೆ, ಕವಿತೆಯ ಬಗ್ಗೆ, ನಮ್ಮ ಕುಟುಂಬಗಳ ಯೋಗಕ್ಷೇಮದ ಬಗ್ಗೆ. ಸಾಹಿತ್ಯ, ಭಾಷೆ, ಮಾನವನ ಯಾತನೆಗಳ ಬಗ್ಗೆ ಅವರಿಗೆ ತಮ್ಮದೇ ಆದ ದೃಷ್ಟಿಕೋನವಿತ್ತು. ಲೋಹಿಯಾರವರು ಒಂದು ವೇಳೆ ವಿಮರ್ಶಕರಾಗಿದ್ದರೆ ಉಚ್ಚಕೋಟಿಯ ಸಾಹಿತ್ಯದ ವಿಮರ್ಶಕರು ಕೂಡ ಗಂಟುಮೂಟೆ ಕಟ್ಟಬೇಕಾಗುತ್ತಿತ್ತು ಎಂದು ನನಗನಿಸಿತು. ಯಾವ ದಿನಬಳಕೆಯ ಪದಗಳನ್ನು ಸಾಹಿತ್ಯದಲ್ಲಿ ನಿರುಪಯುಕ್ತ ಎಂದು ಭಾವಿಸಿ ನಾವು ಬಿಟ್ಟುಬಿಡುತ್ತೇವೆಯೋ ಅವೇ ಪದಗಳನ್ನು ಬಳಸಿ ಅವರು ಸಾಹಿತ್ಯದ ಕ್ಲಿಷ್ಟ ವಿಷಯಗಳನ್ನು ಓತಪ್ರೋತವಾಗಿ ಚರ್ಚಿಸುತ್ತಿದ್ದರು.


ನಮ್ಮ ಮಾತುಕತೆಗಳು ನಡೆಯುತ್ತಿದ್ದಾಗಲೇ ಒಬ್ಬ ವ್ಯಕ್ತಿ ನಾಟಕೀಯವಾಗಿ ಲೋಹಿಯಾರವರ ಕೋಣೆಯನ್ನು ಪ್ರವೇಶಿಸಿದ. ಕಪ್ಪು ಬಣ್ಣ, ಧಡೂತಿ ಶರೀರ, ದಪ್ಪ ಮೀಸೆ, ಭಯ ಹುಟ್ಟಿಸುವಂತಹ ಗಂಭೀರ ಮುಖಭಾವ, ಕೈಯಲ್ಲಿ ಮಿರಿಮಿರಿ ಮಿಂಚುತ್ತಿದ್ದ ಹಿಡಿಕೆಯುಳ್ಳ ಕಪ್ಪು ಬೆತ್ತ. ಆತನನ್ನು ಕಂಡು ಸಹಜವಾಗಿಯೆ ನಾವೆಲ್ಲ ಹೆದರಿದೆವು. ಆದರೆ ಲೋಹಿಯಾರವರು ಆ ವ್ಯಕ್ತಿಯನ್ನು ಪರಿಚಯಿಸುತ್ತ, "ಹೆದರಬೇಕಾದ ಕಾರಣವಿಲ್ಲ. ಇವರು ನಮ್ಮ ಅಸಿಸ್ಟೆಂಟ್ ಜೈಲರ್ ಸಾಹೇಬರು. ತುಂಬ ಒಳ್ಳೆಯವರು. ಇವರೂ ನಿಮ್ಮಂತೆ ಒಬ್ಬ ಲೇಖಕರು. ಒಳ್ಳೆಯ ಕತೆಗಾರರು. 'ಪರವಾನಾ' ಎಂಬ ಕಾವ್ಯನಾಮದಿಂದ ಬರೆಯುತ್ತಾರೆ" ಎಂದು ಹೇಳಿದರು.

ಲೋಹಿಯಾರವರ ಬಾಯಿಯಿಂದ ತಮ್ಮ ಪ್ರಶಂಸೆಯನ್ನು ಕೇಳಿ ಜೈಲರ್ ಸಾಹೇಬರು ಉಬ್ಬಿಹೋದರು. ಬೆತ್ತವನ್ನು ಕೈಯಲ್ಲಿ ಹಿಡಿದೇ ನಮಗೆಲ್ಲ ನಮಸ್ಕರಿಸಿದರು. "ಇವರ ಕತೆಗಳು ನಿಮ್ಮ ಜನಪ್ರಿಯ ಪತ್ರಿಕೆಗಳಲ್ಲಿ ಪ್ರಕಟವಾಗುವುದಿಲ್ಲ. ಆದರೆ ಅವರಿಗೆ ತಮ್ಮದೇ ಆದ ಓದುಗರಿದ್ದಾರೆ" ಎಂದು ಹೇಳುತ್ತ ಲೋಹಿಯಾರವರು ಯಾವ ಆತ್ಮೀಯತೆಯಿಂದ ಸಾಹಿತ್ಯದ ಬಗ್ಗೆ ನಮ್ಮೊಂದಿಗೆ ಮಾತನಾಡುತ್ತಿದ್ದರೋ ಅದೇ ಆತ್ಮೀಯತೆಯಿಂದ ಒಬ್ಬ ಕೈದಿ ಹಾಗೂ ಜೈಲರನ ಸಂಬಂಧವೇನು? ಎನ್ನುವ ಬಗೆಗೂ ಮಾತನಾಡತೊಡಗಿದರು. ಆಗ ಜೈಲರ್ ಸಾಹೇಬರು ಡಾಕ್ಟರ್ ಸಾಹೇಬರ ಬಗ್ಗೆ ತಮಗಿರುವ ಶ್ರದ್ಧೆಯನ್ನು ಸೂಚಿಸಲು ಕೃತಜ್ಞತಾಭಾವದಿಂದ ನತಮಸ್ತಕರಾಗಿ ಕುಳಿತುಬಿಟ್ಟರು. ಕೈದಿ ಗುರುವಾಗಿ ಮಾರ್ಗದರ್ಶನ ಮಾಡುತ್ತಿದ್ದರೆ ಜೈಲರ್ ಶಿಷ್ಯನಾಗಿ ಅವರ ಚರಣಗಳ ಅಡಿಯಲ್ಲಿ ಕುಳಿತಿದ್ದ. ಇಂತಹ ಅಪರೂಪದ ದೃಶ್ಯ ಯಾವ ಜೈಲಿನಲ್ಲಿ ತಾನೇ ನೋಡಲು ದೊರಕೀತು?

### ಸಮತೆ

ಜವಾಹರಲಾಲ ನೆಹರೂ, ರಾಜಾಜಿ, ಇಂಡೋನೇಶಿಯದ ರಾಷ್ಟ್ರಪತಿಗಳಾಗಿದ್ದ ಸುಕರ್ಣೋ, ಶೇಖ್ ಮುಜಿಬುರ್ ರಹಮಾನ್ ಹೀಗೆ ನಾನು ಅನೇಕ ರಾಜನೀತಿಜ್ಞರನ್ನು ಭೇಟಿ ಮಾಡಿದ್ದೇನೆ. ಅವರಿಂದ ಪ್ರಭಾವಿತನೂ ಆಗಿದ್ದೇನೆ. ಆದರೆ ಡಾ. ಲೋಹಿಯಾರವರು ನನ್ನ ಮೇಲೆ ಬೀರಿದಷ್ಟು ಪ್ರಭಾವವನ್ನು ಇನ್ನಾರೂ ಬೀರಲಿಲ್ಲ. ಅವರ ಮೊದಲ ಭೇಟಿಯ ನಂತರ ನನಗೆ *ಬಾಣಭಟ್ಟನ ಆತ್ಮಕಥೆ* ಎಂಬ ಗ್ರಂಥದಲ್ಲಿ ಓದಿದ ಈ ಮಾತು ನೆನಪಾಯಿತು, 'ಯಾರಿಗೂ ಹೆದರಬೇಡ. ಶಾಸ್ತ್ರಗಳಿಗೂ ಕೂಡ, ಗುರುವಿಗೂ ಕೂಡ'. ಇಂತಹ ಒಂದು ನಿರ್ಭೀತಿಯನ್ನು ಅವರು ನನ್ನಲ್ಲಿ ಹುಟ್ಟಿಸಿದ್ದರು. ಅವರ ಸಾಹಿತ್ಯವನ್ನು ಓದುತ್ತಾ ಹೋದಂತೆ, ಅವರನ್ನು ಪುನಃ ಪುನಃ ಭೇಟಿಯಾಗುತ್ತ ಸಾಗಿದಂತೆ ನನ್ನಲ್ಲಿ ಈ ನಿರ್ಭೀತಿಯೂ ಹೆಚ್ಚುತ್ತಾ ಹೋಯಿತು.

ಆದರೆ ಈ ನಿರ್ಭೀತಿ ಉಚ್ಛೃಂಖಲ ಉದ್ದಂಡತೆಯಾಗಿ ಮಾರ್ಪಾಡದಂತೆ ಅವರ ವಿಚಾರಧಾರೆ ಕಡಿವಾಣವನ್ನು ಹಾಕಿತ್ತು. ಅವರು ಹೇಳುತ್ತಿದ್ದರು, "ಯಾರನ್ನು ನೀವು ತೀರ ಕ್ಷುಲ್ಲಕ ಅಥವಾ ನಿರುಪಯುಕ್ತ ಎಂದು ಭಾವಿಸುತ್ತೀರೋ ಅವನಿಗೂ ತನ್ನದೇ ಆದ ಒಂದು ಅಸ್ತಿತ್ವವಿದೆ. ಅವನ ಜೀವಿತಕ್ಕೂ ಒಂದು ಉದ್ದೇಶವಿದೆ ಎಂಬುದನ್ನು ಮರೆಯಬೇಡಿ. ಕೇವಲ ಸಂಪತ್ತಿನ ಸಮಾನ ಹಂಚಿಕೆಯಿಂದ ಸಮಾಜದಲ್ಲಿ ಸಮಾನತೆ ಉಂಟಾಗಲಾರದು. ಶಾಸನಗಳಿಂದಲೂ ಸಮಾನತೆಯನ್ನು ತರಲಾಗದು. ಅದಕ್ಕಾಗಿ ಜನರ ಹೃದಯಗಳ ಪರಿವರ್ತನೆಯಾಗಬೇಕು. ಒಂದು ರಾಜಕೀಯ ಪಕ್ಷವನ್ನು ಕ್ರಾಂತಿಕಾರಿಯನ್ನಾಗಿ ಮಾಡುತ್ತೇವೆ ಎಂದು ಹೊರಡುವುದಕ್ಕೆ ಮುಂಚೆ ನಮ್ಮ ಚಾರಿತ್ರ್ಯವನ್ನು ಕ್ರಾಂತಿಕಾರಿಯನ್ನಾಗಿ ಮಾಡಿಕೊಳ್ಳಬೇಕು. ಕ್ರಾಂತಿಯೆಂಬುದು ಒಳಗಿನಿಂದ ಹೊರಗೆ ಗತಿಶೀಲವಾಗುವಂತೆ, ಹೊರಗಿನಿಂದ ಒಳಗೂ ಗತಿಶೀಲವಾಗಬೇಕು. ಆಗ ಮಾತ್ರ ಮಾನವನ ಯಾತನೆಯನ್ನು ತಿಳಿಯಬಹುದು". ಇದು ಸಮಾನತೆಯ ಬಗ್ಗೆ ಲೋಹಿಯಾರವರ ವಿಚಾರಧಾರೆಯಾಗಿತ್ತು. ಆದ್ದರಿಂದಲೇ ಲೋಹಿಯಾರವರು ನೆಹರೂ ಅವರಿಗಿಂತಲೂ ಗಾಂಧೀಜಿಗೆ ತುಂಬ ಹತ್ತಿರವಾಗಿದ್ದರು. ಗಾಂಧೀಜಿಗೆ ತುಂಬ ಪ್ರಿಯವಾಗಿದ್ದ 'ವೈಷ್ಣವ ಜನ ತೋ ತೇನೆ ಕಹಿಯೇ ಜೋ ಪೀಡ ಪರಾಯಿ ಜಾಣೇರೇ' ಎಂಬ ಮಾತು ಲೋಹಿಯಾರವರಿಗೆ ಬಹು ಆಪ್ಯಾಯಮಾನವಾಗಿತ್ತು. ನೆಹರೂ



**ಗಾಂಧೀಜಿಗೆ ಸಹಾಯಕರಾಗಿ ಲೋಹಿಯಾ**



**ಜೆಪಿ, ನರೇಂದ್ರದೇವ, ಡಾ. ಸಂಪೂರ್ಣಾನಂದ ಮೊದಲಾದ ಸಮಾಜವಾದಿಗಳೊಂದಿಗೆ ಲೋಹಿಯಾ, ಐವ್ವತ್ತರ ದಶಕದಲ್ಲಿ**

ಕೇವಲ ಭಾರತ ದರ್ಶನ ಮಾಡಿದರೆ ಲೋಹಿಯಾ ಭಾರತದೊಂದಿಗೆ ಏಕಾಕಾರವಾಗಿದ್ದರು.

## ಸ್ವಾತಂತ್ರ್ಯ

ಲೋಹಿಯಾರವರ ದೃಷ್ಟಿಯಲ್ಲಿ ಕೇವಲ ರಾಜಕೀಯ ಸ್ವಾತಂತ್ರ್ಯವಷ್ಟೇ ನಿಜವಾದ ಸ್ವಾತಂತ್ರ್ಯವಾಗಿರಲಿಲ್ಲ. ಮಾನವೀಯತೆಯನ್ನು ಕುಂಠಿತಗೊಳಿಸುವ ಎಲ್ಲ ಬಗೆಯ ಗುಲಾಮಗಿರಿಯಿಂದ ಮುಕ್ತವಾಗುವುದೇ ನಿಜವಾದ ಸ್ವಾತಂತ್ರ್ಯವೆಂದು ಅವರು ನಂಬಿದ್ದರು.

ಈ ಶತಮಾನದ ಐದನೆಯ ದಶಕದ ವರ್ಷಗಳು ಭಾರತದ ಇತಿಹಾಸದಲ್ಲಿ ತುಂಬ ಮಹತ್ವಪೂರ್ಣವಾಗಿದ್ದವು. ಆಗತಾನೇ ದೊರೆತ ಸ್ವಾತಂತ್ರ್ಯದ ಹುರುಪು ಜನರಲ್ಲಿತ್ತು. ಅಲಹಾಬಾದ್ ಪ್ರಗತಿಶೀಲ ಹಿಂದಿ ಸಾಹಿತ್ಯದ ಕೇಂದ್ರವಾಗಿತ್ತು. ಆಗ ನಾನು ಅಲಹಾಬಾದಿನಲ್ಲೇ ಇದ್ದೆ. ಅಲ್ಲಿ ಪ್ರಗತಿಶೀಲ ಲೇಖಕರ ಸಂಘ ಎಂಬುದೊಂದು ಇತ್ತು. 'ಪರಿಮಳ' ಎಂಬ ಮತ್ತೊಂದು ಸಾಹಿತ್ಯ ಸಂಘವಿತ್ತು. ಈ ಎರಡೂ ಸಂಘಗಳ ಮೇಲೆ ಲೋಹಿಯಾರವರ ಗಾಢವಾದ ಪ್ರಭಾವವಿತ್ತು. ಈ ಎರಡೂ ಸಂಘಗಳಿಗೆ ಲೋಹಿಯಾ ಸ್ವತಃ ಎಂದೂ ಬರುತ್ತಿರಲಿಲ್ಲ. ಆದರೆ ಇಲ್ಲೇನು ನಡೆಯುತ್ತಿದೆ, ನಾವೇನು ಬರೆಯುತ್ತಿದ್ದೇವೆ ಎಂಬುದೆಲ್ಲ ಅವರಿಗೆ ಗೊತ್ತಿರುತ್ತಿತ್ತು. ಆದರೆ ಯಾರಿಗೂ ಸಲಹೆಯನ್ನು ಕೊಡುವ ತಪ್ಪನ್ನು ಅವರು ಮಾಡುತ್ತಿರಲಿಲ್ಲ. ತಾನು ಗುರುವೆಂಬ ಭಾವ ಅವರಲ್ಲಿ ಇರಲೇ ಇಲ್ಲ. ಆದರೆ ಲೇಖಕ ಶಿಷ್ಯರ ಒಂದು ದೊಡ್ಡ ಪೀಳಿಗೆಯನ್ನೇ ಅವರು ಸೃಷ್ಟಿಸಿದ್ದರು. ಈ ಪೀಳಿಗೆ ತನಗೆ ಸರಿಕಂಡ ವಿಚಾರಧಾರೆಯನ್ನು ವ್ಯಕ್ತಪಡಿಸುವಲ್ಲಿ ಸ್ವತಂತ್ರವಾಗಿತ್ತು. ಅವರು ನಮಗೆ ಮಾರ್ಗದರ್ಶಕರಾಗಿರಲಿಲ್ಲ. ಬದಲಾಗಿ ನಮಗೆ ಸರಿಕಂಡ ಮಾರ್ಗವನ್ನು ನಾವೇ ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಅವರು ನಮಗೆ ನೀಡಿದ್ದರು. ಆದ್ದರಿಂದಲೇ ನಮ್ಮ ಪೀಳಿಗೆಯ ಲೇಖಕ ಬಳಗ ಇನ್ನಾರದೋ ವಿಚಾರಧಾರೆಯಿಂದ ಪ್ರಭಾವಿತಗೊಳ್ಳದೆ, ಇನ್ನಾರೋ ಹಾಕಿದ ಕಾಲುದಾರಿಯಲ್ಲಿ ನಡೆಯದೆ ತನ್ನ ವಿವೇಕದಿಂದ ತನ್ನ ದಾರಿಯನ್ನು ತಾನೇ ಕಂಡುಕೊಳ್ಳುವಲ್ಲಿ ಸಮರ್ಥವಾಗಿತ್ತು.

ನಾನು ಅಲಹಾಬಾದನ್ನು ತೊರೆದು ಮುಂಬೈಗೆ ಬಂದ ಮೇಲೆ ಲೋಹಿಯಾರ ಭೇಟಿ ಮುಂಬೈನಲ್ಲಿ ಆಗತೊಡಗಿತು. ಒಂದು ಸಲ ಅವರು ಮುಂಬೈಗೆ ಬಂದಾಗ ನನ್ನ ಬಗ್ಗೆ ತುಂಬ ಚಿಂತಿತರಾಗಿದ್ದಂತೆ ಕಂಡಿತು. ಏಕೆಂದರೆ ಆಗ ನನ್ನ ಮೊದಲನೆಯ ವೈವಾಹಿಕ ಸಂಬಂಧ ಮುರಿದುಹೋಗಿತ್ತು. ನಾನು ಆರಂಭಿಸಬೇಕೆಂದಿದ್ದ ಹೊಸ ಬಗೆಯ ಜೀವನ ಅಲಹಾಬಾದಿನ ನನ್ನ ಅನೇಕ ಸಾಹಿತ್ಯ ಮಿತ್ರರಿಗೆ ಸರಿಯೆನಿಸಿರಲಿಲ್ಲ. ನಾನು 'ಧರ್ಮಯುಗ' ಪತ್ರಿಕೆಯ ಸಂಪಾದಕತ್ವವನ್ನು ವಹಿಸಿಕೊಂಡ ಬಗ್ಗೆಯೂ ಟೀಕೆ ಟಿಪ್ಪಣಿಗಳು ಸಾಗಿದ್ದವು. ಕೌಟುಂಬಿಕ ಜೀವನದಿಂದ ಮುಕ್ತರಾಗಿದ್ದು ಸದಾ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ತಮ್ಮ ತಲೆಯಲ್ಲಿ ತುಂಬಿಕೊಂಡಿದ್ದ ಅವರು ನನ್ನ ವೈಯಕ್ತಿಕ ಜೀವನದಂತಹ ಚಿಕ್ಕ ವಿಷಯದಲ್ಲೂ ಅಷ್ಟು ಮುತುವರ್ಜಿ ವಹಿಸಿದ್ದನ್ನು ಕಂಡು ನನಗೆ ತುಂಬ ಆಶ್ಚರ್ಯವಾಯಿತು. ಕೌಟುಂಬಿಕ ಜೀವನದಲ್ಲಿ ತುಂಬ ನಿರಾಸೆಗೊಂಡಿದ್ದ ನನ್ನಲ್ಲಿ ಹೊಸ ಆಸೆಯನ್ನು ಮೂಡಿಸುವ ಕಾರ್ಯವನ್ನು ಅವರು ಕೈಗೊಂಡರು.

ದೆಹಲಿ, ಹೈದರಾಬಾದ್ ಮತ್ತು ಲಖನೌ ಇವು ಅವರ ಕಾರ್ಯಕ್ಷೇತ್ರಗಳಾಗಿದ್ದರೆ, ಮುಂಬೈ ಅವರ ಕಾರ್ಯಕ್ಷೇತ್ರದೊಂದಿಗೆ ವಿಶ್ರಾಂತಿಧಾಮವೂ ಆಗಿತ್ತು. ಮುಂಬೈಯಲ್ಲಿ ಜಾರ್ಜ್ ಫರ್ನಾಂಡಿಸ್, ಮೃಣಾಲ ಗೋರೆ, ದಿನಕರ ಸಾಕ್ರಿಕರ್, ಇಂದುಮತಿ ಕೇಳ್ಕರ್ ಇವರ ಮಧ್ಯೆ ಇದ್ದಾಗ ತಮ್ಮೆಲ್ಲ ದುಗುಡವನ್ನು ಅವರು ಮರೆಯುತ್ತಿದ್ದರು. ಮುಂಬೈ ಲೋಹಿಯಾ ಅವರಿಗೆ ತುಂಬ ಪ್ರಿಯವಾಗಿತ್ತು. ರಾಜಕೀಯ ಕಪಟ ವಂಚನೆಗಳಿಲ್ಲದ, ಮುಕ್ತ ಮನಸ್ಸಿನ, ಸದಾ ಕೆಲಸದಲ್ಲಿ ತೊಡಗಿರುವ ಮುಂಬೈಯ ಜನ ಅವರಿಗೆ ತುಂಬ ಪ್ರಿಯರಾಗಿದ್ದರು. ಮುಂಬೈಯ ಕಡಲತೀರದ ಸೂರ್ಯಾಸ್ತವನ್ನು ನೋಡುವುದೆಂದರೆ ಲೋಹಿಯಾರಿಗೆ ಬಲು ಹಿಗ್ಗು. ಚರ್ಚ್‌ಗೇಟ್ ಬಳಿಯ 'ಬಾಂಬೆಲಿ' ಅವರ ಮೆಚ್ಚಿನ ಸ್ಥಳವಾಗಿತ್ತು. ಒಂದು ದಿನ ಅವರ ಕಛೇರಿಯಿಂದ ಫೋನ್ ಬಂತು. ಸರಿಯಾದ ಸಮಯಕ್ಕೆ ಬಾಂಬೆಲಿ ತಲುಪಿದೆ. ಅಂದು ಶ್ರೀಮತಿ ಕೇಳ್ಕರರೊಂದಿಗೆ ನನ್ನ ಪರಿಚಯವಾಯಿತು. ಒಂದು ರಾಜ್ಯದಲ್ಲಿ ಅವರ ಸೋಷಲಿಸ್ಟ್ ಪಕ್ಷ ಅಧಿಕಾರವನ್ನು ವಹಿಸಿಕೊಂಡಿತ್ತು. ಅದಕ್ಕಾಗಿ ನಾನು ಅವರನ್ನು ಅಭಿನಂದಿಸತೊಡಗಿದಾಗ ಸ್ವಲ್ಪ ಸಿಟ್ಟಿಗೆದ್ದು ಹೇಳಿದರು, "ಅಷ್ಟೇಕೆ ಅವಸರ? ಸ್ವಲ್ಪ ದಿನ ಕಾದು ನೋಡೋಣ, ಆ ಮೇಲೆ ಅಭಿನಂದಿಸುವಿರಂತೆ. ಈಗ ಕೇವಲ ಕಾಂಗ್ರೆಸ್ಸಿನೊಡನೆ ಹೋರಾಡುತ್ತಿದ್ದೇನೆ. ಇನ್ನು ಮುಂದೆ ಕಾಂಗ್ರೆಸ್ಸಿನೊಂದಿಗೆ ಮಾತ್ರವಲ್ಲ, ಈಗ ಅಧಿಕಾರಾರೂಢವಾಗಿರುವ ನನ್ನ ಪಕ್ಷದ ಘಟಕದೊಂದಿಗೂ ಹೋರಾಡಬೇಕಾದೀತೇನೋ! "

ತಮ್ಮ ಪಕ್ಷ ಅಧಿಕಾರದಲ್ಲಿ ಬಂದುದಕ್ಕೆ ಪ್ರಸನ್ನಚಿತ್ತರಾಗುವುದಕ್ಕೆ ಬದಲಾಗಿ ಅವರು ಅಂದು ತುಂಬ ಉದಾಸೀನರಾಗಿದ್ದರು. ಅಧಿಕಾರದ ಗದ್ದುಗೆಯನ್ನೇರಿದ ಬಳಿಕ ಪಕ್ಷದ ಮೌಲ್ಯಗಳು ಉಳಿಯಬಲ್ಲವೆ? ಎಂಬ ಚಿಂತೆ ಬಹುಶಃ ಅವರನ್ನು ಕಾಡುತ್ತಿದ್ದಿರಬೇಕು. ಸೋಲು ಎಂದೂ ಅವರನ್ನು ಅಧೀರಗೊಳಿಸಲಿಲ್ಲ. ಗೆಲುವು ಎಂದೂ ಅವರಲ್ಲಿ ಅಹಂಭಾವವನ್ನುಂಟುಮಾಡಲಿಲ್ಲ. ತಾವೇ ಕಟ್ಟಿದ ಮನೆಯ ಗೋಡೆಯಲ್ಲಿ ಎಲ್ಲೇ ಬಿರುಕು ಕಾಣಿಸಿದರೂ ಇಡೀ ಗೋಡೆಯನ್ನೇ ಉರುಳಿಸಬಲ್ಲ ವ್ಯಕ್ತಿತ್ವ ಅವರದಾಗಿತ್ತು. ಅವರ ವ್ಯಕ್ತಿತ್ವದ ಆಳವಾದ ಜ್ಞಾನವಿಲ್ಲದವರಿಗೆ ಅವರ ವ್ಯಕ್ತಿತ್ವದ ತುಂಬ ವಿರೋಧಾಭಾಸ ಕಂಡುಬರುತ್ತಿತ್ತು. ಅವರ ಹೇಳಿಕೆ ಹಾಗೂ ತೀವರ್ಾನಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದವರಿಗೆ ಅವರ ವರ್ತನೆ ನಕಾರಾತ್ಮಕವಾಗಿ ಗೋಚರಿಸುತ್ತಿತ್ತು. ವಿಶೇಷವಾಗಿ ಇಂಗ್ಲಿಷ್ ಭಾಷೆ ಮತ್ತು ಇಂಗ್ಲಿಷ್ ಮಾನಸಿಕತೆಯನ್ನು ತಮ್ಮ ಬಂಡವಾಳವನ್ನಾಗಿ ಮಾಡಿಕೊಂಡ ಬುದ್ಧಿಜೀವಿಗಳಿಗೆ ಅವರು ಯಾವಾಗಲೂ ಒಂದು ಒಗಟಾಗಿಯೇ ಉಳಿದರು. ಇಂಗ್ಲಿಷ್ ಪತ್ರಿಕೆಗಳಂತೂ ಅವರಿಗೆ ತುಂಬ ಅನ್ಯಾಯವನ್ನೇ ಮಾಡಿದವು. ಭಾರತದ ಸುಶಿಕ್ಷಿತ ಜನವರ್ಗದ ಮನಸ್ಸಿನಲ್ಲಿ ಅವರ ವ್ಯಕ್ತಿತ್ವದ ತಪ್ಪು ಚಿತ್ರಣ ಮೂಡುವಂತೆ ಮಾಡಿದವು. ದೇಶದಲ್ಲಿ ನಮ್ಮ ಪರಿಸ್ಥಿತಿ ಹೇಗೇ ಇರಲಿ, ಪಶ್ಚಿಮದಲ್ಲಿ ಮಾತ್ರ ನಮ್ಮ ಘನತೆಗೆ ಕುಂದುಬರಬಾರದು, ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ ಬೇಕು ಎಂಬ ನೆಹರೂ ಯುಗದ ಮಾನಸಿಕತೆ ಲೋಹಿಯಾಯವರಿಗೆ ಹಿಡಿಸುತ್ತಿರಲಿಲ್ಲ. ಅವರು ಮೌಲಿಕ ಪರಿವರ್ತನೆಯನ್ನು ಇಷ್ಟಪಡುತ್ತಿದ್ದರೆ ವಿನಾ ಕೇವಲ ಬಾಹ್ಯ ಥಳುಕುಬಳುಕನ್ನಲ್ಲ. ಮುಖವಾಡವನ್ನು ಧರಿಸಿ ಕುರೂಪವನ್ನು ಮುಚ್ಚಿಕೊಳ್ಳುವುದು ಅವರಿಗೆ ಇಷ್ಟವಿರಲಿಲ್ಲ. ಅಂತೆಯೇ ಎರವಲು ವಿಚಾರಧಾರೆಯ ಢೋಂಗಿ ಬುದ್ಧಿಜೀವಿಗಳನ್ನು ಕಂಡರೆ ಲೋಹಿಯಾರಿಗೆ ಆಗುತ್ತಿರಲಿಲ್ಲ.

ಅವರು ಪಾರ್ಲಿಮೆಂಟನ್ನು ಪ್ರವೇಶಿಸಿದ ಮೇಲೆ ಈ ಢೋಂಗಿ ಬುದ್ಧಿಜೀವಿಗಳ ಮುಖವಾಡವನ್ನು ಕಳಚಿ ಎಸೆಯತೊಡಗಿದರು. ಇಂಗ್ಲಿಷ್ ಮಾನಸಿಕತೆಯ ವಿರೋಧಿಯಾಗಿದ್ದಂತೆ ಅವರು ಹಿಂದಿ ಮಾನಸಿಕತೆಯ ವಿರೋಧಿಯೂ ಆಗಿದ್ದರು. ಹಿಂದಿಯು ಪ್ರಾದೇಶಿಕ ಭಾಷೆಗಳ ಮೇಲೆ ಸವಾರಿ ಮಾಡುವುದನ್ನು ಕೂಡ ಅವರು ಸಹಿಸುತ್ತಿರಲಿಲ್ಲ. ಹಿಂದಿಯ ಹೆಸರಿನಲ್ಲಿ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವ ರಾಜಕಾರಣಿಗಳು, ಸಾಹಿತಿಗಳು ಹಾಗೂ ಪತ್ರಕರ್ತರನ್ನು ಕಂಡರೆ ಅವರಿಗೆ ಆಗುತ್ತಿರಲಿಲ್ಲ. ಒಮ್ಮೆ ಹಿಂದಿಯನ್ನು ಕುರಿತು ಅವರ ಹಾಗೂ ಸೇಠ್ ಗೋವಿಂದದಾಸರ ನಡುವೆ ಪಾರ್ಲಿಮೆಂಟಿನಲ್ಲಿ ಕಹಿಯಾದ ಮಾತಿನ ಚಕಮಕಿ ಉಂಟಾಗಿತ್ತು. ಲೋಹಿಯಾರವರ ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳುವಲ್ಲಿ ಇಂಗ್ಲಿಷ್ ಪತ್ರಿಕೋದ್ಯಮಿಗಳು ಮಾಡಿದ ತಪ್ಪನ್ನೇ ಕೆಲವು ಹಿಂದಿ ಪತ್ರಿಕೋದ್ಯಮಿಗಳೂ ಮಾಡಿದರು.

## ಸೌಂದರ್ಯ

ಸಮತೆ ಹಾಗೂ ಸ್ವಾತಂತ್ರ್ಯದೊಂದಿಗೆ ಸೌಂದರ್ಯವನ್ನು ಮೇಳೈಸದಿದ್ದರೆ ಲೋಹಿಯಾರ ವ್ಯಕ್ತಿತ್ವ ಪೂರ್ಣವಾಗದು. ಲೋಹಿಯಾರವರಿಗೆ ಬಾಹ್ಯ ಸೌಂದರ್ಯಕ್ಕಿಂತಲೂ ಆಂತರಿಕ ಸೌಂದರ್ಯವೇ ಹೆಚ್ಚು ಪ್ರಿಯವಾಗಿತ್ತು. ಅವರೊಬ್ಬ ಉತ್ತಮ ಕಲಾ ವಿಮರ್ಶಕರಾಗಿದ್ದರು ಕೂಡ. 'ಜನ' ಎಂಬ ಪತ್ರಿಕೆಯಲ್ಲಿ ಭಾರತೀಯ ವಾಸ್ತುಶಿಲ್ಪ ಹಾಗೂ ಮೂರ್ತಿ ಕಲೆಯ ಬಗ್ಗೆ ಅವರದೊಂದು ಲೇಖನಮಾಲೆ ಪ್ರಕಟವಾಗಿತ್ತು. ಒಬ್ಬ ಉತ್ತಮ ಕಲಾ ಸಮೀಕ್ಷಕನಿಗೂ ಕೂಡ ಭಾರತದ ವಾಸ್ತು ಸೌಂದರ್ಯದ ಬಗ್ಗೆ ಅವರಷ್ಟು ಜ್ಞಾನವಿರಲಿಕ್ಕಿಲ್ಲ ಎಂದು ಆ ಲೇಖನಮಾಲೆಯನ್ನೋದಿದ ಯಾರಾದರೂ ಹೇಳಬಹುದಾಗಿತ್ತು. ಪೌರಾಣಿಕ ಪಾತ್ರಗಳಾದ ರಾಮ, ಕೃಷ್ಣ, ಶಿವ, ಸೀತೆ, ವಿಶ್ವಾಮಿತ್ರ ಮುಂತಾದವರನ್ನು ಅವರು ನೋಡುವ ದೃಷ್ಟಿಕೋನವೇ ಬೇರೆಯಾಗಿತ್ತು. ಅವರ ಸೌಂದರ್ಯಾನುಭೂತಿ ಕಲ್ಲಿನಲ್ಲಿ ಕೆತ್ತಿದ ವಿಗ್ರಹಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಪ್ರತಿನಿತ್ಯ ಪ್ರತಿಕ್ಷಣ ತಮ್ಮ ಎದುರಿನಲ್ಲಿ ಘಟಿಸುವ ಘಟನೆಗಳ ಸುಂದರ ಕ್ಷಣಗಳಲ್ಲಿಯೂ ಅವರು ಸೌಂದರ್ಯವನ್ನು ಅರಸುತ್ತಿದ್ದರು. ಮುಂಬೈಗೆ ಬಂದಾಗಲೆಲ್ಲ ಕಡಲತೀರದ ಕೇಸರಿ ಸೂರ್ಯಾಸ್ತ ನೋಡುವುದನ್ನು ಅವರು ಮರೆಯುತ್ತಿರಲಿಲ್ಲ. ಆಗ ಜುಹು ಬೀಚಿನಲ್ಲಿ ಈಗಿನಷ್ಟು ದೊಡ್ಡ ಹೋಟೆಲುಗಳೂ ಜನದಟ್ಟಣೆಯೂ ಇರಲಿಲ್ಲ. ಅಲ್ಲಿ ಹಳೆಯ ಮಾದರಿಯ ಲತಾಗೃಹಗಳನ್ನು ಹೋಲುವ ಪ್ರಶಾಂತವಾದ ಕೆಲವು ಸಾಲುಕೋಣೆಗಳಿದ್ದವು. ಸಾಮಾನ್ಯವಾಗಿ ಮುಂಬೈಗೆ ಬಂದಾಗ ಲೋಹಿಯಾರವರು ಅಲ್ಲೇ ತಂಗುತ್ತಿದ್ದರು.


ಒಂದು ಸಲ ಅಲ್ಲಿಂದ ಲೋಹಿಯಾರವರ ಫೋನ್ ಬಂತು. "ಒಂದೆರಡು ಗಂಟೆ ಬಿಡುವು ಮಾಡಿಕೊಂಡು ಬರುವಿರಾ?" ಫೋನಿನಲ್ಲಿ ಅವರು ಕೇಳಿದರು.

"ಏಕೆ? ಅಂಥ ವಿಶೇಷವೇನಿದೆ?" ನಾನು ಕೇಳಿದೆ.

"ಏನಿಲ್ಲ. ಮರಳಿನ ಮೇಲೆ ಕುಳಿತು ಸೂರ್ಯಾಸ್ತ ನೋಡಬೇಕೆನಿಸುತ್ತದೆ."

ನಾನು ಹೋದೆ. ಅವರು ಅಂದು ತುಂಬು ಮೂಡಿನಲ್ಲಿದ್ದರು. ಜುಹು ಹೋಟೆಲಿನ ಅಂಗಳದಲ್ಲಿ ನಾವೆಲ್ಲ ಕುಳಿತೆವು. ಅವರೇ ಎಲ್ಲರಿಗೂ ಚಹಾ ತರಿಸಿಕೊಟ್ಟರು. ಚಹಾ ಕುಡಿಯುತ್ತಿದ್ದಾಗ ಏಕೋ ಮಾತು ರಾಮಾಯಣದ ಕಡೆಗೆ ಹೊರಳಿತು. ತಟ್ಟನೇ ಅವರೆಂದರು, "ರಾಮನು ಕಡಲತೀರದ ಸೂರ್ಯಾಸ್ತವನ್ನು ಕಂಡಿದ್ದನೋ ಇಲ್ಲವೋ. ಏಕೆಂದರೆ ರಾಮ ಕಂಡದ್ದು ರಾಮೇಶ್ವರದ ಕಡಲ ತೀರವನ್ನು. ಅದಂತೂ ಪೂರ್ವ ತೀರದಲ್ಲಿದೆ".

ಆದರೆ ರಾಮ ಲಂಕೆಗೂ ಹೋಗಿದ್ದನಲ್ಲ. ಲಂಕೆ ಒಂದು ದ್ವೀಪ. ಅಲ್ಲಿ ಸೂರ್ಯೋದಯ ಸೂರ್ಯಾಸ್ತ ಎರಡನ್ನೂ ಕಾಣಬಹುದಲ್ಲ?" ನಾನೆಂದೆ. "ಮನೆಗೆ ಹೋದ ಮೇಲೆ ಒಮ್ಮೆ ವಾಲ್ಮೀಕಿ ರಾಮಾಯಣವನ್ನು ಸ್ವಲ್ಪ ತಿರುವಿ ಹಾಕಿ, ಅದರಲ್ಲಿ ಕಡಲತೀರದ ಸೂರ್ಯಾಸ್ತದ ವರ್ಣನೆ ಎಲ್ಲಿಯಾದರೂ ಬಂದಿದ್ದರೆ ನನಗೆ ಬರೆದು ತಿಳಿಸಿ" ಎಂದವರು ಹೇಳಿದರು. ನಂತರ ಸೂರ್ಯೋದಯ ಹಾಗೂ ಸೂರ್ಯಾಸ್ತಗಳ ಬಗ್ಗೆ ಒಂದು ದೊಡ್ಡ ವ್ಯಾಖ್ಯಾನವನ್ನೇ ನೀಡಿದರು. ಅಂದು ಸೌಂದರ್ಯಾನುಭೂತಿಯ ಬಗ್ಗೆ, ರಸಗಳ ಬಗ್ಗೆ ಲೋಹಿಯಾರವರು ಅದೆಷ್ಟು ಹೊತ್ತು ಮಾತನಾಡಿದರೋ!



ಎಂ.ಎಫ್. ಹುಸೇನ್ ಬಿಡಿಸಿದ ಲೋಹಿಯಾರ ರೇಖಾಚಿತ್ರ

ಸೂರ್ಯ ಗೋಳದ ಅಂಚು ಜಲರಾಶಿಯನ್ನು ಸ್ಪರ್ಶಿಸುತ್ತಿದ್ದಂತೆಯೇ ಅವರು ತುಂಬ ಭಾವುಕರಾಗಿ ತಮ್ಮ ಕುರ್ಚಿಯಿಂದೆದ್ದು ಮರಳಿನ ಮೇಲೆ ಕುಳಿತುಕೊಂಡರು. "ಭೂಮಿಯ ಸ್ಪರ್ಶ ತುಂಬ ಆಪ್ಯಾಯಮಾನ. ನೆಲದಲ್ಲಿ ಕುಳಿತಾಗ ತಾಯಿಯ ಮಡಿಲಲ್ಲಿ ಕುಳಿತಂತೆ ಆಗುತ್ತದೆ" ಎಂದರು. ಮಾತುಮಾತಿನಲ್ಲಿ ಅವರಿಗೆ ನನ್ನನ್ನು ಛೇಡಿಸಬೇಕೆನಿಸಿತೇನೋ, ನನ್ನನ್ನುದ್ದೇಶಿಸಿ ಹೇಳಿದರು "ನಿಮ್ಮ ಕುರ್ಚಿ ಎತ್ತರವಾಗಿದೆ ಡಾಕ್ಟರ್, ಆದರೆ ಈ ಮರಳಿನ ರಾಶಿ ಅದಕ್ಕಿಂತಲೂ ಎತ್ತರವಾಗಿದೆ. ಇದನ್ನು ಅರಿತು ನಡೆದರೇನೇ ಚೆನ್ನಾಗಿ ಕೆಲಸ ಮಾಡುವಿರಿ".

ಆಗ ಅವರನ್ನು ಕೆಣಕಬೇಕೆಂದೇ ನಾನೆಂದೆ, "ಆದ್ದರಿಂದಲೇ ಅಲ್ಲವೇ ಜನಕ ಮಹಾರಾಜರು 'ವಿದೇಹ'ರಾಗಿ ತಮ್ಮ ಸಿಂಹಾಸನದ ಮೇಲೆ ಕೂಡುತ್ತಿದ್ದುದು? ಆದರೆ ನಮ್ಮ ಪ್ರಜಾರಾಜ್ಯದ ಇಂದಿನ ಜನಕ ಮಹಾರಾಜರು ಆ ಮಾತನ್ನೇ ಮರೆತಿದ್ದಾರೆ. ಅದೇ ಇಂದಿನ ಈ ಎಲ್ಲ ದುಃಸ್ಥಿತಿಗೆ ಕಾರಣ".


ನನ್ನ ಮಾತಿನಿಂದ ಅವರು ಇನ್ನಷ್ಟು ಮೂಡಿನಲ್ಲಿ ಬಂದರು. ರಾಜರ್ಷಿ ವಸಿಷ್ಠ ಮತ್ತು ಜನ ಪ್ರತಿನಿಧಿಯಾದ ವಿಶ್ವಾಮಿತ್ರ ಇವರ ಉದಾಹರಣೆಯನ್ನು ಬಳಸಿಕೊಂಡು ಸಮಕಾಲೀನ ರಾಜಕೀಯವನ್ನು ತ್ರೇತಾಯುಗದ ರಾಜಕೀಯಕ್ಕೆ ಹೋಲಿಸಿದರು. ಅಂದು ನಾವು ಚರ್ಚಿಸಿದ ವಿಷಯಗಳಿಗೆ ಲೆಕ್ಕವೇ ಇಲ್ಲ. ಬದಲಿಸುತ್ತಿರುವ ಸೌಂದರ್ಯದ ಪ್ರತಿಮೆಗಳು, ಖಜುರಾಹೋ ಶಿಲ್ಪ, ಅಜಂತಾದ ವರ್ಣಚಿತ್ರಗಳು, ಕಾಂಗಡಾ ಚಿತ್ರಕಲೆಯ ನಾಯಕಿಯರು ಹೀಗೆ ಅನೇಕ ವಿಷಯಗಳನ್ನು ಕುರಿತು ಅವರು ಚರ್ಚಿಸಿದರು.

"ನಾನು ದಕ್ಷಿಣ ಭಾರತವನ್ನು ಹೆಚ್ಚಾಗಿ ಸುತ್ತಿಲ್ಲ. ಈ ಬಾರಿ ನನ್ನೊಂದಿಗೆ ಬನ್ನಿ. ನನ್ನ ದೃಷ್ಟಿಯಿಂದ ದಕ್ಷಿಣ ಭಾರತದ ದೇವಾಲಯಗಳ ವಾಸ್ತುಶಿಲ್ಪವನ್ನು ನೋಡುವಿರಂತೆ" ಎಂದೂ ಹೇಳಿದರು. ಆದರೆ ಆ ಅವಕಾಶ ದೊರೆಯಲೇ ಇಲ್ಲ.

ಅವರು ದೆಹಲಿಗೆ ಮರಳಿದ ಮೇಲೆ ಅಸ್ವಸ್ಥರಾದರು. ದಲಿತರ, ಪೀಡಿತರ ನೋವಿಗೆ ಧ್ವನಿಯಾಗಿದ್ದ ಅವರು ಒಂದು ದಿನ ಭೌತಿಕವಾಗಿ ಇಲ್ಲವಾದರು. ಈ ಸುದ್ದಿ ಇಡೀ ದೇಶವನ್ನು ವ್ಯಾಕುಲಗೊಳಿಸಿತು. ಅಂದು ಜುಹು ಬೀಚಿನ ಮೇಲೆ ನಾನು ಅವರೊಂದಿಗೆ ಕಳೆದ ಸಂಜೆಯೇ ನಮ್ಮ ಅಂತಿಮ ಸಂಜೆಯಾಗಿತ್ತು.

ಸಮತೆ, ಸ್ವಾತಂತ್ರ್ಯ ಮತ್ತು ಸೌಂದರ್ಯ ಎಂಬ ತ್ರಿವಿಧ ಆಯಾಮಗಳ ಮೂರ್ತಸ್ವರೂಪರಾಗಿದ್ದ ಲೋಹಿಯಾ ಜನಸಾಮಾನ್ಯರ ಪಾಲಿಗೆ ಮಾತ್ರ ಕೇವಲ ಒಬ್ಬ ಸಮಾಜವಾದಿ ನಾಯಕರಾಗಿದ್ದರು.

*



# ನನ್ನ ಮಲೆನಾಡಿನಲ್ಲಿ... ಕುವೆಂಪು ಹೆಸರಿನಲ್ಲಿ,...

-ಎಲ್. ಕೆ.ಪೂರ್ಣಿಮಾ

**ಮಲೆನಾಡು ಅಂದರೆ ಕುವೆಂಪು. ಕುವೆಂಪು ಅಂದರೆ ಮಲೆನಾಡು. ಇವೆರಡೂ ಶಬ್ದಗಳಿಗೆ ಅಂತಹ ಅವಿನಾ ಸಂಬಂಧ. ಏಕೆಂದರೆ ಕುವೆಂಪು ಬರುವವರೆಗೆ ಬರೀ ಹೆಗ್ಗಾಡು-ಕಗ್ಗಾಡು ಎನಿಸಿದ್ದ ಮಲೆನಾಡು ಅವರು ತಮ್ಮ ಸಾಹಿತ್ಯದ ಮೂಲಕ ಕೊಟ್ಟ ಹೊಸ ಕಣ್ಣುಗಳಿಂದ ಒಂದು ಹೊಸ ಸೌಂದರ್ಯವನ್ನೇ ಪಡೆಯಿತು.ರುದ್ರ ಭಯಂಕರವೆನಿಸುತ್ತಿದ್ದುದು ಮನೋಹರವಾಯಿತು. ರಾಮ ಸೀತೆ ಹನುಮಂತರು ಅಲ್ಲಿ ಓಡಾಡಿದರು. ಮಲೆನಾಡಿನ ಸಂದರ್ಯವನ್ನು ಗ್ರಹಿಸಲು ಒಂದು ಹೊಸ ಸೌಂದರ್ಯ ಮೀಮಾಂಸೆಯೇ ರೂಪುಗೊಂಡಿತು. ಅಂದು ಮಲೆನಾಡಿನ ಸೌಂದರ್ಯವನ್ನು ಸವಿಯಲು ಕುವೆಂಪು ಜತೆ ಅವರ ಕಾಲದ ಕಲಾಭಿಜ್ಞರೆಲ್ಲರೂ ಬಂದು ಹೋದರು.**

**ಆದರೆ ಇಂದೇನಾಗಿದೆ? ಆಧುನಿಕತೆಯ ಎದುರಿಗೆ ಸೌಂದರ್ಯ ತನ್ನೆಲ್ಲ ಅಳತೆಗಳನ್ನು ಕಳೆದುಕೊಂಡಂತಿರುವ ಮಲೆನಾಡಿನ ಮನಸ್ಸು, ರೂಕ್ಷ ರೂಪಗಳ ಆರಾಧನೆಯ ದಾರಿ ಹಿಡಿದು ಕುವೆಂಪು ಅವರ ಸೌಂದರ್ಯಾಭಿಜ್ಞತೆಯನ್ನು ನಿರಾಕರಿಸುತ್ತಿವ ರೀತಿ ಮಲೆನಾಡು ತನ್ನ ಜೀವಸೆಲೆಯನ್ನೇ ಕಳೆದುಕೊಂಡಿದೆಯೇನೋ ಎಂಬ ಆತಂಕ ಹುಟ್ಟಿಸುವಂತಿದೆ.**

**ಮಲೆನಾಡಿನ ಅವನತಿಯನ್ನು ಕಂಡು ಮರುಗುತ್ತಿರುವ ಕಲಾವಿದ ಮನಸ್ಸೊಂದು ತನ್ನ ಈ ವಿಷಣ್ಣತೆಯನ್ನು ಇಲ್ಲಿ ಹಲವು ಹಂತಗಳಲ್ಲಿ ಬಿಚ್ಚಿಟ್ಟಿದೆ. ಕುವೆಂಪು ಅವರ ಹುಟ್ಟೂರಾದ ಹಿರೇಕೊಡಿಗೆಯ ಎಲ್. ಕೆ.ಪೂರ್ಣಿಮಾ ಶಾಂತಿನಿಕೇತನದಲ್ಲಿ ಕಲಾಭ್ಯಾಸ ಕೈಗೊಂಡವರು. ಬದುಕಿನ ಹಲವು ಸಾಧ್ಯತೆಗಳನ್ನು ಅನ್ವೇಷಿಕೊಂಡು ಅಲೆಯುತ್ತಾ ಈಗ ತಾಳಗುಪ್ಪದ ಬಳಿ ಬೇಸಾಯದಲ್ಲಿ ತೊಡಗಿದ್ದಾರೆ. -ಸಂ.**



**ನ**ಮ್ಮ ಜೀವನದಲ್ಲಿ ಆಗಿ ಹೋಗಿರುವ ಎಷ್ಟೋ ಘಟನೆಗಳಲ್ಲಿ ಅತ್ಯಂತ ದುಃಖಕರವಾದವುಗಳೂ, ಅವಮಾನದಿಂದ ಕೂಡಿದವುಗಳೂ, ರೊಚ್ಚಿಗೆಬ್ಬಿಸಿದವುಗಳೂ ಹಾಗೂ ಸಂತೋಷದಿಂದ ಬೀಗಿಸಿದವು ಸೇರಿರುತ್ತವೆ. ಅವುಗಳ ಸಂದರ್ಭಗಳ ಸರಪಳಿಯ ಕೊಂಡಿಯನ್ನು ಮನಸ್ಸೆಂಬುದು ತನ್ನ ನಿರಂತರ ಮೆಲುಕು ಹಾಕುವಿಕೆಯಲ್ಲಿ ಆಗಾಗ್ಗೆ ಹೆಕ್ಕಿ ತೆಗೆದು ಪರಮಾರ್ಶಿಸುತ್ತಲೇ ಇರುತ್ತದೆ. ಅದರಿಂದಾಗಿ ಅವು ನಮ್ಮ ಸ್ಮೃತಿಯಲ್ಲಿ ಹಸಿರಾಗಿಯೇ ಇರುತ್ತವೆ. ಇವುಗಳನ್ನು ಹೊರತುಪಡಿಸಿ, ಒಮ್ಮೆಗೇ ಎರಗಿಬರುವ, ನಮ್ಮನ್ನು ವಿಷಣ್ಣತೆಯ ಪಾತಾಳಕ್ಕೆ ಇಳಿಸುವಂತಹ ಸಂದರ್ಭಗಳ ನೆನಪುಗಳು ಮಾತ್ರ ಮನಸ್ಸಿನೊಳಕ್ಕೇ ಇಳಿದುಬಿಡುತ್ತವೆ. ಅವುಗಳನ್ನು ನೆನಪು ಮಾಡಿಕೊಳ್ಳುವುದೆಂದರೆ, ಮೆಟ್ಟಿಲುಗಳಿಲ್ಲದ ಬಾವಿಗಿಳಿವಂತೆ. ಮೊದಲ ಬಾರಿಗೆ ನನ್ನ ಜೀವನದಲ್ಲಿ ನಾನು "ವಿಷಣ್ಣತೆ" ಎಂಬ ಸ್ಥಿತಿಯನ್ನು ದಾಟಿ ಬಂದ ಸಂದರ್ಭಗಳಾವುವು ಎಂದು ಕಂಡುಕೊಳ್ಳಲು ಬಹಳಷ್ಟು ಸಾರಿ ಪ್ರಯತ್ನಿಸಿದ್ದೇನೆ. ತತ್‌ಕ್ಷಣದ ಯಾವುದೇ ಘಟನೆಗಳ ಹಿನ್ನೆಲೆಯಿಲ್ಲದೆ ನಮ್ಮೊಳಗೇ ಎಂದೆನಿಂದಲೂ ಮಡುಗಟ್ಟುತ್ತಾ ಹೋಗಿ ಕೊನೆಗೊಂದು ಕ್ಷಣದಲ್ಲಿ ಧುತ್ತೆಂದು ಎರಗಿ ಬಂದು ನಮ್ಮನ್ನಾವರಿಸುವ, ನಮ್ಮನ್ನು ತಲ್ಲಣಗೊಳಿಸುವ, ಮತ್ತೆ ನೆನಪಿನಾಳಕ್ಕೆ ಹೂತು ಹೋಗುವ ಇವುಗಳ ನೆನಪನ್ನು ಹೆಕ್ಕಿ ತೆಗೆಯುವುದು ಅಷ್ಟು ಸುಲಭದಲ್ಲ ಎನ್ನಿಸಿದ್ದಿದೆ.

ನನ್ನ ಪ್ರಯತ್ನಕ್ಕೆ ಸಿಕ್ಕ ಇಂಥ ಮೊದಲ ಮೂರು ಅನುಭವಗಳು ಪ್ರಕೃತಿಯ ಸಾನ್ನಿಧ್ಯದಲ್ಲೇ ಆದವುಗಳು ಎಂದು ಕಂಡುಕೊಂಡು ಆಶ್ಚರ್ಯ ಪಟ್ಟಿದ್ದೇನೆ. ಎಲ್ಲಾ ಯೋಚನೆಗಳ ಜಾಡನ್ನು ಕಳಚಿಕೊಂಡು ಒಂದು ಕ್ಷಣ ಸ್ಥಬ್ಧವಾದ ಮನಸ್ಸು, ಎದುರಿಗೆ ಒಂದು ಎಲೆ ಪಟಪಟನೇ ಅದುರಿ ಸುಮ್ಮನಾದದ್ದನ್ನು ಧೇನಿಸಿದರೂ ಸಾಕು, ಅಥವಾ ಒಂದು ಹಕ್ಕಿ ಹಾರಿ ಹೋಗಿ ದೂರದಲ್ಲಿ ಕಣ್ಮರೆಯಾಗುವುದನ್ನು ಕಂಡ ಕ್ಷಣವೇ ಸಾಕು ಈ ವಿಷಣ್ಣತೆಯು ನಮ್ಮನ್ನು ಅಮರಿಕೊಳ್ಳುತ್ತದೆ.



ಇಲ್ಲಿ ವಿಷಣ್ಣತೆಯನ್ನು ಹೀಗೆ ವಿವರಿಸಬಹುದು– ಮನಸ್ಸು ಖಿನ್ನವಾಗುವುದು, ವಿನಾಕಾರಣ ಕಳವಳಗೊಳ್ಳುವುದು, ತೀವ್ರ ಹತಾಶೆಗೆ ತಲುಪುವುದು, ಏನೋ ಕಳೆದುಕೊಂಡಂತಹ ಮನಸ್ಥಿತಿಗೆ ಇಳಿಯುವುದು. ಆರಿಸ್ಟಾಟಲ್‌ನು ಇದನ್ನು *Melan khole, black bile* – ಕಪ್ಪು ಪಿತ್ಥ ಎಂದು ವಿವರಿಸಿದ್ದರ ಹಿನ್ನೆಲೆಯಲ್ಲಿ ಇದನ್ನು ಕಪ್ಪು ನೋವು, ಕಪ್ಪು ಭಾವೋದ್ರೇಕ ಎಂದೂ ಕರೆಯಲಾಗಿದೆ. ಇದು ಒಂದು ಖಾಯಿಲೆಯ ರೂಪವೂ ಹೌದು ಮತ್ತು ಇದು ಆಧ್ಯಾತ್ಮಿಕ ರೂಪಾರ್ಥವುಳ್ಳದ್ದು ಆಗಿದೆ. ಒಟ್ಟಾರೆಯಾಗಿ ಇದು ಕೇವಲ ಒಬ್ಬ ವ್ಯಕ್ತಿಯ ಭಾವೋದ್ರೇಕ ಮಾತ್ರವಾಗಿರದೆ ಇಡೀ ಸಮುದಾಯ ಹಂಚಿಕೊಳ್ಳುವ ಒಂದು ಕಪ್ಪು ಮನಃಸ್ಥಿತಿ ಎಂದೂ ವಿವರಿಸಲ್ಪಟ್ಟಿದೆ.

ಹೆಚ್ಚಾಗಿ ಇದು ಆಧುನಿಕ ಕಾಲದ ಮನಃಸ್ಥಿತಿಯಾಗಿ ಕಂಡು ಬಂದಿದೆಯಾದರೂ ಸೂಫಿ ಕಲೆಯಲ್ಲಿ ಉದ್ದಕ್ಕೂ ವಿವರಿಸಲ್ಪಟ್ಟಂತಹ ಮನಃಸ್ಥಿತಿಯಾಗಿದೆ.

***

ನನಗೆ ನೆನಪಾದವುಗಳಲ್ಲಿ ಮೊಟ್ಟಮೊದಲ ಅಂಥ ಅನುಭವವಾದ ಸಂದರ್ಭವು ನಾನು ಬಹುಶಃ ಏಳೋ ಎಂಟೋ ವರ್ಷದವಳಿದ್ದಾಗಿನದಿರಬಹುದು. ಒಮ್ಮೆ ನಾನು ಜಗುಲಿಯ ಕಟ್ಟೆ ಮೇಲೆ ಕುಳಿತುಕೊಂಡಿದ್ದವಳು, ಮೇಲೆ ಚೌಕಿ ಮನೆಯ ನಾಲ್ಕು ಕಡೆ ಗೋಡೆಗಳ ಹೆಂಚಿನಿಂದ ಕಟ್ಟು ಹಾಕಿಸಿಕೊಂಡಂತೆ ಕಾಣುತ್ತಿದ್ದ ಆಕಾಶವನ್ನು ನೋಡುತ್ತಿದ್ದೆ. ನಿಧಾನವಾಗಿ ಬಿಸಿಲೇರುತ್ತಿದ್ದ ಹೊತ್ತು, ಆಕಾಶ ಬಿಳಿಚಿಕೊಳ್ಳುತ್ತಿತ್ತು. ಒಂದು ಕಾಜಾಣವು ಹಾರಿ ಬಂದು ಒಂದು ತೀಕ್ಷ್ಣವಾದ ಶಿಳ್ಳುರೂಪದ ಕೂಗಿನಿಂದ ವಾತಾವಣಕ್ಕೆ ಮತ್ತಷ್ಟು ನೀರವತೆಯನ್ನು ಸೇರಿಸಿ ಹಾರಿ ಹೋಯಿತು. ಒಂದಷ್ಟು ಕ್ಷಣಗಳ ನಂತರ ಮತ್ತೆ ಅದೇ ಕೂಗು. ಹಕ್ಕಿ ಅಷ್ಟು ದೂರ ಹಾರಿ

ಹೋಗಿರಬಹುದೆನ್ನುವುದನ್ನು ತೋರಿಸುವಂತಹ ಅಸ್ಪಷ್ಟವಾದ ಕೂಗು. ಸಾಧಾರಣವಾಗಿ ತನ್ನ ಕಲರವದ ಶಬ್ದದಿಂದಲೇ ಪರಿಚಿತವಾಗಿರುವ ಕಾಜಾಣವು, ಬಿಸಿಲೇರುವ ಹೊತ್ತಿನಲ್ಲಿ, ವಾತಾವರಣವು ಮೌನವಾಗಿರುವ ಹೊತ್ತಿನಲ್ಲಿ ಈ ರೀತಿ ಕೂಗು ಹಾಕುತ್ತದೆ. ಆ ಶಿಳ್ಳು, ಅಲ್ಲಿ ತುಂಬಿ ನಿಂತಿದ್ದ ನಿರ್ವಿಣ್ಣತೆಯನ್ನು ತನ್ನ ಬಾಣದಿಂದ ನನ್ನ ಎದೆಯನ್ನು ಹೊಕ್ಕಿಸಿತೇನೋ ಎನ್ನುವಂತ ಅನುಭವವಾಗಿತ್ತು. ಆಗ ಮನೆಯ ಒಳಗೂ ಭಣಗುಟ್ಟುತ್ತಿತ್ತೆಂದು ಮಸುಕಾಗಿ ನೆನಪು.

ಇನ್ನೊಂದು ಸಂದರ್ಭ ಒಂದೆರಡು ವರ್ಷಗಳ ಅಂತರದಲ್ಲಿದ್ದಿರಬಹುದು. ನಾವು ಮಕ್ಕಳುಗಳೆಲ್ಲಾ ಮನೆಯ ಎದುರಿಗಿದ್ದ ಕಲ್ಲು ಕಟ್ಟಣೆಯ ಮೇಲೆ ಕುಳಿತು ಎದುರಿಗಿದ್ದ ವಿಶಾಲವಾದ ಗದ್ದೆ ಬಯಲನ್ನು ನೋಡುತ್ತಿದ್ದೇವು. ಆ ಗದ್ದೆಯ ಸುತ್ತಲೂ ಎತ್ತೆತ್ತರದ ಕಾಡುಗುಡ್ಡಗಳು ಅದನ್ನು ಕೋಟೆಯ ರೀತಿ ಸುತ್ತುವರೆದಿದ್ದವು. ಅದರಲ್ಲಿ ಎದುರಿಗಿದ್ದ ಎರಡು ಗುಡ್ಡಗಳು ಎಲ್ಲಕ್ಕಿಂತ ಎತ್ತರವಾಗಿದ್ದು ಒಂದೇ ಗಾತ್ರ ಮತ್ತು ಆಕಾರದಲ್ಲಿದ್ದವು. ನಾವು ಮಕ್ಕಳು ಗುಸುಗುಸು ಹೇಳಿಕೊಳ್ಳುವಂತೆ ಅವು ಹೆಂಗಸಿನ ಮೊಲೆಗಳ ರೂಪದಲ್ಲಿದ್ದವು. ದೊಡ್ಡ ದೊಡ್ಡ ಮರಗಳಿಂದ ತುಂಬಿದ್ದ ಆ ಗುಡ್ಡಗಳು ತಮ್ಮ ಗಾಢ ಹಸಿರು ಬಣ್ಣದಿಂದ ಆ ಪ್ರದೇಶಕ್ಕೆ ವಿಶೇಷವಾದ ಸೌಂದರ್ಯವನ್ನು ತುಂಬಿಸಿದ್ದವು. ಹೊರಗಿನಿಂದ ಬಂದ ಅತಿಥಿಗಳಿಗೆ ನಾವುಗಳು ಅಭಿಮಾನದಿಂದ ನಮ್ಮೂರನ್ನು ತೋರಿಸುತ್ತಿದ್ದೆವು. ಗುಡ್ಡದ ನೆತ್ತಿಯ ಮೇಲೆ ಆಕಾಶಕ್ಕೆದುರಾಗಿ ಬೆಳೆದು ನಿಂತ ಮರಗಳ ಆಕಾರವನ್ನು ಪ್ರಾಣಿ ಪಕ್ಷಿಗಳ ಆಕಾರಕ್ಕೆ ಹೋಲಿಸಿ ನೋಡುತ್ತಿದ್ದೆವು. ಆ ಜೋಡಿ ಗುಡ್ಡಗಳಲ್ಲಿ ಒಂದು ಗುಡ್ಡದ ಮಧ್ಯ ಭಾಗದಲ್ಲಿ ಒಂದಷ್ಟು ಜಾಗವು ಮರಗಿಡಗಳಿಲ್ಲದೇ ಭೂಮಿಯು ತನ್ನ ಕೆಂಪು ಮೈಯನ್ನು ತೆರೆದುಕೊಂಡಿತ್ತು. ಗಾಢವಾದ ಹಸಿರು ಗುಡ್ಡದ ಮೇಲೊಂದು ಕಡುಗೆಂಪು ಪಟ್ಟೆಯ ಸೌಂದರ್ಯ ಅದ್ಭುತವೆನ್ನಿಸುವಂತಿತ್ತು. ಆದರೆ ಆದಿನ ನಾವು ಅಲ್ಲಿ ಆ ಕೆಂಪು ಪಟ್ಟೆಯನ್ನು ಕಾಣದಾದಾಗ ಗಾಬರಿಗೊಂಡೆವು. ನಂತರ ವಿಚಾರ ಗೊತ್ತಾಯಿತು. ಅಲ್ಲಿ ನೆಟ್ಟಿದ್ದ ಅಕೇಶಿಯಾ ಸಸಿಗಳು ಬೆಳೆದು ನಿಂತು ಅಲ್ಲಿಯ ಕೆಂಪು ಭೂಮಿಯ ಮೇಲ್ಮೈಯನ್ನು ತಮ್ಮ ಪ್ಲಾಸ್ಟಿಕ್ ಹಸುರಿನ ಬಣ್ಣದಿಂದ ಮುಚ್ಚಿಹಾಕಿದ್ದವು. ಮನಸ್ಸು ಕಳವಳಗೊಂಡಿತ್ತು.

ಇನ್ನು ಮೂರನೇ ಅಂಥ ಅನುಭವವಾಗಿದ್ದು ನಾನು ವಿದ್ಯಾಭ್ಯಾಸಕ್ಕೆಂದು ದೂರದೂರಿಗೆ ಹೋಗಿದ್ದು, ವರ್ಷಕ್ಕೆ ಒಂದೋ ಎರಡೋ ಬಾರಿ ಊರಿಗೆ ಬರುವಾಗ ಆಗಿರುವಂತದ್ದು. ಕಾಡು ಗುಡ್ಡಗಳು ದಟ್ಟವಾಗುತ್ತಿದ್ದಂತೆ ಬಸ್ಸು ತಿರುವಿನಲ್ಲಿ ಸುತ್ತುತ್ತಾ ಊರು ಹತ್ತಿರವಾಗುತ್ತಿರುವುದನ್ನು ಸೂಚಿಸುತ್ತಿತ್ತು. ಎಷ್ಟೋ ಸಮಯದ ನಂತರ ಊರನ್ನು ಕಾಣುವ ಉದ್ವಿಗ್ನತೆಯಲ್ಲಿ ಎದೆ ಬಡಿದುಕೊಳ್ಳುತ್ತಿತ್ತು. ದೂರದಿಂದಲೇ ಆ ಜೋಡಿ ಗುಡ್ಡಗಳು ಕಂಡವು. ಆದರೆ ಅವು ಎಂದಿನಂತಿರಲಿಲ್ಲ. ಒಂದು ಗುಡ್ಡದ ಒಂದು ಪಾರ್ಶ್ವವು ತನ್ನ ಅಗಾಧವಾದ ಮರಗಳನ್ನು ಕಳಚಿಕೊಂಡು ಕೋನಿಫೆರಸ್ ಜಾತಿಯ ಸಿಲ್ವರ್ ಓಕ್ ಮರಗಳನ್ನು ಹೊತ್ತು ನಿಂತಿತ್ತು. (ಕೊಪ್ಪದ 'ಕ್ಲಾಸಿಕ್ ಪ್ಲಾಂಟೇಷನ್' ತನ್ನ ಸಾವಿರಾರು ಎಕರೆ ಪ್ರದೇಶಕ್ಕೆ ಮತ್ತೊಂದು ಸಾವಿರ ಎಕರೆ ದಟ್ಟಕಾಡನ್ನು ಬೋಳಿಸಿ ಸೇರಿಸಿಕೊಂಡು ವಿಸ್ತರಿಸಿಕೊಂಡಿತ್ತು! ಕಾಡು ಕಡಿಯುವಾಗ ದಪ್ಪದಪ್ಪ ಮರದ ಬೊಡ್ಡೆಗಳು ಎತ್ತರದ ಗುಡ್ಡದ ತುದಿಯಿಂದ ಉರುಳಿ ಬರುವಾಗ ಒಂದು ಕಾಡೆಮ್ಮೆಯನ್ನೂ ಜೊತೆಗೆ ತಂದಿದ್ದೂ, ಅದೆಷ್ಟೋ ಉದ್ದದ, ದಪ್ಪದ ಹೆಬ್ಬಾವನ್ನು ಹಿಡಿದಿದ್ದೂ ನಂತರ ಸಿಕ್ಕ ಮಾಹಿತಿಗಳು)

ನಾವು ಕೂಸಾಗಿ ಹುಟ್ಟಿ ಬೆಳೆಯುವ ಮನೆಯ ವಾತಾವರಣವು ನಮ್ಮ ದೈಹಿಕ ಮತ್ತು ವ್ಯಕ್ತಿತ್ವದ ಬೆಳವಣಿಗೆಗೆ ಅಡಿಪಾಯ ಹಾಕಿದರೆ, ಸುತ್ತಮುತ್ತಲೂ ಹಬ್ಬಿ ನಿಂತಿರುವ ಪರಿಸರವು ನಮ್ಮ ಆಧ್ಯಾತ್ಮಿಕ ಬೆಳವಣಿಗೆಗೆ ಅಡಿಪಾಯ ಹಾಕುತ್ತದೆ. ಅಂಗಳದಾಚೆಗಿನ ಹೆಬ್ಬಾಗಿಲೇ ಗಡಿಯಾಗಿ, ಒಳಗಿನ ವಾತಾವರಣದಲ್ಲಿ ಮಗುವಾಗಿ ಬೆಳೆಯುವ ನಾವು ನಂತರದ ಘಟ್ಟದಲ್ಲಿ ಹೆಬ್ಬಾಗಿಲು ದಾಟಿ ಪ್ರಕೃತಿಗೆ ಮುಖಮಾಡಿ ನಿಲ್ಲುತ್ತೇವೆ. ಮೊದಲ ಬಾರಿಗೆ ದೂರದ ಗುಡ್ಡ ಬೆಟ್ಟಗಳಾಚೆಯ ದಿಗಂತದವರೆಗೂ ನಮ್ಮ ಕಣ್ಣು ಹಾಯುತ್ತದೆ. ಅಲ್ಲಿ ನಾವು ಊರಿನ



ಎಲ್ಲಾ ಮಕ್ಕಳ ಜೊತೆಗೆ ಸಮಷ್ಟಿ ಪ್ರಜ್ಞೆಯ ಒಂದು ಭಾಗ ಮಾತ್ರ. ಮನೆಯೊಳಗಿನ ಮುದ್ದಿನ, ಸೊಕ್ಕಿನ ಅಥವಾ ನಿರ್ಲಕ್ಷ್ಯಕ್ಕೊಳಗಾದ ಮಗುವಲ್ಲ. ಪ್ರಕೃತಿಯನ್ನು ಅರಿಯುವ ಪ್ರಜ್ಞೆಯೊಂದೇ ಉಳಿದಿರುತ್ತದೆ. ಅದರ ಇಂಚಿಂಚೂ ಜಾಗವನ್ನು ಮುಟ್ಟಿ ತಟ್ಟಿ ಅನುಭವಿಸಲು ಜೀವ ತುಡಿಯುತ್ತಿರುತ್ತದೆ. ನೆಲ, ಕಾಡು, ಬಿಸಿಲು, ಮಳೆ, ಗಾಳಿ, ನೀರು ಎಲ್ಲದರಲ್ಲೂ ಮೈ ಮನಸ್ಸು ತೆರೆದುಕೊಳ್ಳಲು ಹಾತೊರೆಯುತ್ತದೆ. ಪ್ರತಿಯೊಂದು ಮರದ, ಗಿಡದ, ಬಳ್ಳಿಗಳ, ಮುಳ್ಳು ಕಂಟಿಗಳ ಎಲೆಗಳ, ಕುಡಿಗಳ ರುಚಿಯೂ ನಮ್ಮ ನಾಲಗೆಗೆ ತಿಳಿದಿರುತ್ತದೆ. ಹಾಗೇ ಕಾಯಿ, ಹಣ್ಣು, ಹೀಚುಗಳ ರುಚಿಯೂ, ಅದೇಕೆ, ಕೆಲಮೊಮ್ಮೆ ವಿಷಪೂರಿತ ಕಾಯಿಗಳ ರುಚಿಯನ್ನೂ ನಾಲಗೆ ಪರೀಕ್ಷಿಸಿದ್ದಿದೆ. ಹೊಳೆ, ಕೆರೆ, ಮಳೆ ನೀರಿನಲ್ಲಿ ಆಡಲು ಹಾತೊರೆಯುವ ಜೀವವು ಹುಲ್ಲಿನ ಬಣಬೆಗಳ ಬೆಚ್ಚಗಿನ ಮಡಿಲಲ್ಲಿ ಆಡುವಾಗ ಕೂಡು ಕುಟುಂಬದ ಹಿಂಡು ಮಕ್ಕಳನ್ನು ಕತ್ತಲೆಯಾಗುತ್ತಿದ್ದಂತೆ ಮನೆಯೊಳಗೆ ಕರೆತರಲು ಪಾಲಕರು ಕೋಲು ಹಿಡಿದು ಕಣ್ಣು ಕೆಂಪಗೆ ಮಾಡಿಕೊಂಡೇ ಬರಬೇಕಿತ್ತು.

ನಾವು ಬಾಲ್ಯ ಕಾಲದಲ್ಲಿ ಕಂಡ ಪ್ರಕೃತಿಗೂ ಇವತ್ತು ಅಂದರೆ ಕೇವಲ ೨೦–೩೦ ವರ್ಷಗಳ ಅವಧಿಯಲ್ಲಿ ಕಾಣುತ್ತಿರುವ ಪ್ರಕೃತಿಗೂ ಅಗಾಧವಾದ ವ್ಯತ್ಯಾಸವಿದೆ. ನಮ್ಮ ಪೂರ್ವಜರ ಶ್ರಮ ಜೀವನದಿಂದ ಕೂಡಿಟ್ಟಿದ್ದ ಸಮೃದ್ಧಿಯ ಆಧಾರದ ಮೇಲೆದ್ದ ಆರ್ಥಿಕ ಬದಲಾವಣೆಯೊಟ್ಟಿಗೆ ಪಾಶ್ಚಿಮಾತ್ಯರಿಂದ ಎರವಲು ಪಡೆದು ಕಡ್ಡಾಯವಾಗತೊಡಗಿದ್ದ ಶಿಕ್ಷಣ ಪದ್ಧತಿಯಲ್ಲಿ ಅಡಕವಾಗಿರುವ ಗರ್ವವೂ, ಸ್ವಾರ್ಥವೂ ಸೇರಿಕೊಂಡು ಹುಟ್ಟಿಕೊಂಡ ಮೌಲ್ಯಗಳು ಭೂತಕಾಲದೊಟ್ಟಿಗಿನ ನಮ್ಮ ಸಂಬಂಧಗಳನ್ನು ನಿರ್ಲಕ್ಷಿಸಿ, ಕತ್ತರಿಸಿ ಹಾಕಿರುವುದರಿಂದಲೇ ನಾವಿಂದು ಆಧ್ಯಾತ್ಮಿಕ ನಷ್ಟದ ಮಾತುಗಳನ್ನು ಆಡುತ್ತಿದ್ದೇವೆ. ನಮ್ಮ ಪೂರ್ವಿಕರು ಎಂದೂ ವಿಷಣ್ಣತೆಯ ಮಾತನ್ನು ಆಡಿರಲಾರರು.

'ಎಂಥ ಕಷ್ಟಗಳ ನಡುವೆಯೂ, ಹೊರೆಗಟ್ಟಳೆ ಕೆಲಸಗಳ ನಡುವೆಯೂ, ಐದಾರು ಮಕ್ಕಳನ್ನು ಹೆತ್ತು, ಹೊತ್ತು, ಸಾಕುವಾಗ ಅದೆಷ್ಟು ಉತ್ಸಾಹವಿರುತಿತ್ತು, ಅದೆಷ್ಟು ನೆಮ್ಮದಿಯಿತ್ತು' ಎಂದು ನಮ್ಮ ತಾಯಿ ಈಗ ಮನೆ ಭಣಗುಟ್ಟುತ್ತಿದೆ ಎಂಬುದಕ್ಕೆ ಹೋಲಿಸಿ ಹೇಳುತ್ತಿರುತ್ತಾರೆ. ನಲವತ್ತರಿಂದ ಎಪ್ಪತ್ತನೇ ದಶಕದ ಒಳಗೆ ಹುಟ್ಟಿದ ನಾವು ಇಂಥ ಬದಲಾವಣೆಗಳ ವಾಹಕರೂ ಹೌದು, ಬಲಿಗಳೂ ಹೌದು. ನೋಡನೋಡುತ್ತಿದ್ದಂತೆಯೇ ಬೊಗಸೆಯಲ್ಲಿ ಹಿಡಿದಿದ್ದ ನೀರು ಸೋರಿ ಹೋಗುವಂಥದ್ದರ ಅನುಭವ ನಮಗೆ.

ಇಲ್ಲಿ, ಇದುವರೆಗೂ ನಾನು ವಿವರಿಸಿದ ಮಲೆನಾಡಿನ ಪ್ರದೇಶವು ಕುವೆಂಪು ತಮ್ಮ 'ಕಾನೂರು ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳಲ್ಲಿ ವಿವರಿಸಿದ್ದ ಪ್ರಕೃತಿಯ ಭಾಗವೇ ಆಗಿದೆ. ಆಗ ಮೆಲುಗಾಳಿಯಾಗಿ ಕ್ರಿಶ್ಚಿಯನ್ ಮಿಷನರಿಗಳು ನಡೆಸುತ್ತಿದ್ದ ಸ್ಕೂಲಿನ ರೂಪದಲ್ಲಿಯೂ, ವೇಗವಾಗಿ ಬಂದು ಮುಗ್ಗರಿಸಿ ಬಿದ್ದ ಸೈಕಲ್ ಸವಾರನ ರೂಪದಲ್ಲಿಯೂ ಬೀಸಿದ್ದ ಬದಲಾವಣೆಯು ಈಗ ಬಿರುಗಾಳಿಯಾಗಿ ಇಡೀ ಪ್ರದೇಶವನ್ನು ಆವರಿಸಿ ಬಿಟ್ಟಿದೆ. ಸೈಕಲ್ ಸವಾರನ ವೇಗವನ್ನು ಕರುಣೆಯಿಂದಲೂ, ಕಾಳಜಿಯಿಂದಲೂ ಕಂಡ ಹೂವಯ್ಯನ ಮನಸ್ಸು ಈಗಿನ ಪ್ರತಿಷ್ಠಿತ ಕಾರುಗಳ ಪೈಪೋಟಿಯ ವೇಗವನ್ನು ಕಂಡು ಏನನ್ನುತ್ತಿತ್ತೋ!

ಈಗ ಮಲೆನಾಡಿನ ಉದ್ದಗಲಕ್ಕೆ ಸಂಚರಿಸಿದರೆ ದಟ್ಟ ಕಾಡೆನ್ನುವುದು ಕೇವಲ ಕೆಲವು ಪಾಕೆಟ್‌ಗಳಲ್ಲಿ ಮಾತ್ರ ಕಾಣಬಹುದಾಗಿದೆ. ಸಾವಿರ ಸಾವಿರ ಎಕರೆ ಗೋಮಾಳಗಳು ಅಕೇಶಿಯಾ ನೆಡುತೋಪಾಗಿ ಸ್ಮಶಾನದಂಥ ವಾತಾವರಣವನ್ನು ಹೊತ್ತು ನಿಂತಿದ್ದು, ಒಂದು ಎಳೆ ಹುಲ್ಲೂ ಹುಟ್ಟದಂತಹ, ಒಂದು ಜೀವಿಯೂ ಅದರಡಿಯಲ್ಲಿ ಬದುಕದಂತಾಗಿ, ಅಷ್ಟೂ ಪ್ರದೇಶದಲ್ಲಿ ಜೀವ ವೈವಿಧ್ಯತೆಯ ಕಗ್ಗೊಲೆಯಾಗಿ ಹೋಗಿದೆ. ಆ ಗೋಮಾಳಗಳನ್ನು ಆಶ್ರಯಿಸಿದ್ದಂತಹ ಮಲೆನಾಡು ಗಿಡ್ಡದಂತಹ ಗೋವಿನ ತಳಿಗಳು ಪ್ರತಿಶತ ೯೦ ರಷ್ಟು ಕಾಣೆಯಾಗಿವೆ. ಎಲ್ಲ ನೀರಿನ ಸೆಲೆಗಳು ಬತ್ತಿಹೋಗುವುದರಲ್ಲಿವೆ. ನಾವು ಚಿಕ್ಕವರಿದ್ದಾಗ ಕಂಡಿದ್ದ ಆರು ತಿಂಗಳ ಜಡಿಮಳೆಯು ಈಗ ಕೇವಲ ಒಂದೋ ಎರಡೋ ತಿಂಗಳಿಗಿಳಿದು ಅದೂ ಅಕಾಲಿಕವಾದ ಹುಚ್ಚು ಮಳೆಯ ರೂಪ ತಾಳುತ್ತಿದೆ. ಇನ್ನು ನಾವುಗಳು, ನಮ್ಮ ಪೂರ್ವಿಕರು ಪೂಜಿಸುತ್ತಿದ್ದ ಚೌಡಿ, ಜಕ್ಕಿಣಿ, ಪಂಜುರ್ಲಿಯಂಥ ದೈವಗಳನ್ನೂ ಬಿಟ್ಟಿಲ್ಲ. ಅವುಗಳು ಆಶ್ರಯಿಸಿಕೊಂಡಿದ್ದ ಕಾಡು, ಗುಡ್ಡ, ಮರ, ನದಿ, ಕೊಳ್ಳಗಳ ಸಮೇತ ಅವುಗಳನ್ನು ನಿವಾರಿಸಿಕೊಂಡಿದ್ದೇವೆ. ಹಿರಿಯರ ನಡೆನುಡಿಗಳನ್ನು ಅಪಹಾಸ್ಯಮಾಡಿ ಕಿತ್ತೊಗೆಯುತ್ತಿರುವುದಂತೂ ದಿನ ನಿತ್ಯ ನಡೆಯುತ್ತಿದೆಯಲ್ಲ.

ಕೆಲವು ವರ್ಷಗಳ ಹಿಂದೆ, ಜಮೀನು ವಿಸ್ತರಣೆಯ ಕಾರ್ಯದಲ್ಲಿ ತೊಡಗಿದ್ದ ನಮ್ಮ ದಾಯಾದಿ ಅಣ್ಣನೊಬ್ಬ ಗುಡ್ಡದಿಂದ ಇಳಿದು ಬರುತ್ತಿದ್ದ ನೀರಿಗೆ ಅಡ್ಡಗಟ್ಟಣೆ ಹಾಕಿದ. ಆ ನೀರು ಬೇರೊಂದು ಕಡೆ ರಭಸದಿಂದ ನುಗ್ಗಿ ಅಲ್ಲೇ ಎಷ್ಟೋ ವರ್ಷಗಳಿಂದ ಪೂಜಿಸಲ್ಪಡುತ್ತಿದ್ದ 'ಚೌಡಿ' ಕಲ್ಲನ್ನು ಕೊಚ್ಚಿಕೊಂಡು ಹೋಗಿತ್ತು. ಇವತ್ತಿಗೂ ನಮ್ಮ ತಾಯಿ ದಾಯಾದಿ ಮನೆಗಳಿಗೆ ಅಲೆದು ಎಲ್ಲ ಕಷ್ಟಕೋಟಲೆಗಳಿಗೂ, ಅದೇ ಕಾರಣವೆಂದೂ, ಚೌಡಿಯನ್ನು ಬೇಗನೇ ಪುರ್ನಪ್ರತಿಷ್ಠಾಪನೆ ಮಾಡಬೇಕೆಂದೂ ಹೇಳಿಕೊಂಡು ತಿರುಗುತ್ತಿದ್ದಾರೆ. ಕಷ್ಟ ಕೋಟಲೆಗಳಿಗೆ ಹೆದರಿ ಕೆಲವರು ಅದಕ್ಕೆ ಮನಸ್ಸೂ ಕೊಟ್ಟಿದ್ದಾರೆ.

ನಮ್ಮ ಪರಿಸರದ ಸ್ವಾಸ್ಥ್ಯವೂ ನಮ್ಮ ಮಾನಸಿಕ ಸ್ವಾಸ್ಥ್ಯವು ಒಂದೇ ಎಂದು ನಾನು ಹೇಳ ಹೊರಟಿರುವುದೂ ನಮ್ಮ ತಾಯಿ ದಾಯಾದಿ ಮಕ್ಕಳೊಂದಿಗೆ ಹೇಳಿಕೊಂಡು ತಿರುಗುತ್ತಿರುವುದೂ ಒಂದೇ ಭಾಷೆ ಎಂದು ಅನ್ನಿಸುತ್ತಿದೆ ನನಗೆ.

***

ಈಗಲೂ ವರ್ಷಕ್ಕೊಂದೋ ಎರಡೋ ಬಾರಿ ಊರಿಗೆ ಹೋಗುವ ಪರಿಪಾಠವಿಟ್ಟುಕೊಂಡಿರುವ ನನಗೆ ಪ್ರತಿ ಸಾರಿಯೂ ಒಂದೊಂದು ಅಘಾತ ಕಾದಿರುತ್ತದೆ. ಅದರಲ್ಲಿ ಎರಡು ಘಟನೆಗಳು ನನಗೆ ಈ ಲೇಖನ ಬರೆಯಲು ಒತ್ತಾಯಿಸಿದವು ಎಂದು ಹೇಳಬಹುದು.

ಎರಡು ವರ್ಷಗಳ ಹಿಂದೆ ಊರಿನಲ್ಲಿ ಅಪ್ಪ ಅಮ್ಮಂದಿರೊಟ್ಟಿಗೆ ಕುಳಿತು ಊಟ ಮಾಡುತ್ತಿರುವಾಗ, ಸದ್ಯದಲ್ಲೇ ಚಿಕ್ಕ ಈಶ್ವರನ ಗುಡಿಯ ಜಾಗದಲ್ಲಿ ದೊಡ್ಡದೊಂದು ದೇವಸ್ಥಾನ ಆಗುವುದರಲ್ಲಿದೆ ಎಂದು ನಮ್ಮ ತಂದೆ ಹೆಮ್ಮೆಯಿಂದ ಹೇಳಿಕೊಂಡಿದ್ದರು. 'ದೇವಸ್ಥಾನದ ಗೀಳಿದ್ದರೆ ಅಷ್ಟು ಚೆಂದದ, ಪುರಾತನವಾದ ಈಶ್ವರನ ಗುಡಿಯನ್ನೇ ಬೀಳಿಸಿ ಬೇರೊಂದು ಕಟ್ಟಬೇಕೆ? ಬೇರೆಲ್ಲಾದರೂ, ಕಟ್ಟಿಕೊಳ್ಳಬಹುದಲ್ಲ, ಎರಡೆರಡು ದೇವಸ್ಥಾನಗಳಾಗುತ್ತವಲ್ಲ' ಎಂದು ಪ್ರತಿಕ್ರಿಯಿಸಿ ನಂತರ ಅದನ್ನು ಅಲ್ಲೇ ಮರೆತು ಬಿಟ್ಟಿದ್ದೆ. ವಿಷಯ ಎಷ್ಟು ಗಂಭೀರ ಸ್ವರೂಪದ್ದಾಗಿತೆಂದು ಮತ್ತೊಮ್ಮೆ ಊರಿಗೆ ಹೋದಾಗಲೇ ತಿಳಿದದ್ದು.



ಒಂದು ವರ್ಷದ ಅವಧಿಯಲ್ಲಿ, ಹಳ್ಳದ ಮಗ್ಗುಲಲ್ಲಿ ಪ್ರಶಾಂತವಾಗಿ, ಎಷ್ಟೋ ವರ್ಷಗಳಿಂದ ಪೂಜಿಸಲ್ಪಡುತ್ತಿದ್ದ ಸುಂದರವಾದ ಚಿಕ್ಕ ಗುಡಿಯ ಬದಲು ದೊಡ್ಡದೊಂದು ಕಾಂಕೀಟ್ ಗೋರಿಯಂತಹ ದೇವಸ್ಥಾನ




**ಕುವೆಂಪು ಜನ್ಮಸ್ಥಳ ಸ್ಮಾರಕದ ಹೊರ–ಒಳಗಿನ ಚಿತ್ರಗಳು**

ತಲೆಯೆತ್ತಿ ನಿಂತಿತ್ತು. ಒಳಗಿನಿಂದ ಧ್ವನಿಮುದ್ರಿತ ಮಂತ್ರಘೋಷ ಕೇಳಿಸುತಿತ್ತು. ಪ್ರತಿ ಬಾರಿಯೂ ಆ ದಾರಿಯಲ್ಲಿ ಈಗ ಹಾದು ಹೋಗುವುದೆಂದರೆ ತುಂಬ ಸಂಕಟವಾಗುತ್ತದೆ ಮನಸ್ಸಿಗೆ.

ಈಗ್ಗೆ ಒಂದು ಹದಿನೈದು ದಿನಗಳ ಹಿಂದೆ ಬಸ್ಸಿಳಿದು ಊರ ದಾರಿ ಹಿಡಿದವಳಿಗೆ ಮತ್ತೊಂದು ಆಶ್ಚರ್ಯ ಕಾದಿತ್ತು. ಊರ ಹಳ್ಳಿಯ ರಸ್ತೆಯನ್ನು ಎರಡೂ ಬದಿಯಲ್ಲಿ ಅಗಲಗೊಳಿಸಲಾಗಿತ್ತು. ಅಗಲವೆಂದರೆ ರಾಷ್ಟ್ರೀಯ ಹೆದ್ದಾರಿಗಳನ್ನು ಅಗಲಗೊಳಿಸುವ ಹಾಗೆ! ಆಚೆ ಹದಿನೈದು ಅಡಿ, ಈಚೆ ಹದಿನೈದು ಅಡಿಗಳಷ್ಟು! ಕೆಲವರ ಕಾಂಪೌಂಡಗಳೂ, ಹಿತ್ತಿಲಿನ ಅಂಚುಗಳೂ ಬಲಿಯಾಗಿದ್ದು ಅಲ್ಲಿಯೇ ಕಂಡಿತು. ಮುಂದೆ ಹೋಗುತ್ತಿದ್ದಂತಯೇ ಬಲಕ್ಕೆ ಒಬ್ಬರ ಗದ್ದೆಯೂ, ಎಡಕ್ಕೆ ಒಂದು ತೋಟದ ಅಂಚೂ ರಸ್ತೆಯಾಗಿ ಹೋಗಿತ್ತು. ಅರೆ, ದೇವಸ್ಥಾನ ಕಟ್ಟಿಸಿದಾತ ಇಷ್ಟರವರೆಗೂ ಮುಂದುರೆದು ಬಿಟ್ಟನೇ ಎಂದು ಆಶ್ಚರ್ಯ ಪಡುತ್ತಾ ಹೋದೆ. ರಸ್ತೆ ದೇವಸ್ಥಾನ ದಾಟಿದ ಮೇಲೂ ಆದೇ ರೀತಿ ಮುಂದುವರೆದಿತ್ತು. (ದೇವಸ್ಥಾನವಿದ್ದಲ್ಲಿ ಮಾತ್ರ ರಸ್ತೆ ಕಿರಿದಾಗಿಯೇ ಇದ್ದು ಅದಕ್ಕಾಗಿ ಈಚೆ ಮಗ್ಗುಲಿನ ತೋಟವೊಂದು ಬಲಿಯಾಗಿತ್ತು).

ಸ್ವಲ್ಪ ದೂರದ ನಂತರ, ವಿಸ್ತರಿಸಿಕೊಂಡಿದ್ದ ರಸ್ತೆಯನ್ನು ಬಿಟ್ಟು ಅಲ್ಲೇ ಬಲಕ್ಕೆ ಅಗಚುವ ದಾರಿ ಹಿಡಿದು ಮನೆ ತಲುಪಿದೆ. ರಸ್ತೆ ಅಗಲಗೊಂಡಿದ್ದು ಲಿಂಕ್ ರೋಡ್ ನಿರ್ಮಿಸಲಿಕ್ಕಾದರೂ, ಕುವೆಂಪು ಜನ್ಮ ಸ್ಥಳ ಅಭಿವೃದ್ಧಿ ಸಮಿತಿಯವರ ಅತ್ಯುತ್ಸಾಹದಿಂದ ಅಚೆ ಈಚೆ ಒಂಭತ್ತು ಅಡಿಗಳಷ್ಟು ವಿಸ್ತರಣೆಗೆ ಬದಲಾಗಿ ಮುಖ್ಯ ರಸ್ತೆಯಿಂದ ಹಿರೇಕೊಡಿಗೆವರೆಗೆ ಹದಿನೈದು ಅಡಿಗಳಷ್ಟು ವಿಸ್ತರಣೆ ಕಂಡಿತ್ತು ನಮ್ಮ ಹಳ್ಳಿ ರಸ್ತೆ. ಮರುದಿನ, ಅಲ್ಲೇ ಒಂದು ಫರ್ಲಾಂಗಿನಷ್ಟು ದೂರದಲ್ಲಿ ಗದ್ದೆ ಕೋಗನ್ನು ದಾಟಿದ್ದರೂ ತಲುಪಬಹುದಾಗಿದ್ದ ಹಿರೇಕೊಡಿಗೆಗೆ ಮತ್ತೆ ಅದೇ ರಸ್ತೆ ಹಿಡಿದು ಹೊರಟೆ. ದಾರಿಯುದ್ದಕ್ಕೂ ಮತ್ತಷ್ಟು ತೋಟ ಗದ್ದೆಗಳು ಬಲಿಯಾಗಿದ್ದಿದ್ದು ಕಂಡಿತು. ನೀರಿನ ಪೈಪನ್ನು ಜೆಸಿಬಿ ಕಿತ್ತು ಒಗೆದಿದ್ದುದರಿಂದ ನೀರು ಹೊರಲು ದಾರಿಯುದ್ದಕ್ಕೂ ಹೆಂಗಸರು ಹೊರಟಿದ್ದರು. ಅಲ್ಲೇ ದರೆಯಂಚಿನಲ್ಲಿ ಕಟ್ಟಿಕೊಂಡಿದ್ದ ದಲಿತ ಕುಟುಂಬದ ಒಂದಷ್ಟು ಸಾಲು ಮನೆಗಳಲ್ಲಿ ಮೂರ್‍ನಾಲ್ಕು ಮನೆಗಳ ಅಂಗಳವನ್ನೇ ರಸ್ತೆಯು ನುಂಗಿ ಮುಂದುವರೆದಿತ್ತು! ಹಿಂದೆ ದರೆಯೂ, ಮುಂದೆ ರಸ್ತೆಯೂ ಆಗಿ ಮಧ್ಯೆ ಸಿಕ್ಕಿ ಹಾಕಿಕೊಂಡಿದ್ದವರ ಪಾಡು ನೋಡುತ್ತಾ ಮುಂದೆ ಹೋದವಳನ್ನು ರಸ್ತೆಯು ಕುವೆಂಪು ಅವರ ಜನ್ಮ ಸ್ಥಳಕ್ಕೆ ತಂದು ನಿಲ್ಲಿಸಿತ್ತು. ತಲೆಯೆತ್ತಿ ನೋಡಿದೆ. ಒಂದು ದೊಡ್ಡ ಗುಡ್ಡವನ್ನು ಅಡ್ಡಡ್ಡಲಾಗಿ ಜೆಸಿಬಿಯಿಂದ ಬಗೆದು ಬಯಲು ಮಾಡಿದ್ದ

ಜಾಗದೊಳ್ಳೊಂದು ಕಟ್ಟಡ ತಲೆ ಎತ್ತಿ ನಿಂತಿತ್ತು. ಬಸ್‌ಸ್ಟ್ಯಾಂಡ್‌ಗಳಲ್ಲಿನ ಟಾಯ್ಲೆಟ್ ಕಟ್ಟಡದ ರೂಪದಲ್ಲಿದ್ದ ಅದು ಗಾತ್ರದಲ್ಲಿ ಮಾತ್ರ ಒಂದಂತಸ್ತಿನದಾಗಿತ್ತು. ಅದರ ಹಿಂದೆ ಅರ್ಧಕ್ಕೆ ಸೀಳಿಸಿಕೊಂಡು ಕೆಂಪಗೆ ನಿಂತ ಉಳಿದರ್ಧ ಗುಡ್ಡದ ಮೇಲೆ ನಿಂತ ಅಳಿದುಳಿದ ಹೆಮ್ಮರಗಳು ಇಡೀ ದೃಶ್ಯವನ್ನು ನೋಡಿ ಮೂಕರಂತೆ ಅಸಹಾಯಕತೆಯಲ್ಲಿ ನಿಂತಿದ್ದವು.

ತಕ್ಷಣ ನನಗೆ ಕುವೆಂಪು ಅವರು 'ಹೆಗ್ಗಡತಿ'ಯಲ್ಲಿ ಹೂವಯ್ಯ ತನ್ನ ಮನೆ ಹೇಗೆ ಶೃಂಗರಿಸಿಕೊಂಡ ಎಂದು ವಿವರಿಸಿದ ಭಾಗ ನೆನಪಾಯಿತು:

> 'ಕೆಳಕಾನೂರಿನಲ್ಲಿ ಹುಲ್ಲಿನ ಮನೆಯು ಪುಟ್ಟಣ್ಣನ ಅನವರತ ಶ್ರಮದಿಂದಲೂ ಹೂವಯ್ಯನ ಕಾಲಾಭಿರುಚಿಯಿಂದಲೂ ನೋಡುವುದಕ್ಕೆ ಒಂದು ಕುಟೀರದಂತೆ ಮನೋಹರವೂ ಆಯಿತು.
>
> ಮನೆಗೆ ಕಣದ ಬಣಬೆಯಲ್ಲಿದ್ದ ನೆಲ್ಲು ಹುಲ್ಲನ್ನು ಹೊದೆಸಿ ಮಾಡಿನ ಅಂಚನ್ನು ಸಮನಾಗಿ ಕತ್ತರಿಸಿದ್ದರಿಂದ ಅದಕ್ಕೆ ಏನೋ ಒಂದು ಹೊಸತನ ಬಂದಿತ್ತು. ಮೊದಲು ಸೆಗಣಿ ಮೆತ್ತಿದ್ದ ಗೋಡೆಗಳಿಗೀಗ ಕೆಮ್ಮಣ್ಣು ಬಳಿದು ನುಣುಪುಗೈದು ಬಿಳಿಯ ಜೇಡಿ ಬಳಿದುದರಿಂದ ಆಹ್ಲಾದಕರವಾಗಿ ಹೊಸ ಕಾಂತಿ ಮೆರೆದಿತ್ತು. ನೂರಾರು ಚಿತ್ರಪಟಗಳು ಗೋಡೆಗಳನ್ನಲಂಕರಿಸಿದವು. ಜಗುಲಿಯ ನಡುವೆ ಮೇಜು ಕುರ್ಚಿಗಳನ್ನು ಇಟ್ಟು ಅದಕ್ಕೆ ಸಮೀಪ ಬೀರುವನ್ನಿಟ್ಟು ಗ್ರಂಥ ರಾಶಿಯನ್ನು ಹೂವಯ್ಯನು ಅಂದವಾಗಿ ಜೋಡಿಸಿದನು. ಅಂತೂ ಕೆಳಕಾನೂರಿನ ಹುಲ್ಲಿನ ಮನೆ ಕಾನೂರಿನ ಹೆಂಚಿನ ಮನೆಯನ್ನು ಗಾತ್ರ ಬಲಗಳಲ್ಲಿ ವಿನಾ ಉಳಿದೆಲ್ಲದರಲ್ಲಿಯೂ ಮೂದಲಿಸುವಂತಾಯಿತು. ಗ್ರಂಥ ಸಮೂಹ ಬಂದು ಸೇರಿದ ಮೇಲೆ ಹುಲ್ಲು ಮನೆಯೋ ಪರ್ಣ ಕುಟೀರದಂತೆ ಶಾಂತಿಮಯವಾಗಿ ಕಂಡುಬಂತು.'

ಕುವೆಂಪು ಅವರು ಮಲೆನಾಡಿಗಿತ್ತ ತಮ್ಮ ಕೊನೆಯ ಭೇಟಿಗಳಲ್ಲಿ ಎಂದೂ ಕುಪ್ಪಳ್ಳಿಗೆ ಹೋಗಲಿಚ್ಛಿಸದೆ ಹಿರೇಕೊಡಿಗೆಗೇ ಹೋಗಬೇಕೆನ್ನುತ್ತಿದ್ದರಂತೆ. ಅಂಥ ಕೊನೆಯ ಭೇಟಿಯಲ್ಲಿ ಅವರು ಹಿಂದೆ ತಮ್ಮ ತಾಯಿಯ ಮನೆಯಿದ್ದ ಜಾಗದಲ್ಲಿ ಕಟ್ಟಿದ್ದ ಒಂದು ವೃತ್ತಾಕಾರದ ಪುಟ್ಟ ಮಂದಿರದಂತಿರುವ ಕಟ್ಟಡದಲ್ಲಿ ಕುಳಿತು ಕೆಲ ಸಮಯ ಧ್ಯಾನಸ್ಥರಾಗಿದ್ದರಂತೆ. ನಂತರ ತಮ್ಮ ನೆಚ್ಚಿನ ಸ್ನೇಹಿತನೂ, ಅನುಯಾಯಿಯೂ ಮತ್ತು ಆ ಇಡೀ ಪ್ರಾಂತ್ಯಕ್ಕೆ ಗೌರವಾನ್ವಿತರೂ ಆಗಿದ್ದ ಅಲಿಗೆ ಪುಟ್ಟಯ್ಯ ನಾಯಕರವರಲ್ಲಿ "ಕುವೆಂಪು ಪ್ರತಿಷ್ಠಾನ" ಎಂದಿರುವ ಹೆಸರನ್ನು 'ವಿಶ್ವ ಮಾನವ ಪ್ರತಿಷ್ಠಾನ' ಎಂದು ಬದಲಿಸಿ ಅಲ್ಲಿ ಅರ್ಥಪೂರ್ಣ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗಿ ಎಂದಿದ್ದರಂತೆ. 'ನಮ್ಮ ತಂದೆಯವರು ತಮ್ಮ ಕೊನೆಯವರೆಗೂ ತಮ್ಮ ಹಾಗೂ ತಮ್ಮ ನೆಚ್ಚಿನ ಗುರುವಿನ ಆದರ್ಶಗಳನ್ನು ನನಸಾಗಿಸುವ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಲೇ ತೀರಿಕೊಂಡರು' ಎಂದು ಎಲ್ಲವನ್ನು ನೋವಿನಿಂದ ನೆನೆಸಿಕೊಳ್ಳುತ್ತಾರೆ ಪುಟ್ಟಯ್ಯನಾಯ್ಕರವರ ಮಗ ಅಲಿಗೆ ವಿವೇಕಾನಂದ ಅವರು.



'ಕುವೆಂಪು ಅವರ ಬಾಲ್ಯದ ಮನೆ (ಕವಿ ಮನೆ)



**ಕುಪ್ಪಳಿಯ ಕವಿಶೈಲದಲ್ಲಿನ ಕುವೆಂಪು ಸ್ಮಾರಕ**

'ಯಾರಾದರೂ ನಾಲ್ಕು ಜನರ ಸಲಹೆಯಂತೆ ಯಾವುದಾದರೂ ಒಬ್ಬ ವಾಸ್ತು ಶಿಲ್ಪಿಯನ್ನು ಕರೆಸಿ ಇರುವ ಜಾಗವನ್ನು ಇರುವಂತೆಯೇ ಉಳಿಸಿಕೊಂಡು ಒಂದು ಅಚ್ಚುಕಟ್ಟಾದ ಕಟ್ಟಡವನ್ನು ಕಟ್ಟಬಹುದಿತ್ತಲ್ಲ, ನೀವೆಲ್ಲಾ ತಿಳುವಳಿಕಸ್ಥರಿದ್ದಾಗಲೂ ಇಂಥ ಅಧ್ವಾನಕ್ಕೆ ಹೇಗೆ ಅವಕಾಶ ಮಾಡಿಕೊಟ್ಟಿರಿ' ಎಂದು ವಿವೇಕಾನಂದವರನ್ನು ಕೇಳಿದೆ. ರಸ್ತೆಗೇ ಇಷ್ಟೊಂದು ವೈಭವಕ್ಕೆ ಹೊರಟವರು ಕೊನೆ ಪಕ್ಷ ಈ ಜಾಗವನ್ನು ಕುಪ್ಪಳ್ಳಿ ಮನೆಯ ರೀತಿಯಲ್ಲಾದರೂ ರೂಪಿಸಿರಬಹುದೆಂದು ನಿರೀಕ್ಷಿಸಿ ಬಂದಿದ್ದ ನನಗೆ ಪೂರಾ ನಿರಾಸೆಯಾಗಿತ್ತು. (ಕುಪ್ಪಳ್ಳಿಯನ್ನೇ ಅತಿ ರಂಗಿನ ಮನೆಯಾಗಿ ಮಾರ್ಪಾಡು ಮಾಡಿದ್ದೂ ಮತ್ತು ಹಣದ ಹೊಳೆಯನ್ನೆ ಹರಿಸಿ ಕವಿಶೈಲದಲ್ಲಿ ಕೆ.ಟಿ. ಶಿವಪ್ರಸಾದರಂತಹ ಕಲಾವಿದರು ದೊಡ್ಡ ಕಲ್ಲುಗಳ ಶಿಲ್ಪಗಳನ್ನು ನಿಲ್ಲಿಸಿ ಹಸ್ತಕ್ಷೇಪ ಮಾಡಿದ್ದರ ಬಗ್ಗೆ ನನಗೆ ತೀವ್ರ ಆಕ್ಷೇಪಣೆ ಇದ್ದರೂ)

'ಇಲ್ಲಿಯ ಜಿಲ್ಲಾ ಪಂಚಾಯತಿ ಸದಸ್ಯರೂ, ಶೃಂಗೇರಿ ಶಾಸಕರು, ಜಿಲ್ಲಾಧಿಕಾರಿಯ ಅಧ್ಯಕ್ಷತೆಯಲ್ಲಿ ಕುವೆಂಪು ಜನ್ಮ ಸ್ಥಳ ಅಭಿವೃದ್ಧಿ ಸಮಿತಿ ಎಂದು ಮಾಡಿಕೊಂಡು ಒಂದು ಕೋಟಿ ರೂ. ಗಳ ಅನುದಾನ ತೆಗೆದುಕೊಂಡು ಇಲ್ಲಿ ಚಟುವಟಿಕೆಯನ್ನು ಶುರು ಮಾಡಿದರು. ನನ್ನನ್ನು ನಾಮಕಾವಸ್ಥೆಗೆ ಸದಸ್ಯನನ್ನಾಗಿ ಮಾಡಿಕೊಂಡಿದ್ದೂ ಹೌದು. ಆದರೆ ಹಣ ಬಿಡುಗಡೆಯಾದ ನಂತರ ಒಂದೂ ಸಭೆಯನ್ನೂ ಕರೆದಿಲ್ಲ' ಎಂದು ಅಸಹಾಯಕತೆಯಿಂದ ವಿವೇಕಾನಂದ ಅವರು ಹೇಳಿಕೊಂಡರು.

ಹಿಂತಿರುಗಿ ಅದೇ ರಸ್ತೆಯಲ್ಲೇ ಹೊರಟೆ. ಅವೇ ಜೋಡಿ ಗುಡ್ಡಗಳ ತಟದಲ್ಲೇ ರಸ್ತೆ ಇದ್ದುದರಿಂದ, ಆ ಗುಡ್ಡಗಳೀಗ ಮತ್ತಷ್ಟು ಎತ್ತರವಾಗಿ ಅಗಾಧವಾಗಿಯೂ ಕಂಡವು. ಈ ದಿಕ್ಕಿನಿಂದ ಅವು ತುಸು ಒಂದರ ಹಿಂದೊಂದು ಸರಿದು ನಿಂತಂತೆ ಕಾಣುತ್ತಿದ್ದವು. ಎದುರಿಗಿನ ಗುಡ್ಡವು ತನ್ನ ಮೈಯನ್ನು ಬಗೆಸಿಕೊಂಡು ಕೆಂಪಗೆ ನಿಂತಿದ್ದನ್ನು ನೋಡಿ, ಈ ಗುಡ್ಡಗಳು, ಕಟುಕರ ಮನೆಯಲ್ಲಿ ತಮ್ಮ ಜೊತೆಗಾರ ವಧೆಯಾಗಿದ್ದನ್ನು ಕಂಡು ಒಂದರ ಹಿಂದೊಂದು ಬೆಬ್ಬಳಿಸಿ ಸೆಟೆದು ನಿಂತ ಪ್ರಾಣಿಗಳಂತೆ ಕಂಡವು ಆ ಕ್ಷಣದಲ್ಲಿ.

ವಾಪಾಸು ಬರುವಾಗ ರಸ್ತೆಗಾಗಿ ತಮ್ಮ ಸ್ವತ್ತನ್ನು ಕಳೆದುಕೊಂಡವರ್‍ಯಾರೂ ಪರಿಹಾರಕ್ಕಾಗಿ ಧ್ವನಿಯೇ ಎತ್ತದಿರುವುದನ್ನು ಕಂಡುಕೊಂಡೆ. ಕುವೆಂಪುವಿಗಾಗಿ ಅಷ್ಟಾದರೂ ತ್ಯಾಗ ಮಾಡಬೇಕೆಂದು ದೊಡ್ಡ ಭಾಷಣವೇ ಆಗಿಹೋಗಿತ್ತಂತೆ ರಸ್ತೆ ಮಾಡುವ ಮೊದಲು! ತ್ಯಾಗ ಎಂದು ವೈಭವೀಕರಿಸಿದ ಮೇಲೆ ಇನ್ನು ಪರಿಹಾರದ ಮಾತೇ ಬರುವುದಿಲ್ಲವಲ್ಲ! 'ನಮ್ಮ ತ್ಯಾಗವೇನು ಮಹಾ ದೊಡ್ಡದು ರಸ್ತೆಗಾಗಿ' ಎಂದು ಹೇಳಿದ್ದವರೆಲ್ಲರೂ ನಂತರ ತಮ್ಮತಮ್ಮೊಳಗೆ ಇವನೊಬ್ಬ ಇಲ್ಲಿ ಹುಟ್ಟಿ ನಮಗೆಲ್ಲ ಎಷ್ಟು ತಾಪತ್ರಯವಾಯಿತು. ಯಾಕಾದರೂ ಇದೇ ಜಾಗದಲ್ಲೇ ಹುಟ್ಟಿದನೋ!' ಎಂದೂ ಮಾತನಾಡಿಕೊಳ್ಳುತ್ತಿದ್ದರಂತೆ.

ರಸ್ತೆಯಲ್ಲಿ ತುಂಗಮ್ಮನವರ ಮಗಳು ಸೀತು ಸಿಕ್ಕಿದಳು. ರಸ್ತೆಗಾಗಿ ಪೂರ್ತಿ ಅಂಗಳವನ್ನೇ ಕಳೆದುಕೊಂಡಿದ್ದಳು. 'ಅಂಗಳವನ್ನೇ ಬಿಟ್ಟುಕೊಡಬೇಕಾಯಿತಲ್ಲ, ಸರಿಯಾದ ಪರಿಹಾರ ಕೇಳಬೇಕಿತ್ತು' ಎಂದು ನಾನು ಹೇಳಿದ್ದಕ್ಕೆ, "ಅಯ್ಯೋ ನನ್ನ ಅಂಗಳವೇನು ಮಹಾಬಿಡಿ,

ರಸ್ತೆ ಎಷ್ಟು ಚೆನ್ನಾಗಿ ಆಗಿದೆಯಲ್ಲಾ" ಎಂದು ಹೇಳಿದ್ದನ್ನು ಕೇಳಿ ಅವಕ್ಕಾದೆ. ಅವಳಿಗೇನು ಗೊತ್ತು ಪಾಪ, ಎಲ್ಲಾದರೂ ಜಿಲ್ಲಾ ಪಂಚಾಯತ್ ಸದಸ್ಯನ ಅಥವಾ ಶಾಸಕನ ಮನೆಯಾಸ್ತಿಯೋ, ಅಂಗಳವೋ, ಯಾವುದಾದರೂ ಒಂದು ಯೋಜನೆಗೆ ಬಲಿಯಾಗಬೇಕಾದ ಸಂದರ್ಭ ಬಂದಿದ್ದರೆ ಆ ಯೋಜನೆಯನ್ನೇ ಬದಲಾಯಿಸಲು ಅವರುಗಳು ಪ್ರಯತ್ನಿಸುತ್ತಿದ್ದರೆಂದು! ಅಂಗಳವನ್ನು ಯಾರಾದರೂ ಬಿಟ್ಟುಕೊಟ್ಟಾರೆಯೇ?

ನೆಹರು ಡ್ಯಾಮ್ ಕಟ್ಟುವ ಉತ್ಸಾಹದಲ್ಲಿದ್ದಾಗ ತಮ್ಮ ಆಸ್ತಿಪಾಸ್ತಿಗಳನ್ನು ಬಿಡಲೊಪ್ಪದ ಜನರನ್ನು ಗದರಿಸಿ ವೇದಿಕೆ ಮೇಲೆ ಕಳುಹಿಸಿದಾಗ. "ನಾವು ದೇಶಕ್ಕಾಗಿ ನಮ್ಮ ಆಸ್ತಿಪಾಸ್ತಿಯನ್ನು ತ್ಯಾಗಮಾಡಲು ಖುಷಿಯಿಂದಲೇ ಒಪ್ಪಿಕೊಂಡಿದ್ದೇವೆ" ಎಂದು ಕಣ್ಣೀರಿಡುತ್ತಲೇ ಹೇಳಿ ನಂತರ ಯಾವ ಪರಿಹಾರವಿಲ್ಲದೆ ಕಣ್ಮರೆಯಾಗಿ ಹೋದ ಸಹಸಾರು ಜನರು ನೆನಪಾದರು...


ತನ್ನ ಅಂಗಳದ ಮಹತ್ವವೇ ಗೊತ್ತಿಲ್ಲವಲ್ಲ ಈಕೆಗೆ ಎಂದು ಯೋಚಿಸುತ್ತಾ ಬರುತ್ತಿದ್ದಾಗ, ಸೀತು ಮೇಲಕ್ಕೆ ಹಾಗೆ ಹೇಳಿದ್ದರೂ, ಇವತ್ತಿಗೂ ಭೂರಹಿತರಾಗಿ ಪ್ರತಿಷ್ಠಿತರ ಮನೆಗಳ ತೋಟ ಗದ್ದೆಗಳಲ್ಲಿ ಕೆಲಸಕ್ಕೆ ಹೋಗಲೇಬೇಕಾದ ಅನಿವಾರ್ಯತೆಯು ಈ ಮೂಲ ನಿವಾಸಿಗಳಿಗಿರುವಾಗ ಸೀತು ಈ ನಿಲುವೇ ಸೂಕ್ತ ಎಂದು ಯೋಚಿಸಿಯೇ ಈ ಮಾತನ್ನು ಆಡಿರಬಹುದೆಂದು ಆಮೇಲೆ ಹೊಳೆಯಿತು ನನಗೆ.

ಮನೆ ಹತ್ತಿರ ಬರುತ್ತಿರುವಾಗ, ಆ ದಾರಿಯಲ್ಲಿ ನಾವು ಮಕ್ಕಳಾಗಿದ್ದಾಗ ಆಟವಾಡುತ್ತಿದ್ದ ನೆನಪೂ, ಅಲ್ಲೆಲ್ಲಾದರು ಒಂದು ವಾಹನದ ಶಬ್ದವಾಡೊಡನೆ ಹೆದರಿ ಪಕ್ಕದ ಬೆಟ್ಟ ಹತ್ತಿ ಓಡುತ್ತಿದ್ದುದರ ನೆನಪೂ, ಅದೇ ಬೆಟ್ಟದಲ್ಲೊಂದು ಹೆಮ್ಮರವಾಗಿ ಬೆಳೆದಿದ್ದ ಧೂಪದ ಮರವು ಒಂದು ರಾತ್ರಿಯ ಜಡಿಮಳೆಯಲ್ಲಿ ರೊಯ್ಯನೇ ಬಿದ್ದು ಮಲಗಿದ್ದ ನಮ್ಮನ್ನೆಲ್ಲ ಬೆಚ್ಚಿ ಏಳಿಸಿದ್ದ ಶಬ್ದವೂ ನೆನಪಾಯಿತು. ಆ ಮರ ಬಿದ್ದ ಘೋರ ಶಬ್ದಕ್ಕೂ ಮತ್ತು ಗುಡ್ಡದ ಮೇಲಿಂದ ಮರಗಳನ್ನು ಲಟಲಟನೇ ಬೇರು ಸಹಿತ ಕಿತ್ತು ಬೀಳಿಸಿದ ಶಬ್ದದ ಕಠೋರತೆಗೂ ಯಾವ ವ್ಯತ್ಯಾಸವಿರಬಹುದೆಂದು ಯೋಚಿಸುತ್ತಾ ಬರುತ್ತಿದ್ದವಳಿಗೆ ಈಗ ಬದಲಾದ ಯುಗದಲ್ಲಿ ದಲಿತರ ಮತ್ತು ಮಹಿಳೆಯರ ಜೀವನದಲ್ಲಾದ ಬದಲಾವಣೆಗಳು, ಆ 'ಸ್ವಾತಂತ್ರ್ಯದ ಇತಿ_ಮಿತಿ'ಗಳ ಪ್ರಶ್ನೆಯೂ ಮನಸ್ಸಿನಲ್ಲಿ ಏಳುತ್ತಿದ್ದಂತೆಯೇ, ಇಷ್ಟೊತ್ತಿಗೆ, 'ಹಾಗೆಲ್ಲಾ ಅಲೆಯುವುದು ಥರವಲ್ಲ' ಎಂಬ ಅಸಹನೆಯಿಂದ ಅಮ್ಮ ಹೆಬ್ಬಾಗಿಲಿಗೆ ಬಂದು ನಿಂತು ನಾನು ಬರುವುದನ್ನೆ ಕಾಯುತ್ತಿರುತ್ತಾರೆ ಎಂದು ನೆನಪಾದೊಡನೆ ನನ್ನ ಕಾಲುಗಳು ತಂತಾವೇ ಚುರುಕಾದುದನ್ನೂ ಗಮನಿಸಿದೆ.

*


# ಹೆಗ್ಗೋಡು: ಅರಳುತ್ತಿರುವ ಗ್ರಾಮ ಸಂಸ್ಕೃತಿಯ ಹೂವು

–ಎನ್.ಎಂ. ಕುಲಕರ್ಣಿ



**ಹೆ**ಗ್ಗಾಡು (ಹಿರಿದಾದ ಕಾಡು) ಎಂಬುದು ಆಡುಮಾತೇ ಹೆಗ್ಗೋಡು ಆಯಿತೆಂದು ಹೇಳಲಾಗುತ್ತದೆ. ತೀರ್ಥಹಳ್ಳಿ ತಾಲ್ಲೂಕಿನಲ್ಲೂ ಒಂದು ಹೆಗ್ಗೋಡು ಇದೆ. ನಾನೀಗ ಬರೆಯುತ್ತಿರುವುದು ಸಾಗರದ ಬಳಿಯ ಹೆಗ್ಗೋಡಿನ ಬಗ್ಗೆ. ಕೆಲವು ಮಾಧ್ಯಮದವರು ಉತ್ಪ್ರೇಕ್ಷೆಯಿಂದ ಹೇಳುವಂತೆ ಈ ಹೆಗ್ಗೋಡು ಕುಗ್ರಾಮವೇನಲ್ಲ. ಸಾಗರ–ಮಂಗಳೂರು ಮುಖ್ಯರಸ್ತೆಯಲ್ಲಿದ್ದು, ಎರಡು ಬ್ಯಾಂಕ್‌ಗಳು, ಅಂಚೆಕಚೇರಿ, ಫೋಟೋ ಸ್ಟುಡಿಯೋ, ಆಸ್ಪತ್ರೆ, ಮೆಡಿಕಲ್ ಸ್ಟೋರ್, ಕಂಪ್ಯೂಟರ್ ಸೆಂಟರ್, ಹೈಸ್ಕೂಲು, ಜೂನಿಯರ್ ಕಾಲೇಜು, ಗ್ರಾಮ ಪಂಚಾಯಿತಿ, ವ್ಯವಸಾಯ ಸೇವಾ ಸಹಕಾರ ಸಂಘ ಎಲ್ಲವೂ ಇದೆ. ಬಯಲುಸೀಮೆಗೆ ಹೋಲಿಸಿದರೆ ಮಲೆನಾಡಿನ ಹಳ್ಳಿಗಳು ತುಂಬಾ ಚಿಕ್ಕವು. ಬರೀ ಹೆಗ್ಗೋಡೊಂದನ್ನೇ ಪರಿಗಣಿಸಿದರೆ ಮೇಲಿನ ಸಂಸ್ಥೆಗಳು ಖಂಡಿತಾ ಹೆಚ್ಚೆನಿಸುತ್ತದೆ. ಆದರೆ ಕೇಡಲಸರ, ಹೊನ್ನೆಸರ, ಸಂಪೇಕೈ, ಭೀಮನಕೋಣೆ ಮೊದಲಾದ ಕೆಲವು ಹಳ್ಳಿಗಳೆಲ್ಲ ಇದರಲ್ಲಿ ಸೇರಿಕೊಂಡಿರುವುದಲ್ಲದೆ ಸುತ್ತಲಿನ ಇನ್ನೂ ಕೆಲವು ಹಳ್ಳಿಗಳಿಗೆ ಹೆಗ್ಗೋಡು ಹೋಬಳಿ ಮಟ್ಟದ ಕೇಂದ್ರವಾಗಿದೆ.


ಮೂರರಿಂದ ನಾಲ್ಕು ತಿಂಗಳು ಬಿಡದೆ ಸುರಿಯುವ ಮಳೆಗಾಲ ಇಲ್ಲಿಯ ಆನಂದ ಮತ್ತು ಬೇಸರ ಎರಡೂ ಹೌದು ಇದನ್ನು ಬರೆಯುತ್ತಿರುವಾಗಲೂ ಮಳೆ ಧಾರಾಕಾರವಾಗಿ ಬರುತ್ತಿದ್ದು, ಒಂದೂವರೆ ತಿಂಗಳಿನಿಂದ ನಿರಂತರ ಬಿಡದೆ ಸುರಿಯುತ್ತಿದೆ. ಒಂದು ವಿಶೇಷವೆಂದರೆ ಇಲ್ಲಿಯ ಹೈಸ್ಕೂಲು ಗುಡ್ಡದ ಮೇಲೆ ಬೀಳುವ ಅರ್ಧ ಮಳೆನೀರು ಉತ್ತರಕ್ಕೆ ಹರಿದು ವರದಾನದಿ ಮೂಲಕ ಬಂಗಾಳಕೊಲ್ಲಿ ಸೇರಿದರೆ ಇನ್ನರ್ಧ ದಕ್ಷಿಣಕ್ಕೆ ಹರಿದು ಶರಾವತಿ ಮೂಲಕ ಅರಬ್ಬಿ ಸಮುದ್ರ ಸೇರುತ್ತದೆ.



ಹೆಗ್ಗೋಡಿಗೆ ರಾಜ್ಯಮಟ್ಟದಲ್ಲಿ ಹೆಸರು ಬರಲು ಕಾರಣ ನೀನಾಸಮ್ ಎನ್ನುವಲ್ಲಿ ಎರಡು ಮಾತಿಲ್ಲ. ಹಾಗೆಯೇ ನೀನಾಸಮ್‌ನ ಹಿಂದಿನ ಶಕ್ತಿ ದಿ. ಕೆ.ವಿ. ಸುಬ್ಬಣ್ಣನವರು. ಹೆಗ್ಗೋಡು ಕರ್ನಾಟಕಕ್ಕೆ ಪರಿಚಯವಾದದ್ದು ನೀನಾಸಮ್ ತಿರುಗಾಟದ ನಾಟಕಗಳಿಂದ ಮತ್ತು ಸಂಸ್ಕೃತಿ ಶಿಬಿರದಿಂದ. ಇವೆರಡಕ್ಕೂ ಮೂಲದಲ್ಲಿರುವುದು ನೀನಾಸಮ್ ನಾಟಕ ಶಾಲೆ (ರಂಗ ಶಿಕ್ಷಣ ಕೇಂದ್ರ) ರಂಗಶಿಕ್ಷಣ ಪಡೆದು ಹಿಂದಿರುಗುವ ವಿದ್ಯಾರ್ಥಿಗಳ ಮತ್ತು ತಿರುಗಾಟದ ನಾಟಕಗಳ ಮೂಲಕ ರಂಗಚಳುವಳಿಯೊಂದು ನಾಡಿನಾದ್ಯಂತ ರೂಪುಗೊಳ್ಳಬೇಕೆಂಬುದು ಸುಬ್ಬಣ್ಣನವರ ಆಶಯವಾಗಿತ್ತು.

ಅಕ್ಟೋಬರ್‌ನಲ್ಲಿ ನಡೆಯುವ ನೀನಾಸಮ್ ಸಂಸ್ಕೃತಿ ಶಿಬಿರ ಒಂದು ರೀತಿಯಲ್ಲಿ ಹೆಗ್ಗೋಡಿನ ಜಾತ್ರೆ ಇದ್ದಂತೆ. ನಾನಂತೂ ಈ ಸಂದರ್ಭದಲ್ಲಿ ಉಳಿದೆಲ್ಲ ಕೆಲಸಗಳನ್ನು ಬದಿಗಿಡುತ್ತೇನೆ. ಇದು ಮೊದಲು ಆರಂಭವಾದದ್ದು 'ಚಲನಚಿತ್ರ ರಸಗ್ರಹಣ ಶಿಬಿರ' ಎಂದು. ೧೫ ದಿನಗಳ ಕಾಲ ಅತ್ಯುತ್ತಮ ಚಲನಚಿತ್ರಗಳ ಪ್ರದರ್ಶನ, ಉಪನ್ಯಾಸ, ಚರ್ಚೆಗಳೆಲ್ಲ ನಡೆಯುತ್ತಿದ್ದವು. ಈಗಿನ ಏಳು ದಿನಗಳ ಸಂಸ್ಕೃತಿ ಶಿಬಿರಕ್ಕೆ ಹೋಲಿಸಿದರೆ ಸ್ಥಳೀಯರ ಪಾಲ್ಗೊಳ್ಳುವಿಕೆ ಆಗಲೇ ಹೆಚ್ಚಾಗಿತ್ತು. ಇದು ದೃಶ್ಯ ಮಾಧ್ಯಮದ ಕಡೆಗೆ ಹಳ್ಳಿಗರ ಒಲವು, ಆಕರ್ಷಣೆಯನ್ನು ತೋರಿಸುತ್ತದೆ. ಆದರೆ ಸಂಸ್ಕೃತಿ ಶಿಬಿರದ ಗೋಷ್ಠಿಗಳಲ್ಲಿ ಉಪನ್ಯಾಸಗಳು ಗಹನವಾದ ವಿಚಾರಗಳಿಂದ ಕೂಡಿದ್ದು ಸಾಹಿತ್ಯಕ್ಕೆ ಒತ್ತು ಕೊಡುವುದರಿಂದ ಹಳ್ಳಿಯ ಸಾಮಾನ್ಯ ವಿದ್ಯಾವಂತರಿಗೆ ಜೀರ್ಣಿಸಿಕೊಳ್ಳುವುದು ಕಷ್ಟ. ಆದರೆ ನೀನಾಸಮ್ ಸಂಸ್ಕೃತಿ ಶಿಬಿರದ ಪರಿಣಾಮವನ್ನು ಸ್ಥಳೀಯ ಮಟ್ಟದಲ್ಲಿ ಮಾತ್ರ ನೋಡದೆ ಇಲ್ಲಿಯ ಚಿಂತನೆ ಕರ್ನಾಟಕದಾದ್ಯಂತ ಹರಡಿಕೊಳ್ಳಬೇಕೆಂದು ಬಯಸುತ್ತದೆ. ಕರ್ನಾಟಕದ ಬೇರೆ ಬೇರೆ










ಸಂಸ್ಕೃತಿ ಶಿಬಿರದಲ್ಲಿ ಚಹಾ ಬಿಡುವು ಚರಕ ಕಾರ್ಯಾಲಯ ಚರಕದಲ್ಲಿ ಮಗ್ಗದ ಕೆಲಸ ಚರಕೋತ್ಸವದಲ್ಲಿ ಯಕ್ಷಗಾನ

ಜಿಲ್ಲೆಗಳಿಂದ ಬರುವ ಉದ್ಯೋಗಿಗಳು, ಬೇರೆ ಬೇರೆ ವಿಶ್ವವಿದ್ಯಾಲಯಗಳಿಂದ ಆಮಂತ್ರಿಸಲಾದ ವಿದ್ಯಾರ್ಥಿಗಳನ್ನು ಗಮನಿಸಿದರೆ ಇದನ್ನು ಅಲ್ಲಗಳೆಯುವಂತಿಲ್ಲ. ಒಂದೇ ಒಂದು ಸಮಸ್ಯೆ ಏನೆಂದರೆ ಸಂಪನ್ಮೂಲ ವ್ಯಕ್ತಿಗಳು. ಪ್ರತಿ ವರ್ಷ ಬಂದವರೇ ಬರುವುದರಿಂದ ಉಪನ್ಯಾಸಗಳಲ್ಲಿ ಏಕತಾನತೆ ಇರುತ್ತದೆ.

ಶಿಬಿರದ ಗೋಷ್ಠಿಗಳಲ್ಲಾಗಲಿ, ಸಂಜೆಯ ಮನರಂಜನೆಯ ಕಾರ್ಯಕ್ರಮಗಳಲ್ಲಾಗಲಿ ಭಾಗವಹಿಸುವ ಸ್ಥಳೀಯರಲ್ಲಿ ಮೇಲುವರ್ಗದವರೇ ಹೆಚ್ಚು. ಈ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವವರು ಬ್ರಾಹ್ಮಣರೇ (ಹವ್ಯಕರು) ಆಗಿರುವುದೂ ಒಂದು ಕಾರಣ. ಅವರಲ್ಲೂ ಕೂಡ ಹೆಚ್ಚಿನ ಜನರು ಶಿಬಿರದ ಉಪನ್ಯಾಸಗಳಿರಲಿ ನಾಟಕಗಳೂ ಕೂಡ ಅರ್ಥವಾಗುವುದಿಲ್ಲವೆಂದು (ನೋಡಿ ಅಭ್ಯಾಸ ಮಾಡಿಕೊಂಡರೆ ತಾನೆ ಅರ್ಥವಾಗುವುದು) ದೂರವೇ ಉಳಿಯುತ್ತಾರೆ.

ನೀನಾಸಮ್‌ನ ಸಂಸ್ಕೃತಿ ಶಿಬಿರ ಬಿಟ್ಟರೆ ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳು ಅಭಿನಯಿಸುವ ನಾಟಕಗಳು ತಿಂಗಳಿಗೆ, ಎರಡು ತಿಂಗಳಿಗೊಮ್ಮೆ ಇದ್ದೇ ಇರುತ್ತವೆ. ಉಚಿತ ಪ್ರವೇಶವಿರುವುದರಿಂದ ಹೆಗ್ಗೋಡಿನ ಶಾಲಾ ಮಕ್ಕಳೆಲ್ಲರೂ ತಪ್ಪದೆ ನೋಡುತ್ತಾರೆ. ಅಕ್ಷರ ಪ್ರಕಾಶನ ಕಳೆದ ಐವತ್ತು ವರ್ಷಗಳಿಂದ ಗುಣಮಟ್ಟದ ಪುಸ್ತಕಗಳನ್ನು ಪ್ರಕಟಿಸುತ್ತ ಕರ್ನಾಟಕದ ತುಂಬಾ ಹೆಸರು ಮಾಡಿದೆ. ರಾಜ್ಯದ ಬೇರೆ ಬೇರೆ ಕಾಲೇಜುಗಳಲ್ಲಿ ನೀನಾಸಮ್ ನಡೆಸುವ ಸಾಹಿತ್ಯ ಅಧ್ಯಯನ ಶಿಬಿರಗಳು ಬೇರೆ ಸಂಘಟನೆಗಳಿಗೂ ಮಾದರಿಯಾಗಿವೆ. ಇದರ ಜೊತೆಗೆ ಕನ್ನಡ ಸಾಹಿತ್ಯ ಚರ್ಚೆಗಳಿಗೆ ಮುಖ್ಯ ಆಕರ ಗ್ರಂಥಗಳನ್ನು ನೀಡಿರುವ 'ಅಕ್ಷರ ಪ್ರಕಾಶನವೂ ಸೇರಿಕೊಂಡಿದೆ. ಈ ಎಲ್ಲಾ ಚಟುವಟಿಕೆಗಳಿಂದ ನೀನಾಸಮ್ ಹೊರ ಜಗತ್ತಿನೊಂದಿಗೆ ಹೆಚ್ಚಿನ ಸಂಪರ್ಕ ಸಾಧಿಸುವಲ್ಲಿ ಯಶಸ್ವಿಯಾಗಿದೆ. ಗ್ರಾಮಗಳು ಆರ್ಥಿಕವಾಗಿ ಸಾಂಸ್ಕೃತಿವಾಗಿ ತಮ್ಮ ಸ್ವಾಯತ್ತತೆಯನ್ನು ಕಾಯ್ದುಕೊಳ್ಳುತ್ತಲೇ ಹೊರಗಿನ ಜ್ಞಾನಕ್ಕೂ ತೆರೆದುಕೊಂಡಿರಬೇಕೆಂಬ ಗಾಂಧೀಜಿಯವರ ಆಶಯ ಇಲ್ಲಿ ಅಕ್ಷರಶಃ ಕಾರ್ಯರೂಪಕ್ಕೆ ಬಂದಿದೆ.

೧೯೯೪ರಲ್ಲಿ ನಾನಿಲ್ಲಿಗೆ ಬಂದಾಗ ಚರಕ ಆಗಷ್ಟೆ ಆರಂಭವಾಗಿತ್ತು. ಗ್ರಾಮೀಣ ಮಹಿಳೆಯರಿಗೆ ಕೃಷಿಯೇತರ ಉದ್ಯೋಗ ಸೃಷ್ಟಿಸುವ ಸದಾಶಯದಿಂದ ಪ್ರಸನ್ನ ಚರಕ ಆರಂಭಿಸಿದ್ದರು. ಆದರೆ ಹೆಗ್ಗೋಡಿನ ಜಮೀನುದಾರರು ಇದು ಕೃಷಿ ಕಾರ್ಮಿಕರನ್ನು ಎತ್ತಿ ಕಟ್ಟುವ ಮೂಲಕ ವರ್ಗಸಂಘರ್ಷ ಸೃಷ್ಟಿಸುವ ಎಡಪಂಥೀಯ ಹುನ್ನಾರವೆಂದು ತಿಳಿದಿದ್ದರು. ಅವರ ಅನುಮಾನ ಸುಳ್ಳಾಗಿತ್ತು. ಚರಕಕ್ಕೆ ಬರುವ ಹೆಣ್ಣುಮಕ್ಕಳು ಕೂಲಿಯಾಳುಗಳ ಮಕ್ಕಳೇ ಆಗಿದ್ದರೂ ಹೊಸ ತಲೆಮಾರಿನವರಾಗಿದ್ದು, ಕೂಲಿ ಮಾಡಲು ಸಿದ್ಧರಿರಲಿಲ್ಲ. ಚರಕ ಅವರಿಗೆ ಹೊಸಬದುಕನ್ನು ನೀಡಿತು.

ಆರಂಭದಲ್ಲಿ ಮಗ್ಗದ ಬಟ್ಟೆ ಮಾರಾಟಕ್ಕೆ ಹೋಗುತ್ತಿದ್ದ ನಾನು ಪ್ರಸನ್ನರ ಸಲಹೆಯ ಮೇರೆಗೆ ಬೆಂಗಳೂರಲ್ಲಿ ನೂಲಿನ ಬಣ್ಣಗಾರಿಕೆ ಮತ್ತು ಬಟ್ಟೆಯ ಮೇಲೆ ಮುದ್ರಿಸುವುದನ್ನು ಕಲಿತು ಬಂದೆ. ಇದರಿಂದ 'ಅಂಬರ ಚಿತ್ತಾರ' ಎಂಬ ನನ್ನ ಸ್ವಯಂ ಉದ್ಯಮಕ್ಕೂ ದಾರಿಯಾಯಿತಲ್ಲದೆ, ಚರಕದಲ್ಲಿ ಬಣ್ಣಗಾರಿಕೆ ವಿಭಾಗ ಹುಟ್ಟಲೂ ಕಾರಣವಾಯಿತು. ಬೆಂಗಳೂರಿನಲ್ಲಿ ದೇಸಿ ಅಂಗಡಿಯ ಸ್ಥಾಪನೆಯೊಂದಿಗೆ ಚರಕದ ಮಾರುಕಟ್ಟೆ ವಿಸ್ತಾರವಾಯಿತು. ಮಲೆನಾಡಿನ ಹಳ್ಳಿಯಲ್ಲಿ ೩೦೦ ರಿಂದ ೪೦೦ ಜನರಿಗೆ ಕೆಲಸ ನೀಡುವ ದೊಡ್ಡ ಸಂಸ್ಥೆಯಾಗಿ ಚರಕ ಬೆಳೆಯಿತು. ಚರಕ ಪ್ರತೀವರ್ಷ ನಡೆಸುವ ಮೂರು ದಿನಗಳ ಚರಕ ಉತ್ಸವ ಗ್ರಾಮೀಣ ಹಬ್ಬದಂತಿರುತ್ತದೆ. ಸಾವಿರ ಸಂಖ್ಯೆಯಲ್ಲಿ ಸೇರುವ ಪ್ರೇಕ್ಷಕರು ಉತ್ಸವಗಳು ನಗರಗಳಿಗೆ ಮಾತ್ರ ಸೀಮಿತವಲ್ಲ ಎಂಬುದಕ್ಕೆ ಸಾಕ್ಷಿಯಾಗುತ್ತಾರೆ. ಬಟ್ಟೆ ನೇಯುವ, ಹೊಲಿಗೆ ಮಾಡುವ ಹೆಣ್ಣುಮಕ್ಕಳು, ಸೆಮಿನಾರುಗಳನ್ನೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರ್ವಹಿಸಬಲ್ಲರೆಂಬುದನ್ನು ಚರಕ ಉತ್ಸವ ತೋರಿಸಿಕೊಟ್ಟಿದೆ.

ಹೊನ್ನೇಸರದಲ್ಲಿ ಇತ್ತೀಚೆಗೆ ಆರಂಭವಾಗಿರುವ ಶ್ರಮಜೀವಿ ಆಶ್ರಮ ಹೆಗ್ಗೋಡಿನ ಸಾಂಸ್ಕೃತಿಕ ಚಟುವಟಿಕೆಗಳ ಇನ್ನೊಂದು ಮಜಲು ಎನ್ನಬಹುದು. ಶ್ರಮಜೀವನದ ಇಂದಿನ ಅಗತ್ಯತೆ, ನಮ್ಮ ಆರೋಗ್ಯ, ಆಧ್ಯಾತ್ಮ ಮತ್ತು ನೈತಿಕ ಕಾರಣಗಳಿಗಾಗಿಯೂ ಹೇಗೆ ಮುಖ್ಯವೆಂಬುದನ್ನು ಎಲ್ಲರಿಗೂ ಮನವರಿಕೆ ಮಾಡುವ ನಿಟ್ಟಿನಲ್ಲಿ ಆಶ್ರಮ ಹೆಜ್ಜೆ ಇಟ್ಟಿದೆ. ಈ ವರ್ಷದ 'ಗಾಂಧಿ ಶಾಲೆ' ಕಾರ್ಯಕ್ರಮ ಇದಕ್ಕೊಂದು ಉದಾಹರಣೆ.

ನೀನಾಸಮ್ ಮತ್ತು ಚರಕ ಹೆಗ್ಗೋಡಿನ ಎರಡು ಕಣ್ಣುಗಳಂತಿದ್ದು, ಎರಡೂ ಸಂಸ್ಥೆಗಳು ಹೊರ ಜಗತ್ತಿನೊಂದಿಗೆ ಸಂಪರ್ಕ ಬೆಳೆಸುತ್ತ ಸ್ಥಳೀಯ ನಿವಾಸಿಗಳಿಗೆ ಹೊಸಬದುಕಿನ ಸಾಧ್ಯತೆಗಳನ್ನು ತೆರೆದು ತೋರಿಸುತ್ತವೆ. ಒಂದು ಬೌದ್ಧಿಕ ಅರಿವಿನಿಂದ ಇನ್ನೊಂದು ದೈಹಿಕ ದುಡಿಮೆಯಿಂದ. ಈ ಎರಡು ಸಂಸ್ಥೆಗಳಿಂದಾಗಿ ಹೆಗ್ಗೋಡಿಗೆ ಪರೋಕ್ಷವಾಗಿ ಕೆಲವು ಲಾಭಗಳಾಗಿವೆ. ಬ್ಯಾಂಕ್‌ಗಳ ವಹಿವಾಟು ವೃದ್ಧಿಸಿದೆ, ಸಾಗಾಣಿಕಾ ವಾಹನಗಳು ಹೆಚ್ಚಿವೆ. ಹೆಗ್ಗೋಡಿನಿಂದ ಬೆಂಗಳೂರಿಗೆ ರಾಜಹಂಸ ಬಸ್ ಆರಂಭವಾಗಿದೆ. ಸಣ್ಣಮಟ್ಟ ಅಂಗಡಿ, ಹೋಟೆಲ್‌ಗಳ ವ್ಯಾಪಾರ ಚುರುಕಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಯಾವ ಹೆಣ್ಣುಮಕ್ಕಳೂ ಕೆಲಸ ಹುಡುಕಿಕೊಂಡು ಪೇಟೆಗೆ ಹೋಗುತ್ತಿಲ್ಲ. ಗ್ರಾಮ ಸ್ವರಾಜ್ಯವೆನ್ನಲು ಇನ್ನೇನು ಬೇಕು? ಗಾಂಧೀಜಿ 'ಹಿಂದ್ ಸ್ವರಾಜ್'ನಲ್ಲಿ ಹೇಳುವಂತೆ ಪೊಲೀಸರು, ವಕೀಲರು ಇಲ್ಲಿಲ್ಲ. ಆದರೆ ವೈದ್ಯರನ್ನು ಮಾತ್ರ (ಮಲೆನಾಡಿನಲ್ಲಿ ಖಾಯಿಲೆ ಬೀಳದವರಿಲ್ಲ) ದೂರ ಇಡುವಂತಿಲ್ಲ!


ಹೆಗ್ಗೋಡಿನಲ್ಲಿ ಇನ್ನೂ ಹಲವು ಸಾಂಸ್ಕೃತಿಕ ಸಂಘಟನೆಗಳಿವೆ. ಮಕ್ಕಳ ನಾಟಕಗಳಿಗಾಗಿ ರಂಗಚಟುವಟಿಕೆಗಳನ್ನು ಮೀಸಲಿಟ್ಟಿರುವ 'ಕಿನ್ನರ ಮೇಳ' ಸಂಸ್ಥೆ ತನ್ನದೊಂದು ಸಣ್ಣ ಸಭಾಂಗಣ ಮಾಡಿಕೊಂಡಿದ್ದು, ಆಗಾಗ ನಾಟಕ, ಯಕ್ಷಗಾನ, ಶಾಸ್ತ್ರೀಯ ಸಂಗೀತದಂತಹ ಕಾರ್ಯಕ್ರಮಗಳನ್ನು ನಡೆಸುತ್ತದೆ. ನೀನಾಸಂ ರಂಗ ಶಿಕ್ಷಕರಾದ ಎಂ. ಗಣೇಶ್, ತಮ್ಮ ಹಳೆ ವಿದ್ಯಾರ್ಥಿಗಳೊಂದಿಗೆ 'ಜನಮನದಾಟ' ಎಂಬ ಚಿಕ್ಕ ನಾಟಕ ತಂಡವೊಂದನ್ನು ಕಟ್ಟಿಕೊಂಡು ಕಡಿಮೆ ವೆಚ್ಚದ ಸರಳ ರಂಗ ಪ್ರಯೋಗಗಳಲ್ಲಿ ತೊಡಗಿದ್ದಾರೆ.

ಇಷ್ಟೆಲ್ಲ ರಂಗಚಟುವಟಿಕೆಗಳು ಹೆಗ್ಗೋಡಿನಲ್ಲಿ ನಡೆಯುತ್ತಿದ್ದರೂ ನಾಟಕಗಳನ್ನೇ ನೋಡದ ಎಷ್ಟೋ ಜನರು ಇವತ್ತಿಗೂ ಹೆಗ್ಗೋಡಿನಲ್ಲಿದ್ದಾರೆ. ತಮ್ಮ ಪಾಡಿಗೆ ತಾವು ದುಡಿವ ಸ್ವತಂತ್ರ ಜೀವಿಗಳಾದ ಇವರಲ್ಲಿ ಕೃಷಿಕರು, ಕೂಲಿ ಕಾರ್ಮಿಕರು, ಸಣ್ಣಮಟ್ಟ ವ್ಯಾಪಾರಸ್ಥರು ಎಲ್ಲರೂ ಇದ್ದಾರೆ. ಸಂಘ ಸಂಸ್ಥೆಗಳನ್ನು ಗುಮಾನಿಯಿಂದ ನೋಡುವ ಈ ಜನ ತೇಜಸ್ವಿ ಕಾದಂಬರಿಯ ಪಾತ್ರಗಳಂತಿರುವರು ಅಥವಾ ಮಹಾದೇವ ಅವರ ರೂಪಕದಲ್ಲಿ ಹೇಳುವುದಾದರೆ ಯಾರ ಜಪ್ತಿಗೂ ಸಿಗದ ನವಿಲುಗಳು. ಹಾಗೆಂದು ಹೆಗ್ಗೋಡಿನಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ಹೆಚ್ಚಾಗಿ ಯಾರಿಗಾದರೂ ಅಜೀರ್ಣವಾಗಿದೆ ಅಂತಲ್ಲ. ಕಾರಣ ಕೆಲಕೆಲವು ಕಾರ್ಯಕ್ರಮಗಳಿಗೆ ಅದರದ್ದೇ ಆದ ಕೆಲವು ನಿರ್ದಿಷ್ಟ ಪ್ರೇಕ್ಷಕರಿದ್ದು ಉಳಿದಂತೆ ಎಲ್ಲರೂ ತಮ್ಮ ಪಾಡಿಗೆ ತಾವು ಹೊಟ್ಟೆಪಾಡಿನ ಕೆಲಸಗಳಲ್ಲಿ ನಿರತರಾಗುವುದರಿಂದ ಹೆಗ್ಗೋಡು ಎಲ್ಲ ಹಳ್ಳಿಗಳಂತೆ ತಾನೂ ಒಂದು ಹಳ್ಳಿಯಾಗಿ ಸಹಜವಾಗಿಯೇ ಇದೆ. ಆದರೆ ಇಲ್ಲಿಯ ಸಾಂಸ್ಕೃತಿಕ ಶ್ರೀಮಂತಿಕೆ ಜನಗಳ ಮೇಲೆ, ಮಕ್ಕಳ ಮೇಲೆ ಸದ್ದಿಲ್ಲದೆ ಪರಿಣಾಮ ಬೀರುತ್ತಿರುವುದಂತೂ ನಿಜ.

ಎಲ್ಲ ಹಳ್ಳಿಗಳೂ ಹೀಗೇ ಇರುವುದಾಗಿದ್ದರೆ ಪ್ರಾಯಶಃ ನಗರಗಳು ಈ ಪರಿ ಬೆಳೆಯುತ್ತಿರಲಿಲ್ಲವೇನೊ! *

# ಇರಲಿ ಕಾವ್ಯಕ್ಕೊಂದಿಷ್ಟು ಇಂಬು, ಪುರುಸೊತ್ತು..

–ಡಾ. ರಾಜೇಂದ್ರ ಚೆನ್ನಿ



**ಕಾ**ಲಕಾಲಕ್ಕೆ ಸಮಾಜವು ಕಾವ್ಯದಿಂದ ನಿರೀಕ್ಷಿಸುವ, ಅಪೇಕ್ಷಿಸುವ ಸಂಗತಿಗಳು ಬದಲಾಗುತ್ತಲೇ ಹೋಗುತ್ತವೆ. ಸ್ವತಃ ತಾನೇ ಅಪ್ಪಟ ಕವಿಯಾಗಿದ್ದ ಗ್ರೀಕ್ ತತ್ವಜ್ಞಾನಿ ಪ್ಲೇಟೋನಿಗೆ ಆದರ್ಶ ರಾಜ್ಯದ ಪ್ರಜೆಗಳೆಲ್ಲ ಭಾವಾವೇಶ, ಅತಾರ್ಕಿಕ ನಡವಳಿಕೆ ಇವುಗಳನ್ನೆಲ್ಲ ದೂರವಿಟ್ಟು ವಿವೇಕದಿಂದ ಬದುಕುವ ಸತ್–ಪ್ರಜೆಗಳಾಗಬೇಕಿತ್ತು. ಹೀಗಾಗಿ ಜಗತ್ತಿನ ಇತಿಹಾಸದಲ್ಲಿಯೇ ಅತ್ಯಂತ ಶ್ರೇಷ್ಠ ಕಾವ್ಯ ನಾಟಕ ರೂಪದಲ್ಲಿ ಸೃಷ್ಟಿಯಾದ ಯುಗದ ವಾರಸುದಾರನಾದ ಪ್ಲೇಟೋ ತನ್ನ ಆದರ್ಶ ಪ್ರಜಾರಾಜ್ಯದಲ್ಲಿ ಕಾವ್ಯಕ್ಕೆ ಕವಿಗಳಿಗೆ ಸ್ಥಾನವಿಲ್ಲವೆಂದು ವಾದಿಸಿದ. ಆದ್ದರಿಂದ ಕವಿಗಳನ್ನು ಸತ್ಕರಿಸಿ ಆದರ್ಶ ಪ್ರಜಾರಾಜ್ಯದಿಂದ ಹೊರಗೆ ಕಳಿಸಬೇಕೆಂದು ಬರೆದ. ಅವನ ತತ್ವಚಿಂತನೆಯ ಬರಹ ಕಾವ್ಯದ ಲಕ್ಷಣವೆನ್ನುವ ನಿಬಿಡವಾದ, ಅಪಾರ ಸೂಚಕ ಶಕ್ತಿಯುಳ್ಳ ರೂಪಕಗಳ ಭಾಷೆಯಲ್ಲಿದೆ. ಮನುಷ್ಯರು rational ಆಗಿರಬೇಕು ಎಂದು ಅಪೇಕ್ಷಿಸುತ್ತಿದ್ದ ಪ್ಲೇಟೋನಿಗೆ ಧಾರ್ಮಿಕ ಆಚರಣೆ ಹಾಗೂ ಸಾಮುದಾಯಿಕ ಆಚರಣೆಯ ಹಾಗೆ ನಡೆಯುತ್ತಿದ್ದ ಗ್ರೀಕ್ ನಾಟಕಗಳ ಪ್ರದರ್ಶನದಲ್ಲಿ ಕವಿಯ ಕಲ್ಪನೆಯ ಸೃಷ್ಟಿಗಳಾದ (ಅಥವಾ ಗ್ರೀಕ್ ಪುರಾಣ ಕತೆಗಳಿಂದ ಪುನರ್‌ಸೃಷ್ಟಿಯಾದ) ಈಡಿಪಸ್, ಯುಕಾಸ್ತಾ ಇವರ ದುರಂತಗಳನ್ನು ಕೇವಲ ಹುಲುಮಾನವರೇ ಆದ ಪಾತ್ರಧಾರಿಗಳು ಅಭಿನಯಿಸುತ್ತಿದ್ದಾಗ ಇಡೀ ನಾಗರೀಕ ಗ್ರೀಕ್ ಸಮುದಾಯ ಅತ್ಯಂತ irrational ಆಗಿ ಸಾಮೂಹಿಕ ಶೋಕದಲ್ಲಿ ಮುಳುಗುವುದು ಆಘಾತಕಾರಿಯಾಗಿ ಕಂಡಿತ್ತು. ಮನುಷ್ಯ ತನ್ನ ಧೀಶಕ್ತಿಯಿಂದ ಆದರ್ಶ ಸಮಾಜ ಕಟ್ಟಬಹುದೆಂದು ವಾದಿಸುತ್ತಿದ್ದ ಅವನಿಗೆ ಮನುಷ್ಯರು ದೇವರುಗಳಿಗೂ ಅರ್ಥವಾಗದ ಅಸಂಗತ ಜಗತ್ತಿನಲ್ಲಿ ಬದುಕುತ್ತಾರೆ. ಆದ್ದರಿಂದ 'ಸಾಯುವವರೆಗೂ ಯಾವ ಮನುಷ್ಯನನ್ನು ಸುಖಿಯೆಂದು ಕರೆಯಬೇಡಿ' ಎನ್ನುವ ಈಸ್ಕಿಲಸ್, ಸೋಫೋಕ್ಲೀಸ್‌ನಂಥ ಕವಿ–ನಾಟಕಕಾರರು ಅತಾರ್ಕಿಕತೆಯ ಪರಾಕಾಷ್ಠೆಯಾಗಿ ಕಂಡಿರಬಹುದು. ಇಷ್ಟು ಮಾತ್ರವಲ್ಲ, rationality ವಿವೇಕ, ಸಮನ್ವಯ ಇವುಗಳ ಸಂಕೇತವಾದ apollonian ಪ್ರವೃತ್ತಿ ಹಾಗೂ ಭಾವಾವೇಶ, ಲೈಂಗಿಕತೆ, ಮೈಮರೆವು ಇವುಗಳ ದ್ಯೋತಕವಾಗಿದ್ದ Dionysian ಪ್ರವೃತ್ತಿಗಳ ಮಧ್ಯದ ಸಂಘರ್ಷಗಳ ನಡುವೆ ಗ್ರೀಕ್ ಸಂಸ್ಕೃತಿಗೇ ಸಮನ್ವಯ ಸಾಧಿಸಲು ಆಗಿರಲಿಲ್ಲ. ಆದ್ದರಿಂದ ಕಾವ್ಯದ ನೆಲೆಗಳು ಬುದ್ಧಿ, ವೈಚಾರಿಕತೆಗಳ ಶಿಸ್ತಿಗೆ ಬಾರದ ಪ್ರವೃತ್ತಿಗಳಲ್ಲಿವೆ ಎಂದು ಪ್ಲೇಟೋ ಅಂದುಕೊಂಡಿದ್ದ. ವ್ಯಂಗ್ಯವೆಂದರೆ ಪ್ಲೇಟೋ ತನ್ನ ಆದರ್ಶ ರಾಜ್ಯದಲ್ಲಿ ಒಂದು ಬಗೆಯ ಕಾವ್ಯಕ್ಕೆ ಪರವಾನಗಿ ಕೊಡಲು ಸಿದ್ಧನಿದ್ದ – ರಾಜ್ಯದ ನಾಯಕರುಗಳ ಬಗೆಗಿನ ಸ್ತುತಿಕಾವ್ಯಕ್ಕೆ!

ಪ್ಲೇಟೋನ ಆದರ್ಶ ರಾಜ್ಯ ನಿಯಮ ಶಿಸ್ತುಗಳ ಹೆಸರಿನಲ್ಲಿ ಎಲ್ಲೋ ಒಂದು ಕಡೆಗೆ ಪ್ರಭುತ್ವವನ್ನು ಓಲೈಸುವಂಥದು. ಜೋಸೆಫ್ ಸ್ಟಾಲಿನ್ ಸಮಾನತೆಯ ಹೆಸರಿನಲ್ಲಿ ಮತ್ತು ಸ್ವತಃ ಕವಿಯಾಗಿದ್ದ ಮಾವೋ ಸಾಂಸ್ಕೃತಿಕ ಕ್ರಾಂತಿಯ ಹೆಸರಿನಲ್ಲಿ ಕವಿಗಳನ್ನು ಗಡಿಪಾರು ಮಾಡುತ್ತಾರೆ ಅಥವಾ ಹಂದಿ ದೊಡ್ಡಿಗಳಲ್ಲಿ ಕೊಳೆಯಲು ಬಿಡುತ್ತಾರೆ. ಭಾವಾವೇಶ, ಅರಾಜಕತೆ, ಹಿಂಸೆ, ದುಃಖ ಇವುಗಳು ನಮ್ಮ ಪ್ರಜ್ಞೆಯನ್ನೇ ಅಲ್ಲಾಡಿಸಿಬಿಡುವಂಥ ಪುರಾಣಗಳನ್ನು, ಕಾವ್ಯವನ್ನು ಸೃಷ್ಟಿಸುವ ಗ್ರೀಕ್ ನಾಟಕಗಳು ಆ ಕಾಲದಿಂದ ಇಲ್ಲಿಯವರೆಗೆ ಬಂದ ಕ್ರೂರ ಪ್ರಭುತ್ವಗಳ ಅದ್ಭುತ ರೂಪಕಗಳಾಗಿಯೇ ಉಳಿದುಕೊಂಡು ಬಂದಿವೆ. ನಿಜವಾದ ಕಾವ್ಯಕ್ಕಿರುವ ವಿದ್ರೋಹಕ ಗುಣವನ್ನು ಪ್ರಭುತ್ವಗಳು ಸಂಶಯದಿಂದ ನೋಡಿ, ಹಿಂಸೆಯ ಮೂಲಕ ಅದುಮಿಡಲು ಪ್ರಯತ್ನಿಸಿವೆ.



ಪ್ರಾಯಶಃ ಭಾರತ ಚಕ್ರವರ್ತಿಯ ಕುಲದವನೆಂದು ಹೇಳಿಕೊಳ್ಳುತ್ತಿದ್ದ (ಹಾಗೆ ಭಾರತದ ಎಲ್ಲ ಪ್ರಭುಗಳು ಹೇಳಿಕೊಳ್ಳುತ್ತಿದ್ದರು) ಆಸ್ಥಾನದಲ್ಲಿದ್ದ ಕಾಳಿದಾಸನಿಂದ ಅವನ ಪ್ರಭು ನಿರೀಕ್ಷಿಸಿದ್ದು ದುಷ್ಯಂತ–ಶಕುಂತಲೆಯರ ಪ್ರೀತಿ ದಾಂಪತ್ಯದಲ್ಲಿ ಸುಖಾಂತ್ಯ ಕಂಡು ಭರತ ಚಕ್ರವರ್ತಿಯ ಜನ್ಮಕ್ಕೆ ಕಾರಣವಾದುದನ್ನು ವಿಜೃಂಭಿಸುವ ನಾಟಕವೊಂದನ್ನು. ದುಷ್ಯಂತ–ಶಕುಂತಲೆಯರ ಬಗೆಗಿನ ಐತಿಹ್ಯಗಳಲ್ಲಿನ ದುಷ್ಯಂತ ಶಕುಂತಲೆಯನ್ನು ಮರೆತದ್ದು ಅಥವಾ ತಿರಸ್ಕರಿಸಿದ್ದರ ಸಂಗತಿಯನ್ನು ನಿರ್ವಹಿಸುವುದು ಆಸ್ಥಾನ ಕವಿಗೆ ಕಷ್ಟದ ವಿಷಯವೇ ಆಗಿತ್ತು. ಆದ್ದರಿಂದ ಉಂಗುರದ ನೆಪವನ್ನು ನಾಟಕಕ್ಕೆ ಸೇರಿಸಿದ ಎನ್ನುವುದರ ಬಗ್ಗೆ ಕೊನೆಯಿಲ್ಲದಂತೆ ಚರ್ಚೆಗಳು ನಡೆದಿವೆ. ಆದರೆ, ಮುಖ್ಯವೆಂದರೆ ನಾಟಕವು ದುಷ್ಯಂತನು ಕಾಮಪ್ರವೀಣ ಅನುಭವಸ್ಥ ವಿಟನು, ತನ್ನ ಅಂತಃಪುರಕ್ಕೆ ಒಂದು 'ಅನಾಘ್ರಾಣಿತ ಪುಷ್ಪ'ವನ್ನು ಸೇರಿಸಹೊರಟವನು ಎನ್ನುವುದನ್ನು ಹೇಳುವುದನ್ನು ಬಿಡುವುದಿಲ್ಲ. ಶಕುಂತಲೆಯ ಕಾಲಿಗೆ ಎರಗಿ ಕ್ಷಮೆ ಕೇಳಿದರೂ ಶಕುಂತಲೆಯ ದುಃಖ ಅಪರಿಹಾರ್ಯವೇ ಆಗಿ ಉಳಿಯುತ್ತದೆ. ಕೆ.ವಿ.ಸುಬ್ಬಣ್ಣ ಹೇಳಿದಂತೆ ಆಕ್ರಮಣ, ಬಳಸಿ ಎಸೆಯುವ ಆಸೆಬುರುಕ ಅರಮನೆ ನಾಗರೀಕತೆಗಳು ಮರ, ಗಿಡ, ಹಕ್ಕಿ, ಪ್ರಾಣಿ ಮನುಷ್ಯರು ಎಲ್ಲರೊಂದಿಗೆ ಮಾತನಾಡುವ ಆಶ್ರಮ ಸಂಸ್ಕೃತಿಗಳನ್ನು ತೊತ್ತಳತುಳಿದ ಸಾಮ್ರಾಜ್ಯಗಳನ್ನು ಕಟ್ಟಿ ವಿಸ್ತರಿಸುತ್ತಿದ್ದ ಕಾಲದಲ್ಲಿ ಈ ನಾಟಕವು ತನ್ನ ಅಂದಿನ ಚರಿತ್ರೆಯ ದುಃಖವನ್ನು ಶಕುಂತಲೆಯ ಮೂಲಕ ಹೇಳುತ್ತಿರಬಹುದು. ಅಥವಾ ಹಿಂದಿ ನಾಟಕಕಾರ ಮೋಹನ್ ರಾಕೇಶ್ ಕಲ್ಪಿಸಿಕೊಂಡಂತೆ ಕಾಳಿದಾಸನು ನಗರ–ಅರಮನೆ, ಸಂಸ್ಥಾನಗಳ ವ್ಯೂಹದಲ್ಲಿ ಸಿಕ್ಕಿಕೊಂಡ ಮಹಾಕವಿಯಾಗಿ ತಾನು ಮರೆತುಹೋದ ಪ್ರೇಯಸಿಯನ್ನು ಶಕುಂತಲೆಯಲ್ಲಿ ಕಂಡನೇ?

ದೊರೆ ದುಷ್ಯಂತ, ಮಹಾಕವಿ ಕಾಳಿದಾಸ, ಕಾಳಿದಾಸನ ಪ್ರಭು ಇವರೆಲ್ಲರೂ ಮರೆತ ಶಕುಂತಲೆಯರೆಂದರೆ ಹುಟ್ಟಿ ಬೆಳೆಯುತ್ತಿದ್ದ ಸಾಮ್ರಾಜ್ಯಗಳು ಮಣ್ಣುಗೂಡಿಸಿಬಿಟ್ಟ ಬುಡಕಟ್ಟು ಸಮುದಾಯಗಳು, ಆಕ್ರಮಣವೇ ಗೊತ್ತಿರದ ಜನಸಮುದಾಯಗಳು. ಸಾಮ್ರಾಜ್ಯಶಾಹಿ ಪ್ರಭುತ್ವಗಳಿಗೆ ಸಾಂಸ್ಕೃತಿಕ ಸಮರ್ಥನೆ ಕೊಡುವ ಸಾಹಿತ್ಯ ಬೇಕಿತ್ತು. ಆ ಕೆಲಸವನ್ನು ಯಥೇಚ್ಛವಾಗಿ ಸಾಹಿತ್ಯ ಮಾಡಿತು ಕೂಡ. ಆದರೆ, ಒಳಗೇ ಎಲ್ಲೋ ಪ್ರಭುತ್ವಗಳ ಬಗ್ಗೆ ಗಾಢವಾದ ಅತೃಪ್ತಿ. ಮರೆತುಹೋದ ಮನುಷ್ಯ ಮೌಲ್ಯಗಳ ಬಗ್ಗೆ ತಪ್ಪಿತಸ್ಥ ಭಾವನೆಯಿಂದ ಹುಟ್ಟಿದ ಕಳಕಳಿ ಹೀಗೆ ಪ್ರಭುತ್ವ ಬಯಸುವ ಮಹಾಕಾವ್ಯವನ್ನು ಬರೆಯುವ ಪಂಪ ಯಾರಿಗೆ ಏನಾದರೂ ಮಾಡಬಲ್ಲ ಅಧಿಕಾರವುಳ್ಳ ಪ್ರಭುಗಳ ಸಣ್ಣತನಗಳ ಬಗ್ಗೆ ಟಿಪ್ಪಣಿಯನ್ನೂ ಸೇರಿಸುತ್ತಾನೆ. ರಾಜಸತ್ತೆಯಷ್ಟೇ ಪ್ರಬಲವಾದ, ಬಲಾಢ್ಯವಾದ ಇನ್ನೊಂದು ಸಂಸ್ಥೆಯಾದ ಧರ್ಮವು ಸಾಹಿತ್ಯದಿಂದ ನಿರೀಕ್ಷಿಸುವುದನ್ನು ಪೂರೈಸುವುದಕ್ಕಾಗಿ ಇನ್ನೊಂದು ಮಹಾಕಾವ್ಯ ಬರೆದ ಪಂಪ 'ಭ್ರಮರಿ'ಯಾದ ಅಧಿಕಾರದ ಬಗ್ಗೆ ಭರತನ ಪೊಳ್ಳು ಹಮ್ಮಿನ ಬಗ್ಗೆ ಬರೆಯುತ್ತಾನೆ.

ಆದರೆ ಕನ್ನಡ ಸಾಹಿತ್ಯ ಶುದ್ಧವಾಗಿ ಎಂದೂ ಒಳಬಂಡಾಯದ ನೆಲೆಯಾಗಿರಲೇ ಇಲ್ಲ. ಬಹುಪಾಲು ವ್ಯವಸ್ಥೆಯನ್ನು ಬೆಂಬಲಿಸಿ ಅವರಲ್ಲಿ ಶಾಮೀಲಾಗಿ ನಡುವೆ ಅಲ್ಲಲ್ಲಿ ಒಂದಿಷ್ಟು ಪ್ರತಿಭಟನೆ, ಇಲ್ಲದಿದ್ದರೆ ಅತೃಪ್ತಿಯನ್ನು ಮಧ್ಯಮ ದನಿಯಲ್ಲಿ ಹೇಳಿಕೊಂಡ ಸಾಹಿತ್ಯವದು. ಇಂದಿಗೂ ಇದು ಇಜವೇ ಆಗಿದೆ. ಮನುಷ್ಯ ಸಮಾಜಗಳ ಕ್ರೂರವಾದ ಮೇಲಾಟಗಳನ್ನು, ಅಧಿಕಾರದ ಹಿಂಸೆಯನ್ನು, ಪ್ರಭುತ್ವದ ಅಮಾನವೀಯತೆಯನ್ನು ತೀವ್ರವಾಗಿ ಧ್ಯಾನಿಸಿ ಬರೆದ ಕೃತಿಗಳು ಕನ್ನಡದಲ್ಲಿ ತುಂಬಾ ವಿರಳ. 'ನೆಲನಾಳ್ವನ ಹೆಣವ ಕೊಳ್ಳುವವರಿಲ್ಲ'ವೆನ್ನುವ ಬಸವಣ್ಣ, 'ನಿರಂಕುಶಮತಿಗಳಾಗಿ' ಎಂದ ಕುವೆಂಪು ಇಂಥ ಒಂದೆರಡು ಗಟ್ಟಿ ದನಿಗಳು ಮಾತ್ರ ಕೇಳಿಬಂದಿವೆ. ಕಳೆದ ಸರಿಸುಮಾರು ಒಂದು ಶತಮಾನದಲ್ಲಿ ಭಾರತವು ಕಂಡ ಮಹಾನ್ ಪಲ್ಲಟಗಳನ್ನು, ಉತ್ಪಾತಗಳನ್ನು ಅನುಭವಿಸಿ ಬರೆದ ಕೃತಿಗಳು ಕನ್ನಡದಲ್ಲಿ ಮೂರು ಅಥವಾ ನಾಲ್ಕು ಇರಬಹುದು. ಆದರೆ ಕನ್ನಡದಲ್ಲಿ ಬಂದಿರುವ ವಿಮರ್ಶೆಯು ನೂರಕ್ಕೆ ತೊಂಬತ್ತರಷ್ಟು ಅಪ್ರಾಮಾಣಿಕವಾದ ಗೊಡ್ಡು ವಿಮರ್ಶೆಯಾಗಿರುವದರಿಂದಾಗಿ, ಅದ್ಭುತ ಕೃತಿಗಳು ಬಂದಿವೆ ಎನ್ನುವ ಭ್ರಮೆಯಲ್ಲಿದ್ದೇವೆ. ಇಂದಿಗೂ ಪ್ರಕಟವಾಗುವ ಎಲ್ಲ ಕೃತಿಗಳು ಚೆನ್ನಾಗಿವೆಯೆಂದು ಬರೆಯುವ, ಹಲವಾರು ದಶಕಗಳಿಂದ ಎಲ್ಲವನ್ನು ವಿನಾಕಾರಣ ಪ್ರೀತಿಯಿಂದ ಆದರಿಸುವ ಗಣ್ಯ ವಿಮರ್ಶಕರ ಅಗ್ರಹಾರವೇ ನಮ್ಮಲ್ಲಿದೆ. ಈ ಅಗ್ರಹಾರದ ಆಚೆಗೆ ನಿಂತು ಪ್ರತಿಭಟನೆಯು ವಾಚ್ಯವಾಗಿರಲೇಬೇಕು, ಸೂಕ್ಷ್ಮವಾಗಿರಬಾರದು, ಅದು ಸಾಹಿತ್ಯವಾಗಿರದೇ ಇರುವುದು ಅದರ ರಾಜಕೀಯ ಬದ್ಧತೆಯ ಏಕಮಾತ್ರ ಲಕ್ಷಣವೆಂದೂ; ಹಾಗೆಂದು ಒಪ್ಪದೇ ಇರುವವರು ನಿತ್ಯನಾರಕಿಗಳೆಂದು ಮೂದಲಿಸುವ ಶಾಶ್ವತ ಪಡ್ಡೆಗಳಾದ ಬಂಡಾಯಗಾರರು ಕೈಯಲ್ಲಿ ಕಲ್ಲುಗಳನ್ನು ಹಿಡಿದುಕೊಂಡು ಸನ್ನದ್ಧರಾಗಿದ್ದಾರೆ. ಇವೆಲ್ಲವುಗಳ ಮಧ್ಯೆಯೇ ಮನುಷ್ಯರ ಬಗ್ಗೆ ಪ್ರೀತಿಯಿಂದ, ಅವರ ಬದುಕನ್ನು ಹಿಂಸಿಸಿ ಅಸಹ್ಯಗೊಳಿಸುವ ಎಲ್ಲಾ ಬಗೆಯ ಪ್ರಭುತ್ವಗಳ ಬಗ್ಗೆ ಗಾಢವಾದ ತಿಳುವಳಿಕೆಯಿಂದ ಬರೆಯುತ್ತ, ಬರುವ ಕಾಲದಲ್ಲಿಯೂ ಇವುಗಳ ಸಂಕೀರ್ಣ ರೂಪಕಗಳಾಗುವ ಶಕ್ತಿಯುಳ್ಳ ಕೃತಿಗಳನ್ನು ಹುಡುಕುವುದೆಂದರೆ "ಹೆಣಗಳ ರಾಶಿಯಲ್ಲಿ ಜೀವವನ್ನು ಹುಡುಕಿದಂತೆ".

ಆಧುನಿಕ ಯುಗದಲ್ಲಿ ಕನ್ನಡಕ್ಕೆ ಬಲ ಬಂದಿದ್ದು ಕನ್ನಡ ರಾಷ್ಟ್ರೀಯತೆ, ಏಕೀಕರಣ ಚಳುವಳಿಯ ಹಿಂದಿದ್ದ ಆದರ್ಶಗಳಿಂದ. ವಾಸ್ತವ ರಾಜಕೀಯದಲ್ಲಿ ಏಕೀಕರಣ ಚಳುವಳಿಯು ಈ ಪ್ರದೇಶದ ಎರಡು ಬಲಾಢ್ಯ ಜಾತಿಗಳು ಬ್ರಿಟಿಷ್ ಆಳ್ವಿಕೆ ಹಾಗೂ ಮೈಸೂರು ಸಂಸ್ಥಾನಗಳಿಂದ ಸವಲತ್ತುಗಳನ್ನು ಪಡೆದು ಯಜಮಾನಿಕೆಯ ಸ್ಥಾನಕ್ಕೆ ಬರಲು ನಡೆಸಿದ ಪೈಪೋಟಿಯ ಮಧ್ಯೆ ಉಸಿರಾಡಬೇಕಾಯಿತು. ಅಲ್ಲದೇ ಕಾಂಗ್ರೆಸ್ ರಾಜಕಾರಣ ಮತ್ತು ನೆಹರು ವಿರೋಧದ ಮಧ್ಯೆ ನಡೆದ ಆಧುನಿಕ ರಾಜಕಾರಣದ ರಾಜೀಕಬೂಲಿಯಿಂದಾಗಿ ಕರ್ನಾಟಕವು ರಾಜ್ಯವಾಗಿ ಅಸ್ತಿತ್ವಕ್ಕೆ ಬಂದಿತು. ಆದರೆ ಇಲ್ಲಿಯ ಜನ ಸಮುದಾಯಗಳು ಕನ್ನಡದ ಪ್ರಶ್ನೆಗಳನ್ನು ಭಿನ್ನವಾಗಿಯೇ ಕಂಡವು. ಹಾಗೆ ನೋಡಿದರೆ ಕನ್ನಡ, ಕನ್ನಡತ್ವವನ್ನು ಕಟ್ಟುವ ಪ್ರಕ್ರಿಯೆಯು ಮಹಿಳೆಯರನ್ನು, ದಲಿತರನ್ನು, ಕರ್ನಾಟಕದ ಮುಸ್ಲಿಂ ಸಂಸ್ಕೃತಿಯ ಕೊಡುಗೆಗಳನ್ನು ಹೊರಗೇ ಇಟ್ಟಿತು. ಜಾತಿ ವರ್ಗಗಳ ನಡುವಣ ಅಸಮಾನತೆಯನ್ನು ಸಪಾಟು ಮಾಡಿ ತೋರಿಸಲು ಕನ್ನಡತ್ವವು ಒಂದು ಸಾಧನವೂ ಆಯಿತು. ಆದರೆ ಬೇಂದ್ರೆ, ಕುವೆಂಪು, ಕಾರಂತರು ರಾಷ್ಟ್ರೀಯತೆಯೆನ್ನುವ ಬೃಹತ್ ಕಥನಗಳ ಬದಲಾಗಿ ತಮ್ಮ ಸುತ್ತಲಿನ ಸ್ಥಳೀಯ ಸಮುದಾಯಗಳಲ್ಲಿ ಆಗುತ್ತಿದ್ದ ಸೂಕ್ಷ್ಮ ಬದಲಾವಣೆಗಳನ್ನು ತಮ್ಮ ವಸ್ತುವನ್ನಾಗಿಸಿಕೊಂಡರು. ಕುವೆಂಪು, ಬೇಂದ್ರೆ ಇವರಿಬ್ಬರೂ ಕನ್ನಡತ್ವದ ಬಗ್ಗೆ ಭಾವುಕವಾಗಿ ಬರೆದರೂ ತಮ್ಮ ಸಮಾಜಗಳ ದ್ವಂದ್ವಗಳ ಬಗ್ಗೆ ಎಚ್ಚರವಾಗಿದ್ದರು. ಕುವೆಂಪು ಕಥನ ಪ್ರಪಂಚದಲ್ಲಿ ಪೀಂಚಲು, ನಾಯಿಗುತ್ತಿ, ತಿಮ್ಮಿ ಇವರೆಲ್ಲರೂ ಪ್ರತ್ಯಕ್ಷರಾಗಿದ್ದು ಮಾತ್ರವಲ್ಲ, ಅಲ್ಲಿಂದಾಚೆಗೆ ಹೊರಬಂದು ಕನ್ನಡ ಪ್ರಜ್ಞೆಯಲ್ಲಿ ಮನೆಮಾಡಿದ್ದು ಈಗಲೂ ಪವಾಡ ಸಹಜವಾಗಿಯೇ ಕಾಣುತ್ತದೆ. ಸ್ವಾತಂತ್ರ್ಯ ಹೋರಾಟ ಹಾಗೂ ಕನ್ನಡ ಪುನರುಜ್ಜೀವನದ ಭಾವಾವೇಶದ ಕಾಲದಲ್ಲಿ ಸಮಾಜವು ಪ್ರಾಯಶಃ ಸಾಹಿತ್ಯದಿಂದ ನಿರೀಕ್ಷಿಸಿದ್ದು ಆದರ್ಶದ ಅಮೂರ್ತಗಳನ್ನು. ಆದರೆ ಕುವೆಂಪು ಕಾರಂತರು ಕನ್ನಡ ಜಗತ್ತಿಗೆ ಮಲೆನಾಡು, ಸುಬ್ಬಮ್ಮ, ಸೀತೆ, ಸರೋತಿ, ಪಾರೋತಿಯರು, ಚೋಮ ಇವರನ್ನೆಲ್ಲ ತಂದು ನಿಲ್ಲಿಸಿ ಲಿಂಗತ್ವ ಜಾತಿ ಇವುಗಳನ್ನು ಮುನ್ನೆಲೆಗೆ ತಂದರು. ಕುವೆಂಪು ಅವರ ಏಕಲವ್ಯ, ಜಲಗಾರ, ಶಂಭೂಕ, ಇವರೆಲ್ಲ ಯುಗದ ಪ್ರತಿಮೆಗಳಾದರು; ಬೇಂದ್ರೆಯವರ ಕುರುಡು ಕಾಂಚಾಣದಂತೆ.



ಹಿನ್ನೋಟದಲ್ಲಿ ನೋಡಿದರೆ ಸಾಹಿತ್ಯದ ಬಗೆಗಿನ ಅನೇಕ ಸ್ವೀಕೃತ ಅಪೇಕ್ಷೆಗಳನ್ನು, ನಿರೀಕ್ಷೆಗಳನ್ನು ಒಡೆದವರು ಕುವೆಂಪು ಅವರೇ. ಕನ್ನಡ ಸಂಸ್ಕೃತಿ, ಪ್ರಧಾನ ಧಾರೆ ಇತ್ಯಾದಿ ಹೆಸರಿನಲ್ಲಿ ಕಟ್ಟಲಾಗಿದ್ದ ಏಕಶಿಲಾಕೃತಿಯನ್ನು ಶೂದ್ರ ಪ್ರಜ್ಞೆಯ ಅಭಿವ್ಯಕ್ತಿಯ ಮೂಲಕ, ಕೆಳಗಣ ಅನೇಕ ಲೋಕಗಳನ್ನು ಕೊನೇ ಪಕ್ಷ ನೋಡುವ ಕಣ್ಣಾಗಿ ಆಗಿಯಾದರೂ ಗ್ರಹಿಸುವ ಮೂಲಕ ಭಗ್ನಗೊಳಿಸಿದರು. ಜಾತಿ, ವರ್ಗ ಶೋಷಣೆ ಇವುಗಳಿಂದಾದ ಬಿರುಕುಗಳನ್ನು 'ಸಾಹಿತ್ಯ' 'ಸಂಸ್ಕೃತಿ' ಮುಂತಾದ ಸರಳ ಸಮನ್ವಯದ ಭೋಳೆ ಪರಿಕಲ್ಪನೆಗಳಿಂದ ಮುಚ್ಚಲಾಗದು ಎನ್ನುವ ಎಚ್ಚರವನ್ನು ಅವರು ತಂದರು. ಆದ್ದರಿಂದಲೇ ಅವರ ಎರಡು ಮಹಾಕಾದಂಬರಿಗಳು ವಿಘಟನೆಯ ಕಥನಗಳೇ. ಕಾನೂರು ಹೆಗ್ಗಡತಿಯ ಉಪಸಂಹಾರದಲ್ಲಿ ಬುದ್ಧನಿದ್ದಾನೆ; ಮಲೆಗಳಲ್ಲಿ ಮದುಮಗಳು ಕೃತಿಯಲ್ಲಿ ವಿವೇಕಾನಂದರಿದ್ದಾರೆ. ಆದರೆ ಇವೆರಡೂ ಪ್ರತಿಮೆಗಳು ಕಾದಂಬರಿಗಳ ಬಿಕ್ಕಟ್ಟುಗಳ ಜಗತ್ತಿಗೆ ಪರಿಹಾರವನ್ನು ತರುವುದಿಲ್ಲ. ಆಧುನಿಕತೆಯ ಪ್ರಕ್ರಿಯೆಯ ಎರಡು ಅಂಶಗಳ ಬಗ್ಗೆ ಅವರ ಕಾದಂಬರಿಗಳಿವೆ. ಸಾಹಿತ್ಯದ ಬಗೆಗಿನ ಹೊಸ ನಿರೀಕ್ಷೆಗಳ ಬಗ್ಗೆ ಅದು ಮಾಡಬಹುದಾದ ಕೆಲಸಗಳ ಬಗ್ಗೆ ನಾವು ಇಂದಿಗೂ ಕುವೆಂಪು ಅವರ ನುಡಿಗಟ್ಟಿನಲ್ಲಿಯೇ ಯೋಚಿಸುತ್ತೇವೆ. ಕನ್ನಡದ ದಲಿತ ಬರಹ ಈ ನುಡಿಗಟ್ಟಿನ ಆವರಣದ ಒಳಗೆಯೇ ಸೂಕ್ಷ್ಮ ಸಂವೇದಿಯಾದ ಕೆಲಸ ಮಾಡಿದೆ. ಹೊಸ ಲೋಕಗ್ರಹಿಕೆಗಳನ್ನು ಕೊಟ್ಟಿದೆ. ಇನ್ನುಳಿದ ಹಾಗೆ ಕನ್ನಡ ಸಾಹಿತ್ಯ ತನ್ನ ಮಧ್ಯಮ ದನಿಯನ್ನು ಮೀರಿದ ಸಂದರ್ಭಗಳು ತುಂಬಾ ಕಡಿಮೆ.

ಈ ವಾಸ್ತವಕ್ಕೆ ಹೋಲಿಸಿದರೆ ೮೦ರ ದಶಕದಿಂದೀಚೆಗೆ ಸಾಹಿತ್ಯದ ಬದ್ಧತೆ, ಅದು ತರಬಹುದಾದ ಸಾಮಾಜಿಕ ಬದಲಾವಣೆಗಳ ಬಗೆಗಿನ ನಿರೀಕ್ಷೆಗಳು ಅಸಂಗತವೆನಿಸುವಷ್ಟು ಅವಾಸ್ತವಿಕವಾಗಿವೆ. ನಾವು ಬಯಸುತ್ತಿರುವುದು ಸಾಹಿತ್ಯವನ್ನೋ, ಸಮಾಜಶಾಸ್ತ್ರವನ್ನೋ ರಾಜಕೀಯ activismಗೆ ಒಂದು ಪರ್ಯಾಯವೋ ಎನ್ನುವುದೇ ಸ್ಪಷ್ಟವಾಗುತ್ತಿಲ್ಲ. ಸಾಹಿತ್ಯದ ಹೊರತಾಗಿ ಅದು ಇನ್ನೆಲ್ಲವೂ ಆಗಬೇಕೆನ್ನುವ ಅಗಾಧವಾದ ನಿರೀಕ್ಷೆಗಳು ಸಾಹಿತ್ಯವನ್ನು intuitive ಆಗಿ ಗುರುತಿಸುವ, ಅನುಭವಿಸುವ ಕ್ರಮಗಳು ಈಗ ಇಲ್ಲವಾಗುತ್ತಿವೆ. ಆದರೆ ಇದನ್ನು ವಿವರಿಸುವ ನುಡಿಗಟ್ಟೂ ನಮ್ಮಲ್ಲಿಲ್ಲ. ಸಾಹಿತ್ಯದ ಸ್ವಾಯತ್ತತೆ, ಕಾವ್ಯಕ್ಕೊಂದಿಷ್ಟು ಇಂಬು ಇಂಥ ಮಾತುಗಳನ್ನು ಆಡಹೊರಟರೆ ನವ್ಯ ವಿಮರ್ಶೆಯ aesthetic ನೆಲೆಗೆ ಮರಳುತ್ತಿದ್ದೇವೆ ಎಂದು ಹೇಳಿಬಿಡಲಾಗುತ್ತದೆ. ಕೃತಿಯ ಓದು, ವಿಮರ್ಶೆ ಈ ಮಾತುಗಳನ್ನು ಹೇಳಿದರೆ ಅದನ್ನು ಸಾಮಾಜಿಕ ಬೇಜವಾಬ್ದಾರಿಯಾಗಿ ನೋಡಲಾಗುತ್ತದೆ. ಸಾಹಿತ್ಯಕ್ಕೇ ಈಗ ಪುರುಸೊತ್ತೇ ಇಲ್ಲದಂಥ ಸ್ಥಿತಿ ಬಂದಿದೆ. ಯಾಕೆಂದರೆ ಅದು ಇನ್ನೆಲ್ಲಾ ಆಗಬೇಕೆನ್ನುವ ನಿರೀಕ್ಷೆಗಳಿರುವುದರಿಂದ. ಸಾಹಿತ್ಯ ತನ್ನ ಸಾಮಾಜಿಕತೆಯನ್ನು ಪದೇ ಪದೇ ಸಾಬೀತುಮಾಡಬೇಕಾದ ಅನಾರೋಗ್ಯಕರ ಸಾಂಸ್ಕೃತಿಕ ಸ್ಥಿತಿಗೆ ತಲುಪಿದ್ದೇವೆಯೇ ಎನ್ನುವುದೇ ದೊಡ್ಡ ಆತಂಕವಾಗಿದೆ.

*

# ಸಮಾನ ಶಿಕ್ಷಣ: ಕೆಲವು ಟಿಪ್ಪಣಿಗಳು

–ರೂಪ ಹಾಸನ



ಹಳ್ಳಿಯೊಂದರ ಶಾಲೆಯಲ್ಲಿ ಮಕ್ಕಳ ಪ್ರಾರ್ಥನೆ

ಹಳ್ಳಿಗಳ ಸರ್ಕಾರಿ ಶಾಲೆಗಳ ಮಕ್ಕಳಿಗಾಗಿ ನಮ್ಮ ಪ್ರೇರಣಾ ವಿಕಾಸ ವೇದಿಕೆಯಿಂದ ನಡೆಸುವ ನಿರಂತರ ಕಾರ್ಯಕ್ರಮಗಳಿಂದಾಗಿ ಶಿಕ್ಷಣ ಕ್ಷೇತ್ರದಲ್ಲಿನ ಬಹಳಷ್ಟು ವಿಶೇಷಗಳು, ವೈರುಧ್ಯಗಳೂ ಕಣ್ಣಿಗೆ ಬೀಳುತ್ತಿರುತ್ತವೆ. ಈಗ್ಗೆ ೩–೪ ವರ್ಷದ ಹಿಂದೆ ಹಳ್ಳಿಯ ಶಾಲೆಯೊಂದರಲ್ಲಿ ಕಾರ್ಯಕ್ರಮದಲ್ಲಿದ್ದಾಗ ಹೆಣ್ಣುಮಕ್ಕಳೇ ಹೆಚ್ಚಾಗಿದ್ದರು. ಈಗ ಹೆಣ್ಣು ಮಕ್ಕಳಿಗೂ ಶಿಕ್ಷಣ ಕೊಡಬೇಕೆಂದು ಜನರಲ್ಲೂ ಜಾಗೃತಿ ಮೂಡಿದೆ ಎನಿಸಿ ಸಮಾಧಾನವಾಗಿತ್ತು. ಆದರೆ ಮುಂದೆ ಬೇರೆ ಹಳ್ಳಿಗಳ ಶಾಲೆಗಳಿಗೆ ಹೋದಾಗಲೂ ಹೆಣ್ಣುಮಕ್ಕಳೇ ಹೆಚ್ಚಾಗಿ ಕಾಣಲಾರಂಭಿಸಿದಾಗ ಸಂದೇಹ ಕಾಡಲಾರಂಭಿಸಿತು. ಸಮಾಜದಲ್ಲಿ ಹೆಣ್ಣುಮಕ್ಕಳು ಹುಟ್ಟುವ ಸಂಖ್ಯೆಯೇ ಗಣನೀಯ ಪ್ರಮಾಣದಲ್ಲಿ ಕುಸಿದಿರುವಾಗ, ಶಾಲೆಗಳಲ್ಲಿ ಹೆಣ್ಣುಮಕ್ಕಳು ಹೆಚ್ಚಾಗಿರಲು ಹೇಗೆ ಸಾಧ್ಯ? ಅನುಮಾನದಿಂದ ಶಿಕ್ಷಕ ಮಿತ್ರರನ್ನು ಅಡ್ಡಪ್ರಶ್ನೆ ಮಾಡಲಾರಂಭಿಸಿದಾಗ ತಿಳಿದದ್ದು.... ಈಗ ಹೆಚ್ಚಿನ ಸರ್ಕಾರಿ ಶಾಲೆಗಳಲ್ಲಿ ಉಳಿದಿರುವವರು ಬಡ ಹೆಣ್ಣುಮಕ್ಕಳು ಮತ್ತು ತಳಸಮುದಾಯದ ಮಕ್ಕಳು! ಹತ್ತಿರದಲ್ಲೆಲ್ಲೂ ಖಾಸಗಿ ಶಾಲೆಗಳಿಲ್ಲದೇ, ಅನಿವಾರ್ಯವಾಗಿ ಸರ್ಕಾರಿ ಶಾಲೆಯನ್ನೇ ಅವಲಂಬಿಸಬೇಕಾದಲ್ಲಿ ಮಾತ್ರ ಜಾತಿ, ವರ್ಗ, ಲಿಂಗ ಭೇದವಿಲ್ಲದೇ ಎಲ್ಲರೂ ಸರ್ಕಾರಿ ಶಾಲೆಗೇ ಬರುತ್ತಾರಷ್ಟೇ. ಆಯ್ಕೆ ಇದ್ದರೆ ಹೆಚ್ಚಿನ ಉಳ್ಳವರು ಬಯಸುವುದು ಕಾನ್ವೆಂಟ್‌ಗಳನ್ನೇ. ಅದರಲ್ಲೂ ಒಂದೇ ಮನೆಯಲ್ಲಿ ಗಂಡು–ಹೆಣ್ಣುಮಕ್ಕಳಿಬ್ಬರೂ ಇದ್ದರೆ, ಬಡತನವಿದ್ದರೂ ಕಷ್ಟಪಟ್ಟಾದರೂ ಗಂಡನ್ನು ಕಾನ್ವೆಂಟ್ ಶಾಲೆಗೆ ಸೇರಿಸಿ, ಹೆಣ್ಣನ್ನು ಸರ್ಕಾರಿ ಶಾಲೆಗೆ ಸೇರಿಸಲಾಗುತ್ತದೆ! ಸಮಾನ ಶಿಕ್ಷಣ ವ್ಯವಸ್ಥೆ ಇಲ್ಲದಿದ್ದರೆ, ದುರ್ಬಲರು, ಶೋಷಿತರು ಹೇಗೆ ಅಂಚಿಗೆ ತಳ್ಳಲ್ಪಡುತ್ತಾರೆ ಎಂಬುದಕ್ಕೆ ಇದೊಂದು ಉದಾಹರಣೆಯಷ್ಟೇ.

ಸ್ವಾತಂತ್ರ್ಯ ದೊರೆತ ಎರಡು ದಶಕಗಳ ನಂತರ ಹುಟ್ಟಿ, ಗ್ರಾಮೀಣ ಪ್ರದೇಶದ ಸಾಮಾಜಿಕ ಭೇದವಿಲ್ಲದೇ ಕಿಕ್ಕಿರಿದು ತುಂಬಿರುತ್ತಿದ್ದ ಸರ್ಕಾರಿ ಶಾಲೆಗಳಲ್ಲಿ ಓದಿದ ನನ್ನಂತವರಿಗೆ, ಕಳೆದೆರಡು ದಶಕಗಳಿಂದ ಆಗುತ್ತಿರುವ ವೇಗದ ಬದಲಾವಣೆ ದಿಗ್ಭ್ರಮೆ ಮೂಡಿಸುತ್ತಿದೆ. ನಮ್ಮ ಭಾರತಕ್ಕೆ ಇದೆಲ್ಲಾ ಏನಾಗಿ ಹೋಯ್ತು? ಎಲ್ಲೆಲ್ಲೂ ಅಸಮಾನತೆಯೇ ತಾಂಡವವಾಡುತ್ತಿರುವಂತೆ ಯಾಕೆ ಕಾಣುತ್ತಿದೆ? ಇದನ್ನು ಎಲ್ಲಿಂದ ಸರಿಪಡಿಸುವುದು? ಸರಿಪಡಿಸುವವರಾರು? ಹೇಗೆ ಸರಿಪಡಿಸುವುದು? ಎಂಬ ಪ್ರಶ್ನೆಗಳು ಕಾಡಲಾರಂಭಿಸುತ್ತವೆ.

ಸಮ ಸಮಾಜವೆಂಬ ಬಂಗಲೆಯ ಅಡಿಪಾಯವಾದ, ಸಮಾನ ಶಿಕ್ಷಣ ವ್ಯವಸ್ಥೆ ಎಂಬುದೇ ಒಂದು ಆದರ್ಶದ ಸ್ಥಿತಿ ಇರಬಹುದೇ? ಅದನ್ನು ಎಂದಿಗೂ ಸಾಧಿಸಲು ಸಾಧ್ಯವಾಗುವುದಿಲ್ಲವೇ? ಆದರೆ ಸಮಾನ ಶಿಕ್ಷಣ ವ್ಯವಸ್ಥೆಯನ್ನು ಉಳ್ಳ ಅಮೆರಿಕಾ, ಕ್ಯೂಬಾ, ಚೈನಾ, ರಷ್ಯಾ, ಬ್ರಿಟನ್ ರಾಷ್ಟ್ರಗಳು ಕಣ್ಣೆದುರಿಗಿವೆಯಲ್ಲಾ? ಅಲ್ಲಿ ಸಾಧ್ಯವಾಗಿದ್ದು ಇಲ್ಲೇಕೆ ಸಾಧ್ಯವಾಗುತ್ತಿಲ್ಲ? ಇಲ್ಲಿ ಅಂತಹ ಪ್ರಯತ್ನಗಳು ಆಗಲೇ ಇಲ್ಲವೇ? – ಚರಿತ್ರೆಯ ಗರ್ಭವನ್ನು ಬಗೆಯುತ್ತಾ ಹೊರಟರೆ, ಅಸಹನೀಯ ಸತ್ಯಗಳು ಕಣ್ಣ ಮುಂದೆ ನಲ್ಲುತ್ತವೆ.



ಭಾರತದಲ್ಲಿ ಬಹುಶಃ ಅತಿ ಹೆಚ್ಚು ಚರ್ಚೆಗೊಳಗಾಗಿದ್ದು ನಮ್ಮ ಶಿಕ್ಷಣ ವ್ಯವಸ್ಥೆ. ದೇಶದ ವಿವಿಧ ನ್ಯಾಯಾಲಯಗಳಲ್ಲಿ ಇಂದಿಗೂ ಶಿಕ್ಷಣಕ್ಕೆ ಸಂಬಂಧಿಸಿದ ೩೦೦೦ ಕೇಸುಗಳು ಜೀವಂತವಾಗಿರುವುದೇ ಇದಕ್ಕೆ ಸಾಕ್ಷಿ. ಎಷ್ಟೆಲ್ಲಾ ಸಂಘರ್ಷಗಳಾದರೂ ಸಂವಿಧಾನದ ಮೂಲ ಆಶಯವಾದ ಸಮಾನತೆ, ಸಾಮಾಜಿಕ ನ್ಯಾಯ, ತಾರತಮ್ಯರಹಿತವಾದ ಶಿಕ್ಷಣದಿಂದ ನಿಧಾನಕ್ಕೆ ದೂರ ಸರಿಯುತ್ತಾ, ಇವುಗಳನ್ನೇ ಒಡೆದು ದೊಡ್ಡ ಗೋಡೆಗಳನ್ನು ಕಟ್ಟಿ ಶ್ರೇಣೀಕೃತ ಶಿಕ್ಷಣ ವ್ಯವಸ್ಥೆಯನ್ನು ಬೆಳೆಸಲಾಗುತ್ತಿದೆಯೆಂಬುದೇ ದುರಂತ. ವರ್ಗ ಹಾಗೂ ಪಟ್ಟಭದ್ರ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವ ಬಂಡವಾಳಶಾಹಿಗಳ ಕಪಿಮುಷ್ಟಿಗೆ ಸಿಕ್ಕಿ ಇಂದು ಶಿಕ್ಷಣವೂ ಒಂದು ವ್ಯಾಪಾರವಾಗಿಬಿಟ್ಟಿದೆ. ಸಾಮಾಜಿಕ–ಆರ್ಥಿಕತೆಯ ದಟ್ಟವಾದ ತಾರತಮ್ಯಕ್ಕೆ ಒಳಗಾಗಿದ್ದ, ಅಸಮಾನತೆಯೇ ತಾಂಡವವಾಡುತ್ತಿದ್ದ ನಮ್ಮ ದೇಶ, ಸಮಾನತೆಯ ಆಶಯದ ಸಂವಿಧಾನವನ್ನು ರೂಪಿಸಿಕೊಂಡ ನಂತರವಾದರೂ ಇದನ್ನೆಲ್ಲಾ ಮೀರಲು ತನ್ನದೇ ಆದ ಸಶಕ್ತ ಸಮಾನ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕಿತ್ತಲ್ಲವೇ? ಪ್ರಯತ್ನಗಳು ಆಗಲೇ ಇಲ್ಲವೆಂದಲ್ಲ...

ಸಮಾನ ಶಾಲಾ ವ್ಯವಸ್ಥೆಯನ್ನು ಪ್ರತಿಪಾದಿಸುವ ೧೯೬೪–೬೬ರ ಕೊಠಾರಿ ಆಯೋಗ ಸಮಾನ ಶಿಕ್ಷಣದ ಆಶಯದ ಸಾರ್ವಜನಿಕ ಶಾಲಾ ವ್ಯವಸ್ಥೆಯ ಮೂಲಕ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಿ, ಸಾಮಾಜಿಕ ಬದಲಾವಣೆಯನ್ನು ತರುವ ದೊಡ್ಡ ಕನಸನ್ನು ಕಂಡಿತ್ತು. ಸಮಾನ ಶೈಕ್ಷಣಿಕ ವ್ಯವಸ್ಥೆಯು ದೇಶದ ಅಭಿವೃದ್ಧಿಗೆ ಭದ್ರ ತಳಪಾಯವಾಗುವುದಲ್ಲದೇ ರಾಷ್ಟ್ರೀಯ ಐಕ್ಯತೆಯನ್ನು ಸಾಧಿಸುವ ಆಶಯವಿತ್ತು. ಅದು ಸಾಕಾರವಾಗಿದ್ದರೆ ಬಹುಶಃ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಮಾತ್ರವಲ್ಲ ಸಾಮಾಜಿಕವಾಗಿಯೂ ಮಹತ್ತರವಾದ ಬದಲಾವಣೆಗಳಾಗಿರುತ್ತಿದ್ದವು. ಸಮಾನ ಶಿಕ್ಷಣ ವ್ಯವಸ್ಥೆಯಲ್ಲಿ ಮಕ್ಕಳ ಜಾತಿ, ಮತ, ಲಿಂಗ, ಆರ್ಥಿಕ–ಸಾಮಾಜಿಕ ಸ್ಥಿತಿ ಯಾವುದನ್ನೂ ಪರಿಗಣನೆಗೆ ತೆಗೆದುಕೊಳ್ಳದೇ ಎಲ್ಲರಿಗೂ ಶಿಕ್ಷಣವೆಂಬುದಕ್ಕೆ ಮಾತ್ರ ಪ್ರಾಮುಖ್ಯತೆ ನೀಡುವ ಆರೋಗ್ಯಕರವಾದ ಆಶಯವಿತ್ತು. ನೆರೆಹೊರೆ ಶಾಲಾ ಪದ್ಧತಿಯ ಮೂಲಕ ಒಂದು ಪ್ರದೇಶದ ಮಕ್ಕಳು ಯಾವುದೇ ಭೇದವಿಲ್ಲದೇ, ಒಂದೇ ಶಾಲೆಯಲ್ಲಿ ಓದುವ ವ್ಯವಸ್ಥೆಯ ಜೊತೆಗೆ ಸಂಪೂರ್ಣವಾಗಿ ಉಚಿತವಾದ ಶಿಕ್ಷಣವನ್ನು ಸರ್ಕಾರವೇ ನೀಡುವುದರೊಂದಿಗೆ ಕನಿಷ್ಠ ಮಟ್ಟದ ಮೂಲಭೂತ ಸೌಕರ್ಯಗಳನ್ನು ಎಲ್ಲಾ ಶಾಲೆಗಳೂ ಹೊಂದಬೇಕೆಂದು ವಿಧಿಸಲಾಗಿತ್ತು. ಎಲ್ಲಕ್ಕಿಂಥಾ ಮುಖ್ಯವಾಗಿ ಪ್ರಾಥಮಿಕ ಹಂತದವರೆಗೆ ಮಾತೃಭಾಷಾ ಶಿಕ್ಷಣವನ್ನು ಕಡ್ಡಾಯಗೊಳಿಸಲಾಗಿತ್ತು. ಇವು ಸಮಾನತೆಯನ್ನು ಬಯಸುವವರೆಲ್ಲರೂ ಒಪ್ಪಿಕೊಳ್ಳುವಂತಹಾ ಆಶಯಗಳೇ.



**ಪ್ರತಿಷ್ಠಿತ ಶಾಲೆಯಲ್ಲಿನ ಪವರ್ ಪಾಯಿಂಟ್ ಪಾಠ**

ಈ ಕೊಥಾರಿ ಆಯೋಗದ ಶಿಫಾರಸ್ಸಿನಂತೆ ಸಮಾನ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೊಳಿಸಲು ೧೯೬೮, ೧೯೮೬ ಮತ್ತು ೧೯೯೨ರ ರಾಷ್ಟ್ರೀಯ ಶಿಕ್ಷಣ ನೀತಿಗಳು ಭರವಸೆಯನ್ನೇನೋ ನೀಡಿದವು. ಆದರೆ ಅದನ್ನು ಜಾರಿಗೊಳಿಸುವ ಪ್ರಾಮಾಣಿಕ ಪ್ರಯತ್ನಗಳು ಆಗಲೇ ಇಲ್ಲ. ಈ ಉನ್ನತ ಕನಸಿನ ಸಾಕಾರಕ್ಕಾಗಿ ದೇಶದ ಒಟ್ಟು ಉತ್ಪನ್ನದ ಶೇಕಡ ೬ರಷ್ಟನ್ನು ಶಿಕ್ಷಣಕ್ಕೆ ಮೀಸಲಿಡಬೇಕೆಂದು ಕೊಥಾರಿ ಆಯೋಗ ಸೂಚಿಸಿದ್ದರೂ, ಇದುವರೆಗೂ ಯಾವ ಸರ್ಕಾರವೂ ಶೇಕಡ ೩ರ ಮೀಸಲನ್ನೂ ಮೀರಿಲ್ಲದಿರುವುದು ನಮ್ಮ 'ವ್ಯವಸ್ಥೆ'ಯಲ್ಲಿನ ಪಟ್ಟಭದ್ರ ಹಿತಾಸಕ್ತಿಗಳಿಗೆ ಶೈಕ್ಷಣಿಕ ಕ್ಷೇತ್ರದ ಬಗೆಗಿನ ನಿರ್ಲಕ್ಷ್ಯವನ್ನೂ, ಆಮೂಲಾಗ್ರ ಬದಲಾವಣೆಯ ಕನಸುಗಳಿಲ್ಲದಿರುವುದನ್ನು ಸೂಚಿಸುತ್ತದಲ್ಲವೇ? ಆಳುವ ವರ್ಗವಾಗಲೀ ಅಧಿಕಾರಶಾಹಿಯಾಗಲೀ ಕೊಥಾರಿ ಆಯೋಗದ ಮಹತ್ವವನ್ನು ಅರಿಯಲೇ ಇಲ್ಲ. ಅಥವಾ ಅರಿತರೂ ಅಸಮಾನತೆಯನ್ನೇ ಉಂಡುಡುವ ಪೂರ್ವಾಗ್ರಹಪೀಡಿತ ಮನಸ್ಸುಗಳು ಅದನ್ನು ಸದ್ದಿಲ್ಲದೇ ಪಕ್ಕಕ್ಕಿಟ್ಟವೋ? ಒಟ್ಟಿನಲ್ಲಿ ಶಿಫಾರಸ್ಸು ಮೂಲೆಗುಂಪಾಯ್ತು.

೧೯೮೬ರಲ್ಲಿ ಎಚ್ಚೆತ್ತ ಸರ್ಕಾರ, ಈ ಶಿಫಾರಸ್ಸು ಜಾರಿಯಾಗದೇ ಇರುವುದಕ್ಕೆ ಕಾರಣಗಳನ್ನು ಹುಡುಕಲು ಆಚಾರ್ಯ ರಾಮಮೂರ್ತಿ ಸಮಿತಿಯನ್ನು ನೇಮಿಸಿತು. ಅದು ಸಮುದಾಯದಲ್ಲಿ ತಾರತಮ್ಯ ಮತ್ತು ಸಾಮಾಜಿಕ ಅಸಮಾನತೆ ಆಳವಾಗಿ ಬೇರೂರಿರುವುದರಿಂದ ಪರಸ್ಪರರಲ್ಲಿ ಅಸಹನೆ ಬೆಳೆಯುತ್ತಿದೆ. ಇಂತಹ ಸಂದರ್ಭದಲ್ಲಿ ಸಮಾನ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಹೇರಲಾಗುವುದಿಲ್ಲ, ಗುಣಾತ್ಮಕ ಶಿಕ್ಷಣ ಬೇಕೆನಿಸಿದ ಪೋಷಕರು ತಮಗೆ ಬೇಕೆನಿಸಿದ ಕಾನ್ವೆಂಟ್‌ಗಳಿಗೆ ಮಕ್ಕಳನ್ನು ಕಳಿಸುತ್ತಾರೆ ಅಲ್ಲಿ ಜಾತಿ–ಮತಗಳ ತಾರತಮ್ಯವಿಲ್ಲ ಎಂದು ಹೇಳಿದ್ದರಲ್ಲಿ ಕೊಂಚ ಸತ್ಯಾಂಶವಿದೆಯಾದರೂ ಸರ್ಕಾರಿ ಮತ್ತು ಖಾಸಗಿ ಶಾಲೆಗಳ ಮಕ್ಕಳ ನಡುವಿನ ವರ್ಗ ತಾರತಮ್ಯ, ಹಾಗೂ ಆಂಗ್ಲಭಾಷೆ ಹಾಗೂ ಮಾತೃಭಾಷಾ ಮಾಧ್ಯಮದ ಮಕ್ಕಳ ನಡುವಿನ ವ್ಯತ್ಯಾಸ ಅಗಾಧವಾಗಿದೆ. ಸಮಾನ ಶಿಕ್ಷಣವೆಂಬುದು ಅಸಮಾನತೆಯನ್ನು ತೊಡೆಯುವಲ್ಲಿನ ಪ್ರಮುಖ ಅಸ್ತ್ರವಾಗಿರುವುದರಿಂದ, ಅದು ಹೇರಿಕೆಯಾಗದೇ ಕಷ್ಟವಾದರೂ ಎಲ್ಲರೂ ಅನುಸರಿಸಲೇ ಬೇಕಾದ ಕಾನೂನಾಗಬೇಕಲ್ಲವೇ? ಅಸಮಾನತೆಯ ಯಥಾಸ್ಥಿತಿಯೇ ಮುಂದುವರೆಯುವುದಾದರೆ ಇದನ್ನು ಸಂವಿಧಾನಬದ್ಧ ಪ್ರಜಾಪ್ರಭುತ್ವವಾದಿ ದೇಶವೆಂದು ಏಕೆ ಹೇಳಬೇಕು?

ಜೊತೆಗೆ ತಮ್ಮದೇ ಆದ ಶಾಲೆಗಳನ್ನು ತೆರೆದು ನಿರ್ವಹಿಸುವ ಹಕ್ಕು ಸಂವಿಧಾನದಲ್ಲಿಯೇ ಭಾಷಾ ಮತ್ತು ಧಾರ್ಮಿಕ ಅಲ್ಪಸಂಖ್ಯಾತರಿಗೆ ದೊರಕಿರುವುದರಿಂದ ಇದೂ ಸಮಾನ ಶಿಕ್ಷಣ ವ್ಯವಸ್ಥೆಗೆ ಮಾರಕ ಮತ್ತು ಸರ್ಕಾರವೇ ಒಂದು ಸೀಮಿತ ವರ್ಗಕ್ಕಾಗಿ ಸೈನಿಕ ಶಾಲೆ, ನವೋದಯ ವಿದ್ಯಾಶಾಲೆ, ಕೇಂದ್ರೀಯಶಾಲೆಗಳನ್ನು ನಡೆಸುವುದೇ ಸಂವಿಧಾನ ವಿರೋಧಿ ನಿಲುವು ಎಂದು ಸಮಿತಿ ಆರೋಪಿಸಿದ್ದರಲ್ಲಿಯೂ ವಾಸ್ತವಾಂಶವಿದೆ. ಆದರೆ ಅಲ್ಪಸಂಖ್ಯಾತರ ಹಕ್ಕುಗಳನ್ನು ಗೌರವಿಸುತ್ತಲೇ ಐಕ್ಯತೆಯ ಆಶಯವನ್ನೂ ಅಳವಡಿಸಿಕೊಳ್ಳಲು ಸಂವಿಧಾನದಲ್ಲೇ ಇರುವ ಅಪಾರ ಸಾಧ್ಯತೆಗಳೆಡೆಗೆ ನಾವಿಂದು ಗಮನಹರಿಸಬೇಕಾಗಿದೆ. ಇದರೊಂದಿಗೇ ಕಾನ್ವೆಂಟ್‌ಗಳು ದುಬಾರಿ ವಂತಿಗೆ, ಶುಲ್ಕ ಪಡೆದು ಉತ್ತಮ ಶೈಕ್ಷಣಿಕ ಹಾಗೂ ಮೂಲಭೂತ ಸೌಕರ್ಯವನ್ನು ನೀಡಲಾರಂಭಿಸಿದ್ದು, ಆ ಮಟ್ಟದ ವ್ಯವಸ್ಥೆಯನ್ನು ಒದಗಿಸಲು ಸರ್ಕಾರ ಸೋತಿದ್ದು, ಖಾಸಗಿಗೆ ಕಡಿವಾಣವಿಲ್ಲದ 'ಸರ್ಕಾರಿ ನುಸುಳುಗಳು' ಸಮಾನ ಶಿಕ್ಷಣ ವ್ಯವಸ್ಥೆಯ ಆಶಯಕ್ಕೆ ಧಕ್ಕೆಯಾಗಿವೆ. ಖಾಸಗಿ ಶಾಲಾ ವ್ಯವಸ್ಥೆ ಈ ೧೫–೨೦ವರ್ಷಗಳಲ್ಲಿ ಉಳ್ಳವರು–ಇಲ್ಲದವರ ಮಧ್ಯೆ ಬೃಹತ್ ಕಂದಕ ಸೃಷ್ಟಿಸಿಬಿಟ್ಟಿದೆ.

ಸಂವಿಧಾನದ ೩೫೦[ಎ] ಕಲಂ ಪ್ರಾಥಮಿಕ ಹಂತದವರೆಗಾದರೂ ಮಾತೃಭಾಷೆ ಶಿಕ್ಷಣಕ್ಕೆ ಆಯಾ ರಾಜ್ಯ ಸರ್ಕಾರಗಳು ಅನುವು ಮಾಡಿಕೊಟ್ಟು ಮಕ್ಕಳ ಹಕ್ಕನ್ನು ಕಾಪಾಡಬೇಕೆಂದು ಪ್ರತಿಪಾದಿಸುತ್ತದೆ. ೨೦೦೯ರಲ್ಲಿ ಜಾರಿಯಾದ ಶಿಕ್ಷಣ ಹಕ್ಕು ಕಾಯ್ದೆ ಕೂಡ ಇದನ್ನೇ ಹೇಳುತ್ತದೆ. ೧೯[ಎ]ಕಲಂ ಮಗುವಿನ ಮಾತೃಭಾಷೆಯ ಕಲಿಕೆಗೆ ಒತ್ತು ನೀಡುತ್ತದೆ. ಅದನ್ನು ನಿರ್ಲಕ್ಷಿಸಿ ಬೇರೆ ಭಾಷೆಯನ್ನು ಹೇರುವುದರಿಂದ ಮಕ್ಕಳ ನಿಜವಾದ ವ್ಯಕ್ತಿತ್ವ ಪೂರ್ಣಪ್ರಮಾಣದಲ್ಲಿ ಹೊರಹೊಮ್ಮಲು ಸಾಧ್ಯವಾಗುವುದಿಲ್ಲ. ಹೀಗಾಗಿ ಮಗು ತನ್ನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು, ಕ್ರಿಯಾಶೀಲತೆಯನ್ನೂ ಕಳೆದುಕೊಳ್ಳುತ್ತದೆ. ಆದರೆ ನಮ್ಮ ಸರ್ಕಾರಗಳು ಈ ಆಶಯಕ್ಕೆ ಗಂಭೀರವಾದ ಒತ್ತನ್ನು ನೀಡದಿರುವುದರ ಹಿಂದೆಯೂ ಹುನ್ನಾರಗಳಿವೆಯೇನೋ?

ಜಾಗತೀಕರಣದ ದಾಳಿಯಿಂದಾಗಿ ಪ್ರಾದೇಶಿಕ ಸಂಸ್ಕೃತಿ, ಭಾಷೆ, ಜಾನಪದೀಯ ಸತ್ವ ನಿಧಾನಕ್ಕೆ ಕಣ್ಮರೆಯಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಆಧುನಕ ಅವಶ್ಯಕತೆಗಳ ನೆಪ ಹೇಳಿ ನಾವೂ ಆಂಗ್ಲಭಾಷೆ ಕಲಿಕೆಯೆಡೆಗೆ ಮುಖ ಮಾಡುತ್ತಿದ್ದೇವೆ. ನಮ್ಮ ಉಚ್ಚ ನ್ಯಾಯಾಲಯವೂ ಶಾಲೆ ಹಾಗೂ ಭಾಷಾ ಮಾಧ್ಯಮದ ಆಯ್ಕೆಯ ಹಕ್ಕನ್ನು ಪೋಷಕರಿಗೇ ಕೊಟ್ಟಿದ್ದು ಸಮಾನ ಶಿಕ್ಷಣ ವ್ಯವಸ್ಥೆಯೆಡೆಗಿನ ಹಿನ್ನೆಡೆಯಾಗಿದೆ. ಕಳೆದ ೧೯ವರ್ಷದಿಂದ ನಡೆಯುತ್ತಿರುವ ಕರ್ನಾಟಕದ ಭಾಷಾ ಮಾಧ್ಯಮದ ವಿವಾದವನ್ನು ಮೊನ್ನೆ ಸರ್ವೋಚ್ಚ ನ್ಯಾಯಾಲಯ, ಇದರಲ್ಲಿ ಸಂವಿಧಾನಾತ್ಮಕ ತೊಡಕುಗಳಿರುವುದರಿಂದ ಸಾಂವಿಧಾನ ಪೀಠವೇ ಇದನ್ನು ಬಗೆಹರಿಸಲೆಂದು ಹೇಳಿ ಕೈ ತೊಳೆದುಕೊಂಡಿದೆ. ತೀರ್ಪು ಮಾತೃಭಾಷಾ ಮಾಧ್ಯಮದ ಪರವಾಗಿ ಬಂದರೆ ಭಾರತದ ಒಟ್ಟು ಶೈಕ್ಷಣಿಕ ವ್ಯವಸ್ಥೆಯೇ ಬದಲಾಗುವ ಸಾಧ್ಯತೆಗಳಿವೆ. ಹೀಗೆ ಸಮಾನ ಶಿಕ್ಷಣಕ್ಕಾಗಿ ನಡೆದ ಪ್ರಯತ್ನಗಳೆಲ್ಲವೂ ವಿಫಲವಾಗಿದ್ದಕ್ಕೆ ಬಹುಶಃ ನಮ್ಮನ್ನಾಳುವ ಪ್ರಭುಗಳಿಗೆ ಇಚ್ಛಾಶಕ್ತಿ ಇಲ್ಲದ್ದು, ಆಡಳಿತ'ಯಂತ್ರದ ವೈಫಲ್ಯ, ನ್ಯಾಯಾಂಗದ ವ್ಯತಿರಿಕ್ತ ತೀರ್ಪುಗಳು, ಜನರ ನಿರಾಸಕ್ತಿ ಕಾರಣವಿರಬಹುದೇ?

ಜಾಗತಿಕ ಮಾರುಕಟ್ಟೆಯ ಪ್ರಭಾವದಿಂದಲೇ ರೂಪಿತವಾದ ೨೦೦೯ರ ಶಿಕ್ಷಣ ಹಕ್ಕು ಕಾಯ್ದೆಯಿಂದ ಸಮಾನ ಶಿಕ್ಷಣ ಸಾಧ್ಯವೆಂದು ಸರ್ಕಾರ ಹೇಳುತ್ತಿದೆ. ಆದರೆ ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ್ದೆಂದರೆ, ಇದು 'ಉಚಿತ ಮತ್ತು ಕಡ್ಡಾಯ' ಶಿಕ್ಷಣ ಕಾಯ್ದೆಯೇ ಹೊರತು 'ಸಮಾನ' ಶಿಕ್ಷಣ ಕಾಯ್ದೆಯಲ್ಲ! ಶೇಕಡಾ ೨೫ರ ಹಿಂದುಳಿದ ವರ್ಗಗಳ ಮೀಸಲಾತಿ ಈಗಾಗಲೇ ಸಕಾರಾತ್ಮಕವಾಗಿ ಅನುಷ್ಠಾನಕ್ಕೆ ಬರುತ್ತಿಲ್ಲ. ಜೊತೆಗೆ ಈ ಮೀಸಲಾತಿಯೇ ಕೆಲವೇ ವರ್ಷಗಳಲ್ಲಿ ಸರ್ಕಾರಿ ಶಿಕ್ಷಣ ವ್ಯವಸ್ಥೆಗೆ ಮಾರಕವಾಗಿ ಶಾಲೆಗಳು ಮುಚ್ಚಲ್ಪಟ್ಟರೆ, ಇನ್ನೂ ಶಾಲೆಯಿಂದ ಹೊರಗುಳಿದ ಲಕ್ಷಾಂತರ ಮಕ್ಕಳಿಗೆ ಶಿಕ್ಷಣ ಕೊಡುವವರಾರು? ಲಾಭಕ್ಕಾಗಿ ಶಾಲೆಯೆಂಬ ಅಂಗಡಿಗಳನ್ನು ತೆರೆದಿರುವ ಖಾಸಗಿಯವರು ಕಾಳಜಿಯಿಂದ ಮಕ್ಕಳನ್ನು ಹುಡುಕಿ ತಂದು ಶಿಕ್ಷಣ ನೀಡುವ ಜವಾಬ್ದಾರಿ ಹೊರುತ್ತಾರೆಯೇ? ಎಲ್ಲವನ್ನೂ ಖಾಸಗಿಯವರೇ ನಿರ್ವಹಿಸುವುದಾದರೆ ಸರ್ಕಾರದ ಹೊಣೆಗಾರಿಕೆಯೇನು? ಖಾಸಗಿಗೆ ಕಡಿವಾಣ ಸಾಧ್ಯವಿಲ್ಲವೆಂದಾದರೆ ಶಿಕ್ಷಣ ರಾಷ್ಟ್ರೀಕರಣವೊಂದೇ ಅಂತಿಮ ಮದ್ದಾಗಬೇಕಾಗುವುದು.

'ಮಾತೃಭಾಷೆ ಮತ್ತು ಅಲ್ಪಸಂಖ್ಯಾತರ ಹಕ್ಕುಗಳನ್ನು ಒಳಗೊಂಡೇ ಸಮಾನ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಬೇಕು. ಖಾಸಗಿ ಶಿಕ್ಷಣ ವ್ಯವಸ್ಥೆ ತಾರತಮ್ಯಕ್ಕಾಗಿಯಲ್ಲದೇ ಲಾಭಕ್ಕಾಗಿಯಲ್ಲದೇ ಸರ್ಕಾರದ ನಿಯೋಜಿತ ಸಂಸ್ಥೆಯಾಗಿ ಕಾರ್ಯನಿರ್ವಹಿಸಬೇಕು. ರಾಜ್ಯ ಸರ್ಕಾರದ ಆದೇಶ–ಶಿಸ್ತು ಮತ್ತು ರಾಷ್ಟ್ರೀಯ ಶೈಕ್ಷಣಿಕ ನೀತಿಯಡಿಯೇ ಕೆಲಸ ಮಾಡಬೇಕು. ೬ ವರ್ಷಕ್ಕೆ ಮೊದಲಿನಿಂದ ಹಿಡಿದು ೧೪ ವರ್ಷದವರೆಗೆ ಸಂಪೂರ್ಣ ಉಚಿತ ಶಿಕ್ಷಣ, ಸರ್ಕಾರ ನೀಡಬೇಕು ಮತ್ತು ವಿಕೇಂದ್ರಿತ ನೆಲೆಯಲ್ಲಿ ಶಿಕ್ಷಣ ಸಂಸ್ಥೆಗಳಿಗೆ ಹಣಕಾಸು ನೆರವನ್ನು ಸರ್ಕಾರವೇ ನೀಡಬೇಕು. ಸಂವಿಧಾನದ ಸಮಾನತೆಯ ತತ್ವಕ್ಕೆ ಬದ್ಧವಾಗಿ ಶಿಕ್ಷಣ ವ್ಯವಸ್ಥೆಯಿರಬೇಕು. ಸಮಾನ ಶಿಕ್ಷಣವನ್ನು ಏಕರೂಪ ಶಿಕ್ಷಣವೆಂದು ಗ್ರಹಿಸಿದ್ದರಿಂದ ಇದರ ಬಗ್ಗೆ ದ್ವಂದ್ವವೇರ್ಪಟ್ಟಿದೆ. ಅದನ್ನು ಸರಿಯಾದ ಕ್ರಮದಲ್ಲಿ ತಿಳಿಹೇಳಿ ಜನಾಭಿಪ್ರಾಯ ಮೂಡಿಸಬೇಕು' ಎನ್ನುತ್ತಾರೆ ಖ್ಯಾತ ಶಿಕ್ಷಣತಜ್ಞ ಅನಿಲ್ ಸದ್ಗೋಪಾಲ್. ಇತ್ತೀಚೆಗೆ ಕರ್ನಾಟಕ ಸರ್ಕಾರ ನೆರೆಹೊರೆ ಶಾಲಾ ನಿಯಮವನ್ನು ಅನುಸರಿಸಿ ಪಬ್ಲಿಕ್ ಶಾಲೆಗಳನ್ನು ಸದ್ಯಕ್ಕೆ ಪ್ರತಿ ಜಿಲ್ಲೆಯ ಒಂದು ಗ್ರಾಮ ಪಂಚಾಯಿತಿಯಲ್ಲಿ ಪ್ರಾಯೋಗಿಕವಾಗಿ ಸ್ಥಾಪಿಸುವ ಪ್ರಸ್ತಾಪ ಮಾಡಿದೆ. ಸುತ್ತಲಿನ ಸರ್ಕಾರಿ ಶಾಲೆಗಳನ್ನು ಇದರಲ್ಲಿ ವಿಲೀನಗೊಳಿಸುವ ಉದ್ದೇಶವಿದೆ. ಆದರೆ ಈ ನಿಯಮ ಸರ್ಕಾರಿ ಶಾಲೆಗಳಿಗೆ ಮಾತ್ರ ಅನ್ವಯಿಸಿ ಖಾಸಗಿ ಶಾಲೆಗಳನ್ನು ಇದರಿಂದ ಹೊರಗಿಟ್ಟರೆ ಅದು ಅಸಮಾನತೆಯನ್ನು ಮತ್ತಷ್ಟು ವೃದ್ಧಿಸುವುದಿಲ್ಲವೇ?

ವೈವಿಧ್ಯತೆಯ ಭಾರತ ದೇಶಕ್ಕೆ ಐಕ್ಯತೆಯನ್ನು ಕಲಿಸಲಾಗುವುದು ಸಮಾನ ಶಿಕ್ಷಣ ವ್ಯವಸ್ಥೆಯಿಂದ. ಇದನ್ನು ಗುರಿಯೆಡೆಗಿನ ಪಯಣವಾಗಿಸಿ, ಹಂತ ಹಂತವಾಗಿ ಸಮಾನತೆಯನ್ನು
ಅನುಷ್ಠಾನಗೊಳಿಸಲು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಸರ್ಕಾರ ಮನಸ್ಸು ಮಾಡಿದರೆ ಬದಲಾವಣೆ ಸಾಧ್ಯ ಎಂಬುದು ನನ್ನ ನಂಬುಗೆ.

ಆದರೆ ಈ ದಿಸೆಯಲ್ಲಿ ನಡೆದ ಪ್ರಯತ್ನಗಳೆಲ್ಲವೂ ವಿಫಲವಾಗಿದ್ದಕ್ಕೆ ಯಾರು ಕಾರಣ? ಬಹುಶಃ ನಮ್ಮನ್ನಾಳುವ ಪ್ರಭುಗಳಿಗೆ ಇಚ್ಛಾಶಕ್ತಿ ಇಲ್ಲದ್ದು, ಆಡಳಿತ ಯಂತ್ರದ ವೈಫಲ್ಯ, ಪ್ರಜೆಗಳ ನಿರಾಸಕ್ತಿ ಕಾರಣವಿರಬಹುದೇ?

*

---

೩೯ನೇ ಪುಟದಿಂದ)

ತಾನು ರಕ್ಷಿಸಿಕೊಳ್ಳಲು ಹಿಂಸೆಯನ್ನು ಆಶ್ರಯಿಸಿ ಕ್ರಿಯಾಶೀಲವಾಗುತ್ತದೆ. ಹಿಂಸೆಗಿಂತ ಭಿನ್ನವಾದ ಪರಿಹಾರ ಕ್ರಮ ಮನುಷ್ಯನ ಸಮೂಹ ಮನಸ್ಸಿಗೆ ಇನ್ನೂ ಅಪರಿಚಿತ. ಬೌದ್ಧಿಕ ನೆಲೆಯಲ್ಲಿ ಅನೇಕ ಪರ್ಯಾಯ ಮಾರ್ಗಗಳನ್ನು ನಾವು ಕಂಡು ಕೊಂಡಿರುವುದು ನಿಜ. ಆದರೆ ಈ ಅರಿವು ಸಮೂಹ ಮನಸ್ಸಿನ ಭಾಗವಾಗುವುದು ಹೇಗೆ?

ಸಾಂಸ್ಕೃತಿಕ ವೈವಿಧ್ಯತೆಯನ್ನು ಅದರ ಪರಿಣಾಮವನ್ನು ಗಮನಿಸಿದಾಗ ಒಂದು ಸಾಧ್ಯತೆ ಕಂಡು ಬರುತ್ತದೆ. ವೈವಿಧ್ಯತೆಗಳ ನಡುವೆ ಹೊಂದಿಕೊಂಡು ಬಾಳಬೇಕಾದ ಅನಿವಾರ್ಯತೆಯೇ ಈ ಸಾಧ್ಯತೆಯ ಸೆಲೆ. ವೈವಿಧ್ಯಮಯ ಸಾಂಸ್ಕೃತಿಕ ಪರಿಸರದಲ್ಲಿ ತನ್ನದಲ್ಲದ ವಿಚಾರಗಳನ್ನು, ತನ್ನದಲ್ಲದ ನಂಬಿಕೆಗಳನ್ನು, ತನ್ನದಲ್ಲದ ಆಚರಣೆಗಳನ್ನು ತಾಳಿಕೊಳ್ಳಬೇಕಾದ

ಂದು ಅನಿವಾರ್ಯತೆ ಸಮೂಹ ಮನಸ್ಸಿಗೆ ಬಂದೊದಗುತ್ತದೆ. ಈ ಅನಿವಾರ್ಯತೆಯಲ್ಲಿ ಪಳಗಿದ ಮನಸ್ಸು ತಾಳ್ಮೆಯನ್ನೂ ಸಹಿಷ್ಣುತೆಯನ್ನೂ ಬೆಳೆಸಿಕೊಳ್ಳುತ್ತದೆ. ತನ್ನದಲ್ಲದ್ದನ್ನು ಎದುರಿಸಿದಾಗ ಹುಟ್ಟುವ ಪ್ರತಿರೋಧವನ್ನು ನಿಯಂತ್ರಣ ಮಾಡಿಕೊಂಡು ಕ್ರಮೇಣ ಅದಕ್ಕೆ ಗೌರವ ಕೊಡಬೇಕಾದ ಅನಿವಾರ್ಯತೆಯನ್ನು ಮನಗಂಡು ಗೌರವಿಸುವ ಮನೋಧರ್ಮ ಬೆಳೆಯುತ್ತದೆ. ಈ ಪ್ರಕ್ರಿಯೆ ಅನೇಕ ಶತಮಾನಗಳ ಪರ್ಯಂತ ನಡೆಯುವುದರಿಂದ ಈ ಮನೋಧರ್ಮ ಸಮೂಹ ಮನಸ್ಸಿನಲ್ಲಿ ಗಟ್ಟಿಗೊಳ್ಳುತ್ತಾ ಹೋಗುತ್ತದೆ. ಇದಕ್ಕೆ ಪೂರಕವಾಗಿ ಕೆಲವಾದರೂ ಸೃಜನಶೀಲ ಮನಸ್ಸುಗಳು ಕೆಲಸ ಮಾಡುವುದರಿಂದ ಈ ಸಂಬಂಧವಾದ ನುಡಿಗಟ್ಟುಗಳು, ನೀತಿಕಥೆಗಳು, ಜೀವನ ಪ್ರಸಂಗದ ಸ್ಮೃತಿಗಳು, ಜಾನಪದ – ಹೀಗೆ ಈ ಎಲ್ಲವೂ ಸಮೂಹ ಮನಸ್ಸಿನ ಮೇಲೆ ಪ್ರಭಾವ ಬೀರುತ್ತದೆ. ಎಲ್ಲವನ್ನೂ ಹಿಂಸೆಯಿಂದಲೇ ಎದುರುಗೊಳ್ಳುವ ಮನಸ್ಸು ಇಂತಹ ಒಂದು ಅನಿವಾರ್ಯತೆಯಲ್ಲಿ ಪಳಗಿ ಅಹಿಂಸೆಯ ಸಾಧ್ಯತೆಯನ್ನು ಕಂಡುಕೊಳ್ಳುತ್ತದೆ. ಹೀಗೆ ಸಾಂಸ್ಕೃತಿಕ ವೈವಿಧ್ಯತೆ ಹಿಂಸೆಯನ್ನು ಕಡಿಮೆ ಮಾಡುವ ಸಾಧನವಾಗಿ ಪರಿಣಮಿಸುತ್ತದೆ.

ಸಾಂಸ್ಕೃತಿಕ ವೈವಿಧ್ಯತೆಯೇ ಇಲ್ಲದೆ ಬದುಕಿ ಬಂದ ಜನಸಮುದಾಯಗಳಿಗೆ ತನ್ನದಲ್ಲದ್ದನ್ನು ಸಹಿಸಬೇಕಾದ ಅನಿವಾರ್ಯತೆಗಳೇ ಇಲ್ಲದಿರಬಹುದು. ಒಂದೇ ರೀತಿಯ ಬದುಕು, ಒಂದೇ ರೀತಿಯ ಆಚರಣೆಗಳು ಹೀಗೆ ಏಕರೂಪ ಸಾಂಸ್ಕೃತಿಕ ಪರಿಸರದಲ್ಲಿ ಶತಮಾನಗಳ ಕಾಲ ವಿಕಾಸವಾದ ಅವರ ಮನಸ್ಸು ತನ್ನದಲ್ಲದ ಯಾವುದನ್ನೂ ಸಹಿಸುವ–ಗೌರವಿಸುವ ಪರಿಪಾಠವನ್ನು ಕಲಿಯುವುದೇ ಇಲ್ಲ. ತನ್ನದಲ್ಲದ ಯಾವುದೇ ಒಂದು ಎದುರಾದಾಗ ಅದು ತನ್ನ ಅಸ್ತಿತ್ವಕ್ಕೆ ಧಕ್ಕೆ ತರುತ್ತದೆಂದೂ ಆದ್ದರಿಂದ ಈ ಆಗಂತುಕವಾದದ್ದನ್ನು ನಿವಾರಿಸಿಕೊಳ್ಳಬೇಕೆಂದು ಭಾವಿಸುತ್ತದೆ. ಇಂತಹ ಒಂದು ಸಮೂಹ ಮನಸ್ಸಿಗೆ ಚಿರಪರಿಚಿತವಾದ ನಿವಾರಣೋಪಾಯ ಎಂದರೆ ಅದು ಹಿಂಸೆ.

ಭಾರತದ ಸಂದರ್ಭದಲ್ಲಿ ಅಹಿಂಸೆಯ ದೊಡ್ಡ ಇತಿಹಾಸವೇ ಇದೆ. ಸುಮಾರು ಎರಡೂವರೆ ಸಾವಿರ ವರ್ಷದ ಹಿಂದೆಯೇ ಅಹಿಂಸೆಯನ್ನು ತನ್ನ ಧರ್ಮದ ಮೂಲಸ್ತಂಭವಾಗಿ ಸ್ಥಾಪಿಸಿದ ಜೈನಧರ್ಮ ಅಂಕುರವಾಯಿತು. ಎಂದರೆ ಇದಕ್ಕೆ ಹಿಂದೆಯೇ ಅನೇಕ ಶತಮಾನಗಳ ಕಾಲದಿಂದಲೂ ಸಾಂಸ್ಕೃತಿಕ ವೈವಿಧ್ಯತೆಯ ಈ ದೇಶದಲ್ಲಿ ಸಮೂಹ ಮನಸ್ಸು ಹಿಂಸೆಗೆ ಹೊರತಾದ ಒಂದು ಮನೋಧರ್ಮವನ್ನು ಬೆಳೆಸಿಕೊಂಡಿತ್ತು. ಮುಂದಿನ ಇಪ್ಪತ್ತೈದು ಶತಮಾನಗಳ ಕಾಲ ಇದೇ ಮನೋಧರ್ಮ ಜನಮಾನಸದಲ್ಲಿ ಹೆಚ್ಚು ಗಾಢವಾಗುತ್ತಾ ಬಂತು. ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಗಾಂಧೀಜಿ ಇದನ್ನೇ ಅಸ್ತ್ರವಾಗಿ ಬಳಸಿಕೊಂಡರು. ಅಹಿಂಸೆ ಕೇವಲ ಬೌದ್ಧಿಕವಾಗಿ ಕಡೆದು ತೆಗೆದ ಸಿದ್ಧಾಂತವಾಗಿದ್ದರೆ ಗಾಂಧೀಜಿ ಯಶಸ್ವಿಯಾಗುತ್ತಿರಲಿಲ್ಲ. ಅಹಿಂಸೆ ಹುಟ್ಟುವುದು ಹಿಂಸೆಯನ್ನು ಬುದ್ಧಿ ಪೂರ್ವಕವಾಗಿ ನಿರಾಕರಿಸುವುದರಿಂದ ಅಲ್ಲ. ಹಾಗೆ ನಿರಾಕರಿಸಲು ಅದು ಬುದ್ಧಿಗೆ ಎಟುಕುವ ಸಾಧ್ಯತೆಯೂ ಇಲ್ಲ. ಅನೇಕ ಶತಮಾನಗಳ ಕಾಲ ಸಮೂಹ ಮನಸ್ಸು ವೈವಿಧ್ಯತೆಯ ನಡುವೆ ಪಳಗಬೇಕು, ಜನಮಾನಸದಲ್ಲಿ ಸಾಹಿತ್ಯ, ಕಲೆ, ನೃತ್ಯ, ಸಂಗೀತಗಳು ಅಹಿಂಸೆಗೆ ಪೂರಕವಾಗಿ ಸಹಿಷ್ಣುತೆಯನ್ನು, ತನ್ನದಲ್ಲದ್ದನ್ನು ಗೌರವಿಸುವ ಒಂದು ಮನೋಧರ್ಮವನ್ನು ರೂಪಿಸಬೇಕು. ಆಗಂತುಕವಾದದ್ದೆಲ್ಲವೂ ವಿನಾಶಕಾರಿ ಎಂಬ ಭ್ರಮೆಯಿಂದ ಪಾರಾಗಬೇಕು. ಆಗ ಅಹಿಂಸೆ ಸಮೂಹ ಮನಸ್ಸಿನ ಭಾಗವಾಗಬಹುದು.

ಚೀನಾದೇಶದ ಚಿಂತಕರು ಇತ್ತೀಚೆಗೆ ಸಾಂಸ್ಕೃತಿಕ ವೈವಿಧ್ಯತೆಯನ್ನು ಗೌರವಿಸುವ ಕುರಿತು ವಿಚಾರ ಮಂಡಿಸುತ್ತಿರುವುದನ್ನು ರಾಮಚಂದ್ರ ಗುಹ ಅವರು ಬರೆದಿದ್ದಾರೆ. ಟಿಬೆಟ್ಟನ್ನು ಅದರ ಪಾಡಿಗೆ ಅದನ್ನು ಬಿಡಬೇಕಾಗಿತ್ತು; ದೇಶ ಎಂಬುದು ಕೇವಲ 'ಜನ' ಗಳ ಸಮೂಹವಲ್ಲ, ಅಲ್ಲಿ 'ವ್ಯಕ್ತಿ' ಗಳಿದ್ದಾರೆ ಎಂದು ವಾದಿಸಿದರಂತೆ. ಇದೊಂದು ಅತ್ಯಂತ ಆರೋಗ್ಯಪೂರ್ಣ ಬೆಳವಣಿಗೆ ಅನ್ನಿಸುತ್ತದೆ. ಮಾರಾಟದ ಅನುಕೂಲಕ್ಕಾಗಿ ಏಕರೂಪ ಸಂಸ್ಕೃತಿಯನ್ನು ಇಡೀಜಗತ್ತಿನ ಮೇಲೆ ಹೇರುತ್ತಿರುವ ಜಾಗತೀಕರಣವೇ ನಮ್ಮ ಎದುರಿಗಿರುವ ಬಹುದೊಡ್ಡ ಆತಂಕ. ಜಾಗತಿಕ ಮಾರುಕಟ್ಟೆ ಜನರ ದೌರ್ಬಲ್ಯಗಳನ್ನೆ ಬಂಡವಾಳ ಮಾಡಿಕೊಂಡು ಬೆಳೆಯುತ್ತಿರುವುದರಿಂದ, ಈ ದೌರ್ಬಲ್ಯಗಳು ವಿಚಾರ ಕೈಗೆಟುಕದಂತಹ ಆಳದಲ್ಲಿ ಹುದುಗಿರುವುದರಿಂದ ಸಮಸ್ಯೆ ದೊಡ್ಡದಾಗುತ್ತ ಹೋಗುತ್ತದೆ. ಮನುಕುಲದ ಅಳಿವು–ಉಳಿವು ವೈವಿಧ್ಯತೆಯನ್ನು ಉಳಿಸಿಕೊಳ್ಳುವ ಮನೋಧರ್ಮವನ್ನವಲಂಬಿಸಿದೆ.

*


# ಉನ್ನತ ಶಿಕ್ಷಣದ ಇಂದಿನ ಸವಾಲುಗಳು

–ಡಾ. ಎಚ್.ಎಸ್. ರಾಘವೇಂದ್ರ ರಾವ್



**ಈ** ವಿಷಯವನ್ನು ಕುರಿತ ಮಾಮೂಲಾದ ಗೋಣಗಾಟ ಮತ್ತು ತುಟಿ ಮರುಕಗಳನ್ನು ಬರೆಯುವದರಲ್ಲಿ ನನಗೆ ಅಷ್ಟು ಆಸಕ್ತಿಯಿಲ್ಲ. ಅವು ನಿಮಗೂ ತಿಳಿದಿರುತ್ತವೆ. ಶಿಕ್ಷಣವೇ ಇರಲಿ, ಅಥವಾ ಅಂತಹುದೇ ಬೇರೊಂದು ಸಂಗತಿಯಿರಲಿ, ಅವು ಸಮಾಜದ ರಾಜಕೀಯ ಸನ್ನಿವೇಶದೊಂದಿಗೆ ತಳುಕು ಹಾಕಿಕೊಂಡಿರುತ್ತದೆ. ಪ್ರಜಾಪ್ರಭುತ್ವದ ಹೆಸರಿನಲ್ಲಿ ವರ್ಗಪ್ರಭುತ್ವ ಮತ್ತು ಜಾತಿಪ್ರಭುತ್ವಗಳನ್ನು ಸಲಹುತ್ತಿರುವ ನಮ್ಮ ವ್ಯವಸ್ಥೆಯು ಸಹಜವಾಗಿ ಅವುಗಳ ಹಿತವನ್ನು ಕಾಪಾಡುತ್ತದೆ. ಎಲ್ಲ ಶಿಕ್ಷಣದ ಗುರಿಯೂ ಅದು ತನಗಾಗಿ ಸೃಷ್ಟಿಸಿಕೊಂಡಿರುವ ಅಗತ್ಯಗಳನ್ನು ಆದಷ್ಟು ಅಗ್ಗವಾಗಿ ಕೊಡಬಲ್ಲ ಕೆಲಸಗಾರರ ಸೃಷ್ಟಿಯಾಗಿದೆ. ಇಲ್ಲಿ ಸುಶಿಕ್ಷಿತರು ಬಲಿಷ್ಠರ ಹಿಡಿತದಲ್ಲಿದಲ್ಲಿಯೇ ಇರುತ್ತಾರೆ. ಉಳಿದುದೆಲ್ಲ ಬುರುಗು ಮಾತು. ಆದ್ದರಿಂದ ವ್ಯಾಪಾರಿಗಳಿಗೆ, ಕೈಗಾರಿಕೋದ್ಯಮಗಳಿಗೆ ಅಗತ್ಯವಾದುದನ್ನು ಸರಬರಾಜು ಮಾಡುವ ಏಜೆಂಟ್ ಆಗಿ ಶಿಕ್ಷಣ ಸಂಸ್ಥೆಗಳು ದುಡಿಯಬೇಕು. ಆದರೆ, ಬ್ರಿಟಿಷರಿಂದ ನಮಗೆ ದತ್ತವಾದ ಲಿಬರಲ್ ಎಜುಕೇಷನ್ನಿನ ಒತ್ತಾಯಗಳನ್ನು ಮೇಲು ನೆಲೆಯಲ್ಲಿ ಕಾಪಾಡಿಕೊಳ್ಳುವ ಅನಿವಾರ್ಯವೂ ಈ ವ್ಯವಸ್ಥೆಗೆ ಇದೆ. ಆದ್ದರಿಂದ ಉನ್ನತ ಶಿಕ್ಷಣದ ಮುಖಕ್ಕೂ ಮುಖವಾಡಕ್ಕೂ ಅಂತರ ಹುಟ್ಟಿಕೊಂಡಿದೆ. ಸಮಾಜ ವಿಜ್ಞಾನಗಳು ಮತ್ತು ಮಾನವಿಕಗಳ ಮಾತು ಹಾಗಿರಲಿ, ಶುದ್ಧ ವಿಜ್ಞಾನಗಳು ಕೂಡ ಅನುಭವಿಸಿರುವ ಹಿನ್ನಡೆಯು ಈ ಮಾತಿಗೆ ಸಾಕ್ಷಿ. ಬದಲಾಗಿ 'ಮ್ಯಾನೇಜ್ ಮೆಂಟ್'.ಎಂಬ ಹೆಸರಿನ ವ್ಯಾಪಾರಬುದ್ಧಿವಂತಿಕೆಗೆ ಇನ್ನಿಲ್ಲದ ಮಹತ್ವ ದೊರೆತಿರುವುದು ಇದರ ಇನ್ನೊಂದು ಮುಖ. ಆದ್ದರಿಂದ ಉನ್ನತ ಶಿಕ್ಷಣವೂ ಸೇರಿದಂತೆ ಎಲ್ಲ ಬಗೆಯ ಕಲಿಕೆಗಳ ಮೂಲ ಬಿಕ್ಕಟ್ಟು ಇರುವುದು ರಾಜಕೀಯ ವ್ಯವಸ್ಥೆಯಲ್ಲಿ ಮತ್ತು ಅದನ್ನು ನಿಯಂತ್ರಿಸುತ್ತಿರುವ ಆರ್ಥಿಕ ಶಕ್ತಿಗಳಲ್ಲಿ.

ಇಡೀ ದೇಶವು ಸಾಕ್ಷರತೆಯನ್ನು ಪಡೆಯಬೇಕೆಂಬ ಗುರಿಯ ಸಂಗಡವೇ ಉನ್ನತ ಶಿಕ್ಷಣವೂ ಸೇರಿದಂತೆ ಎಲ್ಲ ಹಂತಗಳಲ್ಲಿಯೂ ಗಾತ್ರದಲ್ಲಿ ನೂರಾರು ಪಟ್ಟು ಜಾಸ್ತಿಯಾಗುವದು ಅನಿವಾರ್ಯವಾಯಿತು. ಇಂಥ ಕೆಲಸವನ್ನು ಆಗುಮಾಡಲು ಬಹಳ ದೂರದೃಷ್ಟಿ ಇರುವ ಯೋಜನೆಗಳ ಅಗತ್ಯವಿತ್ತು. ಶಿಕ್ಷಣದ ಆಶಯಗಳು, ವಿಧಾನಗಳು, ಉಪಕರಣಗಳು, ವಸ್ತು ಮುಂತಾದ ಹಲವು ಸಂಗತಿಗಳ ಬಗ್ಗೆ ಆಲೋಚನೆ ನಡೆಸಬೇಕಾಗಿತ್ತು. ನೆಹರೂರವರು ಸೇರಿದ ಹಾಗೆ, ಆ ಕಾಲದ ಚಿಂತಕರು ಇಡೀ ದೇಶಕ್ಕೆ ಉನ್ನತ ಶಿಕ್ಷಣ ನೀಡುವ ಗುರಿಯನ್ನು ಹೊಂದಿದ್ದರೆಂದು ತೋರುವುದಿಲ್ಲ. ಸ್ವಾತಂತ್ರ್ಯ ಬಂದ ನಂತರ ಸುಮಾರು ಐವತ್ತು ವರ್ಷಗಳವರೆಗೆ, ವಿಶ್ವವಿದ್ಯಾಲಯಗಳ ಸಂಖ್ಯೆ ಕಡಿಮೆಯಿತ್ತು. ಅಲ್ಲಿ ಓದುವವರು ಬಹುಮಟ್ಟಿಗೆ ಮೇಲು ವರ್ಗಗಳವರು ಮತ್ತು ಭೂಮಾಲಿಕ ಜಾತಿಗಳವರೋ ಆಗಿದ್ದರು. ಅನಂತರದ ದಶಕಗಳಲ್ಲಿ ಖಾಸಗೀಕರಣ ಮತ್ತು ವಿಕೇಂದ್ರೀಕರಣಗಳು ತಮ್ಮದೇ ಅಪಾಯಗಳನ್ನು ತಂದೊಡ್ಡಿದವು. ಶಿಕ್ಷಣದ ನಿರ್ವಹಣೆಯು ಕ್ರಮೇಣ ದಂಧೆಯ ರೂಪವನ್ನು ಪಡೆಯಿತು.



ಈ ಸಂದರ್ಭದಲ್ಲಿಯೇ ನಮ್ಮ ಮತ್ತು ಇತರ ದೇಶಗಳ ಸಾಂಪ್ರದಾಯಿ ಶಿಕ್ಷಣಕ್ರಮಕ್ಕೂ ಇಂದಿನ ಸನ್ನಿವೇಶಕ್ಕೂ ಇರುವ ವ್ಯತ್ಯಾಸವನ್ನು ಗಮನಿಸಬೇಕು. ತಂದೆಯೂ ಸೇರಿದಂತೆ ಹಿರಿಯರ ಮೂಲಕ ಕುಲಕಸುಬನ್ನು ಕಲಿಯುವುದು ಒಂದು ಬಗೆ. ಗ್ರಾಮಕೇಂದ್ರಿತ ವ್ಯವಸ್ಥೆಯಿದ್ದು ಹಳ್ಳಿಗೆ ಒಬ್ಬ ಕುಂಬಾರ, ಮೂವರು ನೇಕಾರರು ಎಂಬ ಸ್ಥಿತಿಯಿದ್ದಾಗ ಉದ್ಯೋಗ ಖಾತ್ರಿ ಇರುತ್ತಿತ್ತು. ಆವವರವರ ಕಸುಬಿಗೆ ಅನುಗುಣವಾದ ಓದು ಬರಹಗಳು ಬಂದೇ ಬರುತ್ತಿದ್ದವು. ಇಂಥ ಶಿಕ್ಷಣಕ್ರಮವು ಜಾತಿಪದ್ಧತಿಯ ಗೋಡೆಗಳನ್ನು ಕಟ್ಟಿದ್ದು ನಿಜ. ಆದರೆ, ಅದರ ಕೆಲವು ಲಕ್ಷಣಗಳನ್ನು ನಾವು ಗಮನಿಸಬೇಕು. ಶಿಕ್ಷಣದ ಇನ್ನೊಂದು ಬಗೆಯಲ್ಲಿ ಒಬ್ಬ ಗುರು–ಹಲವು ಶಿಷ್ಯರು ಎಂಬ ಸಮೀಕರಣ ಇತ್ತು. ಗುರುವಿನ ಪರಮಾಧಿಕಾರದ ಈ ಬಗೆಗಳನ್ನು ಶಾಸ್ತ್ರೀಯ ಸಂಗೀತದಂತಹ ವಲಯಗಳಲ್ಲಿ ಈಗಲೂ ನೋಡಬಹುದು. ಕಾಲೇಜುಗಳಲ್ಲಿ ಸಂಗೀತ ಕಲಿತವರಿಗೂ ಗುರುಮುಖೇನ ಕಲಿತವರಿಗೂ ಇರುವ ವ್ಯತ್ಯಾಸಗಳನ್ನು ಗಮನಿಸಿದರೆ, ಕೆಲವು ಸತ್ಯಗಳು ಸ್ಪಷ್ಟವಾಗುತ್ತವೆ. ಇಂಥ ಪದ್ಧತಿಗಳು ಏಕಲವ್ಯ, ಕರ್ಣರಂತಹ ದುರಂತಗಳಿಗೆ ಕಾರಣವಾದವೆಂಬುದನ್ನು ನಾವು ಮರೆಯಬಾರದು. ಆದರೆ ಶ್ರೇಷ್ಠ ಮುಸ್ಲಿಂ ಸಂಗೀತಕಾರರು ಹಿಂದೂ ಶಿಷ್ಯರಿಗೆ ಅತ್ಯಂತ ಪ್ರೀತಿಯಿಂದ ಕಲಿಸಿದ್ದನ್ನೂ ನಾವು ಮರೆಯುವಂತಿಲ್ಲ. ಇಂದಿನ ಸನ್ನಿವೇಶದಲ್ಲಿ ಗುರುವಿನ ಗುಲಾಮಗಿರಿಯೂ ತಪ್ಪಿತು. ಅಂತಹ ಆರ್ದ್ರ ಸಂಬಂಧಗಳಲ್ಲಿ ಮೂಡುತ್ತಿದ್ದ ತಿಳಿವಳಿಕೆ, ಬದ್ಧತೆಗಳೂ ಕಾಣೆಯಾದವು. ನಮ್ಮ ಆಧುನಿಕ ವ್ಯವಸ್ಥೆಯೊಳಗೂ ಇಂತಹ ಪರ್ಯಾಯಗಳು ಇವೆ. ಕುವೆಂಪು, ಕಾರಂತ, ಶಂಬಾ, ರಾಜಕುಮಾರ್, ಲಂಕೇಶ್, ತೇಜಸ್ವಿ ಅಂತಹವರು ವಿಶ್ವವಿದ್ಯಾಲಯಗಳ ಒಳಗೆ–ಹೊರಗೆ ಇಂಥದೊಂದು ಪರಂಪರೆಯನ್ನು ಹುಟ್ಟುಹಾಕಿದ್ದಾರೆ. ಆದರೆ, ಇಂತಹ ಲೋಕಗುರುಗಳು ಅಗಾಧವಾದ ಶಿಕ್ಷಣ ವ್ಯವಸ್ಥೆಯ ನಿರ್ವಹಣೆಯನ್ನು ಮಾಡಲು ಸಾಧ್ಯವಿಲ್ಲ. ಅವರದು ನೇರ ಸಂಪರ್ಕವೂ ಅಲ್ಲ. ನಾವು ಹೊಸ ಮಾದರಿಗಳನ್ನು ಕಂಡುಕೊಳ್ಳಲೇಬೇಕಾಗಿದೆ

ಇಲ್ಲಿ ಇನ್ನೊಂದು ಸಂಗತಿಯನ್ನು ಗಮನಿಸಬೇಕು. ಬೆಳವಣಿಗೆಯ ಯಾವುದೋ ಒಂದು ಹಂತದಲ್ಲಿ ನಾವು ಶಿಕ್ಷಣವೂ ಸೇರಿದಂತೆ ಬೇರೆ ಬೇರೆ ಕ್ಷೇತ್ರಗಳಲ್ಲಿ, 'ಬ್ರಿಟಿಷ್ ಮಾದರಿ'ಯನ್ನು ಬಿಟ್ಟು 'ಅಮೆರಿಕನ್ ಮಾದರಿ'ಗೆ ತಿರುಗಿಕೊಂಡೆವು. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ರೂಪುಗೊಂಡು ಇಪ್ಪತ್ತನೆಯ ಶತಮಾನದ ಕೊನೆಯವರೆಗೆ ಮುಂದುವರಿದ ಈ ವಿಧಾನದ ಬಗ್ಗೆಯೂ ನಮಗೆ ತಕರಾರುಗಳಿರಬೇಕು, ಇವೆ. ಆದರೆ ಈಚೆಗೆ ಬಂದಿರುವ ಅಮೆರಿಕನ್ ಮಾದರಿಯು, ಖಂಡಿತವಾಗಿಯೂ ಹೆಚ್ಚು ಅಪಾಯಕಾರಿಯಾದುದು. ಅದು ಮಾನವತಾವಾದ, ಉದಾರವಾದದ ಸರಳೀಕೃತ ಆದರ್ಶಗಳಿಗೂ ವಿದಾಯ ಹೇಳಿದೆ. ಬದಲಾಗಿ ಇಡೀ ಲೋಕವನ್ನು ತನ್ನ ಅಡಿಯಾಳಾಗಿ ಮಾಡಿಕೊಳ್ಳುವ ಹುನ್ನಾರವನ್ನು ಹೊಂದಿದೆ. ಅದು ಪ್ರತಿಪಾದಿಸಿದ



'ಬೆಳವಣಿಗೆ'ಯ ಪರಿಕಲ್ಪನೆಯೇ ಅಪಾಯಕರ ಮತ್ತು ಜನವಿರೋಧಿ. ಶಿಕ್ಷಣದ ವಿಚಾರಕ್ಕೆ ಬಂದರೆ, ನಾವು ಅಲ್ಲಿಯೂ ಕೂಡ ಒಳ್ಳೆಯದನ್ನು ನಿರಾಕರಿಸಿ, ಕೆಟ್ಟದ್ದನ್ನು ಇಟ್ಟುಕೊಂಡಿದ್ದೇವೆ.

ಉನ್ನತ ಶಿಕ್ಷಣವು ಒಂದು ಸ್ವತಂತ್ರ ದ್ವೀಪವಲ್ಲ. ಅದರ ಆಗುಹೋಗುಗಳ ಮೇಲೆ ಪ್ರಾಥಮಿಕ ಹಂತದಲ್ಲಿ ನೀಡಲಾದ ಶಿಕ್ಷಣವು ಪರಿಣಾಮ ಬೀರುತ್ತದೆ. ಏಕೆಂದರೆ ಅದು ನಮ್ಮ ಮನಸ್ಸು ಕೆಲಸ ಮಾಡುವ ಬಗೆಗಳನ್ನು ತೀರ್ಮಾನಿಸುತ್ತದೆ. ವ್ಯಕ್ತಿಗಳ ನೆಲೆಯಲ್ಲಿ ಮಾತ್ರವಲ್ಲ. ಈ ಹಂತದಲ್ಲಿ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯುವುದು ಆಲೋಚನೆಯ ಬದಲು ಜ್ಞಾಪಕಶಕ್ತಿಯ ಮೇಲೆ ಭಾರಹಾಕುತ್ತದೆ. ಬಹು ಪಾಲು ಉಪಾಧ್ಯಾಯರು ಕೂಡ ಪರಿಣಿತರಲ್ಲದ ಈ ಸನ್ನಿವೇಶದಲ್ಲಿ 'ಉರು' ಹೊಡೆಯುವುದು ಹೆಚ್ಚಾಗುತ್ತದೆ. ನಾವು ಕೇಳುವ ಪ್ರಶ್ನೆಗಳು ಮತ್ತು ನಿರೀಕ್ಷಿಸುವ ಉತ್ತರಗಳು ಈ ಅಭ್ಯಾಸವನ್ನು ಪೋಷಿಸುತ್ತವೆ. ಅದೂ ಅಲ್ಲದೆ ನಮ್ಮಲ್ಲಿ 'ವಿಧೇಯತೆಯೆಂಬ ಶಾಪ'ವು ಬಾಲ್ಯದಲ್ಲೇ ಬೇರೂರುತ್ತದೆ.

ಹೀಗೆ ಕಲಿತ ಹುಡುಗಿ–ಹುಡುಗರು ಕಾಲೇಜುಗಳಿಗೆ ಬಂದಾಗ ಪಂಜರಗಳಿಂದ ಬಿಟ್ಟ ಸಿಂಹಗಳಂತೆ ಇರುತ್ತಾರೆ ಅಥವಾ ಗುರು–ಹಿರಿಯರ ಸೆರೆಯಲ್ಲಿ ಸಿಕ್ಕ ಕುರಿಗಳಂತೆ ಇರುತ್ತಾರೆ. ಇವೆರಡೂ ಸ್ಥಿತಿಗಳು ಸ್ವತಂತ್ರವಾದ ಕಲಿಕೆಗೆ, ಆಲೋಚನೆಗೆ ನೆರವಾಗುವುದಿಲ್ಲ. ಹೀಗಾಗಿ ನಮ್ಮ ಮಕ್ಕಳು ಅನುಕರಣದಲ್ಲಿ ಪ್ರವೀಣರಾಗಿ ಸ್ವಂತಿಕೆಯಲ್ಲಿ ಕುಂಟುತ್ತಾರೆ. ಆದ್ದರಿಂದಲೇ ಹೊರ ದೇಶಗಳಿಗೆ ಹೋದ ಭಾರತೀಯ ವಿದ್ಯಾರ್ಥಿಗಳಿಗೆ ಸ್ವತಂತ್ರ ಅನ್ವೇಷಣೆಗಿಂತ ಬೇರೆಯವರು ಹೇಳಿದಂತೆ ದುಡಿಯುವುದು ಸುಲಭವೆನ್ನಲಾಗುತ್ತದೆ. ಈ ಮಾತಿಗೆ ಅನೇಕ ಅಪವಾದಗಳಿದ್ದರೂ ನಿಯಮವಾಗಿ ಇದು ನಿಜ.

ನಮ್ಮ ದೇಶದ ಉನ್ನತ ಶಿಕ್ಷಣದಲ್ಲಿ 'ಸಾಮಾನ್ಯ ಶಿಕ್ಷಣ' (General Education) ಆಯ್ಕೆಗೆ ಅನುಗುಣವಾದ (Optional Education) ಶಿಕ್ಷಣಗಳ ನಡುವೆ ಸಾಕಷ್ಟು ಗೊಂದಲವಿದೆ. ಇಲ್ಲಿ ನಮ್ಮ ಆಯ್ಕೆಗೂ ಅಭಿರುಚಿಗೂ ನಡುವೆ ಸಾಕಷ್ಟು ಅಂತರವಿರುತ್ತದೆ. ಏಕೆಂದರೆ ಆಯ್ಕೆಯ ಮಾನದಂಡಗಳು ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳೇ ಆಗಿರುತ್ತವೆ. ಎಂಜಿನಿಯರುಗಳು ಮತ್ತು ವೈದ್ಯರು ಸೇರಿದಂತೆ ನೂರಕ್ಕೆ ತೊಂಬತ್ತು ಜನ ತಮ್ಮ ಉದ್ಯೋಗಕ್ಕೆ ಅಗತ್ಯವಾದ ತರಬೇತಿಯನ್ನು ಕಾಲೇಜುಗಳಿಂದ ಹೊರಬಂದ ನಂತರವೇ ಪಡೆಯುತ್ತಾರೆ ಎನ್ನುವುದು ಎಲ್ಲರಿಗೂ ಗೊತ್ತು. ಆದ್ದರಿಂದಲೇ ನಾವು ಮಾಹಿತಿ ರೂಪದಲ್ಲಿ ಕಲಿತ ಗಣಿತ, ಕೆಮಿಸ್ಟ್ರಿ, ಮಾನವಶಾಸ್ತ್ರಗಳು ಅಂತರಂಗದ ಭಾಗವಾಗಿ ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತಿಲ್ಲ. ಸಾಮಾನ್ಯ ಶಿಕ್ಷಣವೆಂದು ಕರೆಯಲಾದ ಭಾಷೆಗಳು, ಸೋಷಿಯಲ್ ಸೈನ್ಸ್, ಜನರಲ್ ಎಜುಕೇಷನ್ ಮುಂತಾದ ವಿಷಯಗಳನ್ನು ಬಾಲ್ಯದಿಂದಲೇ ಕಡೆಗಣ್ಣಿನಿಂದ ನೋಡುವ ಪ್ರವೃತ್ತಿಯನ್ನು ತಂದೆ–ತಾಯಿಗಳು ಮತ್ತು ಅಧ್ಯಾಪಕರು ಬೆಳೆಸಿರುತ್ತಾರೆ. ಪರಿಣಾಮವಾಗಿ ಕಾಲೇಜುಗಳಿಗೆ ಬಂದಾಗ ವರ್ತಮಾನಪತ್ರಿಕೆಗಳನ್ನು ಓದುವ ಅಭ್ಯಾಸವೂ ಹೊರಟು ಹೋಗಿರುತ್ತದೆ.

ನಿಜ, ಇಂಡಿಯಾದಂತಹ ದೇಶದಲ್ಲಿ ವಿದ್ಯಾಭ್ಯಾಸವು ವೈಯಕ್ತಿಕ ಹಂಬಲಗಳನ್ನು ಕುದುರಿಸುವ 'ಲಕ್ಷುರಿ' ಆಗಲು ಸಾಧ್ಯವಿಲ್ಲ. ಸಮಾಜ/ಸಮುದಾಯಗಳ ಅಗತ್ಯಗಳಿಗೂ ನಾವು ಕೊಡುವ ವಿದ್ಯೆಗೂ ನಿಕಟ ಸಂಬಂಧ ಇರಬೇಕು. ಅದು ನಿಜವಾದರೆ, ನಾವು ಪಡೆಯುವ ಶಿಕ್ಷಣಕ್ಕೆ ಅನುಗುಣವಾಗಿ ಉದ್ಯೋಗ ದೊರಕಬೇಕು ಅಥವಾ ಹತ್ತು ವರ್ಷಗಳ ನಂತರ ಬೇಕಾಗಬಹುದಾದ ಉದ್ಯೋಗಗಳಿಗೆ ತಕ್ಕಂತೆ ಶಿಕ್ಷಣ ನೀತಿಯನ್ನು ರೂಪಿಸಬೇಕು. ಸಮಾಜದ ಅಗತ್ಯಗಳ ಪರಿಧಿಯಾಚೆಗೆ ಇರುವ ಹಲವು ಆಸಕ್ತಿಗಳನ್ನು ಬೆಳೆಸಿಕೊಳ್ಳುವ ಅವಕಾಶಗಳು ಔಪಚಾರಿಕ ಶಿಕ್ಷಣದಾಚೆಗೆ ಧಂಡಿಯಾಗಿ ಇರಬೇಕು. ಅದರ ಜೊತೆಗೆ ಯಾವದೇ ಪದವಿ ತರಗತಿಗೆ ಪ್ರವೇಶ ಸಿಗಲು ವಿದ್ಯಾರ್ಥಿಯ ಅಭಿರುಚಿ ಮತ್ತು ಆಪ್ಟಿಟ್ಯೂಡುಗಳು ಮಾನದಂಡವಾಗಬೇಕೇ ವಿನಾ ಅವನು ಯಾವುದೋ ಪರೀಕ್ಷೆಯಲ್ಲಿ ಪಡೆದ ಅಂಕಗಳಲ್ಲ. ನಮ್ಮ ದೇಶದಲ್ಲಂತೂ ಹೇಗೆ ಅಭಿರುಚಿಯನ್ನು ಗುರುತಿಸುವ ಬೆಳೆಸುವ ಗಂಭೀರ ಪ್ರಯತ್ನಗಳು ನಡೆದೇ ಇಲ್ಲವೆಂದು ಹೇಳಬೇಕು. ವಿಭಿನ್ನ ಅಭಿರುಚಿಗಳ ಫಲವಾಗಿ ಪಡೆಯುವ ಆದಾಯದಲ್ಲಿ ಒಂದಿಷ್ಟಾದರೂ ತರ್ಕಬದ್ಧತೆ ಇರಬೇಕು. ಹಾಗೆ ಇರುವಂತೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಒಂದು ವರ್ಷದ ಐ.ಪಿ.ಎಲ್. ಟೂರ್ನಮೆಂಟಿನಲ್ಲಿ ಹೆಚ್ಚೆಂದರೆ ಹದಿನಾಲ್ಕು ಪಂದ್ಯಗಳನ್ನು ಆಡಿ, ಐವತ್ತಾರು ಓವರುಗಳನ್ನು ಬೌಲ್ ಮಾಡಿ ಆರು ಕೋಟಿ ರೂಪಾಯಿಗಳನ್ನು ಪಡೆಯುವ ಆಟಗಾರರಿದ್ದಾರೆ. ಇಂತಹ ಸನ್ನಿವೇಶದಲ್ಲಿ ಉನ್ನತ ಶಿಕ್ಷಣದ ಮಾತನಾಡುವುದು ಅವಮಾನಕರ. ದರಿದ್ರ ಸರ್ಕಾರದಿಂದ ಬರುವ ಎಲ್ಲ ಸಂಗತಿಗಳೂ ದರಿದ್ರವೂ ದುಷ್ಟವೂ ಆಗಿರುತ್ತದೆ. ನಮ್ಮ ದೇಶದಲ್ಲಿ ವ್ಯಕ್ತಿಸ್ವಾತಂತ್ರ್ಯ, ಕಲಾವಿದನ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಮುಂತಾದ ಅತ್ಯಮೂಲ್ಯ ಸರಕುಗಳು ನಾಚಿಕೆಯಾಗುವಷ್ಟು ದುರುಪಯೋಗವಾಗಿವೆ.

ಖಾಸಗೀಕರಣವು ಉನ್ನತ ಶಿಕ್ಷಣದ ಬಹುಮುಖ್ಯವಾದ ಸಮಸ್ಯೆಯೆಂದು ನನಗೆ ಖಚಿತವಾಗಿದೆ. ಶಾಲೆಗಳ ಮಟ್ಟದಿಂದ ತನ್ನ ಜವಾಬ್ದಾರಿಯನ್ನು ಕಳಚಿಕೊಂಡಿರುವ ಸರ್ಕಾರಕ್ಕೆ ಉನ್ನತ ಶಿಕ್ಷಣವನ್ನು ಸಂಪೂರ್ಣವಾಗಿ ತನ್ನ ಹಿಡಿತಕ್ಕೆ ತಂದುಕೊಳ್ಳುವ ಇಚ್ಛಾಶಕ್ತಿಯಿಲ್ಲ. ಹಾಗೆ ಮಾಡುವುದರಿಂದ ಗುಣಮಟ್ಟವು ಕಡಿಮೆಯಾಗುತ್ತದೆ ಎನ್ನುವದರಲ್ಲಿ ಹುರುಳಿಲ್ಲ. ಇಂದು ಅತ್ಯುತ್ತಮವೆಂದು ಕರೆಸಿಕೊಳ್ಳುತ್ತಿರುವ ಐ.ಐ.ಟಿ.ಗಳು, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್, ಜೆ.ಎನ್.ಯು., ಕೇಂದ್ರೀಯ ವಿಶ್ವವಿದ್ಯಾಲಯಗಳು ಇವುಗಳಲ್ಲಿ ಯಾವುದೂ ಕೂಡ ಖಾಸಗಿಯಲ್ಲ. ಖಾಸಗಿಗಳ ಥಳುಕು ಬಳುಕುಗಳಿಗೆ ಮಾರುಹೋಗದಂತಹ ತಿಳಿವಳಿಕೆ ನಮಗೂ ಇಲ್ಲ, ನಮ್ಮನ್ನು ಆಳುವವರಿಗೂ ಇಲ್ಲ. ದೇಶದ ಆಯವ್ಯಯದಲ್ಲಿ ಶೇಕಡಾ ಹತ್ತರಷ್ಟನ್ನಾದರೂ ಶಿಕ್ಷಣಕ್ಕಾಗಿ ಮೀಸಲಾಗಿ ಇಡಲು ಸಾಧ್ಯವಿಲ್ಲ. ಎಲ್ಲರ ಮಕ್ಕಳೂ ಸರ್ಕಾರೀ ಶಾಲೆಗಳಲ್ಲಿಯೇ ಓದಿದರೆ, ಮಕ್ಕಳ ನಡುವೆ ಪರಸ್ಪರ ವಿನಿಮಯ ಮತ್ತು ಸಾಮಾಜಿಕ ಸಂಬಂಧಗಳು ಮೂಡುತ್ತವೆ. ಈಗ ಗೋಡೆಗಳು ಏಳುತ್ತಿವೆ.

ಶಿಕ್ಷಕರ ಯೋಗ್ಯತೆ ಮತ್ತು ಸ್ವಾಯತ್ತತೆಗಳ ನಡುವೆ ನೇರವಾದ ಸಂಬಂಧವಿರುತ್ತದೆ, ಇರಬೇಕು. ನಾನು ನೂರಕ್ಕೆ ನೂರರಷ್ಟು ಮೀಸಲಾತಿಯ ಪರವಾದವನು. ಅದರಿಂದ ಶಿಕ್ಷಣದ ಮಟ್ಟ ಕುಸಿದಿದೆ, ಕುಸಿಯುತ್ತದೆ ಎಂದು ನಾನು ತಿಳಿದಿಲ್ಲ. ಆದರೆ ನಮ್ಮ ಸಂದರ್ಭದ ದೊಡ್ಡ ಶತ್ರು ಸ್ವ–ಜನ ಪಕ್ಷಪಾತ. ಮೀಸಲಾತಿಯ ಎಲ್ಲ ವರ್ಗಗಳಲ್ಲಿಯೂ ಇರುವ ಅರ್ಹರಿಗೆ ಅವಕಾಶಗಳು ದೊರೆಯುತ್ತಿಲ್ಲ ಎನ್ನುವುದೇ ಸತ್ಯ. ಇದರ ಜೊತೆಗೆ ಒಂದು ಸಲ ಆಯ್ಕೆಯಾಗಿ ಬಿಟ್ಟರೆ, ನಿವೃತ್ತರಾಗುವ





ತನಕ ಯಾವುದೇ ಪರೀಕ್ಷೆಯನ್ನು ಸವಾಲುಗಳನ್ನು ಎದುರಿಸದೆ ಕಾಲ ಕಳೆಯುವ ಅಧ್ಯಾಪಕರದೂ ದೊಡ್ಡ ಸಮಸ್ಯೆ. ಮೊದಲನೆಯದಾಗಿ, ಅಧ್ಯಾಪಕರಾದಾಗ ಕೇವಲ ವಿಷಯದ ತಿಳಿವಳಿಕೆ ಸಾಲದು. ಕಲಿಸುವ ವಿಧಾನಗಳ ಪರಿಚಯ ಮತ್ತು ಕಲಿಸುವ ಕೆಲಸದ ಮೇಲೆ ಪ್ರೀತಿ ಇಲ್ಲದೆ ಹೋದರೆ, ಅಂಥ ಅಧ್ಯಾಪಕರು ಶತ್ರುಗಳಂತೆ. ಅಷ್ಟೇ ಮುಖ್ಯವಾಗಿ, ಅಧ್ಯಾಪಕರು ತಮ್ಮವಿಷಯದಲ್ಲಿ ಆಗಿರುವ ಬೆಳವಣಿಗೆಗಳ ಪರಿಚಯ ಇಟ್ಟುಕೊಳ್ಳದ ನಿಂತ ನೀರಿನಂತಹ ಅಧ್ಯಾಪಕರ ಸಮೂಹಗಳನ್ನು ನಮ್ಮ ವ್ಯವಸ್ಥೆಯು ಸೃಷ್ಟಿಸಿದೆ. ನಮ್ಮ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ಕಲಿಸುತ್ತಿರುವ ನೂರಕ್ಕೆ ತೊಂಬತ್ತು ಜನರು ಆ ಹುದ್ದೆಗಳನ್ನು ನಿರ್ವಹಿಸಲು ಅಗತ್ಯವಾದ ಸಾಮರ್ಥ್ಯವನ್ನಾಗಲೀ ಬದ್ಧತೆಯನ್ನಾಗಲಿ ಹೊಂದಿಲ್ಲವೆನ್ನುವುದು ಕಟುಸತ್ಯ. ಇದಕ್ಕಾಗಿ ಅವರನ್ನು ಟೀಕಿಸುವುದರಲ್ಲಿ ಹೆಚ್ಚಿನ ಅರ್ಥವಿಲ್ಲ. ಕೊನೆಗೂ ಶಿಕ್ಷಕರ ಆರೋಗ್ಯವು ಒಟ್ಟು ಸಮಾಜದ ಆರೋಗ್ಯಕ್ಕಿಂತ ಬಹಳ ಭಿನ್ನವಾಗಿರಬೇಕೆಂದು ನಿರೀಕ್ಷಿಸುವುದೇ ತಪ್ಪು. ಇನ್ನೊಂದು ಸಂಗತಿಯೆಂದರೆ, ಪರೀಕ್ಷೆಗಳನ್ನು ಬರೆಯುವುದು, ಪಾಸಾಗುವುದು, ರಾಶಿರಾಶಿ ಅಂಕಗಳನ್ನು ಪಡೆಯುವುದು ಇಷ್ಟೊಂದು ಸುಲಭವಾಗಬಾರದು. ಯಾವುದೇ ವಿಷಯದಲ್ಲಿ ಶೇಕಡಾ ಮೂವತ್ತೈದರ ತಿಳಿವಳಿಕೆ ಅಪೂರ್ಣವಲ್ಲವೇ? ವಿದ್ಯಾರ್ಥಿಗಳಿಗೆ ಹತ್ತು ಹಲವು ಸವಲತ್ತುಗಳನ್ನು ಕೊಡುವುದರ ಮೂಲಕ ನಾವು ಸೋಮಾರಿಗಳನ್ನು ಸೃಷ್ಟಿಸುತ್ತೇವೆ. ಶಾಲಾಶಿಕ್ಷಣದಲ್ಲಿ ಬೆನ್ನುಮುರಿಯುವಷ್ಟು ಪಠ್ಯಕ್ರಮ, ಮನೆಕೆಲಸ, ಮನೆಪಾಠಗಳನ್ನು ಹೇರಿ, ಉನ್ನತ ಶಿಕ್ಷಣದಲ್ಲಿ ಎಲ್ಲವನ್ನೂ ಹಗುರ ಮಾಡಿಬಿಡುವುದು ಏನೇನೂ ಸರಿಯಲ್ಲ. ಪಠ್ಯಕ್ರಮದ ಆಚೆಗಿನ ಓದನ್ನು ನಿರೀಕ್ಷಿಸದ, ಪರೀಕ್ಷಿಸದ ವ್ಯವಸ್ಥೆಯು ವಿಫಲವಾಗುವುದು ಕೇವಲ ಸಹಜ. ಪಂಪಭಾರತದ ಹದಿನೆಂಟನೆಯ ಆಶ್ವಾಸವು ಪಠ್ಯವಾದರೆ, ಹತ್ತೊಂಬತ್ತನೆಯ ಆಶ್ವಾಸದ ಕಡೆಗೂ ತಿರುಗಿ ನೋಡದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಇಂತಹುದೇ ಸನ್ನಿವೇಶದ ಫಲ. (ಆ ಆಶ್ವಾಸವನ್ನೂ ಓದದೆ, ಕೇವಲ ಅದರ ಬಗೆಗಿನ ವಿಮರ್ಶೆಯನ್ನು ನೋಡಿ ವಿಜೃಂಭಿಸುವುದು ಇಂದಿನ ವಾಸ್ತವ.)

ಪಠ್ಯಪುಸ್ತಕಗಳ ಸ್ಥಾನವನ್ನು ಗೈಡುಗಳು ಆಕ್ರಮಿಸಿ ದಶಕಗಳೇ ಕಳೆದವು. ವಿವರಗಳಿಗೆ ಹೋಗದೆ ಹೇಳುವುದಾದರೆ ವಿದ್ಯಾರ್ಥಿಗಳು ಇಷ್ಟಪಟ್ಟು, ಕಷ್ಟಪಟ್ಟು ಓದುವಂತೆ ಮಾಡುವುದು ಎಲ್ಲ ಶಿಕ್ಷಣದ ಮೂಲ ಗುರಿ. ನಮ್ಮ ವ್ಯವಸ್ಥೆಯು ಇದಕ್ಕೆ ಅನುವು ಮಾಡಿಕೊಡುತ್ತಿಲ್ಲ. ಎಲ್ಲೋ ಕೆಲವರು ಈ ಮಾತಿಗೆ ಅಪವಾದಗಳಿರುತ್ತಾರೆ. ಅಂತಹವರಲ್ಲಿ ಹಲವರು ಇಲ್ಲವೇ ದೇಶವನ್ನೇ ಬಿಟ್ಟುಹೋಗುತ್ತಾರೆ ಅಥವಾ ಖಾಸಗೀ ಕಂಪನಿಗಳ ಪಾಲಾಗುತ್ತಿರುವುದರ ಸೂಚನೆಗಳನ್ನು ನಾವು ಗಮನಿಸಬೇಕು. ಸರ್ಕಾರವು ಶಿಕ್ಷಣಕ್ಕಾಗಿ ಸಾಕಷ್ಟು ಖರ್ಚು ಮಾಡುವುದರಿಂದ ಅದಕ್ಕೆ ತನ್ನದೇ ಆದ ನಿಯಮಗಳನ್ನು ಹಾಕುವ ಹಕ್ಕು ಇದೆ. ಹಾಗೆ ಹಟಹಿಡಿದು ಉಳಿಸಿಕೊಂಡವರನ್ನು ಸರಿಯಾಗಿ ನೋಡಿಕೊಳ್ಳುವ ಹೊಣೆಗಾರಿಕೆಯೂ ಸರ್ಕಾರಕ್ಕೆ ಇದೆ.

ಪದವಿಪೂರ್ವ ಮತ್ತು ಪದವಿ ಕಾಲೇಜುಗಳೂ ಸೇರಿದಂತೆ ಉನ್ನತ ಶಿಕ್ಷಣದ ಇನ್ನೊಂದು ಸಮಸ್ಯೆಯೆಂದರೆ, ಬೇರೆ ಬೇರೆ ಗುಣಮಟ್ಟದ ಹಾಗೂ ಬದ್ಧತೆಯ ವಿದ್ಯಾರ್ಥಿಗಳಿಗೆ ಒಟ್ಟಾಗಿ ಕಲಿಸಬೇಕಾಗಿ ಬರುವುದು. ತರಗತಿಯಲ್ಲಿ ನೂರಾರು ವಿದ್ಯಾರ್ಥಿಗಳಿರುವುದು ಈ ಸಮಸ್ಯೆಯನ್ನು ಇನ್ನಷ್ಟು ಗುರುತರವಾಗಿಸುತ್ತದೆ. ಮೂವತ್ತಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಯಾವುದೇ ತರಗತಿಯು 'ಅನ್ ವೀಲ್ಡಿ' ಎಂದು ನನಗೆ ತೋರುತ್ತದೆ. ನೂರಾರು ಜನರಿಗೆ ಪರಿಣಿತರೊಬ್ಬರು ಉಪನ್ಯಾಸ ನೀಡಿದ ನಂತರ, ಅದನ್ನು ಕೇಳಿದವರನ್ನು ಚಿಕ್ಕ ಗುಂಪುಗಳಾಗಿ ವಿಂಗಡಿಸಿ, ಆ ಗುಂಪುಗಳು ಕಿರಿಯ ಅಧ್ಯಾಪಕರ ಮುಂದಾಳುತನದಲ್ಲಿ ವಿಷಯವನ್ನು ಚರ್ಚೆಗೆ ಒಳಪಡಿಸುವ ಪದ್ಧತಿಯೊಂದು ಅಮೆರಿಕನ್ ವಿಶ್ವವಿದ್ಯಾಲಯಗಳಲ್ಲಿ ಇದೆ. ಇದು ನಮ್ಮಲ್ಲೂ ಕಾರ್ಯಸಾಧ್ಯ. ಅಂತೆಯೇ ಗ್ರಂಥಾಲಯಗಳನ್ನು ಬಳಸುವುದು ಅವುಗಳ ಮೂಲಕವೂ ಕಲಿಯುವುದು ಕಡ್ಡಾಯವಾಗಬೇಕು. ಪದವಿ ತರಗತಿಗಳಲ್ಲಿ ತಾಳಮೇಳವಿಲ್ಲದಷ್ಟು ಎಕ್ಸೆಂಪ್ಷನ್ನುಗಳನ್ನು ಕೊಡುವದು ಇನ್ನೊಂದು ಖಾಯಿಲೆ. ಮೊದಲನೆಯ ಬಿ.ಎಸ್ಸಿ. ತರಗತಿಯ ಗಣಿತ ಪರೀಕ್ಷೆಯನ್ನು ಪಾಸುಮಾಡದೆ, ಮೂರನೆಯ ಬಿ.ಎಸ್ಸಿ. ತರಗತಿಯಲ್ಲಿ ಕುಳಿತಿರುವ 'ವನ ಕೆಡಿಸುವ ಕೋತಿ'ಗಳನ್ನು ನಾನು ನೋಡಿದ್ದೇನೆ. ಇಷ್ಟಕ್ಕೂ ಆ ಆಲ್ಜೀಬ್ರಾ, ಅಸ್ತ್ರಾನಮಿಗಳಿಂದ ಅವರಿಗೆ ಆಗುವ ಪ್ರಯೋಜನವೂ ಅಷ್ಟರಲ್ಲೆ ಇದೆ. ವಿಜ್ಞಾನದ ಓದಿನಿಂದ 'ವಿಜ್ಞಾನ ಮತಿ' ಬರುವಂತಿದ್ದರೆ ಎಷ್ಟು ಚೆನ್ನಾಗಿತ್ತು. ಆ ವಿಜ್ಞಾನಮತಿ ಕೂಡ ಸದಾಕುತೂಹಲಿಯಾದ ಸದಾ ಅನುಮಾನಿಯಾದ 'ವೈಜ್ಞಾನಿಕ ಮನೋಧರ್ಮ'ವೇ ಹೊರತು ತನ್ನದಷ್ಟೇ ಸರಿ ಎಂಬ ಅಹಂಕಾರದ 'ಸೈಂಟಿಸಂ' ಅಲ್ಲ.

ಶೈಕ್ಷಣಿಕ ಆಡಳಿತವು ಹಲವು ಅಡಿಗೆಯವರು ಮಾಡುವ ಗೊಂದಲವಾಗಿದೆ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಯು.ಜಿ.ಸಿ., ವಿಶ್ವವಿದ್ಯಾಲಯಗಳು, ಖಾಸಗೀ ಸಂಸ್ಥೆಗಳು ಇತ್ಯಾದಿ, ಇತ್ಯಾದಿ. ಶಿಕ್ಷಣವು ಹಣತರುವ ದಂಧೆಯಾದ ಮೇಲಂತೂ ಗಾರೆಕಲಸುವ ಮೇಸ್ತ್ರಿಯಿಂದ ಹಿಡಿದು, ಪೋಲೀಸ್ ಅಧಿಕಾರಿಗಳವರೆಗೆ ಎಲ್ಲರೂ ಶಿಕ್ಷಣ ತಜ್ಞರೇ. ಅಂತಹ ಸಂಸ್ಥೆಗಳ ಮಾಲಿಕರೇ! ಇವರೆಲ್ಲರ ಜೊತೆಗೆ 'ರಗಳೆಗಳ ಹೆಸರಿನಲ್ಲಿ ಸರಳವಾದುದನ್ನೂ ಗೋಜಲಾಗಿಸುವ ಕೋರ್ಟುಗಳು' ಬೇರೆ.

ಇನ್ನೊಂದು ಮಾತು. ಉನ್ನತ ಶಿಕ್ಷಣವು ಕೇವಲ ಮೂವತ್ತರ ಒಳಗಿನ ತರುಣ-ತರುಣಿಯರಿಗೆ ಮೀಸಲಾದ ಸಂಗತಿ ಆಗಬಾರದು. ಹಾಗೆಂದು ಈಗ ಇರುವ, ದೂರಶಿಕ್ಷಣದಂತಹ ಡಿಗ್ರಿ ಕೊಡಿಸುವ ಆಭಾಸಗಳೂ ಆಗಬಾರದು. ಕೆಲಸಕ್ಕಾಗಿ ಅಲ್ಲ, ತಿಳಿಯುವ ಕುತೂಹಲಕ್ಕಾಗಿ ಯಾವ ವಯಸ್ಸಿನ ಯಾರು ಬೇಕಾದರೂ ತಮಗೆ ಇಷ್ಟವಾದ ವಿಷಯವನ್ನು ಸರಿಯಾಗಿ ಕಲಿಯುವ ಅವಕಾಶ ಇರಬೇಕು, ಹಾಗೆ ಕಲಿಯುವ ಹಂಬಲವನ್ನು ಅವರಿಗೆ ಅದುವರೆಗಿನ ಶಿಕ್ಷಣವು ಅವರಲ್ಲಿ ಮೂಡಿಸಿರಬೇಕು. ಇದು ನನ್ನ ಕಲ್ಪನೆಯ ಉನ್ನತ ಶಿಕ್ಷಣದ ನೆಲೆ. ಒಂದು ಮಟ್ಟದಲ್ಲಿ ಈ ಕೆಲಸವನ್ನು ಮಾಡಬಹುದಾದ ಮಾಧ್ಯಮಗಳು ಮತ್ತು ಪ್ರಸಾರಾಂಗಗಳು ಸೋತುಹೋಗಿವೆ.

ಈ ಬರವಣಿಗೆಯಲ್ಲಿ ನಾನು ಇಲ್ಲಗಳ ಪಟ್ಟಿಯನ್ನೇ ಕೊಟ್ಟಿರುವಂತೆ ಭಾಸವಾಗಬಹುದು. ಅದು ದಿಟವಲ್ಲ. ಈ ಎಲ್ಲ ಪರಿಮಿತಿಗಳ ನಡುವೆಯೂ ಶಿಕ್ಷಣವನ್ನು ಪಡೆಯುವ ಅವಕಾಶ ಎಲ್ಲ ಹಿನ್ನೆಲೆಗಳಿಂದ ಬಂದವರಿಗೂ ಸಿಕ್ಕಿದೆ. ಅದರಲ್ಲೂ ಮಹಿಳೆಯರಿಗೆ. ಜಾತಿ, ಹಳ್ಳಿಗತನ, ಹೆಣ್ಣುತನ, ಬಡತನ ಮುಂತಾದ ಸಂಗತಿಗಳು ಶಿಕ್ಷಣ ಪಡೆಯಲು ಅಡ್ಡಗೋಡೆಯಾಗುವ ಸನ್ನಿವೇಶ ಮೊದಲಿನಷ್ಟು ಇಲ್ಲ. ಪ್ರತಿಭೆ ಮತ್ತು ಅವಕಾಶಗಳ ಸೃಷ್ಟಿಗೆ ಹೇರಳ ಅವಕಾಶ ಇದೆ. ಇದು ಈ ದೇಶದ ಶಿಕ್ಷಣದ ಇತಿಹಾಸದಲ್ಲಿಯೇ ಬಹಳ ಆರೋಗ್ಯಕರವಾದ ಸನ್ನಿವೇಶ. ಆದರೆ ಈ ಸಂಗತಿಗಳು ನಮ್ಮನ್ನು ವ್ಯವಸ್ಥೆಯ ದೋಷಗಳಿಗೆ ಕುರುಡಾಗಿ ಮಾಡಬಾರದು. ಅದನ್ನು ಸರಿಪಡಿಸುವ ಉಮೇದನ್ನು ಹೋರಾಟಗಾರ ಸಮುದಾಯಗಳಲ್ಲಿ ಹುಟ್ಟಿಸಬೇಕು. ಸವಲತ್ತುಗಳನ್ನು ಕೇಳುವದರ ಜೊತೆಗೆ ಯೋಗ್ಯತೆಗಳನ್ನು ಹೆಚ್ಚಿಸಿಕೊಳ್ಳುವ ಹಟವೂ ಮೂಡಬೇಕು.

*

# ಜನಸ್ನೇಹಿಯಾಗಬೇಕಾದ ನಮ್ಮ ವೈದ್ಯ ಪದ್ಧತಿ

**–ಡಾ. ಬಸವರಾಜು**



**ಸರ್ಕಾರಿ ಆಸ್ಪತ್ರೆಯ ಒಂದು ಚಿತ್ರ**

ಎಲ್ಲಾ ಸೇವಾ ವಲಯಗಳ ವಾಣಿಜ್ಯೀಕರಣದಿಂದ, ಬಡವರ, ಶೋಷಿತರ ಸ್ಥಿತಿ ಅಯೋಮಯವಾಗಿದೆ. ಜಾಗತೀಕರಣದ ಪ್ರಭಾವ ಹಾಗೂ ನಿರ್ಧಾರಗಳಿಂದ ಇಡೀ ಸಮಾಜವು ಕಲುಷಿತಗೊಂಡಿದೆ. ಮನುಷ್ಯನ ದುರಾಸೆ ಹೆಚ್ಚಾಗಿ ಕೊಳ್ಳುಬಾಕ ಸಂಸ್ಕೃತಿಗೆ ಮಾರು ಹೋಗಿ ತನ್ನ ನೈತಿಕ ಮೌಲ್ಯಗಳನ್ನು ಕಳೆದುಕೊಳ್ಳುತ್ತಿದ್ದಾನೆ.

ಸಮಾಜದ ಎಲ್ಲಾ ಸೇವಾ ಕ್ಷೇತ್ರಗಳು ಭ್ರಷ್ಟವಾಗುತ್ತಿರುವಾಗ, ಕಲುಷಿತಗೊಳ್ಳುತ್ತಿರುವಾಗ ಇನ್ನು ಸೇವಾ ಕ್ಷೇತ್ರವಾದ ವೈದ್ಯಕೀಯ ಕ್ಷೇತ್ರ ಆರೋಗ್ಯವಾಗಿರಲು ಹೇಗೆ ಸಾಧ್ಯ? ಒಂದು ಸರ್ಕಾರದ ಮುಖ್ಯ ಜವಾಬ್ದಾರಿ ಏನಂದ್ರೆ, ಜನ ಸಾಮಾನ್ಯರಿಗೆ ಉಚಿತವಾಗಿ ಒಳ್ಳೆಯ ಆರೋಗ್ಯ ಮತ್ತು ಶಿಕ್ಷಣ ನೀಡುವುದಾಗಿರುತ್ತೆ. ಆದ್ರೆ ಇಂದು ಎರಡೂ ಕ್ಷೇತ್ರಗಳು ಖಾಸಗೀಕರಣಗೊಂಡು ದುಡ್ಡು ಇದ್ದವನಿಗಷ್ಟೆ ಒಳ್ಳೆಯ ಆರೋಗ್ಯ ಸೇವೆ ಮತ್ತು ಒಳ್ಳೆಯ ಶಿಕ್ಷಣ ಸಿಗುವಂತಾಗಿದೆ. ಬಡವನನ್ನು ನಿರ್ಲಕ್ಷಿಸಲಾಗಿದೆ. ಇಂತಹ ಒಂದು ಸಂದರ್ಭದಲ್ಲಿ ಬಡವರನ್ನು ಮೇಲೆತ್ತುವವರು ಯಾರು? ಇಂತಹ ಪರಿಸ್ಥಿತಿಯಲ್ಲಿ ಆರೋಗ್ಯಕರ ಸಮಾಜ ಕಾಣಲು ಸಾಧ್ಯವೆ?

ಅವೈಜ್ಞಾನಿಕವಾಗಿ, ಮನಸೋ ಇಚ್ಛೆ ಲಾಬಿಗೆ ಮಣಿದು ಖಾಸಗಿಯವರಿಗೆ ವೈದ್ಯಕೀಯ ಕಾಲೇಜ್ ನೀಡುವುದರಿಂದ ಖಾಸಗಿ ಕಾಲೇಜುಗಳ ದುಬಾರಿ ಶುಲ್ಕ ಪಾವತಿಸಲಾಗದೆ ಬಡವ ಹಾಗು ಮಧ್ಯಮ ವರ್ಗದ ಮಕ್ಕಳು ವೈದ್ಯರಾಗುವ ಕನಸು ಕಾಣದಂತಾಗಿದೆ. ಸಮಾಜದಲ್ಲಿ ಬಹುಪಾಲು ಬಡವರು ಮತ್ತು ಮಧ್ಯಮವರ್ಗದವರೇ ಇರುವಾಗ, ಇವರ ಆರೋಗ್ಯ ರಕ್ಷಣೆಯನ್ನು ವಂತಿಗೆ ನೀಡಿ ವೈದ್ಯರಾಗಿ ಬರುವ ವೈದ್ಯರಿಂದ ನಿರೀಕ್ಷಿಸಲು ಸಾಧ್ಯವೇ?


ಈ ಸಮಾಜದಲ್ಲಿ (ಕರ್ನಾಟಕ, ಭಾರತ) ತಯಾರಾಗುವ ವೈದ್ಯರಲ್ಲಿ ಶೇ. ೨೦ರಷ್ಟು ವೈದ್ಯರ ಸೇವೆ ಮಾತ್ರ ಶೇ. ೮೦ರಷ್ಟಿರುವ ಗ್ರಾಮೀಣರಿಗೂ, ಶೇ.೮೦ರಷ್ಟು ವೈದ್ಯರ ಸೇವೆ ಶೇ. ೨೦% ಇರುವ ನಗರ ವಾಸಿಗಳಿಗೆ ಲಭ್ಯವಿರುತ್ತದೆ. ಅಂದರೆ ಬಹುಪಾಲು ವೈದ್ಯರು ಪಟ್ಟಣ/ನಗರಗಳಲ್ಲಿ ನೆಲೆಸಲು ಇಚ್ಛಿಸುತ್ತಾರೆ. ಕಾರಣ ನಾಗರಿಕ ಸೌಲಭ್ಯಗಳ ಕೊರತೆ ಮತ್ತು ಹಳ್ಳಿಯ ಕೆಟ್ಟ ರಾಜಕೀಯದಿಂದ ವೈದ್ಯರಿಗೆ ರಕ್ಷಣೆ ಇಲ್ಲದ ಕಾರಣ ಹಳ್ಳಿಯಲ್ಲಿ ಸೇವೆ ಮಾಡಲು ಹಿಂಜರಿಯುತ್ತಾರೆ. ಅದಕ್ಕಾಗಿ ಸರ್ಕಾರ, ಹಳ್ಳಿಯಲ್ಲಿ ಸೇವೆಗೆ ಹೋಗದ ವೈದ್ಯರಿಗೆ (ಸರ್ಕಾರಿ ಕೋಟಾದಡಿ ಓದಿದವರಿಗೆ) ೨೫ಲಕ್ಷ, ೧೫ಲಕ್ಷ ಮತ್ತು ೧೦ಲಕ್ಷ ರೂಪಾಯಿಗಳ ದಂಡ ವಿಧಿಸಲು ತೀರ್ಮಾನಿಸಿದೆ. ಆದರೆ ಸರ್ಕಾರ ಗಾಯದ ಮೂಲವನ್ನು ಹುಡುಕದೆ, ಗಾಯಕ್ಕೆ ಮುಲಾಮು ಸವರುತ್ತದೆ. ಹಾಗಾಗಿ ಗಾಯ ವಾಸಿಯಾಗುವುದಿಲ್ಲ.

ಎಂ.ಬಿ.ಬಿ.ಎಸ್. ಅಥವಾ ಸ್ನಾತಕೋತ್ತರ ಪದವಿ ನಂತರ ಕಡ್ಡಾಯವಾಗಿ ೧ ವರ್ಷ ಹಳ್ಳಿಯಲ್ಲಿ ಸೇವೆ ಮಾಡಬೇಕೆಂದು ಸರ್ಕಾರ ಕಾನೂನು ಮಾಡಿದೆ. ಆದ್ರೆ, ಇದು ಒಂದು ತಾತ್ಕಾಲಿಕ ಹುದ್ದೆಯಾಗಿರುವುದರಿಂದ ಎಂ.ಬಿ.ಬಿ.ಎಸ್ ಮಾಡಿದವರು ಸ್ನಾತಕೋತ್ತರಕ್ಕೆ ಹೋಗುವ ತಯಾರಿಯಲ್ಲಿರುತ್ತಾರೆ. ಅಲ್ಲದೆ, ಅನುಭವ ಇಲ್ಲದ ವೈದ್ಯರನ್ನು ಹಳ್ಳಿಯ ಜನರ ಆರೋಗ್ಯ ಸೇವೆ ಮಾಡಲು ಕಳಿಸುವುದು ಸರಿಯಲ್ಲ. ಜನರ ಜೀವದ ಬೆಲೆ ಸರ್ಕಾರಕ್ಕೆ ಗೊತ್ತಿದೆಯೇ, ಇದು ಸರಿಯಾದ ಪರಿಹಾರವಲ್ಲ. ಆಸಕ್ತಿ ಇರುವ ಮತ್ತು ಸರ್ಕಾರಿ ಹುದ್ದೆಯ ಅಗತ್ಯವಿರುವ ವೈದ್ಯರನ್ನು ಹಳ್ಳಿಗಳಿಗೆ ಹಾಕಿದರೆ ಖಂಡಿತ ಇದು ಒಂದು ಶಾಶ್ವತ ಪರಿಹಾರವಾಗುತ್ತದೆ. ಸರ್ಕಾರಗಳು ಈ ರೀತಿ ಯೋಚಿಸಬೇಕಾಗಿದೆ. ವೈದ್ಯರಿಗೆ ವಾಸಕ್ಕೆ ಯೋಗ್ಯವಾದ ಮನೆ, ನೀರು ಮತ್ತು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ, ಒಳ್ಳೆಯ ವೇತನ ಭತ್ಯೆ ನೀಡಿದರೆ ಖಂಡಿತ ವೈದ್ಯರು ಹಳ್ಳಿಗೆ ಹೋಗಿ ಕೆಲಸ ಮಾಡುತ್ತಾರೆ.



ವೈದ್ಯಕೀಯ ಕ್ಷೇತ್ರವು ಹೊಸ ಹೊಸ ಅವಿಷ್ಕಾರಗಳಿಂದ ದೊಡ್ಡ ಕ್ಷೇತ್ರವಾಗಿ ಬೆಳೆದಿದೆ. ಅನೇಕ ತಂತ್ರಜ್ಞಾನಗಳು, ಹೊಸ ಹೊಸ ವೈದ್ಯಕೀಯ ಉಪಕರಣಗಳು ಮಾರ್ಕೆಟಿಗೆ ಬಂದಿದ್ದಾವೆ, ನಿಜವಾಗಿಯೂ ಒಳ್ಳೆಯ ಬೆಳವಣಿಗೆ. ಆದರೆ ವೈದ್ಯರು ಖಾಯಿಲೆ ಪತ್ತೆ ಹಚ್ಚುವ ವಿಧಾನ ಹಾಗು ರೋಗಿಯ ಜೊತೆ ಸಂವಹನ ಹಾಗೂ ರೋಗಿಯನ್ನು ಮುಟ್ಟುವಿಕೆ ಮರೆಯುತ್ತಿದ್ದಾರೆ. ಅಂದರೆ ತಂತ್ರಜ್ಞಾನಗಳು ಇವುಗಳನ್ನು Replace ಮಾಡಿವೆ, ಇದು ಅಪಾಯಕಾರಿ.

ಹಿಂದೆ ರೋಗ ಬರದಂತೆ ತಡೆಗಟ್ಟುವಿಕೆಯ (prevention) ಬಗ್ಗೆ ವೈದ್ಯರು ಶ್ರಮ ವಹಿಸುತ್ತಿದ್ದರು. ಆದ್ರೆ ಇಂದು (Curative) ಚಿಕಿತ್ಸಾ ಕ್ರಮಗಳಲ್ಲಿ ಹೆಚ್ಚು ನಿರತರಾಗಿದ್ದಾರೆ. ಹಿಂದೆ ಸಾಂಕ್ರಾಮಿಕ ರೋಗಗಳಿಂದ ಜನರು ಹೆಚ್ಚು ಸಾವು ನೋವುಗಳನ್ನು ಕಾಣುತ್ತಿದ್ದರು. ಇಂದು ವೇಗದ ಹಾಗೂ ಬದಲಾದ ಜೀವನ ಕ್ರಮದಿಂದ ಹಲವಾರು Non-communicable ರೋಗಗಳು (ಡಯಾಬಿಟಿಸ್, ಬಿಪಿ, ಕ್ಯಾನ್ಸರ್, ಹೃದಯ ಸಂಬಂಧಿ ಖಾಯಿಲೆ, ಅಪಘಾತಗಳು, ಬೊಜ್ಜು, ಬಂಜೆತನ, ಮಾನಸಿಕ ಖಾಯಿಲೆಗಲು ಇತ್ಯಾದಿ) ಇವು ಇಂದಿನ ವೈದ್ಯರ ಮುಂದಿರುವ ಸವಾಲುಗಳು. ಇವನ್ನು ಗುಣಪಡಿಸಲು ಹಾಗೂ ಬರದಂತೆ ತಡೆಗಟ್ಟುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿದೆ. ರೋಗ ಪತ್ತೆ ಹಚ್ಚುವಿಕೆಗೆ ಕೇವಲ ೧೦–೨೦% ಸಹಾಯಕವಾಗಬಲ್ಲ



**ಒಂದು ಪಂಚತಾರಾ ಆಸ್ಪತ್ರೆ**

Scannig,CT, MRI, ರಕ್ತ–ಮೂತ್ರ ಪರೀಕ್ಷೆಗಳು ನ್ಯಾಯಬದ್ಧವಾಗಿ ಹಾಗೂ ಅಗತ್ಯವಿದ್ದಲ್ಲಿ ಮಾತ್ರ ಮಾಡಿಸಬೇಕು, ಹಾಗೂ ಔಷಧಿಗಳ ಉಪಯೋಗ ರೋಗಕ್ಕೆ ತಕ್ಕಂತೆ ಅಗತ್ಯಕ್ಕನುಗುಣವಾಗಿ ಬರೆಯಬೇಕು. ಮೇಲಿನ ಎರಡು ಅಂಶಗಳು ವೈದ್ಯರಿಗೆ ಆಸೆ–ಆಮಿಷಗಳನ್ನು ನೀಡುತ್ತದೆ. ಇಲ್ಲಿ ವೃತ್ತಿ ಮೌಲ್ಯವೇ ದೊಡ್ಡದಾಗಬೇಕು, ಹಣವಲ್ಲ. ಜನರಿಕ್ ಔಷಧಿ ತಯಾರಿಕೆ ಮತ್ತು ವಿತರಣೆಯನ್ನು ಆಯೋಜಿಸಿ ಕಾರ್ಯರೂಪಕ್ಕೆ ತರಲು ಪ್ರಯತ್ನಿಸುತ್ತಿರುವುದು ಸ್ವಾಗರ್ತಾಹ. ಇದು ಸಾರ್ವಜನಿಕರಿಗೆ ಹೆಚ್ಚು ಉಪಯೋಗವಾಗುತ್ತದೆ.

ನಕಲಿ ವೈದ್ಯರ ಹಾವಳಿಜಾಸ್ತಿ ಇದೆ. ಇವರು ಸಹ ಸಮಾಜ ಕಂಟಕರು, ಇವರನ್ನು ನಿಯಂತ್ರಿಸಬೇಕಾಗಿದೆ. ಭಾರತ ದೇಶದ ದೇಶಿ ವೈದ್ಯ ಪದ್ದತಿಗಳಾದ ಆಯುರ್ವೇದ, ಹೋಮಿಯೋಪತಿ, ನ್ಯಾಚೂರೋಪತಿ, ಯುನಾನಿ, ಯೋಗ ಇತ್ಯಾದಿ ಇವುಗಳನ್ನು ಪ್ರೋತ್ಸಾಹಿಸಿ ನಕಲಿ ವೈದ್ಯರ ಹಾವಳಿ ತಪ್ಪಿಸಬಹುದು. ಉದಾ: ಆಯುರ್ವೇದ ವೈದ್ಯರು ಅಲೋಪಥಿ ಪ್ರಾಕ್ಟೀಸ್ ಮಾಡುವುದನ್ನು ತಪ್ಪಿಸಬಹುದು. ಆದ್ದರಿಂದ Holistic medicine (ಸಮಗ್ರ ಚಿಕಿತ್ಸಾ ವಿಧಾನ) ಬಗ್ಗೆ ಹೆಚ್ಚು ಪ್ರಚಾರ ಮಾಡಬೇಕು ಹಾಗೂ ಪ್ರೋತ್ಸಾಹಿಸಬೇಕು.

ವೈದ್ಯರು ಮನುಷ್ಯನ ಅಂಗಭೇದನ ಮಾಡದೆ, ಮನುಷ್ಯನ ಇಡಿ ದೇಹ ಒಂದು ಎಂದು ಪರಿಭಾವಿಸಿ, ರೋಗ ಪತ್ತೆಹಚ್ಚಿ ಚಿಕಿತ್ಸೆ ನೀಡುವಲ್ಲಿ ಮುನ್ನಡೆಯಬೇಕು, ಹಾಗಂತ ವಿಶೇಷ ತಜ್ಞರನ್ನು ಕಡೆಗಣಿಸುವಂತಿಲ್ಲ ಅವರು ಸಹ ಇಡೀ ದೇಹವನ್ನು ಒಂದು ಅಂತಾ ನೋಡಿ ತಮ್ಮ ವಿಶೇಷ ಜ್ಞಾನದ ಮೂಲಕ ಚಿಕಿತ್ಸೆ ನೀಡಿದರೆ ಒಳ್ಳೆಯದು. ಅನೇಕ ಸಂದರ್ಭಗಳಲ್ಲಿ ವಿವಿಧ ತಜ್ಞರ ಸಮೂಹ ಒಟ್ಟಿಗೆ ಸೇರಿ ರೋಗಿಯ ಚಿಕಿತ್ಸೆಗೆ ನಿಲ್ಲಬೇಕಾಗಿದೆ.

ಕಾರ್ಪೊರೇಟ್ ಆಸ್ಪತ್ರೆಗಳು ನಾಯಿಕೊಡೆಗಳಂತೆ ಎಲ್ಲಾ ಕಡೆ ಹಬ್ಬಿ, ಅವಕ್ಕೆ ಲಾಭವಷ್ಟೆ ಮುಖ್ಯವಾಗಿದೆ. ಅದ್ದರಿಂದ ವೃತ್ತಿ ಮೌಲ್ಯಗಳು ಕುಸಿಯುತ್ತಿವೆ. ಸರ್ಕಾರಿ ಆಸ್ಪತ್ರೆಗಳು ಇವುಗಳ ಮುಂದೆ ಸಪ್ಪೆಯಾಗಿ ಮುಚ್ಚುವ ಹಂತಕ್ಕೆ ಬಂದಿವೆ. ಸರ್ಕಾರಿ ವ್ಯವಸ್ಥೆ ಕೂಡಾ ನುರಿತ ದಕ್ಷ ವೈದ್ಯರನ್ನು ಉಳಿಸಿಕೊಳ್ಳಲು ಸೋತಿದೆ.


ದಕ್ಷ ಪ್ರಮಾಣಿಕ ವೈದ್ಯರು ಹೆಚ್ಚಿನ ಸಂಖ್ಯೆಯಲ್ಲಿಯೇ ಇದ್ದರೂ ಅವರನ್ನು ಮಾನಸಿಕವಾಗಿ ಮತ್ತು ನೈತಿಕವಾಗಿ ಕುಸಿಯುವಂತೆ ಈ ಸಮಾಜ ಮಾಡಿದೆ. ಮುಖ್ಯವಾಗಿ ಮಾಧ್ಯಮಗಳು, ವೈದ್ಯರು ಒಂದು ಸಾವಿರ ಒಳ್ಳೆಯ ಕೆಲಸ ಮಾಡಿದ್ದರೂ, ಆಕಸ್ಮಿಕವಾಗಿ ಸಂಭವಿಸುವ ಘಟನೆಗಳನ್ನಷ್ಟೆ ಬೊಟ್ಟು ಮಾಡಿ–ತೋರಿಸಿದ್ದನ್ನೇ ತೋರಿಸಿ–ಜನರ ಮನಸ್ಸನ್ನು ಹಾಳುಮಾಡುತ್ತಾರೆ.

ಜನರಲ್ಲಿ ಆರೋಗ್ಯದ ಅರಿವು ಜಾಸ್ತಿಯಾಗುತ್ತಿದೆ. ಹಾಗೇ ಬದಲಾದ ಜೀವನ ಶೈಲಿ, ಆಹಾರ ಕ್ರಮ ಮತ್ತು ಒತ್ತಡದಿಂದ ರೋಗಗಳು ಹೆಚ್ಚಾಗುತ್ತಿವೆ. ಆದರೆ ಜನರಿಗೆ, ವೈದ್ಯರ ಮೇಲೆ ನಂಬಿಕೆ ವಿಶ್ವಾಸ ಕಡಿಮೆಯಾಗುತ್ತಿದೆ. ವೈದ್ಯರು ವೃತ್ತಿಧರ್ಮವನ್ನು ಮರೆಯದೆ ಜವಾಬ್ದಾರಿಯಿಂದ ವೃತ್ತಿ ಮೌಲ್ಯಗಳನ್ನು ಪುನ: ಎತ್ತಿ ಹಿಡಿದು ಜನರ ವಿಶ್ವಾಸಕ್ಕೆ ಪಾತ್ರರಾಗಬೇಕಿದೆ.

---


# ಮಾರುಕಟ್ಟೆ ಕೇಂದ್ರಿತ ಸಾರ್ವಜನಿಕ ಆಡಳಿತ ವ್ಯವಸ್ಥೆ: ಕೆಲವು ಟಿಪ್ಪಣಿಗಳು

**–ಡಾ. ಜಿ.ಎನ್ ಮಲ್ಲಿಕಾರ್ಜುನಪ್ಪ**



ಮುಂಬೈ ಶೇರು ಮಾರುಕಟ್ಟೆ ಕಟ್ಟಡ

**ಕೊ**ಳ್ಳುವ ಮತ್ತು ಮಾರುವ ಚಟುವಟಿಕೆಗಳು ನಮ್ಮ ಒಟ್ಟು ಬದುಕಿನ ಮುಖ್ಯ ಆರ್ಥಿಕ ಚಟುವಟಿಕೆಗಳಾಗಿ ಬಂದ ದಿನದಿಂದಲೇ ಪ್ರತ್ಯಕ್ಷವಾಗಿಯೋ ಅಪ್ರತ್ಯಕ್ಷವಾಗಿಯೋ ಅಂಕುರಿಸಿದ ಮಾರುಕಟ್ಟೆ ಇಂದು ನಮ್ಮ ಬದುಕಿನ ಎಲ್ಲ ಅಂಗಗಳನ್ನು, ಸಂಬಂಧಗಳನ್ನು ಪ್ರಭಾವಿಸುವ ಮಟ್ಟಿಗೆ ಬೆಳೆದಿದೆ. ಮನುಷ್ಯನ ಅನುಭೋಗ ವೈವಿಧ್ಯತೆಯ ಆಕಾಂಕ್ಷೆಗಳೇ ಇದಕ್ಕೆ ಕಾರಣವಾಗಿವೆ. ಮನುಕುಲದ ಆರ್ಥಿಕ ಇತಿಹಾಸದಲ್ಲಿ ಈ ಮಾರುಕಟ್ಟೆ ನಡೆದುಬಂದ ದಾರಿಯನ್ನು ಗಮನಿಸಿದರೆ ಸಾಕು, ಬಹುತೇಕ ನಮ್ಮ ವೈಜ್ಞಾನಿಕ, ತಾಂತ್ರಿಕ ಮತ್ತು ಆರ್ಥಿಕ ಮೊದಲಾದ ಕ್ಷೇತ್ರಗಳ ಆವಿಷ್ಕಾರ – ಸಂಶೋಧನೆಗಳು ಭೌತಿಕ ಸರಕು–ಸೇವೆಗಳ ಅನುಭೋಗ ಪ್ರೇರಣೆಯಿಂದಲೇ ಆಗಿರುವುದು ತಿಳಿದುಬರುತ್ತದೆ. ಈ ಪ್ರೇರಣೆಯೇ ನಮ್ಮ ಇಂದಿನ ಭೌತಿಕ ಬಮುನ ವೈವಿಧ್ಯಕ್ಕೆ, ಸರಕು ಸಂಸ್ಕೃತಿಯ ಆರಾಧನೆಗೆ ಕಾರಣವಾಗಿದೆ ಎಂದರೂ ತಪ್ಪಾಗಲಾರದು. ನಮ್ಮ ಈ ವೈವಿಧ್ಯಮಯ ಬದುಕಿನ ಸುಖಕ್ಕಾಗಿ ನಾವೇ ಸೃಷ್ಟಿ ಮಾಡಿಕೊಂಡ ಮಾರುಕಟ್ಟೆಯ ಕಕ್ಷೆಯೊಳಗೆ ನಾವೇ ಬಂಧಿಯಾಗುತ್ತಿರುವ ಈ ಸಂದರ್ಭ ಮತ್ತು ಕ್ಷಣ, ಹನ್ನೆರಡನೇ ಶತಮಾನದ ಶರಣೆ ಅಕ್ಕಮಹಾದೇವಿಯ *"ತರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ, ತನ್ನ ನೂಲು ತನ್ನನೆ ಸುತ್ತಿ ಸಾವಂತೆ"*, ಎಂಬ ವಚನದ ಸಾಲನ್ನು ನೆನಪಿಗೆ ತಂದರೆ ಅದು ಅತ್ಯಂತ ಪ್ರಸ್ತುತವೂ ಹೌದು.



ತೊಂಬತ್ತರ ದಶಕದ ಆರಂಭದಲ್ಲಿ ನಮ್ಮ ದೇಶದಲ್ಲಿ ಆರಂಭಗೊಂಡ ಜಾಗತೀಕರಣ ಪ್ರಕ್ರಿಯೆಯು ಇವತ್ತು ಸ್ಥಳೀಯ ಮಾರುಕಟ್ಟೆಗಳಿಗೆ ಜಾಗತಿಕ ಅವಕಾಶಗಳನ್ನು ಕೊಟ್ಟಿದ್ದಿದ್ದರೆ ಮೆಚ್ಚಿಕೊಳ್ಳಬಹುದಿತ್ತು. ಬದಲಾಗಿ ಬೃಹತ್ ರಾಷ್ಟ್ರಗಳ ಬಲಿಷ್ಠ ಮಾರುಕಟ್ಟೆಯನ್ನು ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಅಪಾಯ ತಂದೆಳೆಯುವ ಅಗಂತುಕನ ರೀತಿಯಲ್ಲಿ ವಿಸ್ತರಿಸಿದ ಮತ್ತು ವಿಸ್ತರಿಸುವ ರೀತಿ ಬಹುಸಂಖ್ಯಾತರನ್ನು ಬಡತನಕ್ಕೆ ತಳ್ಳುತ್ತಿದ್ದು, ಪ್ರಜಾಪ್ರಭುತ್ವ ರಾಷ್ಟ್ರಗಳ ಸುಖೀ ಅರ್ಥವ್ಯವಸ್ಥೆಗೆ ಕೊಡಲಿ ಪೆಟ್ಟು ನೀಡಿದೆ. ನಾವಾಡುವ ಒಂದೊಂದು ಮಾತು ಕೂಡ ಇವತ್ತು ಮಾರುಕಟ್ಟೆಯ ನೆಲೆಯಿಂದ ಉದುರುತ್ತಿವೆಯೋ, ಸಿಡಿಯುತ್ತಿವೆಯೋ ಎನ್ನುವಂತಿವೆ. ಸತ್ಯ, ಶುದ್ಧ ಮತ್ತು ಮಾನವೀಯ ಮೌಲ್ಯಗಳಿಗೆ, ಸಂಬಂಧಗಳಿಗೆ ಮೌಲ್ಯವೇ ಇಲ್ಲವಾಗುತ್ತಿದೆ. ಉಸಿರುಕಟ್ಟಿಸುವ, ಮತ್ತೇರಿಸುವ, ಕತ್ತು–ಕೊಯ್ಯುವ, ಪರಸ್ಪರ ಪೈಪೋಟಿ ಸಮರವೇ ನಿತ್ಯ ಚಟುವಟಿಕೆಯಾಗಿದೆ. ಹಾಗಾಗಿ, ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ ವಲಯಗಳೆಲ್ಲವೂ ಮಾರುಕಟ್ಟೆ ಪ್ರೇರಿತ ಪೈಪೋಟಿ ಕ್ಷೇತ್ರಗಳಾಗುತ್ತಿವೆ. ಸರಕು–ಸೇವೆಗಳ ಅನುಭೋಗ, ಆಸ್ತಿ–ಉತ್ಪಾದನಾ ಸೌಲಭ್ಯಗಳ ಮಾಲಿಕತ್ವ, ಪ್ರಭುತ್ವದೊಳಗಿನ ಅಧಿಕಾರದ ಆಮಿಷ ಮೊದಲಾದವುಗಳೇ ಮಾರಾಟದ ಸರಕುಗಳಾಗಿವೆ. ಈ ಸರಕುಗಳನ್ನು ಹೆಚ್ಚು ಕೊಳ್ಳುವ, ಅನುಭೋಗಿಸುವ ವ್ಯಕ್ತಿ–ಸಂಸ್ಥೆಗಳೇ ಆ ಸಮುದಾಯ, ದೇಶ, ಪ್ರದೇಶಗಳ ಪ್ರತಿಷ್ಠಿತರು ಮತ್ತು ಶ್ರೇಷ್ಠರು ಎನ್ನುವ ಭಾವನೆ ಅಥವಾ ಭ್ರಮೆಗೆ ಜನ ಒಳಗಾಗುತ್ತಿರುವುದು ದುರಂತ ಸತ್ಯ.

ಶುದ್ಧ ಸಮಾಜವಾದಿ ವ್ಯವಸ್ಥೆಯೂ ಅಲ್ಲದ, ಶುದ್ಧ ಬಂಡವಾಳಶಾಹಿ ವ್ಯವಸ್ಥೆಯೂ ಅಲ್ಲದ, ಆದರೆ ಅವೆರಡರ ಅಶುದ್ಧ ಮಿಶ್ರಣವೆಂಬಂತೆ ಜಾರಿಗೊಂಡಿರುವ ಇಂದಿನ ನಮ್ಮ ಮಿಶ್ರ ಅರ್ಥವ್ಯವಸ್ಥೆಯ ಆಧಾರ ಹೊಂದಿರುವ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜ್ಯಾಡಳಿತ ಜವಾಬ್ದಾರಿ ಹೊಂದಿರುವ ಸರ್ಕಾರ ಮತ್ತು ಸರಕು–ಸೇವೆಗಳ ಉತ್ಪಾದನೆ–ಮಾರಾಟಗಳ ಜವಾಬ್ದಾರಿ ಹೊಂದಿರುವ ವ್ಯವಹಾರ ಸಂಸ್ಥೆಗಳ ನಿರ್ವಹಣೆ ಹಾಗೂ ಆಡಳಿತ ಕ್ರಮಗಳಲ್ಲಿ ಮಾರುಕಟ್ಟೆ ಪ್ರೇರಿತ ಬದಲಾವಣೆಗಳಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಮಾರುಕಟ್ಟೆ ಅಂಶಗಳಾದ ಬೇಡಿಕೆ, ಪೂರೈಕೆ, ಬೆಲೆ, ಉತ್ಪಾದನಾ ವೆಚ್ಚ, ಮತ್ತು ಇವುಗಳನ್ನು ಪ್ರಭಾವಿಸುವ ನಮ್ಮ ಬಯಕೆಗಳು, ಜಾಹಿರಾತು – ಡಿಸ್ಕೌಂಟ್‍ಗಳಂಥ ಉದ್ರೇಕಗಳು ತೀಕ್ಷ್ಣವಾದಷ್ಟು, ಬಲಿಷ್ಠವಾದಷ್ಟು ಇವುಗಳನ್ನು ಉತ್ಪಾದಿಸುವ ಮತ್ತು ನಿರ್ವಹಿಸುವ ಆಡಳಿತ ವ್ಯವಸ್ಥೆ ಕೂಡ ಸಂದರ್ಭಕ್ಕೆ ತಕ್ಕಂತೆ ಸ್ಥಿತ್ಯಂತರಗೊಳ್ಳುವುದು ಸಹಜ.

ಕಳೆದ ಮೂರು ದಶಕಗಳಲ್ಲಿ ನಮ್ಮ ದೇಶದ ಸರ್ಕಾರಿ ಮತ್ತು ಖಾಸಗೀ ವಲಯಗಳಲ್ಲಿ ಆಡಳಿತ ನೀತಿ, ವ್ಯವಸ್ಥೆ ಮತ್ತು ವಿಧಾನಗಳಲ್ಲಿ ಮಾರುಕಟ್ಟೆ ಪೈಪೋಟಿ ಪ್ರೇರಿತ ಸ್ಥಿತ್ಯಂತರಗಳನ್ನು ಕಾಣುತ್ತೇವೆ. ಇದನ್ನು ಜಾಗತೀಕರಣ ನೆಲೆಯ ಹೊಸ ಸುಧಾರಣೆಗಳ ರಚನಾತ್ಮಕ ಬದಲಾವಣೆಗಳ ಒಂದು ಭಾಗ ಎಂದೂ ಕೂಡ ಹೇಳಬಹುದು. ಬದಲಾದ ಉದ್ದೇಶಗಳಿಗೆ ತಕ್ಕಂತೆ ಮಾರ್ಗ ವಿಧಾನಗಳಲ್ಲಿ, ಸಂಘಟನಾ ಸಂರಚನೆಗಳಲ್ಲಿ, ಮಾನವ ಸಂಪನ್ಮೂಲವನ್ನು ಸಜ್ಜುಗೊಳಿಸುವಲ್ಲಿ ನಿರ್ಲಕ್ಷ ತೋರಿದರೆ ಉದ್ದೇಶಗಳು ಈಡೇರದೆ ವಿಫಲವಾಗುವ, ಅಪ್ರಸ್ತುತವಾಗುವ, ನಷ್ಟ ಅನುಭವಿಸುವ ಸಾಧ್ಯತೆಗಳೇ ಹೆಚ್ಚು. ಮಾರುಕಟ್ಟೆಯಲ್ಲಿ ಅಪ್ರಸ್ತುತವಾಗುವುದೆಂದರೆ ಒಟ್ಟು ಬದುಕಿನ ವೈಫಲ್ಯ ಎನ್ನುವ ಅಪಾಯಕಾರಿ ಸ್ಥಿತಿ ಉಂಟಾಗುತ್ತಿದೆ.

ಹಾಗಾಗಿ, ಮಾರುಕಟ್ಟೆ ಪೈಪೋಟಿ ಎದುರಿಸಿ ಯಶಸ್ವಿಯಾಗುವ ಉದ್ದೇಶದಿಂದ ವ್ಯವಸ್ಥೆಯ ನಿರ್ವಹಣೆ ಮತ್ತು ಆಡಳಿತಕ್ಕೆ ಹೊಸ ಚಾಲನೆ ನೀಡುವ ಪ್ರಯತ್ನಗಳು ಹಳೇ ನಾಯಿಗೆ ತೊಡಿಸಿದ ಹೊಸ ವಿನ್ಯಾಸದ ಉಡುಗೆಯಾಗಿ ತೋರಿದರೆ ನಗಬೇಕಾದುದೇನೂ ಇಲ್ಲ. ಈ ಬದಲಾವಣೆಗಳಲ್ಲಿ ಬಹಳಷ್ಟು ಅಂಶಗಳು ಹದಿನಾರನೇ ಶತಮಾನದಲ್ಲಿ ಭಾರತಕ್ಕೆ ಕಾಲಿಟ್ಟು ಸುಮಾರು ಎರಡು ಶತಮಾನಗಳವರೆಗೆ ಈ ದೇಶದ ಒಟ್ಟು ವ್ಯವಸ್ಥೆಯನ್ನು ಹಿಡಿತದಲ್ಲಿಟ್ಟುಕೊಂಡ ಈಸ್ಟ್ ಇಂಡಿಯಾ ಕಂಪನಿ ಮಾದರಿಯ ಕಾರ್ಪೋರೇಟ್ ವ್ಯವಸ್ಥೆಯಲ್ಲಿ ಮೊಳಕೆಯೊಡೆದು ಚಿಗುರಿ, ಬೆಳೆದು ಬಂದ ಮಾದರಿ ವಿಧಾನಗಳೆಂದರೆ ತಪ್ಪಾಗಲಾರದು. ಮಸಾಲೆ ಪದಾರ್ಥ ವ್ಯಾಪಾರಿಗಳು ತಮ್ಮ ವಹಿವಾಟಿಗೆ ಕಂಡುಕೊಂಡ ವ್ಯವಸ್ಥೆ ಮತ್ತು ಆಡಳಿತ ಮಾದರಿಗಳು ಮಾನವೀಯ ಮೌಲ್ಯಗಳನ್ನಾಧರಿಸಿದ ಸರ್ವೋದಯ ಉದ್ದೇಶದ ಆಡಳಿತ ನೀಡಲು ಹೇಗೆ ಸಾಧ್ಯ? ಈ ಆತಂಕಕ್ಕೆ ಉತ್ತರಿಸಲು ತಡಕಾಡುವಂತಾಗಿದೆ. ಜಾಗತೀಕರಣ ನೆಲೆಯ ಹೊಸ ಸುಧಾರಣೆ ಸೃಷ್ಟಿತ, "Corporate Governance", ಮಾದರಿಯ ಸಾಂಸ್ಥಿಕ ಆಡಳಿತವನ್ನು "People centered Public Administration" ವಿನ್ಯಾಸಕ್ಕೆ ಅಳವಡಿಸುವಾಗ ಎಚ್ಚರತಪ್ಪಿ ಸಮಗ್ರ ಸಾರ್ವಜನಿಕ ಹಿತಾಸಕ್ತಿ ನೇಪಥ್ಯಕ್ಕೆ ತಳ್ಳಲ್ಪಡಬಾರದು. ಹಾಗಾಗದಂತೆ ಸರ್ಕಾರ ನೋಡಿಕೊಳ್ಳಬೇಕಿದೆ.

ಸ್ವಾತಂತ್ರ್ಯ ನಂತರದ ಮತ್ತು ಹೊಸ ಸುಧಾರಣೆ ಪೂರ್ವ ದಶಕಗಳಲ್ಲಿ ಆಡಳಿತದಲ್ಲಿ ಸರ್ಕಾರದ ಹೊಣೆಗಾರಿಕೆ ಮತ್ತು ಪಾತ್ರ ಎಂದರೆ ಸಮಾನತೆ ಮತ್ತು ಸಾಮಾಜಿಕ ನ್ಯಾಯ ಜಾರಿಗೊಳಿಸಲು ಅರ್ಥವ್ಯವಸ್ಥೆಯೊಳಗೆ ನೇರಪ್ರವೇಶ ಮಾಡುವುದಾಗಿತ್ತು. ಆದರೆ ಸುಧಾರಣೋತ್ತರ ದಶಕಗಳಲ್ಲಿ ಅದು ಖಾಸಗೀ ವಲಯವನ್ನು ಬೆಳೆಸುವ "Facilitator" ಆಗಿ ಪರಿವರ್ತನೆಗೊಂಡಿರುವುದೇ ಆಡಳಿತ ಸಂರಚನೆಯಲ್ಲಿ ಈಗಿನ ಬದಲಾವಣೆ ಬರಲು ಕಾರಣವಾಯಿತು. ಆಡಳಿತ ಪರಿಭಾಷೆ ಬದಲಾಯಿತು. ಕೇಂದ್ರ ಸರ್ಕಾರದ ಶಿಕ್ಷಣ ಇಲಾಖೆ ಮಾನವ ಸಂಪನ್ಮೂಲ ಮಂತ್ರಾಲಯವಾಯಿತು. ಮಾರುಕಟ್ಟೆ ಕೇಂದ್ರಿತ ಆಡಳಿತ ತರಬೇತಿ ಸಂಸ್ಥೆಗಳು ಆರಂಭವಾದವು. ಅಸತ್ಯ ಜಾಹಿರಾತುಗಳು ಮುಗಿಲು ಮುಟ್ಟಿ ಬೆಳೆಯುವಂತಾದವು. ನಿಯಂತ್ರಣ ವ್ಯವಸ್ಥೆ ಭ್ರಷ್ಟಗೊಂಡಿತು. ಮೌಲ್ಯಾಧಾರಿತ ಆಡಳಿತಕ್ಕಿಂತ ತಂತ್ರಗಾರಿಕೆ ಆಡಳಿತ ಅಂದರೆ, "Stratagic Management/Administration" ಮುಖ್ಯ ಆಯಿತು. ತತ್ವಜ್ಞಾನವನ್ನು ಬದಿಗಿಟ್ಟ ತಂತ್ರಜ್ಞಾನ ಆಧರಿಸಿದ ಆಡಳಿತ ವ್ಯವಸ್ಥೆ ಬುನಾದಿಯಿಲ್ಲದ ಕಟ್ಟಡದಷ್ಟು ಅಸುರಕ್ಷಿತ ಎನ್ನುವ ವಿವೇಚನೆ ಕೂಡ ಕಣ್ಮರೆಯಾಗುತ್ತಿದೆ. ಜ್ಞಾನಕ್ಕಿಂತ ಕೌಶಲ್ಯಕ್ಕೆ ಹೆಚ್ಚು ಒತ್ತುಕೊಡುವ ಮತ್ತು ಪೈಪೋಟಿ ಎದುರಿಸುವುದೇ ಸಾಂಸ್ಥಿಕ ಆಡಳಿತದ ಏಕೈಕ ಉದ್ದೇಶವಾದರೆ ಅದರೊಳಗೆ ಕೆಲಸ ನಿರ್ವಹಿಸುವ ಆಡಳಿತಗಾರರಲ್ಲಿಯೇ ಅನಾರೋಗ್ಯಕರ ಪೈಪೋಟಿ ಏರ್ಪಟ್ಟು, ಕಠೋರ ಅಮಾನವೀಯತೆಯ ಆಡಳಿತಗಾರರೇ ದಕ್ಷ ಮಾನವ ಸಂಪನ್ಮೂಲ ಎಂದು ಪರಿಗಣಿಸಲ್ಪಟ್ಟು ಸಾತ್ವಿಕರು ಕೈಕಟ್ಟಿಕೊಂಡು ಸುಮ್ಮನಿರುವ ಅಥವಾ ಹಿನ್ನಡೆ ಅನುಭವಿಸುವ ಅಪಾಯಗಳೇ ಹೆಚ್ಚು ಎನ್ನುವುದು ಇತ್ತೀಚಿನ ಆಡಳಿತ ವೈಖರಿಯಿಂದ ಸಾಬೀತಾಗುತ್ತಿದೆ. ಜೊತೆಗೆ, ತಂತ್ರಜ್ಞಾನ ಅನ್ವಯಿತ "ಇ–ಆಡಳಿತ" ನಮ್ಮ ಆಡಳಿತ ವ್ಯವಸ್ಥೆಯ ಅಪ್ರಾಮಾಣಿಕತೆಯನ್ನು ಅಣಕಿಸುವಂತಿದೆ. ಇದರ ಮಧ್ಯೆ ಸಾರ್ವಜನಿಕ ಆಡಳಿತದಲ್ಲಿ ಪಾರದರ್ಶಕತೆ ತರುವ ಪ್ರಯತ್ನಗಳು ಮಾಹಿತಿ ಹಕ್ಕು ಕಾಯಿದೆಯ ನಿಯಮಗಳಿಗಷ್ಟೇ ಸೀಮಿತವಾಗಿದ್ದು ಪೂರ್ಣ ಆಶಯದಲ್ಲಿ ಜಾರಿಗೊಳ್ಳುತ್ತಿಲ್ಲ. ಆಡಳಿತದಲ್ಲಿ ಪಾಲ್ಗೊಳ್ಳುವವರ ವೈಯುಕ್ತಿಕ ಆಸ್ತಿ ವಿವರಗಳು ಕಡ್ಡಾಯವಾಗಿ ಪ್ರಕಟವಾಗುವ ಮತ್ತು ಅಕ್ರಮ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ದಿಟ್ಟಕ್ರಮ ಜಾರಿಯಾಗದಿದ್ದರೆ ಆಡಳಿತ ಯಂತ್ರ ದೋಷಮುಕ್ತವಾಗಲು ಸಾಧ್ಯವಿಲ್ಲ.

ಇವತ್ತು ನಮಗೆ ಬೇಕಾಗಿರುವ ಆಡಳಿತ ವ್ಯವಸ್ಥೆಯ ವಿನ್ಯಾಸವು ಅತ್ಯಂತ ಮಾನವೀಯವೂ, ಸರ್ವೋದಯದ ನೆಲೆಯೂ, ಸಾತ್ವಿಕ ಕಾರ್ಯಾಚರಣೆಯ ಸ್ವರೂಪದ್ದು ಆಗಿರಬೇಕಿದೆ. ಮಾರುಕಟ್ಟೆ ಸೃಷ್ಟಿತ ದಾಹಕ್ಕೆ ಅದು ನೀರು ಉಗ್ಗುವಂತಿರಬೇಕೇ ಹೊರತು ತುಪ್ಪ ಸುರಿಯುವಂತಿರಬಾರದು. ಆಕರ್ಷಕ ಕರಟದ ಒಳಗೆ ಶುದ್ಧ ತಿರುಳಿರುವಂತೆ ಸಾರ್ವಜನಿಕ ಆಡಳಿತ ವ್ಯವಸ್ಥೆ ರೂಪುಗೊಳ್ಳಬೇಕು. ಶುದ್ಧ ಚಾರಿತ್ರ್ಯ, ಮನಸ್ಸು, ಹೃದಯ ಇಲ್ಲದವರು ಸ್ವಚ್ಛ ಮತ್ತು ದಕ್ಷ ಆಡಳಿತ ನೀಡಲಾರರು. ಹಾಗಾಗಿ ಅಂಥ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ನೆಲೆಯಲ್ಲಿ ತರಬೇತಿ ಪಡೆದ ಮಾನವ ಸಂಪನ್ಮೂಲ ಸೃಷ್ಟಿ ಆಡಳಿತ ಯಂತ್ರ ಚಾಲನೆಗೆ ಬೇಕಾಗಿದೆ. ಸರ್ವಾಧಿಕಾರ ಎಂದರೂ ಪರವಾಗಿಲ್ಲ, ಸಾಮ್ರಾಟ್ ಅಶೋಕನ ಕಾಲದಂತಹ ಆಡಳಿತ ಬೇಕಿದೆ.ಒಳ್ಳೆಯ ಆಡಳಿತವೆಂದರೆ ಅದನ್ನು ನಡೆಸುವವರು ಒಳ್ಳೆಯ ಆಡಳಿತಗಾರರು ಎಂದೇ ಅರ್ಥವಲ್ಲವೇ? *

---

೨೫ನೇ ಪುಟದಿಂದ)


ತಿಳಿದಿದ್ದೇನೆ, ಅದರಲ್ಲಿ ನೀವೂ ಒಬ್ಬರೋ?' ಎಂದು ವ್ಯಂಗ್ಯದಿಂದಲೋ, ಉದಾಸೀನದಿಂದಲೋ ಅಥವಾ ಧೇಂಕಾರದಿಂದಲೋ ಪ್ರತಿಕ್ರಿಯಿಸುತ್ತಿದ್ದರು. ಇದಾದ ಕೆಲವು ತಿಂಗಳುಗಳ ನಂತರ ಹಾಸನದ ಬಾಳ್ಳುಪೇಟೆಯಲ್ಲಿ ರೈತಸಂಘದ ಸಭೆಯನ್ನು ಉದ್ದೇಶಿಸಿ ತೇಜಸ್ವಿಯವರು ಮಾಡಿದ ಭಾಷಣ ಎಂ.ಡಿ.ಎನ್.ರಿಗೆ ಹಿಡಿಸಲಿಲ್ಲವೆಂದು ತಿಳಿದು ಬಂದಿತು. ಆಗ ಅವರು ಅಲ್ಲಿದ್ದ ಕಾರ್ಯಕರ್ತರಿಗೆ ಇನ್ನು ಮುಂದೆ ತೇಜಸ್ವಿಯವರನ್ನು ರೈತಸಂಘದ ಸಭೆಗಳಿಗೆ ಕರೆಯಕೂಡದೆಂದು ಫರ್ಮಾನು ಹೊರಡಿಸಿದರೆಂದು ತಿಳಿದು ಬಂದಿತು.

ರೈತಸಂಘ ಉದ್ಘಾಟನೆಯಾಗಿ ಅದರ ಚಟುವಟಿಕೆಗಳು ರಾಜ್ಯಾದ್ಯಂತ ಪ್ರಸರಿಸಿ, ಎಂ.ಡಿ.ಎನ್.ರವರು ಅದರ ಮುಖ್ಯ ನೇತಾರರಾಗಿ, ಪ್ರಜಾಪ್ರಭುತ್ವವಾದಿಯಾಗಿ ಉಳಿದರೆ? ಸ್ವತಃ ಅಂತರ್ಜಾತಿ ವಿವಾಹವಾಗಿ ಇವರ ಬಂಧು ವರ್ಗದಲ್ಲಿ ಒದಗಿ ಬಂದ ಅಂತರ್ಜಾತಿ ವಿವಾಹಗಳಿಗೆ ಪ್ರೋತ್ಸಾಹಿಸಿದರೇ? ಸರಳ ಮದುವೆಗಳನ್ನು ಆಂದೋಲನ ರೂಪದಂತೆ ತೀರ್ಥಹಳ್ಳಿ, ಶಿವಮೊಗ್ಗ, ಹಾಸನ, ಮಂಡ್ಯ ಜಿಲ್ಲೆಗಳಲ್ಲಿ ನೆರವೇರಿಸಿದ ರೈತಸಂಘವು ಸರಳವಾಗಿ ಉಳಿಯಿತೆ? ಇನ್ನೂ ಮುಂತಾದ ಪ್ರಶ್ನೆಗಳ ವಿಷಯವಾಗಿ ರೈತಸಂಘದಲ್ಲಿ ಎಂ.ಡಿ.ಎನ್.ರಿಗೆ ಹತ್ತಿರವಾಗಿದ್ದ ಮಿತ್ರರೂ, ಕಾರ್ಯಕರ್ತರೂ ಬೆಳಕು ಚೆಲ್ಲಬೇಕಾಗಿದೆ. *

## ಪುಸ್ತಕಾವಲೋಕನ

**ಪು: ನೀಲಗಂಗಯ್ಯ ಪೂಜಾರ್–ಜೀವನ ಹೋರಾಟಗಳ ಅವಲೋಕನ ಲೇ: ಬಿ.ಪೀರ್‌ಬಾಷ, ಪ್ರ : ಲೋಹಿಯಾ ಪ್ರಕಾಶನ, ಬಳ್ಳಾರಿ ಪು: ೧೧೮, ಬೆಲೆ : ರೂ. ೬೦/–**

### ಮಹಾ ದ್ವಂದ್ವಗಳ ಭೂ ಹೋರಾಗಾರನೊಬ್ಬನ ಚರಿತ್ರೆ




ಈ ಪುಸ್ತಕ, ಅಧ್ಯಯನ, ಸಂದರ್ಶನ , ಪತ್ರಿಕಾ ವರದಿ– ಹೀಗೆ ಹಲವು ಹತ್ತು ಮೂಲಗಳಿಂದ ಅಪರೂಪದ ಸಮಾಜವಾದಿ ನೀಲಗಂಗಯ್ಯ ಪೂಜಾರರ ಬದುಕು ಮತ್ತು ಹೋರಾಟಗಳನ್ನು ಸವಿವರವಾಗಿ ಚಿತ್ರಿಸುತ್ತದೆ. ಪುಸ್ತಕದ ಹಲವು ಕಡೆ ಕಾಣುವ ಪೂಜಾರರ ನಿಸ್ಸಂಕೋಚದ ಆತ್ಮಸಾಕ್ಷಿಯ ಅನೇಕ ಮಾತುಗಳು ಅವರ ಇತಿಮಿತಿಗಳನ್ನಷ್ಟೇ ಅಲ್ಲ, ಸಮಾಜವಾದಿಯೊಬ್ಬ ಪ್ರಾಮಾಣಿಕ ನೆಲೆಯಿಂದ ತನ್ನನ್ನು ಸೇವೆಗೆ ತೊಡಗಿಸಿಕೊಂಡಾಗ ಅಂತಃಸಾಕ್ಷಿ ಅವನನ್ನು ಹಲವು ಕಡೆ ವಿಚಲಿತಗೊಳಿಸಿದರೂ, ಅಂತಿಮವಾಗಿ ಸಮಾಜವಾದಿ ಬದ್ಧತೆಯೇ ಗೆಲವು ಸಾಧಿಸಿದ ಕಥೆಯಾಗಿ ಈ ಪುಸ್ತಕ ನಮ್ಮ ಗಮನ ಸೆಳೆಯುತ್ತದೆ. ೧೯೨೬ರಲ್ಲಿ ರೋಣ ತಾಲ್ಲೂಕಿನ ದೊಡ್ಡ ಮೇಟಿಯವರ ಅಕಾಲಿಕ ರಾಜೀನಾಮೆ ಸ್ರೃಷ್ಟಿಸಿದ ಅನುಕೂಕರ ಸಂದರ್ಭದ ಲಾಭ ಪಡೆದು ೨೬ನೇ ವಯಸ್ಸಿಗೆ ಶಾಸಕರಾಗಿ ಮುಂಬೈ ವಿಧಾನಸಭೆಗೆ ಆಯ್ಕೆಯಾದ, ಸದಾಶಿವ ಕಾರಂತರ ಗಾಢ ಪ್ರಭಾವವದಿಂದ ಲೋಹಿಯಾವಾದಿಯಾದ ಪೂಜಾರರು ಇಲ್ಲಿ ಅನಾವರಣಗೊಳ್ಳುತ್ತಾರೆ.

ಕಹಿ ಹಾಗಲದಷ್ಟು ನಿಷ್ಠುರ, ಪ್ರಮಾಣಿಕತೆ ಒಂದು ಕಡೆಯಾದರೆ ಮತ್ತೊಂದೆಡೆ ದಿಟ್ಟ ಸಮಾಜವಾದಿಯಂತಲ್ಲದ ನಿರ್ಧಾರಗಳ ಮೂಲಕ ನಮಗೆ ಶಾಕ್ ನೀಡುತ್ತಾರೆ. ಉದಾಹರಣೆಗೆ ಸ್ವಾತಂತ್ರ್ಯ ಹೋರಾಟಗಾರರ ಪಿಂಚಣಿ ನಿರಾಕರಿಸಿ 'ನನ್ನ ಮನೀಗೆ ನಾನು ದುಡಿದ್ರೆ ಅದರ ಕೂಲಿ ತಗೊಳ್ಳೇನು' ಎನ್ನುತ್ತಾರೆ. ಅಳಿಯನಿಗೆ 'ಸರ್ಕಾರಿ ಜೀಪು ತಗೊಂಡು ನನ್ನ ಮನಗೆ ಬರ್ಬೇಡಾಂತ' ತಾಕೀತು ಮಾಡುತ್ತಾರೆ. ಮತ್ತೊಂದೆಡೆ ಶಿವಮೊಗ್ಗ, ಬೆಂಗಳೂರಿನ ಸಮಾಜವಾದಿಗಳನ್ನು ಸೇರದೆ ಇರುವುದು, ಕೇಂದ್ರ ಮತ್ತು ರಾಜ್ಯದ ನಾಯಕರು ಕರೆದ ಕಡೆಗೆ ಹೋಗದಿರುವುದು, ಅಂದಾನಪ್ಪ ದೊಡ್ಡಮೇಟಿ, ದೊಡ್ಡ ಜಮೀನ್ದಾರರಾದರೂ ಅವರ ಗೆಳೆತನ ಋಣಭಾರಕ್ಕಾಗಿ ಅವರೊಂದಿಗೆ 'ರಾಜಿ' ಆಗುವುದು – ಇವೆಲ್ಲ ಅವರ ಸಂಕೀರ್ಣ ವ್ಯಕ್ತಿತ್ವದ ಚಹರೆಗಳು. ಆದರೂ ಅವರು ಕರ್ನಾಟಕದ ಅತ್ಯಂತ ಪ್ರಮುಖ ಮೂರು ಸಮಾಜವಾದಿ ಭೂ ಹೋರಾಟಗಳಲ್ಲಿ ಒಂದಾದ ಹೆಬ್ಬಳ್ಳಿ ಭೂ ಹೋರಾಟ ನಡೆಸಿ ೧೧೦೦೦ ಎಕರೆ ಇನಾಂ ಭೂಮಿ ಬಡವರಿಗೆ ಹಂಚಲು ನೆರವಾಗುವುದು (ಮಿಕ್ಕೆರಡು ಕಾಗೋಡು ಸತ್ಯಾಗ್ರಹ ಹಾಗೂ ಸೊಂಡೂರು ಹೋರಾಟ) ಅತಿ ಮುಖ್ಯ ಸಾಧನೆ.

ಆರ್.ಎಸ್.ಎಸ್. ಜನಸಂಘವನ್ನು ನಿಷ್ಠುರವಾಗಿ ದೂರವಿಟ್ಟು ಆಪ್ತತೆಯಿಂದ ಲೋಹಿಯಾರನ್ನು ಹಿಂಬಾಲಿಸಿದ ಪೂಜಾರರು "ಕಾರ್ಮಿಕರಿಂದಷ್ಟೇ ಕ್ರಾಂತಿಯಾಗದು ರೈತರಿಂದ ಕ್ರಾಂತಿ ಸಾಧ್ಯ"ವೆಂದು ನಂಬಿದವರು. ಕಾಗೋಡು ಚಳುವಳಿಯಲ್ಲಿ ಭಾಗವಹಿಸದೇ 'ಅಡ್ಡಾಡ್ಲಿಕ್ಕೆ ಅಗ್ಗಿರಲಿಲ್ಲ' ಎಂದು ಹೇಳಿದ್ದು ಎಷ್ಟು ಸರಿ? ಬೆಂಗಳೂರಿನ ಸಮಾಜವಾದಿಗಳನ್ನು ಮೋಜಿನ ಜೀವನದವರೆಂದು ಆರೋಪಿಸಿ ಹೆಬ್ಬಳ್ಳಿ ಭೂ ಹೋರಾಟಕ್ಕೆ ಇಳಿದರು. ಈ ಅವಸರದಲ್ಲಿ ಮಕ್ಕಳು ಏನು ಓದುತ್ತಿದ್ದಾರೆಂದು ಕೇಳಲೇ ಇಲ್ಲ.

ಜಾಗೀರುದಾರರ ಹನ್ನೊಂದು ಸಾವಿರ ಎಕರೆ ಭೂಮಿಯನ್ನು ೧೯೫೨ರಲ್ಲಿ ಸರ್ಕಾರ ವಶಪಡಿಸಿಕೊಂಡಿದ್ದರೂ ಅದನ್ನು ಉಳುಮೆ ಮಾಡುತ್ತಿದ್ದವರು ಮೇಲ್ಜಾತಿಯವರು. ಬಡವರಿಗೆ ಭೂಮಿ ಸಿಗಬೇಕೆಂದು ೧೯೫೮ರಲ್ಲಿ ಚಳುವಳಿ ಹುರುಪುಗೊಳಿಸಿ ಧರಣಿ ಸತ್ಯಾಗ್ರಹ ನಡೆಸಿ ಮುಖ್ಯಮಂತ್ರಿ ಬಿ.ಡಿ. ಜತ್ತಿಯವರಿಗೆ ಪರಿಸ್ಥಿತಿಯನ್ನು ಅರ್ಥಮಾಡಿಸಿ ಪೂಜಾರರು ಗೆಲುವು ಸಾಧಿಸಿದರು. ನಂತರ ಹುಬ್ಬಳ್ಳಿ ನಗರದ ಬಡವರಿಗೆ ನವೇಶನ ಕೊಡಿಸುವ ಚಳುವಳಿ ನಡೆಸುತ್ತಾರೆ. ೧೯೮೨ರಲ್ಲಿ ನಿವೇಶನ ಕೊಡಿಸುವ ಹೋರಾಟ ಆರಂಭಿಸಿ ೪೧ ವಾರ ಧರಣಿ ನಡೆಸಿ, ಭೂಮಿ ದೊರಕಿಸಿ ಆ ಬಡಾವಣೆಗೆ "ಆನಂದನಗರ" ಎಂದು ಹೆಸರಿಡುತ್ತಾರೆ. ನಂತರ ಎರಡನೇ ಹಂತದ ಹೋರಾಟ ನಡೆಸಿ ೧೯೫ರಲ್ಲಿ ೨೦೦೦ ನಿವೇಶನ ಮತ್ತು ಹಕ್ಕುಪತ್ರ ಕೊಡಿಸುತ್ತಾರೆ. ಸಭೆ, ಪ್ರತಿಭಟನೆ, ಮೆವಣಿಗೆಗಳ ಜೊತೆಗೆ ಕೊಡಲಿ ಮೆರವಣಿಗೆ, ಜಾಗಟೆ ಮೆರವಣಿಗೆ, ಕಲ್ಲಿನ ಒಲೆ ಹೂಡುವುದು–ಇವೆಲ್ಲಾ ಅವರ ಹೋರಾಟದ ತಂತ್ರಗಳಾಗಿದ್ದು ಕುತೂಹಲ ಹುಟಿಸುತ್ತವೆ.

ಮುಂದೆ ಚುನಾವಣಾ ರಾಜಕಾರಣರಲ್ಲಿ ಎರಡು ಬಾರಿ ಸೋಲುತ್ತಾರೆ (೧೯೬೨, ೧೯೬೮). ಪಿತ್ರಾರ್ಜಿತ ಆಸ್ತಿ ಎಂಟು ಎಕರೆಯನ್ನು ಮಾರಿ ಸಾಲ ತೀರಿಸುತ್ತಾರೆ. ಎಷ್ಟೋ ವರ್ಷಗಳ ನಂತರ ಗೆಳೆಯರ ಒತ್ತಾಯಕ್ಕೆ ಪಿಂಚಣಿ ಪಡೆದು ಮಗಳ ಮದುವೆ ಮಾಡುತ್ತಾರೆ. ಕೊನೆಗೆ ಧಾರವಾಡದ ಮಗನ ಬಾಡಿಗೆ ಮನೆಯಲ್ಲಿ ಕೊನೆಯ ದಿನಗಳನ್ನು ನೂಕುತ್ತಾರೆ. ಶಿವಮೊಗ್ಗದ ಸಮಾಜವಾದಿಗಳನ್ನು ತತ್ವಶುದ್ಧಿ ದೃಷ್ಟಿಯಿಂದ ಮೋಜಿನವರೆಂದು ಬಿಡುತ್ತಾರೆ. ಹಾಗೇ ಗುಣಾತ್ಮಕ ನೆಲೆಯಲ್ಲಿಯೂ ಗೆರೆಕೊರೆದು ಅವರನ್ನು ದೂರದಿಂದಷ್ಟೇ ನೋಡುತ್ತಾರೆ. ಗೋಪಾಲಗೌಡರೂ ಇವರೂ ಒಂದೇ ಗುರಿಗೆ ದುಡಿದಿದ್ದರೂ ವಿಲಕ್ಷಣವೆನ್ನಿಸುವ ಅಂತರ ಕಾಪಾಡಿಕೊಳ್ಳುತ್ತಾರೆ. ಅದೇ ಗೋಪಾಲಗೌಡರಿಗೆ ಗಂಡಿನ ತಂದೆಯಂತೆ ಮುಂದೆ ನಿಂತು ಮದುವೆ ಮಾಡಿಸುತ್ತಾರೆ! ಸಮಾಜವಾದಿಗಳಿಗೆ ಚಾರಿತ್ರಿಕ ಕಾರಣಗಳಿಂದ ಅನಿವಾರ್ಯವಾದ ರೂಪಾಂತರಗಳು, ರಾಜಕೀಯ ಪುನರುತ್ಥಾನ ಪೂಜಾರರಿಗೂ ತಪ್ಪುವುದಿಲ್ಲ. ಕಾಂಗ್ರೆಸ್, ಕಾಂಗ್ರೆಸ್ ಸಮಾಜವಾದಿ , ಪಿಎಸ್‌ಪಿ, ಸಮಾಜವಾದಿ, ಜನತಾಪಕ್ಷ, ಲೋಕದಳ– ಈ ಗುರುತುಗಳ ಚಕ್ರದೊಳಗೆ ಸಿಕ್ಕಿಕೊಂಡರೂ ಅವರ ರಾಜಕೀಯ ಬದುಲಿನ ಮೂಲಸ್ರೋತ ಭೂ ಹೋರಾಟವೇ. ಅದಕ್ಕೆ ಸ್ಫೂರ್ತಿ ಲೋಹಿಯಾ ಸಿದ್ದಾಂತವೇ.

ಈಗ ಹೆಬ್ಬಳ್ಳಿಗೆ ಹೋದರೆ ಪೂಜಾರರನ್ನು ಗುರ್ತಿಸುವವರೇ ಇಲ್ಲ! ಹೀಗೆ ವಿಷಾದಿಸುವ ಲೇಖಕರು, ಹೆಬ್ಬಳ್ಳಿ ಹೋರಾಟವನ್ನು ಕಾಗೋಡು ಹೋರಾಟದಂತೆ ನೆನಪಿಸುವಂತಾಗಲಿಲ್ಲ ಎನ್ನುತ್ತಾ "ಪ್ರತಿರೋಧವಿಲ್ಲದ ಭೂ ಮಾಲಿಕ ವರ್ಗದ ಹಿಡಿತದಿಂದ ಭೂಮಿಯನ್ನು ರೈತರಿಗೆ ಅಧಿಕೃತಗೊಳಿಸುವ ಕಾರ್ಯಚರಣೆಯಷ್ಟೇ ಆಯಿತು" ಎನ್ನುತ್ತಾರೆ. ಅತ್ಯಂತ ಸರಳಜೀವಿ ಸೈಕಲ್, ಕಾಲ್ನಡಿಗೆಗಳಲ್ಲಿ ಹಳ್ಳಿ ಸುತ್ತಿ ಜನ ಸಂಘಟಿಸಿ ೧೧,೦೦೦ ಎಕರೆ ಭೂಮಿಯನ್ನು ಬಡವರಿಗೆ ದಕ್ಕಿಸಿದ ಈ ಕೆಲಸವೂ ಕಾಗೋಡು ಸತ್ಯಾಗ್ರಹದೊಂದಿಗೆ ಸೇರಿಕೊಂಡು ದೇವರಾಜ ಅರಸರು ಭೂ ಸುಧಾರಣಾ ನೀತಿ ತಿದ್ದಿ ಉಳುವವನೇ ಹೊಲದೊಡೆಯನನ್ನಾಗಿ ಮಾಡಿದ ಸತ್ಯ ಪೀರ್‌ಬಾಷರಿಗೆ ಯಾಕೆ ಕಾಣದಾಯಿತೋ ತಿಳಿಯದಾಗಿದೆ!

**–ಎಂ. ಚಂದ್ರಶೇಖರಯ್ಯ**

**ಪತ್ರಿಕೆಗೆ ಎರಡು ವರ್ಷಗಳು ತುಂಬಿದ ಸಂದರ್ಭದಲ್ಲಿ ಶುಭವನ್ನು ಕೋರುವ,**

# ಕರ್ನಾಟಕ ಬ್ಯಾಂಕ್,

**ಶಿವಾನಂದ ನಗರ ಶಾಖೆ**
**ಧಾರವಾಡ**

**ನಿಮ್ಮ ಕುಟುಂಬದ ಬ್ಯಾಂಕ್**
**ಭಾರತದಾದ್ಯಂತ!**

ಮೂರನೇ ವರ್ಷಕ್ಕೆ ಯಶಸ್ವಿಯಾಗಿ ಕಾಲಿಡುತ್ತಿರುವ

**ಹೊಸ ಮನುಷ್ಯ** ಸಮಾಜವಾದಿ ಮಾಸಿಕಕ್ಕೆ

ಹಾರ್ದಿಕ ಶುಭಾಶಯಗಳು!

**-ಸಿ.ಎಂ. ಅಂಗಡಿ**

**ಸುಪ್ರೀಂ ಕೋರ್ಟ್ ವಕೀಲರು**

**ಲಾಯರ್ಸ್ ಚೇಂಬರ್ಸ್(ಓಲ್ಡ್ ಬ್ಲಾಕ್)**

**ಸುಪ್ರೀಂ ಕೋರ್ಟ್, ನ್ಯೂ ಡೆಲ್ಲಿ-110 001**

ಮನೆ: **ಫ್ಲ್ಯಾಟ್ ನಂ. 604/2ನೇ ಬ್ಲಾಕ್**

**ಕೀರ್ತಿ ಅಪಾರ್ಟ್‌ಮೆಂಟ್ಸ್, ಮಯೂರ ವಿಹಾರ**

**ಫೇಸ್-1(ಎಕ್ಸ್ ಟೆನ್ಷನ್)**

**ದೆಹಲಿ-110091**

**ದೂರವಾಣಿ: 09811118334**

**09312221800**

# ಪತ್ರಿಕೆಯ ವಿಶೇಷಾಂಕಕ್ಕೆ ಶುಭಾಯಗಳನ್ನು ಕೋರುವ–

**–ಗೋಪಾಲಕೃಷ್ಣ ಪಿ**
ಮತ್ತು **ಹೇಮಲತಾ ಜಿ. ಕೃಷ್ಣ**
ಸಿವಿಲ್ ಗುತ್ತಿಗೆದಾರರು
ಮೇದರಕೇರಿ, ಗಂಗಾ ಪರಮೇಶ್ವರಿ ನಗರ
ಸಾಗರ(ಶಿವಮೊಗ್ಗ ಜಿಲ್ಲೆ)

ಪತ್ರಿಕೆಯ ವಿಶೇಷಾಂಕಕ್ಕೆ
ಶುಭಾಶಯಗಳನ್ನು ಕೋರುವ–

**ಆರ್. ಕೆ. ಎಗ್ ಸೆಂಟರ್**

**ಮೊಟ್ಟೆ ಮತ್ತು ಇತರ ತಿಂಡಿ ಪದಾರ್ಥಗಳ ಸಗಟು ವ್ಯಾಪಾರಿಗಳು**

**ಪ್ರೊ॥ ರಹಮತುಲ್ಲಾ ಖಾನ್**

**ಆರ್.ಪಿ. ರಸ್ತೆ**
**ಸಾಗರ (ಶಿವಮೊಗ್ಗ ಜಿಲ್ಲೆ)**

# 'ಹೊಸ ಮನುಷ್ಯ'ನಿಗೆ

## ಹಾರ್ದಿಕ ಶುಭಾಶಯಗಳು

## ಜೀವನ ಕೌಶಲ ತರಬೇತಿ ಸಂಸ್ಥೆ

ಮೆಡಿಪ್ಲಸ್ ಬಿಲ್ಡಿಂಗ್
ಜನತಾ ಬಜಾರ್ ಎದರು,
ಕುವೆಂಪು ನಗರ,
ಹಾಸನ

**ಮಹಿಳೆಯರಿಗಾಗಿ:**

*ಬ್ಯೂಟಿಶಿಯನ್ , ಕಂಪ್ಯೂಟರ್ , ಟೈಲರಿಂಗ್ ತರಬೇತಿ ತರಗತಿಗಳು
*ಇಂಗ್ಲೀಷ್ ಕೌಶಲ ತರಗತಿಗಳು
*ಅಬಾಕಸ್ ತರಗತಿಗಳು
* ಉದ್ಯೋಗಸ್ಥ ಮಹಿಳೆಯರು ಹಾಗೂ ವಿದ್ಯಾರ್ಥಿನಿಯರಿಗಾಗಿ ಪಿಜಿ ಸೌಲಭ್ಯ

**ಟಿ.ಎಂ. ಜಯಮ್ಮ**
**ಪ್ರಾಂಶುಪಾಲರು**

# ಹೊಸ ಮನುಷ್ಯ'ನಿಗೆ
# ಹಾರ್ದಿಕ ಶುಭಾಶಯಗಳು

* ಸಂಪೂರ್ಣ ಗುಣಾತ್ಮಕ ಶಿಕ್ಷಣಕ್ಕಾಗಿ
* ಮಕ್ಕಳ ಕೇಂದ್ರಿತ ತರಬೇತಿಗಾಗಿ

## ಹಾಸನ ಪಬ್ಲಿಕ್ ಸ್ಕೂಲ್

ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಶಿಕ್ಷಣ
ಸತ್ಯವಂಗಲ ಬಡಾವಣೆ, ಹಾಸನ
ದೂರವಾಣಿ: 08172–241228

ನರ್ಸರಿ ವಿಭಾಗ
ಉತ್ತರ ಬಡಾವಣೆ ಹಾಸನ
ದೂ. ಸಂ.08172–231222

**ಹೆಚ್.ಕೆ. ಜವರೇಗೌಡ** — **ಅಧ್ಯಕ್ಷರು**

**ಶೋಭಾ ಜವರೇಗೌಡ** — **ಕಾರ್ಯದರ್ಶಿ**

**ಡಾ. ಸರಸ್**
**ನಿರ್ದೇಶಕರು**

# 'ಹೊಸ ಮನುಷ್ಯ' ನಿಗೆ ಹಾರ್ದಿಕ ಶುಭಾಶಯಗಳು!


## ದಿ. ಸ್ಕೂಲರ್ಸ್ ವರ್ಲ್ಡ್ ಸ್ಕೂಲ್

**ಪುಟ್ಟು ಎಜುಕೇಷನ್ ಟ್ರಸ್ಟ್‌ನ ಕನಸಿನ ಕೂಸಾದ ದಿ ಸ್ಕಾಲರ್ ವರ್ಲ್ಡ್ ಸ್ಕೂಲ್‌ನ ವಿಶಿಷ್ಠತೆಯ ವಿದ್ವತ್ ಪೂರ್ಣ ಕಲಿಕಾ ಪ್ರಕ್ರಿಯೆಗಳ ಮುಖೇನ ಮಕ್ಕಳ ಉಜ್ವಲ ಭವಿಷ್ಯ ನಿರ್ಮಾಣದ ಬದ್ಧತೆಯನ್ನು ಹೊಂದಿರುವುದಾಗಿದೆ.**

## ನಮ್ಮ ಸಿದ್ಧಾಂತ;

ನಮ್ಮ ವಿದ್ವತ್ ಪೂರ್ಣ ಕಲಿಕಾ ತಂತ್ರದ ಸಮೂಲಾಗ್ರಹ ಧ್ಯೇಯವು ವಿದ್ಯಾರ್ಥಿ ಕೇಂದ್ರಿತ ಪಠ್ಯ ಕ್ರಮದ ಮೂಲಕ ವಿದ್ಯಾರ್ಥಿಗಳ ಪ್ರತಿನಿಧಿತ್ವ ವಯೋಮಾನ , ಮನೋವೃತ್ತಿ, ಅಭಿರುಚಿ ಮತ್ತು ಸಾಮರ್ಥ್ಯಗಳಿಗೆ ಅನುಗುಣವಾಗುವ ಪ್ರತಿನಿಧಿತ್ವವನ್ನು ಕೊಡುವ ಕಡೆಗೆ ಮಹತ್ವ ಕೊಡುವುದಾಗಿದೆ.

## ನಮ್ಮ ಧ್ಯೇಯ:

ಅಭಿಭಾವಕರು ಮತ್ತು ಮಾರ್ಗದರ್ಶಿಗಳಾಗಿ ಮಕ್ಕಳಲ್ಲಿನ ಪ್ರತಿಭೆ ಮತ್ತು ಸಾಮರ್ಥ್ಯವನ್ನು ಪ್ರಸ್ಫುಟಿತಗೊಳಿಸಿ ಅವರನ್ನು ಸತ್ಪ್ರಜೆಗಳನ್ನಾಗಿ ಮಾಡುವುದು ಆಗಿರುತ್ತದೆ.

**ಬಿ. ಎಸ್. ಸಮೃದ್ಧ**

**'ಹೊಸ ಮನುಷ್ಯ'** ನಿಗೆ ಹಾರ್ದಿಕ ಶುಭಾಶಯಗಳು

**ವಿದ್ಯಾರ್ಥಿಗಳ ಸರ್ವತೋಮುಖ ಪ್ರಗತಿಗಾಗಿ**

# ಶ್ರೀಗುರು ರಾಘವೇಂದ್ರ ವಿದ್ಯಾಸಂಸ್ಥೆ

ಎಸ್.ಜಿ.ಆರ್.ಸ್ಕೂಲ್

ಹೊಸಲೈನ್ ರಸ್ತೆ,ಹಾಸನ.

ಐಪಿಎ–ಪ್ಲೇ ಅಬಾಕಸ್ ಸೆಂಟರ್

ವಿಜಯನಗರ, ಹಾಸನ

ಎಸ್.ಜಿ.ಆರ್.ಕಿಡ್ಸ್ ಡ್ರೀಮ್

ಜಯನಗರ, ಹಾಸನ

ಪ್ಲೇ ಹೋಂ ಮತ್ತು ನರ್ಸರಿ

**ನುರಿತ ಶಿಕ್ಷಕರಿಂದ ತರಬೇತಿ**
**–ಉತ್ತಮ ಫಲಿತಾಂಶ**

ಬಿ.ಶಿವಣ್ಣ

ಅಧ್ಯಕ್ಷರು

ಮಮತಾಶಿವು

ಪ್ರಾಂಶುಪಾಲರು

ಮತ್ತು ಕಾರ್ಯದರ್ಶಿ

ದೂ: 9481492407, 9481693407

**'ಹೊಸ ಮನುಷ್ಯ' ಪತ್ರಿಕೆಗೆ**

**ಮತ್ತು ಎಲ್ಲ ಓದುಗರಿಗೆ ಶುಭಾಶಯಗಳು**

**ಪತ್ರಿಕೆ ಉಜ್ವಲವಾಗಿ ಬೆಳೆಯಲೆಂದು ಹಾರೈಸುವ–**

**ಎಸ್. ಕೆ. ಚಂದ್ರ**

**ಮತ್ತು ಕುಟುಂಬದವರು**

**ಪಿ.ಡಬ್ಲ್ಯು.ಡಿ. ಗುತ್ತಿಗೆದಾರರು**

**ಶಾರದಾಪುರ, ಎಡಜಿಗಳೆ ಮನೆ ಅಂಚೆ**

**ಸಾಗರ–577 401**

## ‘ಹೊಸ ಮನುಷ್ಯ’ ಪತ್ರಿಕೆಗೆ ಶುಭಾಶಯಗಳನ್ನು ಕೋರುವ–

# ವಿಘ್ನೇಶ್ವರ ಪಾಲಿಮರ್ಸ್

ಪಾಲುದಾರರು: **ಮಹಾಂತೇಶ್ ಎಸ್, ನರಗುಂದ ಮತ್ತು ಶೋಭಾ ಎಂ ನರಗುಂದ**

ಎಚ್.ಡಿ.ಪಿ.ಇ. ಪೈಪ್ ತಯಾರಕರು ಹಾಗೂ

ಸೋನಾಲಿಕಾ ಟ್ರ್ಯಾಕ್ಟರ್ ಮತ್ತು ಕೃಷಿ ಪರಿಕರಗಳ ವಿತರಕರು

ಬೇಲೂರು ಕೈಗಾರಿಕಾ ಕ್ಷೇತ್ರ,
ಪಿ.ಬಿ. ರಸ್ತೆ
ಧಾರವಾಡ ಜಿಲ್ಲೆ

**'ಹೊಸ ಮನುಷ್ಯ'** ಎರಡು ವರ್ಷಗಳನ್ನು
ಪೂರೈಸುತ್ತಿರುವ ಶುಭ ಸಂದರ್ಭದಲ್ಲಿ
ಹಾರ್ದಿಕ ಶುಭಾಶಯಗಳು




ಬೆಂಗಳೂರಿನಲ್ಲಿ ಕ್ಯಾಬ್‌ಗಳನ್ನು ಬುಕ್ ಮಾಡಲು
ಸಂಪರ್ಕಿಸಿ- 30600600

# ಚರಕ ಆಸ್ಪತ್ರೆ

**ಎನ್.ಇ.ಪಿ.ಎಸ್. ಪೋಲೀಸ್ ಠಾಣೆ ಎದುರು, ಶಂಕರಪುರಂ, ಬಿ.ಹೆಚ್. ರಸ್ತೆ, ತುಮಕೂರು**
**ದೂರವಾಣಿ ಸಂಖ್ಯೆ : 0816 – 2255545**

**ಫಿಜಿಷಿಯನ್, ಆರ್ಥೋಪೆಡಿಕ್, ಯುರಾಲಜಿಸ್ಟ್, ಕ್ಯಾನ್ಸರ್ ತಜ್ಞರ ಸೇವೆ ಸದಾ ಲಭ್ಯ ವಿರುತ್ತದೆ.**

**24 ಘಂಟೆ ಅಪಘಾತ ಮತ್ತು ಚಿಕಿತ್ಸೆ**

- **ಅತ್ಯಾಧುನಿಕ ಐಸಿಯು, ಎನ್.ಐ.ಸಿ.ಯು.**
- **ಅತ್ಯಾಧುನಿಕ ಆಪರೇಷನ್ ಥಿಯೇಟರ್**
- **ಅತ್ಯಾಧುನಿಕ ಲ್ಯಾಪ್ರೋಸ್ಕೋಪಿ ಸರ್ಜರಿ**
- **ನುರಿತ ಶಸ್ತ್ರ ಚಿಕಿತ್ಸೆ ಮತ್ತು ಹೆರಿಗೆ ತಜ್ಞರು**

ಫಿಜಿಷಿಯನ್,
ಆರ್ಥೋಪೆಡಿಕ್,
ಯುರಾಲಜಿಸ್ಟ್,
ಕ್ಯಾನ್ಸರ್
ತಜ್ಞರ ಸೇವೆ ಸದಾ ಲಭ್ಯ ವಿರುತ್ತದೆ.

**ಸ್ವಚ್ಛ ಮತ್ತು ಸುಸಜ್ಜಿತ ಆಸ್ಪತ್ರೆ**

## "ಹೊಸ ಮನುಷ್ಯ"

**ಎರಡು ವರ್ಷ ಪೂರ್ೈಸುತ್ತಿರುವ ಶುಭ ಸಂದರ್ಭದಲ್ಲಿ**

**ಹಾರ್ದಿಕ ಶುಭಾಶಯಗಳು**

**ಡಾ. ಬಸವರಾಜು**
**ಮಲ್ಲಿಕಾ ಬಸವರಾಜು**

ವಿಶೇಷ ಸಂಚಿಕೆಗೆ ಹಾರ್ದಿಕ ಶುಭಾಷಯ ಕೋರುವ



ಆಡಳಿತ ಮಂಡಳಿ, ಪ್ರಾಂಶುಪಾಲರು,
ಸಿಬ್ಬಂದಿ ಹಾಗೂ ಸರ್ವ ವಿದ್ಯಾರ್ಥಿಗಳು

ಬಡ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಆಸರೆಯಾಗಿರುವ

ಸೆಟ್ ಡೆಮ್ಸ್ (ರಿ)

# ಜೆ. ಹೆಚ್. ಪಟೇಲ್ ಕಾಲೇಜು

**(ಬಿ.ಕಾಂ, ಬಿಬಿಎಂ, ಬಿಸಿಎ)**

ಹೇಮಾವತಿ ಹಾಸ್ಟೆಲ್ ಹತ್ತಿರ, ಬಿ.ಐ.ಇ.ಟಿ ರಸ್ತೆ, ದಾವಣಗೆರೆ - 577 004

ಸ್ಥಾವರ: 08192-225411, ಜಂಗಮ: 9535651553 Email: jhpimt@gmail.com

123Certificates

ವಿಶೇಷ ಸಂಚಿಕೆಗೆ
ಹಾರ್ದಿಕ ಶುಭಾಷಯ ಕೋರುವ

## ಎಂ. ಗುರುಸಿದ್ದಸ್ವಾಮಿ

ಜಿಲ್ಲಾ ಸಂಯೋಜಕರು

**ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು**

ದಾವಣಗೆರೆ ಜಿಲ್ಲೆ

ವಿಶೇಷ ಸಂಚಿಕೆಗೆ
ಹಾರ್ದಿಕ ಶುಭಾಷಯ ಕೋರುವ

PARISARA SAMRAKSHANA VEDIKE
DAVANAGERE

## ಗಿರೀಶ್. ಎಂ. ದೇವರಮನೆ

ಜಿಲ್ಲಾ ಅಧ್ಯಕ್ಷರು

**ಪರಿಸರ ಸಂರಕ್ಷಣಾ ವೇದಿಕೆ**

ದಾವಣಗೆರೆ ಜಿಲ್ಲೆ

ವಿಶೇಷ ಸಂಚಿಕೆಗೆ
ಹಾರ್ದಿಕ ಶುಭಾಷಯ ಕೋರುವ

**ಆರ್. ಬಿ. ಹನುಮಂತಪ್ಪ**
ಸಂಪನ್ಮೂಲ ವ್ಯಕ್ತಿಗಳು
**ಜಿಲ್ಲಾ ಬಾಲಭವನ ಸಮಿತಿ**
ದಾವಣಗೆರೆ ಜಿಲ್ಲೆ

ವಿಶೇಷ ಸಂಚಿಕೆಗೆ
ಹಾರ್ದಿಕ ಶುಭಾಷಯ ಕೋರುವ

**ಕಲಿವೀರಪ್ಪ ಕಳ್ಳೀಮನಿ**
ಜಿಲ್ಲಾ ಕಾರ್ಯದರ್ಶಿ
ಭಾರತ ಜ್ಞಾನ ವಿಜ್ಞಾನ ಸಮಿತಿ
ದಾವಣಗೆರೆ ಜಿಲ್ಲೆ

ವಿಶೇಷ ಸಂಚಿಕೆಗೆ
ಹಾರ್ದಿಕ ಶುಭಾಷಯ ಕೋರುವ

**ಪ್ರತಿಭಾ ಪಿ. ದೊಗ್ಗಳ್ಳಿ**
ಅಧ್ಯಕ್ಷರು
ಹಾಗೂ ಸರ್ವ ಸದಸ್ಯರು

Youth MCC

**ಎಂ.ಸಿ.ಸಿ. ಯೂತ್ಸ್ ಕ್ಲಬ್**
ನಂ: 3443, ಎರಡನೇ ಮುಖ್ಯ ರಸ್ತೆ
ಎಂ. ಸಿ. ಸಿ. "ಬಿ" ಬ್ಲಾಕ್
ದಾವಣಗೆರೆ - 4

**'ಹೊಸ ಮನುಷ್ಯ' ವಿಶೇಷಾಂಕಕ್ಕೆ ಶುಭಾಶಯಗಳು**

ಸ್ಥಾಪನೆ 2000
**ನಮ್ ಟೀಮ್ !?** ಶಿವಮೊಗ್ಗ

- 40ಕ್ಕೂ ಹೆಚ್ಚು ಸ್ವಂತ ಪ್ರಯೋಗ
- 100ಕ್ಕೂ ಹೆಚ್ಚು ನಾಟಕಗಳ ಆಹ್ವಾನ
- ಪ್ರತಿ ವರ್ಷ ನೀನಾಸಂ ನಾಟಕೋತ್ಸವ
- ರಂಗಸುಗ್ಗಿ, ರಂಗರಂಗು, ಕಾಲೇಜುರಂಗ, ಏಕವ್ಯಕ್ತಿ ನಾಟಕೋತ್ಸವ...

ಸಂಪರ್ಕ ವಿಳಾಸ:
ನಂ.159, ಅಂಬರ, ಮೂರನೇ ಮುಖ್ಯ ರಸ್ತೆ, ಮೊದಲನೇ ತಿರುವು,
ಎಲ್‌ಬಿಎಸ್ ನಗರ, ಶಿವಮೊಗ್ಗ. ಮೊ: 9844518866

**'ಹೊಸ ಮನುಷ್ಯ' ವಿಶೇಷಾಂಕಕ್ಕೆ**
**ಹಾರ್ದಿಕ ಶುಭಾಶಯಗಳು**

**–ಡಾ. ಜಿ.ಎನ್ ಮಲ್ಲಿಕಾರ್ಜುನಪ್ಪ**
**ಮತ್ತು ಕುಟುಂಬ**
**ಚಿತ್ರದುರ್ಗ**

**ಪತ್ರಿಕೆಗೆ ಹುಟ್ಟು ಹಬ್ಬದ**
**ಹಾರ್ದಿಕ ಶುಭಾಶಯಗಳು!**

**–ನಾಗೇಂದ್ರ ರಾವ್**
**ವಕೀಲರು, ಎ. ಎಂ. 304**
ಪೂರ್ವ ವೆನಿಷಿಯಾ ಫ್ಲ್ಯಾಟ್ಸ್, ಅಟ್ಟೂರು ಲೇ–ಔಟ್,
ಯಲಹಂಕ ನ್ಯೂ ಟೌನ್
**ಬೆಂಗಳೂರು–560 064**

**ಪತ್ರಿಕೆಗೆ ಹುಟ್ಟುಹಬ್ಬದ**
**ಹಾರ್ದಿಕ ಶುಭಾಶಯಗಳು**

**ಮೆ॥ ಬ್ರೈಟ್ ಏಜೆನ್ಸೀಸ್**
ಎಲ್.ಎಲ್.ಆರ್. ರಸ್ತೆ
ಶಿವಮೊಗ್ಗ-577 201 (ಕರ್ನಾಟಕ)

ದೂರವಾಣಿ: 08182-290057
ಟೆಲಿಫ್ಯಾಕ್ಸ್: 08182-279850

**ಈ ಮೇಲ್ :** brightagency@dataone.in
brightagenciessmg@gmail.com

ನಮ್ಮ ತಂದೆ
**ದಿ. ಟಿ.ಆರ್. ರಾಧಾಕೃಷ್ಣ**
ಅವರ ನೆನಪಿನಲ್ಲಿ

**'ಹೊಸ ಮನುಷ್ಯ'** ವಿಶೇಷಾಂಕಕ್ಕೆ
ಶುಭಾಶಯಗಳು

–ತಾರಿಣಿ ಶುಭದಾಯಿನಿ
ಮತ್ತು ಕುಟುಂಬ ವರ್ಗ
ಚಿತ್ರದುರ್ಗ

## ಮೂರನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ
## **ಹೊಸ ಮನುಷ್ಯ** ಸಮಾಜವಾದಿ ಮಾಸಿಕಕ್ಕೆ
## ಹಾರ್ದಿಕ ಶುಭಾಶಯಗಳು

**–ಪ್ರೊ. ಬಿ.ಕೃಷ್ಣಪ್ಪ ಟ್ರಸ್ಟ್(ರಿ)**

12, ಶ್ರೀನಂಜುಂಡೇಶ್ವರ ನಿಲಯ
1ನೇ ಮುಖ್ಯ ರಸ್ತೆ, ಟೀಚರ್ಸ್ ಕಾಲೋನಿ
(ವೆಂಕಟಾಪುರ) ಕೋರಮಂಗಲ,
ಬೆಂಗಳೂರು–560 034

ಪತ್ರಿಕೆಗೆ ಹುಟ್ಟುಹಬ್ಬದ
ಹಾರ್ದಿಕ ಶುಭಾಶಯಗಳು

**ಪ್ರೇರಣಾ ವಿಕಾಸ ವೇದಿಕೆ**
[ಮಕ್ಕಳ ಪರ ಸಂಸ್ಥೆ]
ಹಾಸನ

**'ಹೊಸ ಮನುಷ್ಯ'** ವಿಶೇಷಾಂಕಕ್ಕೆ
ಶುಭಾಶಯಗಳು

**–ಕೃಷಿ ಪತ್ತಿನ ಪ್ರಾಥಮಿಕ**
**ಸಹಕಾರಿ ಸಂಘ(ರಿ)**
ಗೋಕಾಕ

## ಪ್ರಜ್ಞಾ
**ಸ್ವಸ್ಥ ಬದುಕು ಮತ್ತು ಪರಿಸರಕ್ಕಾಗಿ ವೇದಿಕೆ**

ನೇಸರ, ಪ್ರಶಾಂತ ನಗರ,

ದೇವರಾಯಪಟ್ಟಣ ಮುಖ್ಯರಸ್ತೆ,

ತುಮಕೂರು–04

ಮೊ:9343563409

**"ನೀವು ನಮ್ಮ ಜನರಿಗೆ**

**ಭೂಮಿ, ಹಕ್ಕಿ, ಹೂವು, ಮರಗಳನ್ನು**

**ಪ್ರೀತಿಸುವುದನ್ನು ಹೇಳಿಕೊಡದಿದ್ದಲ್ಲಿ**

**ಉಳಿದೆಲ್ಲ ಕಲಿಕೆಗಳೂ ವ್ಯರ್ಥ ;**

**ಬನ್ನಿ ಗೆಳೆಯರೆ ನಮ್ಮೊಡನೆ ಸೇರಿಕೊಳ್ಳಿ"**

**–ರಸ್ಕಿನ್**

**'ಹೊಸಮನುಷ್ಯ'**

ಪತ್ರಿಕೆಗೆ ಶುಭಾಶಯಗಳು

**ಪ್ರಕೃತಿದತ್ತ ಪದಾರ್ಥಗಳು ಸಹಜತೆಯೊಂದಿಗೆ ಗ್ರಾಹಕರಿಗೆ ತಲುಪಿಸುವ ಪರಿಕಲ್ಪನೆಯಲ್ಲಿ ಉತ್ಪಾದಿತ**

## ಕಲ್ಪಾಮೃತ

(ಪರಿಶುದ್ಧ ತಾಜಾ ತೆಂಗಿನೆಣ್ಣೆ)

'ಕೇವಲ ಖಾದ್ಯ ತೈಲವಲ್ಲ; ಆರೋಗ್ಯ ಸಂಜೀವಿನಿಯೂ ಹೌದು'

**ಹಿಮಬಿಂದು ನ್ಯಾಚುರಲ್ ಫಾರ್ಮ್**

ನೇರಳಾಪುರ

ತುಮಕೂರು ತಾಲ್ಲೂಕು ,ಜಿಲ್ಲೆ

ಮೊ : 9343563409/9242938200/9591133994

**ಹೊಸಮನುಷ್ಯ**

ಪತ್ರಿಕೆಗೆ ಶುಭಾಶಯಗಳು

**'ಹೊಸ ಮನುಷ್ಯ' ವಿಶೇಷಾಂಕಕ್ಕೆ ಶುಭಾಶಯಗಳು**

**ಸಹನ ಎಂಟರ್‌ಪ್ರೈಸೆಸ್**

ಇಂಡಿಯಾ ಸಿಮೆಂಟ್ಸ್, ರಾಸಿ, ಕೋರಮಂಡಲ
ಮತ್ತು ಶಂಕರ್ ಸಿಮೆಂಟುಗಳ ಅಧಿಕೃತ ಮಾರಾಟಗಾರರು
ಮತ್ತು ಸರ್ಕಾರಿ ಪೂರೈಕೆದಾರರು

ಗೋಪಾಳ ಮುಖ್ಯ ರಸ್ತೆ
ಪದ್ಮ ಚಿತ್ರಮಂದಿರದ ಹತ್ತಿರ
ಶಿವಮೊಗ್ಗ

**ಪತ್ರಿಕೆಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು**

ಉತ್ತಮ ಕನ್ನಡಕಗಳಿಗಾಗಿ

**ಶಿವಾನಿ ಆಪ್ಟಿಕಲ್ಸ್**

ನೂತನ ಮಾದರಿಯ, ವಿವಿಧ ನಮೂನೆಯ
ತಂಪು ಕನ್ನಡಕಗಳು,, ರೀಡಿಂಗ್ ಗ್ಲಾಸ್ ಗಳು
ಪ್ರತಿಷ್ಠಿತ ಕಂಪನಿಗಳ ಕನ್ನಡಕಗಳು,
ಪರೀಕ್ಷಿಸಲ್ಪಟ್ಟ ಕನ್ನಡಕಗಳ ಮಹಾಪೂರ
ಒಂದೇ ಸೂರಿನಡಿ

**ಒಮ್ಮೆ ಭೇಟಿ ಕೊಡಿ**

ಶಾಪ್ ನಂ.೧೦, ಎಂ.ಜಿ. ಪ್ಯಾಲೇಸ್
ಗೋಪಿ ವೃತ್ತ, ಶಿವಮೊಗ್ಗ

**'ಹೊಸ ಮನುಷ್ಯ' ವಿಶೇಷಾಂಕಕ್ಕೆ ಶುಭಾಶಯಗಳು**

**–ಜಯವಂತ ಕಾಮತ್**
**ಮತ್ತು ಕುಟುಂಬ**
ಬೇಲಾಡಿ(ದ.ಕ)

**ಪತ್ರಿಕೆಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು**

**–ಜಿ.ಆರ್. ಶ್ರೀನಿವಾಸ ಮೂರ್ತಿ**
**ಜಿ. ರಜತ**
**ಮೈಸೂರು**

**ಪತ್ರಿಕೆಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು!**

**-ಕೆ. ವೆಂಕಟರಾಜು**
ಚಾಮರಾಜನಗರ

**'ಹೊಸ ಮನುಷ್ಯ'** ವಿಶೇಷಾಂಕಕ್ಕೆ ಶುಭಾಶಯಗಳು

**–ಸೋಮಶೇಖರ ಬಿಸಲ್ವಾಡಿ**
**ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು**
**ಚಾಮರಾಜನಗರ ಜಿಲ್ಲೆ**
ಚಾಮರಾಜನಗರ

**'ಹೊಸ ಮನುಷ್ಯ'** ವಿಶೇಷಾಂಕಕ್ಕೆ
ಶುಭಾಶಯಗಳು

**-ಕಡಿದಾಳು ಶಾಮಣ್ಣ**
**ಶ್ರೀದೇವಿ**
**ಮತ್ತು ಮಕ್ಕಳು**
ಭಗವತಿಕೆರೆ

**ಪತ್ರಿಕೆಗೆ ಹುಟ್ಟುಹಬ್ಬದ**
**ಹಾರ್ದಿಕ ಶುಭಾಶಯಗಳು!**

## –ಹಸಿರು ಪ್ರಕಾಶನ

ನಮ್ಮ ಪ್ರಕಟಣೆಗಳಿಗಾಗಿ
ಸಂಪರ್ಕಿಸಿ:# 90. 16ನೇ ಕ್ರಾಸ್,
4ನೇ ಫೇಸ್, ಜೆ.ಪಿ.ನಗರ
ಬೆಂಗಳೂರು 560078
ದೂ: 9449987678,
9845630109

ಉತ್ತಮ ಕಾಫಿಪುಡಿ!



...ಾರರಿಂದ ನೇರವಾಗಿ!!

## ಕಾಫಿ

ಕಾಫಿ ಪುಡಿಗಾಗಿ ಸಂಪರ್ಕಿಸಿ:

ಕಾಫಿ ಕೋ–ಆಪರೇಟಿವ್ ಸೊಸೈಟಿ
ತೊಳಲು ರಸ್ತೆ
**ಅರೇಹಳ್ಳಿ–573101**
ಬೇಲೂರು ತಾ. ಹಾಸನ ಜಿಲ್ಲೆ

**ದೂ: 9242103769/9901254869**

## ತಿಂಗಳ ಸಾಲುಗಳು...




ಪ್ರಜಾಪ್ರಭುತ್ವವೆನ್ನುವುದು ಮತದಾನದ ಸಮಾನ ಹಕ್ಕು ಮಾತ್ರವಲ್ಲ; ಅದು ಸಹಬಾಳ್ವೆಯ ಒಂದು ವಿಧಾನ. ಪ್ರಜಾಪ್ರಭುತ್ವದ ಬೇರುಗಳನ್ನು ನಾವು ಹುಡುಕಬೇಕಾದದ್ದು ಸಾಮಾಜಿಕ ಸಂಬಂಧಗಳಲ್ಲಿ; ಯಾವ ಜನರಿಂದ ಒಂದು ಸಮಾಜ ರೂಪುಗೊಂಡಿದೆಯೋ ಆ ಜನಗಳಗೂ ಸಮಾಜಕ್ಕೂ ಇರುವ ಹೊಂದಾಣಿಕೆಯ ರೀತಿ–ನೀತಿಗಳಲ್ಲಿ.


**–ಡಾ. ಬಿ. ಆರ್ ಅಂಬೇಡ್ಕರ್**

**ಪತ್ರಿಕೆಗೆ ಶುಭವನ್ನು ಕೋರುವ...**

**– ಬಿ.ಸುರೇಶ**
**ಡಾ. ವಿಜಯಾ**

ರಂಗವಲ್ಲಿ®
rangavalli















ಆತ್ಮ ನಿರೀಕ್ಷಣೆ, ರಂಗಭೂಮಿಯ ಗುರಿಗಳಲ್ಲಿ ಒಂದು. ತಿಳಿದವರು ಹೇಳುವಂತೆ, ಇದು ಸಮಾಜಕ್ಕೆ ಕನ್ನಡಿ. ಒಬ್ಬ ವ್ಯಕ್ತಿ ತನ್ನ ಆತ್ಮ ನಿರೀಕ್ಷಣೆಗಾಗಿ ಉಪಯೋಗಿಸಬಹುದಾದ ಅತ್ಯುತ್ತಮ ಸಾಧನ. ಉತ್ತಮವಾಗಿ ರೂಪಿಸಿ ಬಳಸಿಕೊಂಡಲ್ಲಿ ನಮ್ಮ ಕಾವಲುಗಾರನ ರೀತಿಯಲ್ಲಿ ಕೆಲಸ ಮಾಡುತ್ತದೆ.

ಸೋಫೋಕ್ಲಿಸ್, ಶೇಕ್ಸ್‌ಪಿಯರ್‌ನನ್ನು ಹಾದು, ಆಧುನಿಕ ರಂಗಭೂಮಿಯವರೆಗೆ ನಾವು ಅನೇಕ ಮೈಲುಗಲ್ಲುಗಳನ್ನು ಕಂಡಿದ್ದೇವೆ. ಇದು ಸಾಧ್ಯವಾಗುವುದು, ಅವರ ಕಥೆ, ನಾಟಕಗಳು ಸಾಮಾನ್ಯ ಜನರನ್ನು ತಲುಪಿದಾಗ. ಅನೇಕ ತಂಡಗಳು, ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಈ ಕೆಲಸವನ್ನು ಈಗಾಗಲೇ ಯಶಸ್ವಿಯಾಗಿ ನಿರ್ವಹಿಸಿವೆ.

'ರಂಗವಲ್ಲಿ' ಈ ಪರಂಪರೆಯನ್ನು ಮುಂದುವರೆಸುವ ಆಸೆ ಹೊತ್ತ ಉತ್ಸಾಹಿ ತಂಡ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಾಹಿತ್ಯವನ್ನು ಕೇವಲ ಮನರಂಜನೆಗಾಗಿ ಮಾತ್ರವಲ್ಲದೆ, ಚಿಂತನೆಯ ದೃಷ್ಟಿಯಿಂದ ಜನರಿಗೆ ತಲುಪಿಸುವ ಉದ್ದೇಶ ಹೊಂದಿದೆ.

ರಂಗವಲ್ಲಿ ಪ್ರತಿ ಸದಸ್ಯನೂ, ರಂಗಭೂಮಿಯ ಹಿರಿಯರ ಮಾರ್ಗದರ್ಶನದಲ್ಲಿ, ರಂಗಾಯಣದ ಭಾರತೀಯ ರಂಗ ಶಿಕ್ಷಣ ಕೇಂದ್ರದಲ್ಲಿ ತರಬೇತಿ ಪಡೆದಿದ್ದಾನೆ. ಸುಮಾರು ಒಂದು ದಶಕದ ರಂಗಭೂಮಿಯೊಂದಿಗಿನ ನಿರಂತರ ಒಡನಾಟದಿಂದಾಗಿ, ಹಿರಿಯರ ಮಾರ್ಗದರ್ಶನದಲ್ಲಿ ನಾವು ಹೊಸ ಅನ್ವೇಷಣೆಯಲ್ಲಿ ತೊಡಗಿ ಆತ್ಮವಿಶ್ವಾಸದಿಂದ ರಂಗ ಪಯಣವನ್ನು ಮುಂದುವರಿಸಿದ್ದೇವೆ. ನೀವೂ ನಮ್ಮೊಡನೆ ಈ ನಿರಂತರ ಪಥದಲ್ಲಿ ಇರುವಿರೆಂಬ ಭರವಸೆಯೊಂದಿಗೆ...

Introspection is what theater aims at and also succeeds. As the wise man say, it's a mirror to the society. A tool which a person can utilize to look into self. Devised and used properly, it acts like a vigilante on self, by increasing the sensitivity of every individual towards life.

From Sophocles to Shakespeare to the modern writers, we have seen many milestones in the history of theater. Needless to say that this was possible when the plays reached the common man. Many eminent teams did this task in international & national theater history.

We 'rangavalli' area team of enthusiasts joining that parade. Our goal is to successfully continue the tradition of presenting various literature, not just for entertainment but also to be a reason for thought, to look into ourselves.

Every member of the team is trained under well known theater personalities and technicians at Bharateeya Rangashikshana Kendra, Rangayana. An exposure of theater under such eminent guidance, for over a decade has helped us to harness the full potential of the theater. It is with the strong support and confidence; we are pursuing theater dream and passionately working towards it. Now 'rangavalli' rejoicing and budding with new talents.

We hope you'll be with us in this eternal journey...

ರಂಗವಲ್ಲಿ

ಸಂಖ್ಯೆ: 396/ಎ, 21ನೇ ಮುಖ್ಯರಸ್ತೆ, 18ನೇ ಅಡ್ಡರಸ್ತೆ, ಜೆ.ಪಿ.ನಗರ 2ನೇ ಹಂತ, ಮೈಸೂರು–570008
ಮೊಬೈಲ್ ಸಂಖ್ಯೆ: 9964656482/ 9482573570/ 9916212451
ಮಿಂಚಂಚೆ: rangavallimysore@gmail.com
www.facebook.com/rangavalli

೩ನೇ ವಸಂತಕ್ಕೆ ಯಶಸ್ವಿಯಾಗಿ ಕಾಲಿಡುತ್ತಿರುವ ಹೊಸ ಮನುಷ್ಯ ಸಮಾಜವಾದಿ ಪತ್ರಿಕೆಗೆ ಶುಭಾಷಯಗಳು

ಮೂರನೇ ವರ್ಷಕ್ಕೆ ಯಶಸ್ವಿಯಾಗಿ ಕಾಲಿಡುತ್ತಿರುವ **ಹೊಸ ಮನುಷ್ಯ** ಮಾಸಿಕಕ್ಕೆ ಹಾರ್ಧಿಕ ಶುಭಾಶಯಗಳು



# ವಿವೇಕ ಬ್ಯೂರೊ ಹಾಸನ.

## ಡಿಗ್ರಿ ನಂತರ ಮುಂದೇನು? ಉದ್ಯೋಗ!

ಸರಿಯಾದ ಮಾಹಿತಿ–ಮಾರ್ಗದರ್ಶನ–ತರಬೇತಿಯಿಂದ ಸಮಯ–ಪರಿಶ್ರಮ–ಹಣ ಇವುಗಳು ಅನಗತ್ಯವಾಗಿ ವ್ಯಯವಾಗುವುದನ್ನು ತಡೆಯಬಹುದು.

ಇತ್ತೀಚಿನ ದಿನಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ **IBPS, RBI, SBI, RRB**

ಇವುಗಳ ಮೂಲಕ ಸಾವಿರಾರು ಕ್ಲರಿಕಲ್ ಹಾಗೂ ಆಫೀಸರ್ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಭರ್ತಿ ಮಾಡಲಾಗುತ್ತಿದೆ.
ಡಿಗ್ರಿ ಪಾಸಾಗಿರುವ ವಿದ್ಯಾರ್ಥಿಗಳು (ಬಿಎ, ಬಿಕಾಂ, ಬಿಎಸ್ಸಿ, ಬಿಬಿಎಂ, ಬಿಸಿಎ, ಬಿಇ ಇತ್ಯಾದಿ)
ಸರಿಯಾದ ಮಾಹಿತಿ–ಮಾರ್ಗದರ್ಶನ ತರಬೇತಿ ಹಾಗೂ ನಿರಂತರ ಪರಿಶ್ರಮ ಇವುಗಳಿಂದ ತಮಗೆ ಇಷ್ಟವಾದ ಉದ್ಯೋಗ ಪಡೆಯಬಹುದು.
ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಯಾರಿಗೂ ಲಂಚ ಕೊಡದೇ ಯಾರ ಶಿಫಾರಸ್ಸಿಗೂ ಹೆಣಗಾಡದೆ ಉದ್ಯೋಗ ಪಡೆಯಲು ಸಾಧ್ಯವಿದೆ.

**ಬ್ಯಾಂಕಿಂಗ್ ಕ್ಷೇತ್ರ ಇಷ್ಟವಾಗದಿದ್ದರೆ**

## UPSC, SSC, RRB, NIC, LIC

ಇನ್ನೂ ಮುಂತಾದ ಕೇಂದ್ರ ಸರ್ಕಾರದ ಸಂಸ್ಥೆಗಳು ರಾಷ್ಟ್ರಾದ್ಯಂತ ಪ್ರತಿ ವರ್ಷ ಖಾಲಿ ಆಗುವ ಸಾವಿರಾರು ವಿವಿಧ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಭರ್ತಿ ಮಾಡುತ್ತವೆ.






ಎಂ. ರೇಣುಕ
ನಿರ್ದೇಶಕಿ



ಜಿ. ಶಿವಕುಮಾರ್
ನುರಿತ ತರಬೇತುದಾರರು

100 Days Success Guaranteed *Residential Training*

**IAS CSP 2014**

15 Days Crash Course for GS-II
**CSAT**
* Logical Reasoning
* Analytical Ability
* General Mental Ability
* Basic Numeracy
* Data Interpretation/ Sufficiency

25 Days Crash Course for
Starts on : 21-08-2013
**IBPS RRB P.O./Clerks EXAM**

ಸಂಪರ್ಕಿಸಿ :
ಎಸ್.ಜೆ. ಪಾರ್ಕ್ ರಸ್ತೆ, ಕೆ.ಆರ್.ಪುರಂ,
ಹಾಸನ–573 201.

ದೂ :08172 - 268253, 9448867087

Regd. News Paper RNI No. KARKAN/2012/47568 Rgd No. KA/SK/SMG-1209/2013-15

